ಶುಕ್ರವಾರ, ಫೆಬ್ರುವರಿ 7, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೋಜಿಗ

ಏರೊ ಇಂಡಿಯಾ ವೈಮಾನಿಕ ಪ್ರದರ್ಶನಕ್ಕೆ ಪೂರ್ವಭಾವಿಯಾಗಿ ಬೆಂಗಳೂರಿನ ಯಲಹಂಕದಲ್ಲಿ ನಡೆದ ಪ್ರಾಯೋಗಿಕ ಪ್ರದರ್ಶನವನ್ನು ಸಾರ್ವಜನಿಕರು ಕುತೂಹಲದಿಂದ ವೀಕ್ಷಿಸಿದರು...

ಉದ್ಘಾಟನಾ ಸಮಾರಂಭ

KANVA DIAGNOSTIC SERVICES PVT LTD

ನಿಮ್ಮ ಭರವಸೆಯ ಡಯಾಗ್ನೋಸ್ಟಿಕ್ಸ್ ಈಗ

ಕೋರಮಂಗಲದಲ್ಲಿ

ದಿನಾಂಕ: 7ನೇ ಫೆಬ್ರವರಿ 2025 ರಂದು ಶುಕ್ರವಾರ, ಸಂಜೆ 4:30

ದಿವ್ಯ ಸಾನ್ನಿಧ್ಯ

ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿರವರು
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಉದ್ಘಾಟನೆ

ಶ್ರೀ ಹೆಚ್. ಡಿ. ಕುಮಾರಸ್ವಾಮಿ
ಮಾನ್ಯ ಉಕ್ಕು ಮತ್ತು ಕೈಗಾರಿಕೆ ಸಚಿವರು, ಭಾರತ ಸರ್ಕಾರ
ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸಿ.ಟಿ ಮತ್ತು ಎಂ.ಆರ್.ಐ ಸಾಧನಗಳ ಚಾಲನೆ

ಶೀ ವಿ ಸೋಮಣ್ಣ
ಮಾನ್ಯ ರೈಲ್ವೆ ಮತ್ತು ಜಲಶಕ್ತಿ ಸಚಿವರು,
ಭಾರತ ಸರ್ಕಾರ

ಪ್ರಯೋಗಾಲಯ ಯಂತ್ರೋಪಕರಣಗಳ ಚಾಲನೆ

ಶ್ರೀ ಬಸವರಾಜ್ ಹೊರಟ್ಟಿ
ಮಾನ್ಯ ಅಧ್ಯಕ್ಷರು ವಿಧಾನ ಪರಿಷತ್
ಕರ್ನಾಟಕ ಸರ್ಕಾರ

ಅಧ್ಯಕ್ಷತೆ

ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವರು,
ಕರ್ನಾಟಕ ಸರ್ಕಾರ

ಸೇವೆಗಳು ಮತ್ತು ಸೌಲಭ್ಯಗಳು

- 3 Tesla MRI, Integrated with AI & One of its kind in India
- 384 Slice CT Scan, Coronary CT Angio and any Region Angio
- PET Scan (Only at Nagarabhavi)
- GAMMA Camera (Only at Nagarabhavi)
- Hi-Tech & Advanced, Automated Clinical Laboratory
- Ultrasonography with 3 & 4 Dimensional High-Resolution Imaging
- Echocardiography & Color Doppler
- Computerised Tread Mill (TMT)
- Computerised ECG, EEG & ENMG
- Endoscopy, Colonoscopy & Sigmoidoscopy
- 2D Digital Mammography
- Digital X-Ray with Special Tests & OPG
- Whole Body Bone Densitometry
- Cone Beam Dental CT With OPG and Cephalography (CBCT)
- Amniocentesis and other special procedures (Only at Nagarabhavi)
- Cryotherapy, Colposcopy & Vulvoscopy
- Pulmonary Function Test (PFT)
- Physiotheraphy
- Audiometry, Impedance Audiometry, OAE and Bera Tests

ಅತ್ಯಾಧುನಿಕ ಹಾಗೂ ಉನ್ನತ ಮಟ್ಟದ ವೈದ್ಯಕೀಯ ಪರೀಕ್ಷಾ ಸೇವೆಗಳು ಮತ್ತು ಸೂಪರ್ ಸ್ಪೆಷಾಲಿಟಿ ವೈದ್ಯರ ಪರಾಮರ್ಶೆಗಳು ಎಲ್ಲಾ ಶಾಖೆಗಳಲ್ಲಿಯೂ ಲಭ್ಯವಿದೆ.

ಕಣ್ವ ಡಯಾಗ್ನೋಸ್ಟಿಕ್ ಸರ್ವೀಸಸ್ ಪ್ರೈ. ಲಿ.

ರಾಜಾಜಿನಗರ
#2/10, ಡಾ ರಾಜ್‌ಕುಮಾರ್ ರಸ್ತೆ, 4ನೇ ಎನ್ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010.
Ph: + 91 80 6909 4001 - 30 Lines

ನಾಗರಭಾವಿ
#744, 11ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು - 560 072.
Ph: + 91 80 6923 2222 - 30 Lines

ಕೋರಮಂಗಲ
#15, AVS ಕಾಂಪೌಂಡ್, 80 ಅಡಿ ರಸ್ತೆ, 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - 560034.
Ph: + 91 80 6942 4444 - 30 Lines

ಡಾ. ಎಚ್. ಎಂ. ವೆಂಕಟಪ್ಪ , ವ್ಯವಸ್ಥಾಪಕ ನಿರ್ದೇಶಕರು, ತಜ್ಞ ವೈದ್ಯರು ಮತ್ತು ಸಿಬ್ಬಂದಿವರ್ಗ

ad6.in

ಈ ವರ್ಷ ಒಂದೇ ತಿಂಗಳಲ್ಲಿ 14,060 ಪ್ರಕರಣ ದೃಢ • ತಾಪಮಾನದ ದಿಢೀರ್ ಏರಿಕೆಯೇ ಕಾರಣ

ಬೇಸಿಗೆಗೆ ಮುನ್ನವೇ ಕಾಡುತ್ತಿದೆ ‘ಅತಿಸಾರ’

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಈ ವರ್ಷ ಬೇಸಿಗೆ ಪ್ರಾರಂಭಕ್ಕೂ ಮುನ್ನವೇ ‘ತೀವ್ರ ಅತಿಸಾರ’ ಸಮಸ್ಯೆಯು (ಅಕ್ಯೂಟ್ ಡಯೇರಿಯಾ) ಮಕ್ಕಳು ಸೇರಿ ವಿವಿಧ ವಯೋಮಾನದವರನ್ನು ಕಾಡಲಾರಂಭಿಸಿದ್ದು, ಆರೋಗ್ಯ ಇಲಾಖೆ ಪ್ರಕಾರ ಒಂದೇ ತಿಂಗಳಲ್ಲಿ 14,060 ಪ್ರಕರಣಗಳು ಖಚಿತಪಟ್ಟಿವೆ.

ಸಾಮಾನ್ಯವಾಗಿ ಈ ಸಮಸ್ಯೆಯು ಬೇಸಿಗೆ ಅವಧಿಯಲ್ಲಿ ಹೆಚ್ಚಾಗಿ ಕಾಡುತ್ತದೆ. ಅತಿಸಾರವು ನಿರ್ಜಲೀಕರಣ, ವಾಕರಿಕೆ, ವಾಂತಿ, ನೋವು, ತೂಕ ನಷ್ಟ, ದೌರ್ಬಲ್ಯ, ಆಯಾಸ ಸೇರಿದಂತೆ ತೀವ್ರತರ ರೋಗ ಲಕ್ಷಣಗಳನ್ನು ಉಂಟುಮಾಡುತ್ತದೆ. ಮಾರ್ಚ್ ಬಳಿಕ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳದಿಂದ ನಿರ್ಜಲೀಕರಣಕ್ಕೆ ಒಳಗಾಗುವವರ ಸಂಖ್ಯೆ ಅಧಿಕವಿರುತ್ತದೆ. ದೂಳು, ಕಲುಷಿತ ನೀರು ಸೇವನೆ ಸೇರಿ ವಿವಿಧ ಕಾರಣದಿಂದ ಮಕ್ಕಳು ಹೆಚ್ಚಾಗಿ ಈ ಸಮಸ್ಯೆಗೆ ಪ್ರತಿ ವರ್ಷ ಒಳಗಾಗುತ್ತಿದ್ದಾರೆ. ಈ ವರ್ಷ ತಾಪಮಾನ ಏರಿಳಿತದಿಂದ ಹಲವರು ತೀವ್ರ ಅತಿಸಾರ ಸಮಸ್ಯೆ ಎದುರಿಸಿದ್ದು, ಪ್ರಕರಣಗಳ ಸಂಖ್ಯೆ ಜನವರಿಯಿಂದಲೇ ಏರುಗತಿಯಲ್ಲಿದೆ.

ಪ್ರತಿ ವಾರ ದೃಢಪಡುತ್ತಿರುವ ಪ್ರಕರಣಗಳ ಸಂಖ್ಯೆ ಈಗ ಮೂರು ಸಾವಿರದ ಗಡಿ ಸಮೀಪಿಸಿದೆ. ಕಳೆದ ವರ್ಷ ಜನವರಿಯಲ್ಲಿ ಪ್ರತಿ ವಾರ ಎರಡು ಸಾವಿರದ ಆಸುಪಾಸಿನಲ್ಲಿದ್ದ ಪ್ರಕರಣ, ಮಾರ್ಚ್‌ನಲ್ಲಿ ಮೂರು ಸಾವಿರ ಗಡಿ ದಾಟಿತ್ತು. ಬಳಿಕ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿತ್ತು.

ರಾಜ್ಯದ ಬಹುತೇಕ ಎಲ್ಲೆಡೆ ತಾಪಮಾನವು ಗರಿಷ್ಠ ಮಟ್ಟಕ್ಕೆ ತಲುಪಿ, ಹಲವೆಡೆ ಉಷ್ಣಾಂಶವು 40 ಡಿಗ್ರಿ ಸೆಲ್ಸಿಯಸ್ ದಾಟಿರುವುದೇ ತೀವ್ರ ಅತಿಸಾರಕ್ಕೆ ಅಧಿಕ ಜನರು ಒಳಪಡಲು ಕಾರಣವಾಗಿತ್ತು. ಜೂನ್–ಜುಲೈನಲ್ಲಿ ಮಳೆ–ಬಿಸಿಲಿನಿಂದಾಗಿ ಪ್ರತಿ ವಾರ 5 ಸಾವಿರಕ್ಕೂ ಅಧಿಕ ಮಂದಿ ತೀವ್ರ ಅತಿಸಾರದಿಂದ ಬಳಲಿದ್ದರು. ಆಗಸ್ಟ್ ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿತ್ತು. ಈ ವರ್ಷ ಈಗಾಗಲೇ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ತಾಪಮಾನ 30 ಡಿಗ್ರಿ ಸೆಲ್ಸಿಯಸ್ ದಾಟುತ್ತಿರುವುದರಿಂದ ಬೇಸಿಗೆ ಮೊದಲೇ ಜನರು ಈ ಸಮಸ್ಯೆ ಎದುರಿಸುತ್ತಿದ್ದಾರೆ.

ಐಎಚ್‌ಐಪಿ ಮೂಲಕ ನಿಗಾ: ಮಾರ್ಚ್ ಬಳಿಕ ಉಷ್ಣಾಂಶ ಇನ್ನಷ್ಟು ಹೆಚ್ಚಳವಾಗುವ ಕಾರಣ ಈ ವರ್ಷವೂ ಹೆಚ್ಚಿನ ಜನರು ತೀವ್ರ ಅತಿಸಾರ ಸಮಸ್ಯೆ ಎದುರಿಸುವ ಸಾಧ್ಯತೆಯಿದೆ. ಆದ್ದರಿಂದ ಆರೋಗ್ಯ ಇಲಾಖೆಯು ಈಗಾಗಲೇ ಶಾಲಾ–ಕಾಲೇಜು ಸೇರಿ ವಿವಿಧೆಡೆ ಈ ಸಮಸ್ಯೆ ಬಗ್ಗೆ ಜಾಗೃತಿಗೆ ಕ್ರಮವಹಿಸಿದೆ. ಸಮಗ್ರ ಆರೋಗ್ಯ ಮಾಹಿತಿ ವೇದಿಕೆಯಡಿ (ಐಎಚ್‌ಐಪಿ) ಪ್ರಕರಣಗಳ ಮಾಹಿತಿಯನ್ನು ದಾಖಲಿಸಲಾಗುತ್ತಿದೆ. ಇದರಿಂದಾಗಿ ಪ್ರಕರಣಗಳ ಏರಿಳಿತದ ಬಗ್ಗೆ ನಿಗಾ ವಹಿಸಲು ಸಾಧ್ಯವಾಗಿದ್ದು, ಅಧಿಕ ಪ್ರಕರಣಗಳು ವರದಿಯಾದ ಪ್ರದೇಶಗಳಲ್ಲಿ ಕುಡಿಯುವ ನೀರಿನ ಶುದ್ಧತೆ ಪರೀಕ್ಷೆ ಸೇರಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ.

‘ದೊಡ್ಡ ಕರುಳಿನಲ್ಲಿ ಉಂಟಾಗುವ ಸೋಂಕು ಅತಿಸಾರಕ್ಕೆ ಮುಖ್ಯ ಕಾರಣ. ಅತಿಸಾರ ಸಮಸ್ಯೆ ಎದುರಾದಾಗ ಬಾಯಿ ಒಣಗುವಿಕೆ, ನಿಶ್ಶಕ್ತಿ, ವಾಕರಿಕೆ, ವಾಂತಿ ಸೇರಿ ವಿವಿಧ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಮುನ್ನೆಚ್ಚರಿಕೆ ಕ್ರಮವಾಗಿ ವೈಯಕ್ತಿಕ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಎರಡು ಮೂರು ದಿನಗಳು ಸಮಸ್ಯೆ ಮುಂದುವರಿದರೆ ವೈದ್ಯರನ್ನು ಸಂಪರ್ಕಿಸಬೇಕು’ ಎಂದು ಇಲಾಖೆ ಅಧಿಕಾರಿಗಳು ‘ಪ್ರಜಾವಾಣಿ’ಗೆ ತಿಳಿಸಿದರು.

ಬೇಸಿಗೆ ಅವಧಿಯಲ್ಲಿ ಅತಿಸಾರ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುವುದರಿಂದ ಮುನ್ನೆಚ್ಚರಿಕೆ ವಹಿಸವೇಕು. ಶುದ್ಧ ನೀರಿನ ಬಳಕೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ
ಡಾ. ಅನ್ಸರ್ ಅಹಮದ್, ಆರೋಗ್ಯ ಇಲಾಖೆಯ ಸಮಗ್ರ ರೋಗ ಕಣ್ಗಾವಲು ಯೋಜನೆ (ಐಡಿಎಸ್‌ಪಿ) ನಿರ್ದೇಶಕ

ವರ್ಷವಾರು ಅತಿಸಾರ ಪ್ರಕರಣ

ವರ್ಷ	ಪ್ರಕರಣ
2023	1.42 ಲಕ್ಷ
2024	1.82 ಲಕ್ಷ

ಇಲಾಖೆ ನೀಡಿದ ಮುನ್ನೆಚ್ಚರಿಕೆ ಕ್ರಮಗಳು

- ಶುದ್ಧ ಕುಡಿಯುವ ನೀರನ್ನು ಬಳಸಬೇಕು
- ದ್ರವ ಆಹಾರವನ್ನು ಹೆಚ್ಚಾಗಿ ಸೇವಿಸಬೇಕು
- ಕೈಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು
- ಶೌಚಾಲಯಕ್ಕೆ ಹೋಗಿ ಬಂದ ಬಳಿಕ ಕೈಗಳನ್ನು ಸಾಬೂನಿನಿಂದ ತೊಳೆದುಕೊಳ್ಳಬೇಕು
- ಪೌಷ್ಟಿಕಾಂಶಯುಕ್ತ ಆಹಾರ ಸೇವಿಸಬೇಕು
- ಸಮಸ್ಯೆಯ ತೀವ್ರತೆ ಹೆಚ್ಚಾದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಬೇಕು
- ಬೀದಿ ಬದಿ ತೆರೆದಿಟ್ಟ ಆಹಾರ ಪದಾರ್ಥಗಳನ್ನು ಸೇವಿಸಬಾರದು

ಡಿಕೆಶಿ ಸಿ.ಎಂ ಆಗಬಾರದು: ಹಿರೇಮಠ

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ಪ್ರಜಾಪ್ರಭುತ್ವದಲ್ಲಿ ನಂಬಿಕೆಯೇ ಇಲ್ಲದ ಡಿ.ಕೆ. ಶಿವಕುಮಾರ್ ವ್ಯಾಪಕ ಭ್ರಷ್ಟಾಚಾರ ಮಾಡಿದ್ದು, ಮುಖ್ಯಮಂತ್ರಿ ಆಗಲು ಹೊರಟಿದ್ದಾರೆ. ಅಂಥವರು ಸಿ.ಎಂ. ಆಗಬಾರದು’ ಎಂದು ಸಮಾಜ ಪರಿವರ್ತನ ಸಮುದಾಯದ ಮುಖ್ಯಸ್ಥ ಎಸ್.ಆರ್. ಹಿರೇಮಠ ಹೇಳಿದರು.

‘ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಸಚಿವರಾಗಿದ್ದ ಶಿವಕುಮಾರ್ ಭೂಮಿ ಕಬಳಿಸಿದ್ದಾರೆ. ಭ್ರಷ್ಟಾಚಾರದ ವಿಷಯದಲ್ಲಿ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಒಂದೇ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕುಟುಂಬದವರು ಕೇತನಗಾನಹಳ್ಳಿಯಲ್ಲಿ ಗೋಮಾಳ ಜಮೀನು ಖರೀದಿಸಿದ್ದು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ’ ಎಂದು ಆರೋಪಿಸಿದರು.

‘ಮೂರು ಕೃಷಿ ಕಾಯ್ದೆಗಳನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿಲ್ಲ. ವಾಪಸ್ ಪಡೆಯದಿದ್ದರೆ ಉಗ್ರ ಹೋರಾಟ ಮಾಡುತ್ತೇವೆ’ ಎಂದು ಎಚ್ಚರಿಕೆ ನೀಡಿದರು.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ನವದೆಹಲಿಯಲ್ಲಿ ಗುರುವಾರ ಭೇಟಿ ಮಾಡಿ ಮಠದ ಕಾರ್ಯಕ್ರಮಕ್ಕೆ ಆಮಂತ್ರಿಸಿದರು

ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಶ್ರೀಶೈಲ ಶ್ರೀಗಳ ಅಭಿಮತ

‘ಸನ್ಯಾಸಿಗಳು ಧರ್ಮರಕ್ಷಣೆಗೆ ಸೈನಿಕರಾಗಲಿ’

ಪ್ರಜಾವಾಣಿ ವಾರ್ತೆ

ಪ್ರಕೃತಿ ನಗರ (ಸೇಡಂ): ‘ಕಾವಿ ಧರಿಸಿದ ಸನ್ಯಾಸಿಗಳು ಪ್ರಸಂಗ ಬಂದರೆ ಧರ್ಮ ಮತ್ತು ದೇಶದ ರಕ್ಷಣೆಗಾಗಿ ಸೈನಿಕರಾಗಲು ಸಿದ್ಧರಾಗಬೇಕು’ ಎಂದು ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿ ಗುರುವಾರ ನಡೆದ ಭಾರತೀಯ ಸಂಸ್ಕೃತಿ ಉತ್ಸವದ ದೇಶ–ಧರ್ಮ–ಸಂಸ್ಕೃತಿ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಸೈನಿಕರು ದೇಶದ ಗಡಿ ಕಾಯುವವರಿದ್ದಂತೆ, ಬೇರೆ ಬೇರೆ ಪರಂಪರೆಯ ಮಠಾಧೀಶರು ಧರ್ಮ ಮತ್ತು ಸಂಸ್ಕೃತಿಯ ಕಾವಲುಗಾರರಾಗಿದ್ದಾರೆ. ದೇಶ ಉಳಿದರೆ ಮಾತ್ರ ನಮ್ಮ ಧರ್ಮಗಳು ಮತ್ತು ಸಂಸ್ಕೃತಿ ಉಳಿಯುತ್ತವೆ. ಹೀಗಾಗಿ, ಧರ್ಮ ಮತ್ತು ಸಂಸ್ಕೃತಿಯ ಜತೆಗೆ ದೇಶ ಉಳಿಸಲು ಎಲ್ಲ ಮಠಾಧೀಶರು ಪಣತೊಡಬೇಕು. ಅದು ನಮ್ಮೆಲ್ಲರ ಪರಮ ಕರ್ತವ್ಯವೂ ಆಗಬೇಕು’ ಎಂದರು.

‘ದೇಶದಲ್ಲಿರುವ ಎಲ್ಲ ಧರ್ಮಗಳು ಭಾರತದ ಧರ್ಮಗಳೇ ಆಗಿವೆ. ದೇಶದಲ್ಲಿರುವ ಮುಸ್ಲಿಂ, ಕ್ರಿಶ್ಚಿಯನರು ತಾವು ಭಾರತೀಯರು ಎಂಬ ಭಾವ ಇಟ್ಟುಕೊಳ್ಳಬೇಕು. ರಾಷ್ಟ್ರ ಧ್ವಜ ಹಿಡಿಯದವರು, ಪಾಕಿಸ್ತಾನವನ್ನು ಬೆಂಬಲಿಸುವವರು ಯಾವುದೇ ಧರ್ಮದವರಿದ್ದರೂ ಅವರು ದೇಶದ್ರೋಹಿಗಳು’ ಎಂದು ಹೇಳಿದರು.

ಭಾರತೀಯ ವಿಕಾಸ ಸಂಗಮದ ಸಂರಕ್ಷಕ ಬಸವರಾಜ ಪಾಟೀಲ ಸೇಡಂ ಮಾತನಾಡಿ, ‘ದೇಶಭಕ್ತಿ ದುರ್ಬಲವಾಗಿ ದೇಶದಲ್ಲಿ ಅರಾಜಕತೆ ಬರಬಾರದು ಎಂದಾದರೆ ಧರ್ಮಗುರುಗಳು ತಮ್ಮ ಧರ್ಮ ದಂಡದ ಮೂಲಕ ದೇಶ ಆಳುವವರನ್ನು ನಿಯಂತ್ರಿಸಬೇಕು. ಭದ್ರವಾದ ದೇಶಕಟ್ಟಲು ಶಕ್ತಿಯುತವಾದ ಧರ್ಮದಂಡದ ಅವಶ್ಯವಿದೆ’ ಎಂದು ಹೇಳಿದರು.

ಸೇಡಂನಲ್ಲಿ ಗುರುವಾರ ನಡೆದ ಭಾರತೀಯ ಸಂಸ್ಕೃತಿ ಉತ್ಸವದ ದೇಶ–ಧರ್ಮ–ಸಂಸ್ಕೃತಿ ಸಮಾವೇಶದಲ್ಲಿ ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು. ಹಾರಕೂಡದ ಚೆನ್ನವೀರ ಶಿವಾಚಾರ್ಯರು, ಸದಾಶಿವ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮೀಜಿ, ಶಿವಶಂಕರ ಶಿವಾಚಾರ್ಯರು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

‘2ನೇ ವಿಮಾನ ನಿಲ್ದಾಣದ ಸ್ಥಳ ನಿಗದಿ ನಮ್ಮ ವ್ಯಾಪ್ತಿಯಲ್ಲಿಲ್ಲ’

ಬೆಂಗಳೂರು: ‘ಬಿಡದಿ, ನೆಲಮಂಗಲ, ತುಮಕೂರು, ಸೋಲೂರು ಹೀಗೆ ಯಾವ ಸ್ಥಳದಲ್ಲಿ ಬೆಂಗಳೂರಿನ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಬೇಕು ಎಂಬುದನ್ನು ತೀರ್ಮಾನಿಸುವುದು ನಮ್ಮ ವ್ಯಾಪ್ತಿಯಲ್ಲಿಲ್ಲ. ವಿಮಾನ ನಿಲ್ದಾಣ ಪ್ರಾಧಿಕಾರ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ತೀರ್ಮಾನಿಸುತ್ತವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಎರಡನೇ ವಿಮಾನ ನಿಲ್ದಾಣವನ್ನು ಇಂತಿಷ್ಟು ವರ್ಷಗಳ ಕಾಲ ನಿರ್ಮಾಣ ಮಾಡಬಾರದು ಎನ್ನುವ ಒಪ್ಪಂದವಿದೆ. ಹೀಗಾಗಿ, ಈ ವಿಚಾರದಲ್ಲಿ ಆ ಎರಡು ಸಂಸ್ಥೆಗಳು ತೀರ್ಮಾನ ಮಾಡುತ್ತವೆ’ ಎಂದರು.

ಎರಡನೇ ವಿಮಾನ ನಿಲ್ದಾಣದ ಶ್ರೇಯವನ್ನು ಎಚ್.ಡಿ. ದೇವೇಗೌಡ, ಕುಮಾರಸ್ವಾಮಿ ತೆಗೆದುಕೊಳ್ಳುತ್ತಿರುವ ಬಗ್ಗೆ ಕೇಳಿದಾಗ ಪ್ರತಿಕ್ರಿಯಿಸಿದ ಶಿವಕುಮಾರ್, ‘ಅವರು ಅಧಿಕಾರದಲ್ಲಿ ಇದ್ದಾಗ ಎರಡನೇ ವಿಮಾನ ನಿಲ್ದಾಣ ಮಾಡಲು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ನಾವು ಆ ಕೆಲಸ ಮಾಡುತ್ತಿದ್ದೇವೆ’ ಎಂದರು.

‘ವಿಮಾಣ ನಿಲ್ದಾಣಕ್ಕೆ ಕುಮಾರಸ್ವಾಮಿ ಒತ್ತಡ ತರುತ್ತಿದ್ದಾರೆಯೇ’ ಎಂಬ ಪ್ರಶ್ನೆ, ‘ಅವರು ಜಮೀನಿನ ಪಕ್ಕದವರು ಒತ್ತಾಯ ತರುತ್ತಾರೆ. ನಾನೂ ನನ್ನ ಜಮೀನು ಪಕ್ಕದಲ್ಲಿ ಇದ್ದವರಿಂದ ಒತ್ತಾಯ ತರುತ್ತೇನೆ. ನಮ್ಮ ಊರಿನಲ್ಲಿ ವಿಮಾನ ನಿಲ್ದಾಣ ಬರಬೇಕು ಎನ್ನುವ ಆಸೆ ನನಗಿದೆ. ಆದರೆ, ಆ ರೀತಿ ಆಗುವುದಿಲ್ಲ. ವಿಮಾನ ನಿಲ್ದಾಣ ಮಾಡಬೇಕೆಂದರೆ ಒಂದಷ್ಟು ತಾಂತ್ರಿಕ ವಿಚಾರಗಳಿರುತ್ತವೆ’ ಎಂದರು.

‘ಮೇಕೆದಾಟು ಅಣೆಕಟ್ಟೆಗೆ ಒಂದೇ ದಿನದಲ್ಲಿ ಅನುಮತಿ ಕೊಡಿಸುತ್ತೇನೆ ಎಂದು ಕುಮಾರಸ್ವಾಮಿ ಹೇಳಿದ್ದರಲ್ಲ, ಮೊದಲು ಈ ಕೆಲಸವನ್ನು ಅವರು ಮಾಡಲಿ. ಆ ಮೇಲೆ ಮಾತನಾಡಲಿ’ ಎಂದೂ ಹೇಳಿದರು.

ಕೃಷ್ಣಾ ನ್ಯಾಯಮಂಡಳಿ ಅಧಿಸೂಚನೆಗೆ ‘ಸುಪ್ರೀಂ’ ತಡೆ

ನವದೆಹಲಿ: ಕೃಷ್ಣಾ ಜಲವಿವಾದ ನ್ಯಾಯಮಂಡಳಿಯ ಅಂತಿಮ ಆದೇಶದ ಗೆಜೆಟ್ ಅಧಿಸೂಚನೆ ಹೊರಡಿಸದಂತೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ತಿಳಿಸಿದರು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯರೊಬ್ಬರ ಪ್ರಶ್ನೆಗೆ ಗುರುವಾರ ಉತ್ತರಿಸಿದ ಅವರು, ‘ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 524 ಮೀಟರ್‌ಗೆ ಎತ್ತರಿಸುವ ಪ್ರಸ್ತಾವಕ್ಕೆ ಆಂಧ್ರ ಪ್ರದೇಶ ಹಾಗೂ ಮಹಾರಾಷ್ಟ್ರ ಸರ್ಕಾರಗಳು ವಿರೋಧ ವ್ಯಕ್ತಪಡಿಸಿದ್ದವು. ಈ ರಾಜ್ಯಗಳ ಬೇಡಿಕೆಯಲ್ಲಿ ವಾಸ್ತವಾಂಶ ಇಲ್ಲ ಎಂಬ ಕಾರಣಕ್ಕೆ ಅದನ್ನು ತಳ್ಳಿಹಾಕಲಾಗಿದೆ. ಅಣೆಕಟ್ಟೆಯ ಎತ್ತರವನ್ನು ತಗ್ಗಿಸುವ ಅಥವಾ ಯಾವುದೇ ತಾಂತ್ರಿಕ ಸಮಿತಿ ರಚಿಸುವ ಪ್ರಸ್ತಾವವು ಕೇಂದ್ರದ ಮುಂದಿಲ್ಲ’ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಕಡು ಭ್ರಷ್ಟ ಸರ್ಕಾರ: ದೇವೇಗೌಡ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕರ್ನಾಟಕದ ಕಾಂಗ್ರೆಸ್ ಸರ್ಕಾರದಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿದೆ’ ಎಂದು ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡ ಆರೋಪಿಸಿದರು.

ರಾಜ್ಯಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಚರ್ಚೆಯಲ್ಲಿ ಗುರುವಾರ ಪಾಲ್ಗೊಂಡು ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ವಿಶಾಲ ನಾಯಕತ್ವದ ಅನುಭವಗಳೊಂದಿಗೆ ದೇಶವನ್ನು ನಡೆಸಬಲ್ಲ ಅತ್ಯಂತ ಎತ್ತರದ ನಾಯಕ ಎಂದು ದೇವೇಗೌಡ ಬಣ್ಣಿಸಿದರು.

‘ಲೋಕಸಭೆಯಲ್ಲಿ ಬಿಜೆಪಿಗೆ ಸಿಕ್ಕಿರುವುದು 240 ಸ್ಥಾನಗಳಷ್ಟೇ ಎಂದು ಕಾಂಗ್ರೆಸ್ ನಾಯಕರು ಲೇವಡಿ ಮಾಡುತ್ತಿದ್ದಾರೆ. ಆದರೆ, ಕರ್ನಾಟಕ ವಿಧಾನಸಭೆಯಲ್ಲಿ ಕಾಂಗ್ರೆಸ್ 136 ಸ್ಥಾನಗಳನ್ನು ಗೆದ್ದುಕೊಂಡಿದೆ. ಕಾಂಗ್ರೆಸ್ ಸರ್ಕಾರ ಯಾವ ರೀತಿಯಲ್ಲಿ ಆಡಳಿತ ನಡೆಸುತ್ತಿದೆ ಎಂಬುದು ಎಲ್ಲರಿಗೂ ಗೊತ್ತು. ಅಲ್ಲಿರುವುದು ಕಡು ಭ್ರಷ್ಟ ಸರ್ಕಾರ’ ಎಂದು ಟೀಕಾಪ್ರಹಾರ ನಡೆಸಿದರು.

‘ಪ್ರಗತಿಶೀಲ ರಾಜ್ಯ ಕರ್ನಾಟಕವನ್ನು ಕಾಂಗ್ರೆಸ್ ಸರ್ಕಾರ ಹಾಳು ಮಾಡುತ್ತಿದೆ. ಅದು ಎಷ್ಟರ ಮಟ್ಟಿಗೆ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದರೆ ಪರಿಶಿಷ್ಟ ಜನರ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ ಹಣವನ್ನು ಚುನಾವಣೆಗೆ ಬಳಸಿಕೊಂಡಿದೆ’ ಎಂದು ಟೀಕಿಸಿದರು. ಆಗ ಬಿಜೆಪಿ ಸದಸ್ಯರು ಶೇಮ್ ಶೇಮ್ ಎಂದು ಘೋಷಣೆಗಳನ್ನು ಕೂಗಿದರು. ದೇವೇಗೌಡರ ಹೇಳಿಕೆಗೆ ಕಾಂಗ್ರೆಸ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

‘ಕಾಂಗ್ರೆಸ್ ಸರ್ಕಾರದ ಸಚಿವರ ಕಾರ್ಯವೈಖರಿ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಸಲಹೆ ನೀಡಿದ್ದಾರೆ. ಈ ಕುರಿತ ಪತ್ರಿಕಾ ವರದಿಗಳನ್ನು ಓದಲೇ’ ಎಂದು ಅವರು ಪ್ರಶ್ನಿಸಿದರು. ಇದಕ್ಕೆ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ‘ನೀವೆಲ್ಲ ಪ್ರಾಮಾಣಿಕರು. ಕಾಂಗ್ರೆಸ್ ಸರ್ಕಾರದ ಕಾರ್ಯವೈಖರಿ ಕುರಿತ ಪತ್ರಿಕಾ ವರದಿಗಳನ್ನು ನಾನು ಇಲ್ಲಿ ಓದಿದರೆ ನಿಮಗೆ ಜೀರ್ಣ ಮಾಡಿಕೊಳ್ಳಲು ಕಷ್ಟ ಆಗುತ್ತದೆ’ ಎಂದು ಅವರು ವ್ಯಂಗ್ಯವಾಗಿ ಹೇಳಿದರು. ದೇವೇಗೌಡರ ಮಾತಿಗೆ ಕಾಂಗ್ರೆಸ್ ಸದಸ್ಯರು ಅಡ್ಡಿಪಡಿಸಿದರು.

‘ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. ನಗರದ ಜನಸಂಖ್ಯೆ 1.45 ಕೋಟಿ ದಾಟಿದೆ. ನಗರಕ್ಕೆ ಕಾವೇರಿ ನ್ಯಾಯಮಂಡಳಿಯು 20 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿದೆ. ಈ ನೀರು ಏನೇನೂ ಸಾಲದು. ಕನಿಷ್ಠ 50 ಟಿಎಂಸಿ ಅಡಿ ನೀರು ಹಂಚಿಕೆ ಮಾಡಬೇಕು. ಬೆಂಗಳೂರಿನ ನೀರಿನ ಸಮಸ್ಯೆ ಬಗೆಹರಿಸಲು ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಮನವಿ ಮಾಡಿದ್ದೆ. ಆಗ ಖರ್ಗೆ ಸಚಿವರಾಗಿದ್ದರು. ಸಿಂಗ್ ಅವರು ಬೇಡಿಕೆ ಈಡೇರಿಸದೆ ಕೈ ಚೆಲ್ಲಿದ್ದರು. ಆದರೆ, ಬೆಂಗಳೂರಿನ ನೀರಿನ ಸಮಸ್ಯೆ ಬಗೆಹರಿಸಲು ಮೋದಿ ಅವರಿಂದ ಸಾಧ್ಯ’ ಎಂದು ಅವರು ಪ್ರತಿಪಾದಿಸಿದರು.



ಅಂಜಿಕೆ ಇಲ್ಲದೆ ಭ್ರಷ್ಟಾಚಾರದಲ್ಲಿ ತೊಡಗಿರುವ ಈ ಸರ್ಕಾರದ ಕೆಟ್ಟ ಆಡಳಿತದಿಂದ ಅನೇಕ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡರು
ಎಚ್.ಡಿ. ದೇವೇಗೌಡ, ಸಂಸದ

ಬಂಜಾರರ ಮನೆ–ಮನೆ ಸಮೀಕ್ಷೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸುವ ಸಲುವಾಗಿ ಬಂಜಾರ ಸಮುದಾಯದ ಜನಸಂಖ್ಯೆ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಯನ್ನು ಅರಿತುಕೊಳ್ಳಲು ಮನೆ–ಮನೆ ಸಮೀಕ್ಷೆ ನಡೆಸಬೇಕು’ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ನೇತೃತ್ವದ ವಿಚಾರಣಾ ಆಯೋಗಕ್ಕೆ ಕರ್ನಾಟಕ ಬಂಜಾರ ಮಹಾಸಭಾವು ಮನವಿ ಸಲ್ಲಿಸಿದೆ.

ಸಮುದಾಯದ ಮುಖಂಡ ಹಾಗೂ ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ಜಯದೇವ ನಾಯ್ಕ, ಬಿ.ಟಿ.ಲಲಿತಾ ನಾಯಕ್, ಪ್ರಕಾಶ್ ರಾಥೋಡ್, ಚಂದ್ರ ಲಮಾಣಿ, ಅನಂತ ನಾಯ್ಕ್ ಅವರಿದ್ದ ನಿಯೋಗವು ವಿಚಾರಣಾ ಆಯೋಗದ ಅಧ್ಯಕ್ಷರನ್ನು ಗುರುವಾರ ಭೇಟಿ ಮಾಡಿ, ಮನವಿ ಸಲ್ಲಿಸಿತು.

‘ಪರಿಶಿಷ್ಟ ಜಾತಿಗಳಲ್ಲಿ ಉಪ–ವರ್ಗೀಕರಣ ಮಾಡಲು ವಾಸ್ತವಿಕ ದತ್ತಾಂಶ ಮತ್ತು ಸಮುದಾಯಗಳ ಅಂತರ್ ಹಿಂದುಳಿದಿರುವಿಕೆ ದತ್ತಾಂಶಗಳನ್ನು ಬಳಸಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಆದರೆ, ಈ ಎರಡೂ ದತ್ತಾಂಶಗಳು ಯಾವುವು ಎಂಬುದನ್ನು ವ್ಯಾಖ್ಯಾನಿಸಿಲ್ಲ. ಇದನ್ನು ಸ್ಪಷ್ಟಪಡಿಸಿಕೊಳ್ಳಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಬೇಕು’ ಎಂದು ನಿಯೋಗವು ಕೋರಿದೆ.

‘ಬಂಜಾರ ಸಮುದಾಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಕಲೆಹಾಕಲು ಮನೆ–ಮನೆ ಸಮೀಕ್ಷೆ ನಡೆಸಬೇಕು. ಇಲ್ಲವೇ ಕೇಂದ್ರ ಸರ್ಕಾರವು ನಡೆಸಲಿರುವ ಜನಗಣತಿಯಲ್ಲೇ ಸಂಬಂಧಿತ ಮಾಹಿತಿಗಳನ್ನು ಕಲೆಹಾಕಲು ವ್ಯವಸ್ಥೆ ರೂಪಿಸಬೇಕು. ಪರಿಶಿಷ್ಟ ಜಾತಿಗಳಲ್ಲೇ ಉಪ–ವರ್ಗೀಕರಣ ಮಾಡಲು ಅವಶ್ಯವಾಗಿರುವ ದತ್ತಾಂಶಗಳನ್ನು ಜನಗಣತಿ ವರದಿ ಆಧಾರದಲ್ಲಿ ಸಿದ್ಧಪಡಿಸಿಕೊಳ್ಳಬೇಕು’ ಎಂದು ಮನವಿ ಮಾಡಿಕೊಂಡಿದೆ.

‘ಏಕಸದಸ್ಯ ವಿಚಾರಣಾ ಆಯೋಗವು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲು ನೀಡಿರುವ ಅವಧಿಯನ್ನು ಇನ್ನೂ ಮೂರು ತಿಂಗಳು ವಿಸ್ತರಿಸಬೇಕು. ಅಗತ್ಯ ದತ್ತಾಂಶಗಳು ಲಭ್ಯವಾಗುವವರೆಗೆ ಯಾವುದೇ ನಿರ್ಧಾರ ಮಾಡಬಾರದು’ ಎಂದೂ ಕೋರಿದೆ.

‘ದಾವಣಗೆರೆ ರಾಷ್ಟ್ರೀಯ ಅಕ್ಷರ ಹಬ್ಬ’ ಇಂದಿನಿಂದ

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಾವಣಗೆರೆ ಲಿಟರರಿ ಫೋರಂ ಹಾಗೂ ಅರಸೀಕೆರೆಯ ಅರಸೀ ಸಾಂಸ್ಕೃತಿಕ ವೇದಿಕೆ ಸಹಯೋಗದಲ್ಲಿ ನಗರದಲ್ಲಿ ಆಯೋಜಿಸಿರುವ 3 ದಿನಗಳ ‘ದಾವಣಗೆರೆ ರಾಷ್ಟ್ರೀಯ ಅಕ್ಷರ ಹಬ್ಬ: 2025’ ಶುಕ್ರವಾರ ಆರಂಭವಾಗಲಿದೆ.

ಇಲ್ಲಿನ ಎಂಬಿಎ ಕಾಲೇಜು ಸಭಾಂಗಣದಲ್ಲಿ ಬೆಳಿಗ್ಗೆ 10.30ಕ್ಕೆ ಅಕ್ಷರ ಹಬ್ಬವನ್ನು ಸಾಹಿತಿ ಎಲ್.ಹನುಮಂತಯ್ಯ ಅವರು ಉದ್ಘಾಟಿಸಲಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ. ಪೋತೆ, ದೂರದರ್ಶನದ ಚಂದನ ವಾಹಿನಿಯ ಕಾರ್ಯಕ್ರಮ ಮುಖ್ಯಸ್ಥೆ ಆರತಿ ಎಚ್.ಎನ್., ಕತೆಗಾರ್ತಿ ಚಾಂದಿನಿ, ಚಿಂತಕ ಪ್ರೊ.ಎ.ಬಿ. ರಾಮಚಂದ್ರಪ್ಪ, ಪತ್ರಕರ್ತ ಬಿ.ಎನ್. ಮಲ್ಲೇಶ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಅಕ್ಷರ ಹಬ್ಬದಲ್ಲಿ ಕಥಾ ಸಮಯ, ಕವಿ ಸಮಯ, ರಂಗಸಮಯ ಸೇರಿದಂತೆ ಮೂರು ದಿನ 9 ಗೋಷ್ಠಿಗಳು ನಡೆಯಲಿವೆ. ಪುಸ್ತಕ ಬಿಡುಗಡೆ ಹಾಗೂ ಕಥಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮವೂ ನಡೆಯಲಿದೆ. ರಾಜ್ಯದ ವಿವಿಧೆಡೆಯಿಂದ ಸಾಹಿತಿಗಳು, ಬರಹಗಾರರು, ಚಿಂತಕರು ಭಾಗವಹಿಸಲಿದ್ದಾರೆ.

ಫೆ.9ರಂದು ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಹಿರಿಯ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಸಮಾರೋಪ ನುಡಿಗಳನ್ನಾಡಲಿದ್ದಾರೆ. ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ರೈತ ಮುಖಂಡ ತೇಜಸ್ವಿ ಪಟೇಲ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯೆ ದಾಕ್ಷಾಯಣಿ ಹುಡೇದ ಉಪಸ್ಥಿತರಿರಲಿದ್ದು, ಪತ್ರಕರ್ತ ಸದಾನಂದ ಹೆಗಡೆ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅರಣ್ಯದಲ್ಲಿ ನಾಡ ಬಂದೂಕು, 10 ಖಾಲಿ ಕಾಟ್ರೇಜ್ ಪತ್ತೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಶೃಂಗೇರಿ ತಾಲ್ಲೂಕಿನ ಕೆರೆಕಟ್ಟೆಯ ಹುಲಗಾರುಬೈಲು ಸಮೀಪದ ಅರಣ್ಯದಲ್ಲಿ ಒಂದು ನಾಡ ಬಂದೂಕು, 10 ಖಾಲಿ ಕಾಟ್ರೇಜ್ ಪತ್ತೆಯಾಗಿದ್ದು, ಸ್ಥಳೀಯರ ಮಾಹಿತಿ ಮೇರೆಗೆ ಪೊಲೀಸರು ಅವುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎದುರು ಐವರು ನಕ್ಸಲರು ಶರಣಾಗಿದ್ದರು. ಕೆಲವು ದಿನಗಳ ಹಿಂದೆ ಮಾವೋವಾದಿ ಕೋಟೆಹೊಂಡ ರವೀಂದ್ರ ಕೂಡ ಚಿಕ್ಕಮಗಳೂರು ಜಿಲ್ಲಾಡಳಿತದ ಎದುರು ಶಸ್ತ್ರಾಸ್ತ್ರ ರಹಿತರಾಗಿ ಶರಣಾಗಿದ್ದರು. ಈ ಕುರಿತು ಶೃಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈಗ ಪತ್ತೆಯಾಗಿರುವ ನಾಡ ಬಂದೂಕು ಯಾರಿಗೆ ಸೇರಿದ್ದು ಎಂಬ ಮಾಹಿತಿ ಲಭ್ಯವಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅರಣ್ಯದಲ್ಲಿ ಪತ್ತೆಯಾದ ನಾಡ ಬಂದೂಕು

‘ಇನ್ನೆಷ್ಟು ಸಾವಾಗಬೇಕು?’

ಮಂಡ್ಯ: ‘ಮೈಕ್ರೊಫೈನಾನ್ಸ್ ಕಿರುಕುಳದಿಂದ ರಾಜ್ಯದಲ್ಲಿ 30 ಜನ ಸತ್ತಿದ್ದು, ಇದಕ್ಕೆ ಯಾರು ಹೊಣೆ? ಸುಗ್ರೀವಾಜ್ಞೆ ತರಲು ಇನ್ನೆಷ್ಟು ಸಾವಾಗಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಕೇಳಿದರು.

ಮಳವಳ್ಳಿ ತಾಲ್ಲೂಕಿನ ಕೊನ್ನಾಪುರದಲ್ಲಿ ಮೈಕ್ರೊಫೈನಾನ್ಸ್ ಕಿರುಕುಳದಿಂದ ಮೃತಪಟ್ಟ ಪ್ರೇಮಾ ಅವರ ಮನೆಗೆ ಗುರುವಾರ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

‘ರಾಜ್ಯಪಾಲರು ಅಂಕಿತ ಹಾಕಿದ ಕೂಡಲೇ ಸುಗ್ರೀವಾಜ್ಞೆ ಜಾರಿ ಎನ್ನುತ್ತಿರುವ ಸರ್ಕಾರ ‘ನಾಳೆ ಬಾ’ ಎಂಬ ಫಲಕವನ್ನು ಹಾಕಿಕೊಂಡಂತಿದೆ’ ಎಂದು ಟೀಕಿಸಿದರು.

ಮಂಡ್ಯ ಜಿಲ್ಲಾಧಿಕಾರಿ ಕುಮಾರ್ ಅವರಿಗೆ ಕರೆ ಮಾಡಿ, ‘ಕೊನ್ನಾಪುರ ಗ್ರಾಮದಲ್ಲಿ ಮಹಿಳಾ ಕಾನ್‌ಸ್ಟೆಬಲ್‌ಗಳೇ ಮಹಿಳೆಯರ ಸೀರೆ ಎಳೆದಾಡಿ, ದೌರ್ಜನ್ಯ ನಡೆಸಿದ್ದಾರೆ. ಇವರ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಿ’ ಎಂದು ಸೂಚಿಸಿದರು.

ಗೃಹಿಣಿಯರಿಗೆ ಸರ್ಕಾರ ₹2 ಸಾವಿರ ಕೊಡುತ್ತದೆಂದು ಹಳ್ಳಿಗಳಿಗೆ ಬಂದ ಮೈಕ್ರೊಫೈನಾನ್ಸ್‌ನವರು ಮಾನ ತೆಗೆಯುತ್ತಿರುವುದರಿಂದಲೇ ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ
ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಬಿಇಒಗಳ ಒತ್ತಡ– ಜಿಎಸ್‌ಟಿ ಬಿಲ್‌ಗಾಗಿ ಪರದಾಟ

ಕಲಿಕಾ ಹಬ್ಬ; ಸಿಆರ್‌ಪಿಗಳಿಗೆ ಪೀಕಲಾಟ

• ಎಂ. ಮಹೇಶ್

ಮೈಸೂರು: ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ನಡೆಸಬೇಕಿರುವ ‘ಕಲಿಕಾ ಹಬ್ಬ’ಕ್ಕೂ ಮುನ್ನವೇ ‘ಜಿಎಸ್‌ಟಿ ನಂಬರ್ ಹೊಂದಿರುವ ಬಿಲ್’ ತಂದುಕೊಡುವಂತೆ ಜಿಲ್ಲೆಯ ಬಿಇಒಗಳು ಸೂಚಿಸಿರುವುದು ಸಮೂಹ ಸಂಪನ್ಮೂಲ ವ್ಯಕ್ತಿ (ಸಿಆರ್‌ಪಿ)ಗಳನ್ನು ತೊಂದರೆಗೆ ಸಿಲುಕಿಸಿದೆ. ಬಿಲ್‌ಗಳಿಗಾಗಿ ಅವರು ಅಂಗಡಿಗಳಿಗೆ ಅಲೆದಾಡುವಂತೆ ಮಾಡಿ, ಮಾಲೀಕರಿಗೆ ಕಮಿಷನ್ ಕೊಡಬೇಕಾದ ಅನಿವಾರ್ಯಕ್ಕೆ ದೂಡಲಾಗಿದೆ.

2024–25ನೇ ಸಾಲಿನಲ್ಲಿ ಕ್ಲಸ್ಟರ್ ಮಟ್ಟದಲ್ಲಿ 1ರಿಂದ 5ನೇ ತರಗತಿಯ ಮಕ್ಕಳಿಗೆ, ವಿಶೇಷವಾಗಿ ಮೂಲಭೂತ ಸಾಕ್ಷರತೆ ಹಾಗೂ ಸಂಖ್ಯಾಜ್ಞಾನದ (ಎಫ್‌ಎಲ್‌ಎನ್) ಚಟುವಟಿಕೆಗಳ ಬಲವರ್ಧನೆಗೆ ‘ಕಲಿಕಾ ಹಬ್ಬ’ ಆಯೋಜಿಸುವಂತೆ ಸಮಗ್ರ ಶಿಕ್ಷಣ ಕರ್ನಾಟಕ ರಾಜ್ಯ ಯೋಜನಾ ನಿರ್ದೇಶಕರ ಕಚೇರಿಯಿಂದ ಜ.27ರಂದು ಸುತ್ತೋಲೆ ಹೊರಡಿಸಲಾಗಿದೆ. ಬಿಇಒಗಳ ಖಾತೆಗೆ ತಲಾ ಕ್ಲಸ್ಟರ್‌ಗೆ ₹ 25 ಸಾವಿರದಂತೆ ಅನುದಾನ ಬಿಡುಗಡೆಯಾಗಿದ್ದು, ಸಿಆರ್‌ಪಿಗಳಿಗೆ ಒದಗಿಸಲು ‘ಖರ್ಚಿನ ಬಿಲ್’ ಕೇಳುತ್ತಿರುವುದರಿಂದ ಗೊಂದಲ ಮೂಡಿದೆ.

ತಲೆನೋವು: ಜಿಲ್ಲೆಯಲ್ಲಿ 175 ಮಂದಿ ಸಿಆರ್‌ಪಿಗಳಿದ್ದಾರೆ. ‘ಹಣವಿಲ್ಲದೇ ಹೇಗೆ ಕಾರ್ಯಕ್ರಮ ಮಾಡುವುದು, ಸಾಮಗ್ರಿಗಳನ್ನು ಖರೀದಿಸದೇ ಅಂಗಡಿಯವರು ಬಿಲ್ ಕೊಡುತ್ತಾರೆಯೇ? ಕೊಡುವವರು ಕಮಿಷನ್ ಕೇಳುತ್ತಿದ್ದಾರೆ. ಆಯೋಜನೆಯ ಸವಾಲಿನೊಂದಿಗೆ ಬಿಲ್‌ಗಳನ್ನು ಹೊಂದಿಸುವುದು ತಲೆನೋವಾಗಿದೆ. ಅನಗತ್ಯವಾಗಿ ಒತ್ತಡ ಹೇರಲಾಗುತ್ತಿದೆ’ ಎಂದು ಸಿಆರ್‌ಪಿಗಳು ‘ಪ್ರಜಾವಾಣಿ’ ಜೊತೆ ಅಳಲು ತೋಡಿಕೊಂಡರು.

‘ಬಿಲ್‌ಗಾಗಿ ಅಂಗಡಿಗಳಿಗೆ ಸುತ್ತಾಡಬೇಕಾಗಿದೆ. ಇದೇ 10ನೇ ತಾರೀಖಿನೊಳಗೆ ಕಾರ್ಯಕ್ರಮ ಆಯೋಜಿಸಬೇಕೆಂಬ ಗಡುವನ್ನೂ ವಿಧಿಸಲಾಗಿದೆ. ಕೆಲವೇ ದಿನಗಳಲ್ಲಿ ಹಾಗೂ ಮುಂಗಡ ಹಣವೂ ಇಲ್ಲದೇ ನಡೆಸುವುದು ಹೇಗೆ’ ಎಂಬ ಪ್ರಶ್ನೆ ಅವರದು.

‘ಹಣವನ್ನು ಖಜಾನೆ–2 ತಂತ್ರಾಂಶದಿಂದ ಸಿಆರ್‌ಪಿಗಳ ಖಾತೆಗೆ ವರ್ಗಾಯಿಸಲಾಗದು. ಅಂಗಡಿಗಳಿಗೆ ಸಿಎಸ್‌ಎಸ್ ಪೋರ್ಟಲ್ ಮೂಲಕ ಹಣ ನೀಡುತ್ತೇವೆ. ಅದಕ್ಕಾಗಿ, ‘ವೆಂಡರ್ ಐಡಿ ಕ್ರಿಯೇಟ್’ ಮಾಡಲು ಅಂಗಡಿಗಳ ಬ್ಯಾಂಕ್ ಖಾತೆ ಸಂಖ್ಯೆ ಪಡೆದು ಬರಲು ಹೇಳಿರುವುದರಿಂದ ತೊಂದರೆಯಾಗಿದೆ’ ಎಂದು ಸಿಆರ್‌ಪಿಗಳು ತಿಳಿಸಿದರು.

ಜಿಎಸ್‌ಟಿಯನ್ನೂ ಕಟ್ಟಬೇಕು: ‘ಹಬ್ಬ’ಕ್ಕಾಗಿ ಸ್ಟೇಷನರಿ ಸಾಮಗ್ರಿಗಳು, ಊಟ, ಪ್ರಮಾಣಪತ್ರ, ಬಹುಮಾನ, ಶಾಮಿಯಾನ ವ್ಯವಸ್ಥೆ ಮಾಡಬೇಕು. ಅದಕ್ಕೆ ಹಣ ಬೇಕು. ಆದರೆ, ಖರೀದಿಗೆ ಮುನ್ನವೇ ಬಿಲ್ ಕೇಳಲು ಮುಜುಗರವಾಗಿದೆ. ಖರೀದಿಸಿ ಬಿಲ್ ಪಡೆಯಬೇಕಾದರೆ ಜಿಎಸ್‌ಟಿ ಕಟ್ಟಲೇಬೇಕು. ಕೆಲವರು ಸಾಲ ಮಾಡುತ್ತಿದ್ದಾರೆ. ಮಹಿಳಾ ಸಿಆರ್‌ಪಿಗಳಿಗೆ ಹೆಚ್ಚು ತೊಂದರೆಯಾಗುತ್ತಿದೆ’ ಎಂದರು.

‘ಹಣವೇ ಬಿಡುಗಡೆಯಾಗದೆ ಸಾಲದ ರೂಪದಲ್ಲಿ ಪಡೆಯಬೇಕಾಗಿದೆ. ಜಿಎಸ್‌ಟಿ ಜೊತೆಗೆ ಕಮಿಷನ್ ಕೂಡ ಕೊಡಬೇಕಾಗಿದೆ. ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುವುದು ಹೇಗೆ?’ ಎಂದು ಸಿಆರ್‌ಪಿಯೊಬ್ಬರು ಕೇಳಿದರು.

‘ಸರ್ಕಾರ ಕೊಟ್ಟರೂ ಬಿಇಒಗಳು ಕೊಡುತ್ತಿಲ್ಲ. ಬಿಲ್ ತರಬೇಕೆಂದು ಸಿಆರ್‌ಪಿಗಳನ್ನು ಬೀದಿಗೆ ತರಲಾಗಿದೆ’ ಎಂದು ಮುಖ್ಯಶಿಕ್ಷಕರೊಬ್ಬರು ಹೇಳಿದರು.

ಮುಖ್ಯಾಂಶಗಳು

- ಕಲಿಕಾ ಹಬ್ಬ ಕಾರ್ಯಕ್ರಮಕ್ಕೆ ಸೂಚನೆ
- ಜಿಲ್ಲೆಯಲ್ಲಿದ್ದಾರೆ 175 ಮಂದಿ ಸಿಆರ್‌ಪಿಗಳು
- ನಿಯಮ ಸರಳೀಕರಣ ಗೊಳಿಸಲು ಒತ್ತಾಯ

ಸಿಆರ್‌ಪಿಗಳು ಈಗ ಬಿಲ್ ಸಂಗ್ರಹಿಸುವ ಒತ್ತಡಕ್ಕೆ ಸಿಲುಕಿದ್ದಾರೆ. ನಿಯಮ ಸರಳೀಕರಿಸಿ ಹಣವನ್ನು ಬಿಇಒಗಳು ಸಿಆರ್‌ಪಿಗಳಿಗೆ ನೇರವಾಗಿ ಬಿಡುಗಡೆ ಮಾಡಬಹುದು
ಅರವಿಂದ ಶರ್ಮಾ
ಎನ್‌ಟಿಎಂ ಶಾಲೆ ಎಸ್‌ಡಿಎಂಸಿಯ ವಿಶೇಷ ಆಹ್ವಾನಿತ ಸದಸ್ಯ

ಕಾನೂನು ವಿ.ವಿ: ಪ್ರಶ್ನೆಪತ್ರಿಕೆ ಸೋರಿಕೆ ದೃಢಪಟ್ಟರೆ ಮರುಪರೀಕ್ಷೆ

ಹುಬ್ಬಳ್ಳಿ: ‘ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ನಡೆಸಿದ್ದ ಕಾನೂನು ಪದವಿ ಕೋರ್ಸ್‌ನ ಮೊದಲ ಸೆಮಿಸ್ಟರ್‌ನ ಕಾಂಟ್ರಾಕ್ಟ್–1 ವಿಷಯದ ಪ್ರಶ್ನೆಪತ್ರಿಕೆ ಸೋರಿಕೆಯಾದ ಬಗ್ಗೆ ತನಿಖೆ ಪ್ರಗತಿಯಲ್ಲಿದೆ. ಸೋರಿಕೆ ದೃಢಪಟ್ಟರೆ, ಮರು ಪರೀಕ್ಷೆ ನಡೆಸಲಾಗುವುದು’ ಎಂದು ಕುಲಸಚಿವೆ (ಮೌಲ್ಯಮಾಪನ) ರತ್ನಾ ಭರಮಗೌಡರ ಹೇಳಿದರು.

ಜ. 23ರಂದು ಕಾಂಟ್ರಾಕ್ಟ್–1 ವಿಷಯದ ಪರೀಕ್ಷೆ ನಡೆದಿತ್ತು. ಬೆಂಗಳೂರಿನ ಕೇಂದ್ರವೊಂದರಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆರೋಪ ಕೇಳಿಬಂದಿತ್ತು’ ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಪೊಲೀಸರ ಸಲ್ಲಿಸುವ ವರದಿ ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು. ಇತರ ವಿಷಯಗಳ ಪರೀಕ್ಷೆಗಳು ವೇಳಾಪಟ್ಟಿಯಂತೆ ನಡೆಯುತ್ತಿವೆ’ ಎಂದು ಕುಲಸಚಿವೆ (ಆಡಳಿತ) ಅನುರಾಧಾ ವಸ್ತ್ರದ ಹೇಳಿದರು.

ವೈದ್ಯಕೀಯ ಪಿ.ಜಿ ಸೀಟು: ಕೆಇಎಗೆ ಹೈಕೋರ್ಟ್ ಆದೇಶ

ನಿಯಮಬಾಹಿರ ಹಂಚಿಕೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಯಮಬಾಹಿರವಾಗಿ 10 ಜನರಿಗೆ ಹಂಚಿಕೆ ಮಾಡಲಾಗಿದ್ದ ಸ್ನಾತಕೋತ್ತರ ವೈದ್ಯಕೀಯ ಸೀಟುಗಳನ್ನು ರದ್ದುಗೊಳಿಸಿರುವ ಹೈಕೋರ್ಟ್, ‘ಈ ಸೀಟುಗಳನ್ನು ಮುಂದಿನ ಹಂತದ ಕೌನ್ಸೆಲಿಂಗ್‌ಗೆ ಲಭ್ಯವಾಗುವಂತೆ ಮಾಡಬೇಕು’ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಆದೇಶಿಸಿದೆ.

ಚಿತ್ರದುರ್ಗದ ಡಾ.ಅಕ್ಷಯ್ ಯು.ತುಪ್ಪದ ಸೇರಿದಂತೆ ಒಟ್ಟು 11 ಸ್ನಾತಕೋತ್ತರ ವೈದ್ಯಕೀಯ ಸೀಟು ಆಕಾಂಕ್ಷಿಗಳು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಹಾಗೂ ನ್ಯಾಯಮೂರ್ತಿ ವಿಜಯಕುಮಾರ ಎ.ಪಾಟೀಲ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಅಂತೆಯೇ, ‘ಅಖಿಲ ಭಾರತ ಕೋಟಾ ಹಂಚಿಕೆಗೆ ಇದೇ 9ರಂದು ಸಂಜೆ 5 ಗಂಟೆಗೆ ನಡೆಸುವ ಮೂರನೇ ಸುತ್ತಿನ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಲು ಅರ್ಜಿದಾರ ಅಭ್ಯರ್ಥಿಗಳಿಗೆ ಅವಕಾಶ ಮಾಡಿಕೊಡಬೇಕು’ ಎಂದೂ ಕೆಇಎಗೆ ನಿರ್ದೇಶಿಸಿದೆ.

‘ಅಖಿಲ ಭಾರತ ಕೋಟಾಗೆ ಸೇರ್ಪಡೆಯಾಗಲು ಅನುಕೂಲವಾಗುವಂತೆ ಕೆಇಎ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಒದಗಿಸಿಕೊಡಬೇಕು. ಮಾಪ್–ಅಪ್ ಸುತ್ತಿನಲ್ಲಿ ಖಾಲಿ ಇದ್ದ ಹಲವು ಸೀಟುಗಳನ್ನು ಮುಂದಿನ ಸುತ್ತಿನ ಹಂಚಿಕೆಗೆ ಲಭ್ಯವಾಗುವಂತೆ ಮಾಡಬೇಕು. ಇದರಿಂದ ಅರ್ಹ ಅಭ್ಯರ್ಥಿಗಳು ತಮ್ಮ ಮೆರಿಟ್ ಆಧರಿಸಿ ಸೀಟುಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಾಗಲಿದೆ. ಒಂದು ವೇಳೆ ಯಾರಾದರೂ ಅನರ್ಹರು ಈಗಾಗಲೇ ಕಾಲೇಜಿಗೆ ಸೇರ್ಪಡೆಯಾಗಿದ್ದರೆ ಅಂತಹವರ ಶುಲ್ಕವನ್ನು ಆದಷ್ಟು ಬೇಗ ಮರು ಪಾವತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬೇಕು’ ಎಂದು ಕೆಇಎಗೆ ಸೂಚಿಸಿದೆ.

ಮುಖ್ಯಾಂಶಗಳು

- ನಿಯಮಬಾಹಿರವಾಗಿ 10 ಜನರಿಗೆ ಸೀಟುಗಳ ಹಂಚಿಕೆ
- ಈ ಸೀಟುಗಳು ಮುಂದಿನ ಕೌನ್ಸೆಲಿಂಗ್‌ಗೆ ಲಭ್ಯವಾಗಲಿ
- ಅನರ್ಹರು ಈಗಾಗಲೇ ಪ್ರವೇಶ ಪಡೆದಿದ್ದರೆ ಅವರ ಶುಲ್ಕ ಮರುಪಾವತಿಸಿ

ಶುಕ್ರವಾರ, ಫೆಬ್ರುವರಿ 7, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಖರೀದಿ

ಬೆಂಗಳೂರಿನಲ್ಲಿ ನಡೆದ ವಿವಿಧ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳದ ಮಳಿಗೆಯೊಂದರಲ್ಲಿ ತಾಯಿ –ಮಗಳು ಕಂಡಿದ್ದು ಹೀಗೆ...

ಅಮೆರಿಕ ದುಃಸ್ವಪ್ನ ಕೈಗಳಿಗೆ ಕೋಳ...

ಅಹಮದಾಬಾದ್ ವಿಮಾನ ನಿಲ್ದಾಣದಿಂದ ಹೊರಬಂದ ವಲಸಿಗರು –ಪಿಟಿಐ ಚಿತ್ರ

ಪಿಟಿಐ/ರಾಯಿಟರ್ಸ್

‘ಅಮೆರಿಕ ಕನಸು’ ನನಸು ಮಾಡಿಕೊಳ್ಳಲು ಮನೆ ಬಿಟ್ಟು, ಬೆಟ್ಟ–ಗುಡ್ಡಗಳ ಮೂಲಕ ಸಾಗಿ, ದಟ್ಟ ಮತ್ತು ಅಷ್ಟೇ ಅಪಾಯಕಾರಿಯಾಗಿರುವ ಪನಾಮ ಅರಣ್ಯವನ್ನು ದಾಟಿ ಅಮೆರಿಕ ತಲುಪಿದವರು ಈಗ ಕೈಗೆ ಕೋಳ ತೊಡಿಸಿಕೊಂಡು ಭಾರತಕ್ಕೆ ವಾಪಸಾಗಿದ್ದಾರೆ. ಅವರ ಬಳಿ ಈಗ ಉಳಿದಿರುವುದು ಬೆಟ್ಟದಷ್ಟು ಸಾಲ ಮಾತ್ರ. ಮುಂದೇನು ಎನ್ನುವ ಬಗ್ಗೆ ಯಾರ ಬಳಿಯೂ ಉತ್ತರವಿಲ್ಲ...

ಮೊದಲ ಬ್ಯಾಚ್‌ನಲ್ಲಿ ಭಾರತಕ್ಕೆ ಬಂದವರಲ್ಲಿ ಹಲವರು ಮೆಕ್ಸಿಕೊ ಗಡಿಯ ಮೂಲಕ ಅಕ್ರಮವಾಗಿ ಅಮೆರಿಕ ತಲುಪಿದವರು. ಇದರಲ್ಲಿ ಹೆಚ್ಚಿನವರನ್ನು ಅಮೆರಿಕ ಗಡಿ ದಾಟುವ ವೇಳೆಯಲ್ಲಿಯೇ ಬಂಧಿಸಲಾಗಿದೆ. ಕೆಲವರೂ 2–3 ತಿಂಗಳ ಹಿಂದಷ್ಟೇ ಗಡಿ ದಾಟಿದವರು ಇದ್ದಾರೆ. ಗಡಿ ದಾಟಲು 6 ತಿಂಗಳು ಕಾದು ಕೂತು ಜನವರಿಯಲ್ಲಷ್ಟೇ ಹೋದವರೂ ಇದ್ದಾರೆ. ಏಜೆಂಟರ ಮಾತು ಕೇಳಿಕೊಂಡು ಅಕ್ರಮವಾಗಿ ಅಮೆರಿಕಕ್ಕೆ ಹೋಗಬೇಡಿ ಎಂದು ವಾಪಸಾದ ಹೆಚ್ಚಿನವರು ಮನವಿ ಮಾಡಿಕೊಂಡಿದ್ದಾರೆ

‘ಪಾಸ್‌ಪೋರ್ಟ್ ಕಸಿದುಕೊಂಡರು’

ಉದ್ಯೋಗದ ವೀಸಾದೊಂದಿಗೆ ಪಂಜಾಬ್‌ನ ಸುಖಪಾಲ್ ಸಿಂಗ್ ಅವರು ಇಟಲಿಗೆ ಹೋಗಿದ್ದರು. ಒಂದು ವರ್ಷ ಅಲ್ಲಿ ಶೆಫ್ ಆಗಿ ಕೆಲಸ ಮಾಡಿದ್ದರು. ಇಟಲಿಯಲ್ಲಿ ಸಿಕ್ಕ ಏಜೆಂಟರೊಬ್ಬರು ಅಮೆರಿಕ ತಲುಪಿಸುವ ಕನಸು ಬಿತ್ತಿದರು. ವಿಮಾನದಲ್ಲಿಯೇ ಅಮೆರಿಕ ತಲುಪಿಸುವುದಾಗಿಯೂ ಹೇಳಿದರು. ಸುಖಪಾಲ್ ಮತ್ತು ಆತನ ಕೆಲವು ಸ್ನೇಹಿತರು ಅಮೆರಿಕಕ್ಕೆ ಹೋಗಲು ತಯಾರಾದರು. ತಮ್ಮೆಲ್ಲಾ ಉಳಿತಾಯದ ಹಣ, ಸ್ನೇಹಿತರಿಂದ ಸಾಲ ಪಡೆದುಕೊಂಡು ಪ್ರತಿಯೊಬ್ಬರೂ ₹30 ಲಕ್ಷ ಹಣವನ್ನು ಏಜೆಂಟರಿಗೆ ನೀಡಿದರು.

‘ಅಮೆರಿಕಕ್ಕೆ ಕರೆದುಕೊಂಡು ಹೋಗುವ ಬದಲು ನಮ್ಮನ್ನು ನಿಕಾರಾಗುವ ದೇಶಕ್ಕೆ ಕರೆದುಕೊಂಡು ಹೋದರು. ಇಲ್ಲಿ ನಮ್ಮೆಲ್ಲ ಪಾಸ್‌ಪೋರ್ಟ್‌ಗಳನ್ನು ಏಜೆಂಟರು ಕಸಿದುಕೊಂಡರು. ಇಲ್ಲಿಂದ ಹೊಂಡುರಾಸ್, ಗ್ವಾಟೆಮಾಲಾ ಮೂಲಕ ಮೆಕ್ಸಿಕೊ ತಲುಪಿಸಲಾಯಿತು. ಅಲ್ಲಿಂದ ಸಮುದ್ರ ಮಾರ್ಗವಾಗಿ ಅಮೆರಿಕದ ಕ್ಯಾಲಿಫೋರ್ನಿಯಾಗೆ ತಲುಪಿಸಲಾಯಿತು. ಒಂದು ಕಡೆ ಬೋಟ್ ಮುಳುಗಿತ್ತು. ಈ ಘಟನೆಯಲ್ಲಿ ನಮ್ಮ ಜೊತೆ ಬಂದಿದ್ದ ಒಬ್ಬರು ತೀರಿ ಹೋದರು’ ಎಂದರು. ‘ಅಮೆರಿಕ ಗಡಿ ತಲುಪುತ್ತಿದ್ದಂತೆಯೇ ನಮ್ಮನ್ನು ಬಂಧಿಸಿ, ನಿರಾಶ್ರಿತರ ಕೇಂದ್ರಕ್ಕೆ ಹಾಕಲಾಯಿತು. 12 ದಿನಗಳವರೆಗೆ ಇಲ್ಲಿಯೇ ಇದ್ದೆವು’ ಎಂದು ತಮ್ಮ ಅನುಭವ ಹಂಚಿಕೊಂಡರು ಸುಖಪಾಲ್.

‘ಬ್ರೆಜಿಲ್‌ನಲ್ಲಿ 6 ತಿಂಗಳು ಕಾದಿದ್ದೆ’

‘ನಾನು ಸಾಲ ಮಾಡಿ ಏಜೆಂಟರಿಗೆ ₹30 ಲಕ್ಷ ನೀಡಿದ್ದೆ. ವೀಸಾ ಮೂಲಕವೇ ಅಮೆರಿಕ ತಲುಪಿಸುತ್ತೇವೆ ಎಂದು ಏಜೆಂಟರು ಹೇಳಿದ್ದರು. ಕಳೆದ ವರ್ಷದ ಜುಲೈನಲ್ಲಿ ಬ್ರೆಜಿಲ್ ತಲುಪಿದ್ದೆ. ಇಲ್ಲಿಂದ ವಿಮಾನದಲ್ಲಿ ಅಮೆರಿಕಕ್ಕೆ ಕರೆದುಕೊಂಡು ಹೋಗುವುದಾಗಿ ಹೇಳಲಾಗಿತ್ತು. ನನ್ನನ್ನು ಅಕ್ರಮವಾಗಿ ಗಡಿ ದಾಟಿಸಿದರು. ಗಡಿ ದಾಟಲು ಬ್ರೆಜಿಲ್‌ನಲ್ಲಿ ಆರು ತಿಂಗಳ ಕಾದು ಕೂತಿದ್ದೆ. ಗಡಿ ದಾಟುತ್ತಿದ್ದಂತೆಯೇ ಅಧಿಕಾರಿಗಳು ನಮ್ಮನ್ನು ಬಂಧಿಸಿದರು’ ಎನ್ನುತ್ತಾರೆ ಪಂಜಾಬ್‌ನ ಜಸ್‌ಪಾಲ್ ಸಿಂಗ್.

‘ಮಗಳು ಅಮೆರಿಕಕ್ಕೆ ಹೋಗಿದ್ದೇ ಗೊತ್ತಿಲ್ಲ’

‘ನನ್ನ ಮಗಳು ಸ್ನೇಹಿತರೊಂದಿಗೆ ಯುರೋಪ್ ಪ್ರವಾಸ ಹೋಗಿದ್ದಳು. ಆಕೆ ಯಾವಾಗ ಅಮೆರಿಕ ತಲುಪಿದಳು ಎಂದು ನಮಗೆ ತಿಳಿದಿಲ್ಲ. ಜ. 14ರಂದು ಆಕೆಯೊಂದಿಗೆ ಕೊನೆಯದಾಗಿ ಮಾತನಾಡಿದ್ದೆವು’ ಎನ್ನುತ್ತಾರೆ ಗುಜರಾತ್‌ನ ಕನುಭಾಯಿ ಪಟೇಲ್. ವಡೋದರಾದ ಜಯಂತಿಭಾಯಿ ಪಟೇಲ್ ಮಾತನಾಡಿ, ‘ನಮ್ಮ ಮಗಳು ಅಮೆರಿಕಕ್ಕೆ ಪ್ರವಾಸಿ ವೀಸಾದಲ್ಲಿ ಹೋಗಿದ್ದಳು’ ಎಂದರು.

‘ನನ್ನೆಲ್ಲಾ ಉಳಿತಾಯ ಖಾಲಿ’

ಪಂಜಾಬ್‌ನ ದಲೇರ್ ಸಿಂಗ್ ಎಂಬುವರಿಗೆ ಅಮೆರಿಕ ತಲುಪಲು 6 ತಿಂಗಳು ಬೇಕಾಗಿದ್ದವು. ಇದಕ್ಕಾಗಿ ₹39 ಲಕ್ಷ ಖರ್ಚು ಮಾಡಿದ್ದರು. ಅಮೆರಿಕ ತಲುಪಿ ಮೂರು ವಾರಗಳಲ್ಲಿಯೇ ಈಗ ಭಾರತಕ್ಕೆ ವಾಪಸು ಬಂದಿದ್ದಾರೆ. ‘ನಾನು ನನ್ನ ಇಡೀ ಜೀವನದಲ್ಲಿ ಗಳಿಸಿದ ಹಣವನ್ನೆಲ್ಲಾ ಕಳೆದುಕೊಂಡಿದ್ದೇನೆ. ನನ್ನ ಕನಸು ಕಮರಿ ಹೋಯಿತು. ನಮ್ಮ ಕುಟುಂಬದ ಚಿನ್ನವನ್ನು ಮಾರಿದ್ದೆ. ಮೊದಲು ದುಬೈಗೆ ಕರೆದುಕೊಂಡು ಹೋದರು. ಅಲ್ಲಿಯೇ ಹಲವು ತಿಂಗಳು ಕಳೆದೆ. ಮೆಕ್ಸಿಕೊ ಗಡಿ ದಾಟಿ ಅಮೆರಿಕ ಸೇರಿದೆ. ಜ. 15ರಂದು ಅಧಿಕಾರಿಗಳು ನಮ್ಮನ್ನು ಬಂಧಿಸಿದರು’ ಎಂದರು.

‘ಅಧಿಕ ಬಡ್ಡಿಗೆ ಸಾಲ’

ಪಂಜಾಬ್‌ನ ಕಪುರ್ತಲಾದ ಗುರುಪ್ರೀತ್ ಸಿಂಗ್ ಅವರ ಕುಟುಂಬವು ತಮ್ಮ ಮನೆಯನ್ನು ಅಡವಿಟ್ಟಿದೆ. ಜೊತೆಗೆ ಅಧಿಕ ಬಡ್ಡಿಗೆ ಸಾಲ ಪಡೆದುಕೊಂಡಿದ್ದರು, ಸಂಬಂಧಿಕರಿಂದಲೂ ಕೈಸಾಲ ಮಾಡಿದ್ದರು. ಒಟ್ಟು ₹45 ಲಕ್ಷದಷ್ಟು ಖರ್ಚು ಮಾಡಿ ಗುರುಪ್ರೀತ್ ಅವರನ್ನು ಅಮೆರಿಕಕ್ಕೆ ಕಳುಹಿಸಿದ್ದರು. ಜಸ್ವಿಂದರ್ ಸಿಂಗ್ ಎಂಬುವರು ಹೆಚ್ಚಿನ ಬಡ್ಡಿಗೆ ₹50 ಲಕ್ಷ ಸಾಲ ಮಾಡಿ, ಅಮೆರಿಕಕ್ಕೆ ತೆರಳಿದ್ದರು.

‘ಡಂಕಿ ಮಾರ್ಗ: ಅಪಾಯಕಾರಿ ಪನಾಮ’

ಪಂಜಾಬ್‌ನ ಹೋಶಿಯಾರ್‌ಪುರದ ಹರವಿಂದರ್ ಸಿಂಗ್ ಅವರದ್ದು ‘ಡಂಕಿ ಮಾರ್ಗ’ದ ಪ್ರಯಾಣ. ಈ ಮಾರ್ಗವು ಅತ್ಯಂತ ಕಠಿಣ ಮತ್ತು ಅಪಾಯಕಾರಿಯಾದುದು. ಇವರು ಕಳೆದ ಆಗಸ್ಟ್‌ನಲ್ಲಿ ಊರು ಬಿಟ್ಟು ಅಮೆರಿಕಕ್ಕೆ ಹೋಗಲು ಪ್ರಯಾಣ ಬೆಳೆಸಿದ್ದರು. ಏಜೆಂಟರಿಗೆ ₹42 ಲಕ್ಷ ನೀಡಿದ್ದರು. ‘ಕಾನೂನಾತ್ಮಕವಾಗಿಯೇ ಅಮೆರಿಕ ತಲುಪಿಸುತ್ತೇನೆ ಎಂದು ಏಜೆಂಟರು ಮಾತು ಕೊಟ್ಟಿದ್ದರು’ ಎನ್ನುತ್ತಾರೆ ಹರವಿಂದರ್.

‘ನಮ್ಮನ್ನು ಮೊದಲು ಕತಾರ್‌ಗೆ ಬಳಿಕ ಬ್ರೆಜಿಲ್, ಕೊಲಂಬಿಯಾ, ಪನಾಮ, ನಿಕಾರಾಗುವ ಮೂಲಕ ಮೆಕ್ಸಿಕೊ ಸೇರಿಸಿದರು. ಅಲ್ಲಿಂದ ಅಮೆರಿಕ ಗಡಿ ದಾಟಿದೆವು. ಅದೆಷ್ಟೊ ಬೆಟ್ಟಗಳನ್ನು ದಾಟಿದೆವು. ಸುಮಾರು 40–45 ಕಿ.ಮೀ ನಡೆದಿದ್ದೇವೆ. ಬೋಟ್ ಮೂಲಕ 15 ತಾಸುಗಳ ಪ್ರಯಾಣ ಮಾಡಿದೆವು. ಇನ್ನೇನು ಬೋಟು ಮುಳುಗಿಯೇ ಹೋಯಿತು ಎಂದುಕೊಂಡೆವು. ಆದರೆ, ಯಾರಿಗೂ ಏನೂ ಆಗಲಿಲ್ಲ’ ಎಂದು ಅನುಭವ ಬಿಚ್ಚಿಟ್ಟರು.

‘ಪನಾಮ ಅರಣ್ಯವನ್ನು ದಾಟುವುದೇ ಸಾಹಸ. ಇಲ್ಲಿ ಜನರು ಸಾಯುವುದನ್ನು ನೋಡಿದ್ದೇವೆ. ಸಮುದ್ರದಲ್ಲಿ ಮುಳುಗಿದವರನ್ನು ನೋಡಿದ್ದೇವೆ. ಅರಣ್ಯದಲ್ಲಿ ನಡೆಯುವಾಗ ಯಾರಿಗೇ ಪೆಟ್ಟಾದರೂ ನಾವು ಅವರನ್ನು ಅಲ್ಲಿಯೇ ಸಾಯಲು ಬಿಟ್ಟು ಮುಂದೆ ಬಂದಿದ್ದೇವೆ. ನಮಗೂ ಮೊದಲೇ ಇದೇ ಹಾದಿಯಲ್ಲಿ ಸಾಗಿದ ಹಲವರು ಸತ್ತುಬಿದ್ದಿರುವುದನ್ನು ಕಂಡೆವು. ಇವೆಲ್ಲವೂ ಒಂದು ಭಯಾನಕ ಅನುಭವ’ ಎಂದರು. ‘ನಮಗೆ ತಿನ್ನಲು ಏನೂ ಇಲ್ಲದೆ ಹಲವು ದಿನ ಕಳೆದಿದ್ದೇವೆ. ಒಂದೊಂದು ದಿನ ಬರೀ ಬಿಸ್ಕೆಟ್ ತಿಂದು ಬದುಕುಳಿದ್ದಿದ್ದೇವೆ. ಕಾಡಿನ ಹಾದಿಯಲ್ಲಿ ₹30 ಸಾವಿರ– ₹35 ಸಾವಿರ ಮೌಲ್ಯದ ಬಟ್ಟೆಗಳನ್ನು ಕಳೆದುಕೊಂಡೆವು’ ಎಂದರು.

‘ಕೈಗೆ ಕೋಳ ಹಾಕಲಾಗಿತ್ತು’



ಭಾರತಕ್ಕೆ ವಾಪಸು ಕರೆತರುವ ವೇಳೆ ಭಾರತೀಯರ ಕೈಗಳಿಗೆ ಕೋಳ ಹಾಕಿ, ಕಾಲುಗಳನ್ನು ಸರಪಳಿಯಿಂದ ಕಟ್ಟಿ ಕರೆತಂದಿದ್ದರ ಬಗ್ಗೆ ದೊಡ್ಡ ವಿವಾದ ಎದ್ದಿದೆ. ‘ನಮ್ಮ ಕೈಗಳಿಗೆ ಕೋಳ ತೊಡಿಸಲಾಗಿತ್ತು’ ಎಂದು ವಾಪಸಾದವರು ಹೇಳಿಕೆ ನೀಡಿದ್ದಾರೆ.

ವಿರೋಧ ಪಕ್ಷಗಳು ಈ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ‘ಅಮೆರಿಕವು ತನ್ನ ಕಾನೂನು ಪಾಲಿಸಿದೆ’ ಎಂದು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ. ಈ ನಡುವೆಯೇ ಅಮೆರಿಕದ ಗಡಿ ಗಸ್ತು ಪಡೆಯ ಮುಖ್ಯಸ್ಥ ಮಿಶೆಲ್ ಡಬ್ಲ್ಯು ಬ್ಯಾಂಕ್ಸ್ ಅವರು ‘ಎಕ್ಸ್’ ನಲ್ಲಿ ವಿಡಿಯೊವೊಂದನ್ನು ಹಂಚಿಕೊಂಡಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

‘ಅಮೆರಿಕಕ್ಕೆ ಅಕ್ರಮವಾಗಿ ವಲಸೆ ಬಂದಿದ್ದ ಭಾರತೀಯರನ್ನು ಅವರ ದೇಶಕ್ಕೆ ಬಿಟ್ಟುಬರಲಾಯಿತು. ನೀವು ಅಕ್ರಮವಾಗಿ ನಮ್ಮ ದೇಶಕ್ಕೆ ಬಂದರೆ, ನಾವು ನಿಮ್ಮನ್ನು ವಾಪಸು ಕಳಿಸುತ್ತೇವೆ’ ಎಂದು ಮಿಶೆಲ್ ಅವರು ವಿಡಿಯೊದೊಂದಿಗೆ ಪೋಸ್ಟ್ ಹಂಚಿಕೊಂಡಿದ್ದಾರೆ.

‘ನಮ್ಮ ಕೈ-ಕಾಲುಗಳಿಗೆ ಕೋಳ ತೊಡಿಸಲಾಗಿತ್ತು. ತಿನ್ನುವಾಗಲೂ ಕೋಳಗಳನ್ನು ಅವರು ತೆಗೆಯಲಿಲ್ಲ’ ಎನ್ನುತ್ತಾರೆ ಪಂಜಾಬ್‌ನ ದಲೇರ್ ಸಿಂಗ್. ‘ನಿರಾಶ್ರಿತರ ಶಿಬಿರಗಳಲ್ಲಿಯೂ ನಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ಳಲಾಗಿದೆ. ಶಿಬಿರಗಳಲ್ಲಿ ನಮಗೆ ಸ್ನ್ಯಾಕ್ಸ್ ಮತ್ತು ಗೋಮಾಂಸ ನೀಡಲಾಗುತ್ತಿತ್ತು. ನಾನು ಸ್ನ್ಯಾಕ್ಸ್ ಅನ್ನು ಮಾತ್ರ ಸೇವಿಸಿದೆ’ ಎಂದು ಪಂಜಾಬ್‌ನ ಸುಖಪಾಲ್ ಅವರೂ ತಮ್ಮ ಅನುಭವ ಬಿಚ್ಚಿಟ್ಟರು.

‘ಭಾರತಕ್ಕೆ ವಾಪಸು ಕಳುಹಿಸಲಾಗುತ್ತಿದೆ ಎಂದು ನಮಗೆ ತಿಳಿಸಲೇ ಇಲ್ಲ. ವಿಮಾನದಲ್ಲಿ ಕೂರಿಸುವ ಮೊದಲು ನಮ್ಮ ಕೈಗಳಿಗೆ ಕೋಳ ತೊಡಿಸಿದರು. ಅಮೃತಸರಕ್ಕೆ ಬಂದ ನಂತರವಷ್ಟೇ ಕೋಳಗಳನ್ನು ತೆಗೆದರು. ನಮ್ಮ ಸೀಟ್‌ಗಳಲ್ಲಿಯೂ ಅಲುಗಾಡಲು ಬಿಡಲಿಲ್ಲ. ಶೌಚಾಲಯಕ್ಕೆ ಹೋಗಲೂ ಬಿಡುತ್ತಿರಲಿಲ್ಲ. ಅದಕ್ಕಾಗಿಯೇ ನಾನು ನೀರನ್ನೂ ಕುಡಿಯಲಿಲ್ಲ. ಅಮೃತಸರಕ್ಕೆ ತಲುಪಿದ ಮೇಲೆಯೇ ನಾವೆಲ್ಲರೂ ಊಟ ಮಾಡಿದೆವು’ ಎಂದರು.

ಅಮೆರಿಕದಲ್ಲಿ ಯಾರ ಪರವಾಗಿಯೂ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಚಾರ ನಡೆಸಿಲ್ಲ. ಕೆಲವು ಸದಸ್ಯರಿಗೆ ಸಂಸತ್ತಿನಲ್ಲಿ ಸುಳ್ಳು ಹೇಳುವ ಪ್ರವೃತ್ತಿ ಇದೆ. ಮೋದಿ ಅವರು ಯಾರ ಪರವಾಗಿಯೂ ಪ್ರಚಾರ ನಡೆಸಿಲ್ಲ. ಈ ಹೇಳಿಕೆಯನ್ನು ಹಿಂಪಡೆಯಿರಿ

ಎಸ್.ಜೈಶಂಕರ್, ವಿದೇಶಾಂಗ ಸಚಿವ (ರಾಜ್ಯಸಭೆಯ ಕಾಂಗ್ರೆಸ್ ಸಂಸದ ನಸೀರ್ ಹುಸೇನ್ ಅವರು ಎತ್ತಿದ ಪ್ರಶ್ನೆಗೆ ಸಚಿವರ ಉತ್ತರ)

ಭಾರತಕ್ಕೆ ಮಾಡಿದ ಅವಮಾನ: ತರೂರ್

ನವದೆಹಲಿ (ಪಿಟಿಐ): ಅಮೆರಿಕವು ತನ್ನ ನೆಲದಲ್ಲಿ ಅಕ್ರಮವಾಗಿ ನೆಲಸಿರುವ ಭಾರತೀಯರನ್ನು ನಡೆಸಿಕೊಂಡ ರೀತಿ, ‘ಭಾರತ ಮತ್ತು ಭಾರತೀಯರಿಗೆ ಮಾಡಿರುವ ಅವಮಾನ’ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಗುರುವಾರ ಟೀಕಿಸಿದ್ದಾರೆ.



ಶಶಿ ತರೂರ್

‘ಪ್ರಯಾಣದ ಉದ್ದಕ್ಕೂ ನಮ್ಮ ಕೈಗಳಿಗೆ ಕೋಳ ತೊಡಿಸಿ, ಕಾಲುಗಳಿಗೆ ಸರಪಳಿ ಬಿಗಿಯಲಾಗಿತ್ತು. ಅಮೃತಸರ ತಲುಪಿದ ಬಳಿಕವಷ್ಟೇ ಅವುಗಳನ್ನು ಬಿಚ್ಚಿದ್ದಾರೆ’ ಎಂದು ಅಮೆರಿಕದಿಂದ ವಾಪಸಾದ ಕೆಲವು ವಲಸಿಗರು ಹೇಳಿಕೊಂಡಿದ್ದರು.

‘ಭಾರತದ ವಲಸಿಗರನ್ನು ಅಮೆರಿಕವು ನಡೆಸಿಕೊಂಡ ರೀತಿಯನ್ನು ಪ್ರತಿಭಟಿಸುತ್ತಿದ್ದೇವೆ. ತನ್ನ ದೇಶದಲ್ಲಿ ಅಕ್ರಮವಾಗಿ ಇರುವವರನ್ನು ಅವರ ದೇಶಕ್ಕೆ ವಾಪಸ್ ಕಳುಹಿಸುವ ಹಕ್ಕು ಅಮೆರಿಕಕ್ಕೆ ಇದೆ. ಅವರು ಭಾರತೀಯರು ಎಂಬುದು ಸಾಬೀತಾದರೆ, ಅವರನ್ನು ಸ್ವೀಕರಿಸುವುದು ನಮ್ಮ ಜವಾಬ್ದಾರಿಯೂ ಹೌದು. ಆದರೆ, ಅವರ ಕೈಗಳಿಗೆ ಕೋಳ ತೊಡಿಸಿ, ಸೇನಾ ವಿಮಾನದಲ್ಲಿ ಕಳುಹಿಸುವುದನ್ನು ಒಪ್ಪಲಾಗದು. ಇದನ್ನು ಖಂಡಿತವಾಗಿಯೂ ಪ್ರತಿಭಟಿಸಬೇಕು’ ಎಂದಿದ್ದಾರೆ.

ಇಂತಹ ಘಟನೆ ಮರುಕಳಿಸದ ರೀತಿಯಲ್ಲಿ ಸರ್ಕಾರವು ಅಮೆರಿಕಕ್ಕೆ ಸ್ಪಷ್ಟ ಸಂದೇಶವನ್ನು ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಮೋದಿ ಮತ್ತು ಟ್ರಂಪ್ ತುಂಬಾ ಒಳ್ಳೆಯ ಸ್ನೇಹಿತರು ಎಂದು ಹೇಳಲಾಗುತ್ತಿದೆ. ಈ ಘಟನೆ (ವಲಸಿಗರಿಗೆ ಅವಮಾನ) ನಡೆಯಲು ಮೋದಿ ಅವಕಾಶ ನೀಡಿದ್ದೇಕೆ?

ಪ್ರಿಯಾಂಕಾ ಗಾಂಧಿ, ಕಾಂಗ್ರೆಸ್ ಸಂಸದೆ

ಅಹಮದಾಬಾದ್ ತಲುಪಿದ 33 ಮಂದಿ

ಅಹಮದಾಬಾದ್ (ಪಿಟಿಐ): ಅಮೆರಿಕವು ವಾಪಸ್ ಕಳುಹಿಸಿದ 104 ಭಾರತೀಯರಲ್ಲಿ 33 ಮಂದಿ ಅಮೃತಸರದಿಂದ ವಿಮಾನದಲ್ಲಿ ಅಹಮದಾಬಾದ್‌ಗೆ ಗುರುವಾರ ಬೆಳಿಗ್ಗೆ ಬಂದಿಳಿದರು. ‘ಮಹಿಳೆಯರು ಮತ್ತು ಮಕ್ಕಳು ಒಳಗೊಂಡಂತೆ ಅಹಮದಾಬಾದ್‌ಗೆ ತಲುಪಿದ ಎಲ್ಲರನ್ನೂ ಗುಜರಾತ್ ಪೊಲೀಸರ ವಾಹನದಲ್ಲಿ ಅವರ ಊರುಗಳಿಗೆ ಕಳುಹಿಸಿಕೊಡಲಾಯಿತು ಎಂದು ಎಸಿಪಿ (‘ಡಿ’ ವಿಭಾಗ) ಆರ್.ಡಿ.ಓಜಾ ತಿಳಿಸಿದರು.

ಅಮೆರಿಕವು ವಾಪಸ್ ಕಳುಹಿಸಿದ ವಲಸಿಗರನ್ನು ಮಾಧ್ಯಮ ಪ್ರತಿನಿಧಿಗಳು ಮಾತನಾಡಿಸಲು ಪ್ರಯತ್ನಿಸಿದರೂ ಅವರು ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿ ಪೊಲೀಸ್ ವಾಹನವನ್ನೇರಿ ತಮ್ಮ ಊರಿನತ್ತ ಪ್ರಯಾಣ ಬೆಳೆಸಿದರು.

ಇವರಲ್ಲಿ ಹೆಚ್ಚಿನವರು ಮೆಹ್ಸಾನಾ, ಗಾಂಧಿನಗರ, ಪಠಾಣ್, ವಡೋದರ ಮತ್ತು ಖೇಡಾ ಜಿಲ್ಲೆಯವರು ಎಂದು ಮೂಲಗಳು ತಿಳಿಸಿವೆ.

ಖಾಸಗಿಗೆ ಫ್ರಾಂಚೈಸಿ , ಮಳಿಗೆ ತೆರೆಯುವ ಸಿಬ್ಬಂದಿಗೆ ರಿಯಾಯಿತಿ

‘ಹಾಪ್‌ಕಾಮ್ಸ್’ ಲಾಭದ ಹಾದಿಗೆ ಅಭಿಯಾನ

• ಕೆ.ಎಸ್.ಸುನಿಲ್

ಬೆಂಗಳೂರು: ಸಿಬ್ಬಂದಿ ಕೊರತೆ, ರಸ್ತೆ ವಿಸ್ತರಣೆ ಸೇರಿದಂತೆನಾನಾಕಾರಣಗಳಿಂದಮುಚ್ಚಿರುವಮಳಿಗೆಗಳನ್ನು ಪುನರಾಂಭಿಸಲು ವಿಶೇಷ ಅಭಿಯಾನ, ಖಾಸಗಿಯವರಿಗೆ ಫ್ರಾಂಚೈಸಿ ನೀಡುವುದು ಸೇರಿದಂತೆ ಹಲವು ಕ್ರಮಗಳ ಮೂಲಕ ಹಾಪ್‌ಕಾಮ್ಸ್ (ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ) ಅನ್ನು ಲಾಭದ ಹಳಿಗೆ ತರುವ ಪ್ರಯತ್ನ ಆರಂಭವಾಗಿದೆ.

‘ಹಾಪ್‌ಕಾಮ್ಸ್: 142 ಮಳಿಗೆ ಬಂದ್’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯ ಜನವರಿ 27ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು. ಈ ಬೆನ್ನಲ್ಲೇ, ಸಂಸ್ಥೆಯ ಬಲವರ್ಧನೆಗೆ ಆಡಳಿತ ಮಂಡಳಿ ಮುಂದಾಗಿದ್ದು, ಹಲವು ನಿರ್ಧಾರ ತೆಗೆದುಕೊಂಡಿದೆ.

ಮುಕ್ತ ಮಾರುಕಟ್ಟೆಯಿಂದ ಎದುರಾಗಿರುವ ಸ್ಪರ್ಧೆ, ಖಾಸಗಿ ಕಂಪನಿಗಳ ಪೈಪೋಟಿಯ ಪರಿಣಾಮ, ನಾಲ್ಕು ಜಿಲ್ಲೆಗಳ ವ್ಯಾಪ್ತಿ ಒಳಗೊಂಡ ಬೆಂಗಳೂರು ಹಾಪ್‌ಕಾಮ್ಸ್ ಸೇರಿದಂತೆ ಜಿಲ್ಲಾ ಹಾಪ್‌ಕಾಮ್ಸ್‌ಗಳು ನಷ್ಟದಲ್ಲಿವೆ.

ನಷ್ಟದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳನ್ನು ಖಾಸಗಿಯವರಿಗೆ ಫ್ರಾಂಚೈಸಿ ನೀಡಲು ನಿರ್ಧರಿಸಲಾಗಿದೆ. ಸಂಸ್ಥೆ, ವ್ಯಕ್ತಿಗಳು ಫ್ರಾಂಚೈಸಿ ಪಡೆಯಬಹುದು. ಇದಕ್ಕಾಗಿ ₹1.50 ಲಕ್ಷ ಠೇವಣಿ ಇಡಬೇಕು. ಮೂರು ತಿಂಗಳವರೆಗೆ ₹50 ಸಾವಿರ ಮೊತ್ತದ ತರಕಾರಿ, ಹಣ್ಣುಗಳನ್ನು ಖರೀದಿಸುವುದು ಕಡ್ಡಾಯ. ಲಾಭಾಂಶದಲ್ಲಿ ಹಂಚಿಕೆ ಪದ್ಧತಿ ತರಲು ಹಾಪ್‌ಕಾಮ್ಸ್ ಮುಂದಾಗಿದೆ.

ಹಾಪ್‌ಕಾಮ್ಸ್ ಮಳಿಗೆ

ವರದಿ ಪರಿಣಾಮ

‘ಮುಚ್ಚಿರುವ ಮಳಿಗೆಗಳನ್ನು ತೆರೆಯೋಣ ಬಾರಾ’ ಎಂಬ ವಿಶೇಷ ಅಭಿಯಾನ ಆರಂಭಿಸಿ, ಮಳಿಗೆಗಳನ್ನು ತೆರೆಯುವ ಹಾಲಿ ಸಿಬ್ಬಂದಿಗೆ ವೇತನದ ಜೊತೆಗೆ ಶೇಕಡ 6ರಷ್ಟು ರಿಯಾಯಿತಿ ನೀಡಲಾಗುವುದು. ಮಂಜೂರಾದ 965 ಸಿಬ್ಬಂದಿ ಪೈಕಿ ನಿವೃತ್ತಿ, ನಿಧನ ಕಾರಣಗಳಿಂದ 389 ನೌಕರರು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಸಿಬ್ಬಂದಿ ಕೊರತೆ ನೀಗಿಸಲು 50 ಮಂದಿಯನ್ನು ಹೊರ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದೆ’ ಎಂದು ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಮಿರ್ಜಿ ಉಮೇಶ್ ಶಂಕರ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಹಾಪ್‌ಕಾಮ್ಸ್‌ಗೆ ₹15 ಕೋಟಿ ದುಡಿಯುವ ಬಂಡವಾಳವನ್ನು ಬಡ್ಡಿ ಸಹಿತ ಸಾಲವಾಗಿ ನೀಡುವ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಡಳಿತಾತ್ಮಕ ಮಂಜೂರಾತಿ ನೀಡಿದ್ದಾರೆ. ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ (ಬಿಎಎಫ್) ಸಹಯೋಗದಲ್ಲಿ ಮಹಾನಗರ ಪಾಲಿಕೆಯ ವಿವಿಧ ಅಪಾರ್ಟ್‌ಮೆಂಟ್‌ಗಳಲ್ಲಿ ಸಂಚಾರಿ ವ್ಯಾಪಾರ ವ್ಯವಸ್ಥೆ ಹಾಗೂ ಮಳಿಗೆಗಳಲ್ಲಿ ಸಿರಿಧಾನ್ಯಗಳನ್ನು ಮಾರಾಟ ಮಾಡಲು ನಿರ್ಧರಿಸಲಾಗಿದೆ’ ಎಂದು ಹೇಳಿದರು.

‘ಮುಂದಿನ ದಿನಗಳಲ್ಲಿ ಬೃಹತ್ ಕಾರ್ಖಾನೆಗಳು, ಸಂಘ ಸಂಸ್ಥೆಗಳಿಗೆ ಹಣ್ಣು, ತರಕಾರಿಗಳನ್ನು ಸಗಟು ದರದಲ್ಲಿ ಮಾರಾಟ ಮಾಡಲಾಗುವುದು. ಮುಜರಾಯಿ ಇಲಾಖೆಯ ದೇವಾಲಯಗಳಿಗೆ ಬೇಕಾದ ಹಣ್ಣು, ತರಕಾರಿಗಳನ್ನು ಹಾಪ್‌ಕಾಮ್ಸ್‌ನಿಂದ ಖರೀದಿಸಲು ಸಚಿವರು ಸೂಚನೆ ನೀಡಿದ್ದಾರೆ. ಕರ್ನಾಟಕ ಆಯಿಲ್ ಫೆಡರೇಷನ್‌ನ ತೊಗರಿ ಬೇಳೆ, ಕಡಲೆ ಬೇಳೆ, ಉದ್ದಿನ ಬೇಳೆ, ಅಕ್ಕಿ ಸೇರಿದಂತೆ ವಿವಿಧ ಉತ್ಪನ್ನಗಳನ್ನು ಹಾಪ್‌ಕಾಮ್ಸ್‌ಗಳಲ್ಲಿ ಮಾರಾಟ ಮಾಡಲಾಗುವುದು. ಇದರಿಂದ ಸಂಸ್ಥೆಗೂ ಲಾಭವಾಗಲಿದೆ’ ಎಂದು ಹಾಪ್‌ಕಾಮ್ಸ್ ಅಧ್ಯಕ್ಷ ಎನ್.ಗೋಪಾಲಕೃಷ್ಣ ತಿಳಿಸಿದರು.

ಪ್ರತಿ ತಿಂಗಳು ₹2 ಕೋಟಿ ದಾಸ್ತಾನು ಉಳಿಕೆ

‘ಸರ್ಕಾರಿ ಆಸ್ಪತ್ರೆ, ಹಾಸ್ಟೆಲ್, ಕೈಗಾರಿಕೆಗಳಿಗೆ ನಿತ್ಯ ಹಣ್ಣು, ತರಕಾರಿಗಳನ್ನು ಸಾಲದ ರೂಪದಲ್ಲಿ ಸರಬರಾಜು ಮಾಡಲಾಗುತ್ತಿದೆ. 2–3 ತಿಂಗಳ ಬಳಿಕ ಅವರು ಹಣ ಪಾವತಿ ಮಾಡುತ್ತಿದ್ದಾರೆ. ಅಲ್ಲದೇ ಮಳಿಗೆಗಳು, ಕೇಂದ್ರೀಯ ಉಗ್ರಾಣಗಳಲ್ಲಿ ಪ್ರತಿ ತಿಂಗಳು ₹2 ಕೋಟಿ ಮೌಲ್ಯದ ದಾಸ್ತಾನು ಉಳಿಕೆ ಆಗುತ್ತದೆ. ಇದರಿಂದ ಸಂಸ್ಥೆಗೆ ದುಡಿಯುವ ಬಂಡವಾಳ ಕೊರತೆಯಾಗಿ ಹಣ್ಣು, ತರಕಾರಿ ಸರಬರಾಜು ಮಾಡಿದ ರೈತರಿಗೆ ನಿಗದಿತ ಸಮಯಕ್ಕೆ ಹಣ ಪಾವತಿ ಸಾಧ್ಯವಾಗಿಲ್ಲ’ ಎಂದು ಹಾಪ್‌ಕಾಮ್ಸ್ ಅಧ್ಯಕ್ಷ ಗೋಪಾಲಕೃಷ್ಣ ಹೇಳಿದರು.

ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿಗೆ ಮೂರು ವರ್ಷ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ಯಾಂಕ್‌ಗೆ ವಂಚಿಸಿದ ಆರೋಪದಡಿಯ ಕ್ರಿಮಿನಲ್ ಪ್ರಕರಣದಲ್ಲಿ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಅವರಿಗೆ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ 3 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಗುರುವಾರ ಪ್ರಕಟಿಸಿದರು.

ಭ್ರಷ್ಟಾಚಾರ ನಿವಾರಣಾ ಕಾಯ್ದೆ–1988ರ ಕಲಂ 120 ಬಿ, 420, 467 ಮತ್ತು 471ರ ಅಡಿಯಲ್ಲಿ ಈ ಶಿಕ್ಷೆ ಪ್ರಕಟಿಸಲಾಗಿದ್ದು, ಕೃಷ್ಣಯ್ಯ ಶೆಟ್ಟಿ ಅವರಿಗೆ ₹5.25 ಲಕ್ಷ ಹಾಗೂ ಮೊದಲನೇ ಆರೋಪಿ ಎಂಟಿವಿ ರೆಡ್ಡಿ ಅವರಿಗೆ ₹7.75 ಲಕ್ಷ ದಂಡ ವಿಧಿಸಲಾಗಿದೆ. ಪ್ರಕರಣದಲ್ಲಿ ಆರೋಪಿಗಳಾಗಿದ್ದ ಮುನಿರಾಜು ಮತ್ತು ಶ್ರೀನಿವಾಸ್ ಅವರಿಗೂ ಶಿಕ್ಷೆ ವಿಧಿಸಲಾಗಿದೆ. ಇದೇ ವೇಳೆ ಕೃಷ್ಣಯ್ಯ ಶೆಟ್ಟಿ ಪರ ವಕೀಲ ನಾಗೇಂದ್ರ ನಾಯಕ್ ಅವರ ಮನವಿಯ ಮೇರೆಗೆ ನ್ಯಾಯಾಧೀಶರು ಶಿಕ್ಷೆಯನ್ನು ಒಂದು ತಿಂಗಳು ಅಮಾನತಿನಲ್ಲಿ ಇರಿಸಿ ಆದೇಶಿಸಿದ್ದು, ಮೇಲ್ಮನವಿ ಸಲ್ಲಿಸಲು ಕಾಲಾವಕಾಶ ನೀಡಿದ್ದಾರೆ. ₹5.25 ಲಕ್ಷ ಬಾಂಡ್ ಹಾಗೂ ಒಬ್ಬರ ಭದ್ರತೆ ಒದಗಿಸಲು ನಿರ್ದೇಶಿಸಿದ್ದಾರೆ.

ಪ್ರಕರಣವೇನು?:‘ಕೃಷ್ಣಯ್ಯ ಶೆಟ್ಟಿ 1993ರಲ್ಲಿ ಬಾಲಾಜಿ ಕೃಪಾ ಎಂಟರ್‌ಪ್ರೈಸಸ್ ಮಾಲೀಕರಾಗಿದ್ದರು. ಈ ವೇಳೆ ಅವರು ಬಿಟಿಎಸ್, ಕೆಎಸ್‌ಆರ್‌ಟಿಸಿ, ಬಿಎಸ್‌ಎನ್‌ಎಲ್, ಐಟಿಐ, ಎಚ್‌ಎಎಲ್, ಬಿಇಎಂಎಲ್ ಮತ್ತು ಎಡಿಇ ಸಾರ್ವಜನಿಕ ಉದ್ದಿಮೆಗಳ 181 ನೌಕರರಿಗೆ ಗೃಹ ನಿರ್ಮಾಣಕ್ಕೆ ಸಾಲ ಕೊಡಿಸುವುದಾಗಿ ಹೇಳಿ ವಂಚನೆ ನಡೆಸಿದ್ದಾರೆ.

ಬ್ಯಾಂಕ್‌ನಿಂದ ಪಡೆದಿದ್ದ ಮೊತ್ತದಲ್ಲಿ ₹3.53 ಕೋಟಿ ಸಾಲ ತೀರಿಸಿಲ್ಲ ಹಾಗೂ ₹7.17 ಕೋಟಿ ಸಾಲಕ್ಕೆ ನಕಲಿ ದಾಖಲೆ ಸೃಷ್ಟಿಸಲಾಗಿದೆ’ ಎಂದು ಆರೋಪಿಸಲಾಗಿತ್ತು. ಮುಖ್ಯ ವಿಚಕ್ಷಣಾ ದಳದ ಅಂದಿನ ಮುಖ್ಯಸ್ಥ ಆರ್.ಡಿ.ನಾಯ್ಡು ನೀಡಿದ್ದ ದೂರು ಆಧರಿಸಿ, ಸಿಬಿಐ ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಲಂಚ: ಗ್ರಾ.ಪಂ ಅಧ್ಯಕ್ಷೆಯ ಪತಿ, ಉಪಾಧ್ಯಕ್ಷ ಬಂಧನ

ಮಳವಳ್ಳಿ(ಮಂಡ್ಯ ಜಿಲ್ಲೆ): ಜಮೀನು ವಿವಾದ ಬಗೆಹರಿಸಲು ₹1 ಲಕ್ಷ ಲಂಚ ಪಡೆಯುತ್ತಿದ್ದ ತಾಲ್ಲೂಕಿನ ಶೆಟ್ಟಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಜುಳಾ ಅವರ ಪತಿ ಶೇಖರ್ ಹಾಗೂ ಹಾಲಿ ಉಪಾಧ್ಯಕ್ಷ ಮನೋಹರ ಅರಸ್ ಅವರನ್ನು ಗುರುವಾರ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಶೇಖರ್

ಮನೋಹರ ಅರಸ್

ಸರ್ಕಾರಿ ಶಾಲೆಗೆ ಹೊಂದಿಕೊಂಡಂತೆ ಇರುವ ಗ್ರಾಮದ ಗುರುಪ್ರಸಾದ್ ಎಂಬವರ ಜಮೀನು ಸಂಬಂಧ ಶಿಕ್ಷಣ ಇಲಾಖೆ ತಕರಾರು ಎತ್ತಿತ್ತು. ಕಂದಾಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಹದ್ದುಬಸ್ತು ನಿಗದಿಪಡಿಸಿದ್ದರು. ಈ ವಿವಾದ ಬಗೆಹರಿಸಲು ಆರೋಪಿಗಳು ₹12 ಲಕ್ಷ ಲಂಚ ಕೇಳಿದ್ದರು. ಅಂತಿಮವಾಗಿ ₹8 ಲಕ್ಷಕ್ಕೆ ಒಪ್ಪಿದ್ದರು.

ಎನ್‌ಪಿಎಸ್: ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಗೊಳಿಸಿ, ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿಗೆ ಆಗ್ರಹಿಸಿ ಇದೇ 7ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಾಂತಾರಾಮ, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2024ರ ಜ. 6ರಂದು ನಮ್ಮ ಸಂಘದ ಪದಾಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಸಚಿವ ಸಂಪುಟದ ಮುಂದಿನ ಸಭೆಯಲ್ಲಿ ಎನ್‌ಪಿಎಸ್ ಯೋಜನೆ ರದ್ದತಿ ಕುರಿತು ಚರ್ಚಿಸಿ, ತೀರ್ಮಾನಿಸುವ ಭರವಸೆ ನೀಡಿದ್ದರು. ಆದರೆ ಇದುವರೆಗೂ ಯಾವುದೇ ತೀರ್ಮಾನ ಕೈಗೊಂಡಿಲ್ಲ’ ಎಂದು ದೂರಿದರು.

‘ಕೇಂದ್ರ ಸರ್ಕಾರ ಎನ್‌ಪಿಎಸ್ ಬದಲು ಏಕೀಕೃತ ಪಿಂಚಣಿ ಯೋಜನೆ (ಯುಪಿಎಸ್) ಜಾರಿಗೊಳಿಸಲು ಸಿದ್ಧತೆ ನಡೆಸಿದೆ. ಈ ಪ್ರಸ್ತಾವವನ್ನು ನಮ್ಮ ಸಂಘಟನೆ ತಿರಸ್ಕರಿಸಿದೆ. ರಾಜ್ಯದಲ್ಲಿ ಪ್ರಸ್ತುತ 2.65 ಲಕ್ಷ ಎನ್‌ಪಿಎಸ್ ನೌಕರರು ಹಾಗೂ ನಿಗಮ ಮಂಡಳಿ ಅನುದಾನಿತ ಹಾಗೂ ಸ್ವಾಯತ್ತ ಸಂಸ್ಥೆಗಳ ನೌಕರರು ಎನ್‌ಪಿಎಸ್ ರದ್ದು ಮಾಡುವಂತೆ ಆಗ್ರಹಿಸುತ್ತಿದ್ದಾರೆ’ ಎಂದು ತಿಳಿಸಿದರು.

‘ರಾಜಸ್ಥಾನ, ಛತ್ತೀಸಗಡ, ಜಾರ್ಖಂಡ್, ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಒಪಿಎಸ್ ಜಾರಿಗೊಳಿಸಲಾಗಿದೆ. ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಎನ್‌ಪಿಎಸ್ ರದ್ದುಗೊಳಿಸುವ ತೀರ್ಮಾನವನ್ನು ಬಜೆಟ್‌ನಲ್ಲಿ ಪ್ರಕಟಿಸಬೇಕು’ ಎಂದು ಆಗ್ರಹಿಸಿದರು.

ಬಾಲಕಿ ಮೇಲೆ ಅತ್ಯಾಚಾರ: ಇಬ್ಬರ ಸೆರೆ

ಮಾನ್ವಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರಲ್ಲಿ ಬುಧವಾರ ಎಂಟು ವರ್ಷದ ಬಾಲಕಿ ಮೇಲೆ ನಡೆದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ಅತ್ಯಾಚಾರ ಎಸಗಿದ ಆರೋಪದಡಿ ಶಿವನಗೌಡ ಮತ್ತು ನಿರ್ಲಕ್ಷ್ಯ ತೋರಿದ ಆರೋಪದ ಮೇಲೆ ಖಾಸಗಿ ಶಾಲೆಯ ಮುಖ್ಯಸ್ಥ ರಾಜು ತಾಳಿಕೋಟಿ ಅವರನ್ನು ಪೊಲೀಸರು ಬುಧವಾರ ರಾತ್ರಿ ಬಂಧಿಸಿ ನ್ಯಾಯಾಂಗ ವಶಕ್ಕೆ ನೀಡಿದ್ದಾರೆ.

ಪ್ರತಿಭಟನೆ: ಬಾಲಕಿ ಮೇಲೆ ನಡೆದ ಅತ್ಯಾಚಾರ ಖಂಡಿಸಿ ಗ್ರಾಮದಲ್ಲಿ ಜಾಗೃತ ಮಹಿಳಾ ಸಂಘಟನೆ ಹಾಗೂ ಪ್ರಗತಿಪರ ಸಂಘಟನೆಗಳ ಸದಸ್ಯರು ಗುರುವಾರ ಪ್ರತಿಭಟನೆ ನಡೆಸಿದರು.

ಬಿಟ್ ಕಾಯಿನ್: ಎರಡನೇ ಬಾರಿಗೆ ನಲಪಾಡ್ ವಿಚಾರಣೆ

‘ಶ್ರೀಕಿ ಜತೆ ಹಣಕಾಸಿನ ವ್ಯವಹಾರವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ಹ್ಯಾಕಿಂಗ್ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳದ (ಎಸ್‌ಐಟಿ) ತನಿಖಾಧಿಕಾರಿಗಳು ರಾಜ್ಯ ಯುವ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಅವರನ್ನು ಗುರುವಾರ ವಿಚಾರಣೆಗೆ ಒಳಪಡಿಸಿದರು.

ನಲಪಾಡ್

ಪ್ರಕರಣ ಸಂಬಂಧ ಫೆಬ್ರುವರಿ 7ರಂದು ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿ ನೋಟಿಸ್ ಜಾರಿ ಮಾಡಿತ್ತು. ವೈಯಕ್ತಿಕ ಕಾರಣಕ್ಕಾಗಿ ಗುರುವಾರವೇ ಎಸ್‌ಐಟಿ ಮುಂದೆ ನಲಪಾಡ್ ಹಾಜರಾದರು.

ಡಿವೈಎಸ್ ಪಿ ಬಾಲರಾಜ್ ಅವರು ಎರಡು ಗಂಟೆ ವಿಚಾರಣೆ ನಡೆಸಿದರು. ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧಿಸಿದಂತೆ ತನಿಖಾಧಿಕಾರಿಗಳ ಪ್ರಶ್ನೆಗೆ ನಲಪಾಡ್ ಉತ್ತರಿಸಿದ್ದಾರೆ.

ಬಿಟ್ ಕಾಯಿನ್ ಹ್ಯಾಕಿಂಗ್ ಹಗರಣದ ಆರೋಪಿಯಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಗೆ ನಲಪಾಡ್ ಆಪ್ತರು ಎನ್ನಲಾಗಿದೆ. ಆರೋಪಿಯ ಖಾತೆಯಿಂದ ನಲಪಾಡ್ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಯಾಗಿರುವುದು ತನಿಖೆ ವೇಳೆ ಪತ್ತೆಯಾಗಿತ್ತು. ಈ ಮಾಹಿತಿ ಆಧರಿಸಿ ಅವರನ್ನು ವಿಚಾರಣೆ ಕರೆಸಲಾಗಿತ್ತು ಎಂದು ಸಿಐಡಿ ಮೂಲಗಳು ತಿಳಿಸಿವೆ.

ತನಿಖಾಧಿಕಾರಿಗಳು ಪ್ರಕರಣದ ಸಂಬಂಧ ಕೆಲವು ಪ್ರಶ್ನೆಗಳನ್ನು ಕೇಳಿದ್ದು, ಇದಕ್ಕೆ ನಲಪಾಡ್ ಉತ್ತರಿಸಿದ್ದಾರೆ. ಕೆಲವೊಂದು ಪ್ರಶ್ನೆಗಳಿಗೆ ಉತ್ತರಿಸಿಲ್ಲ. ಅಲ್ಲದೇ ಶ್ರೀಕಿ ಪರಿಚಯ ಆದ ಕುರಿತ ಮಾಹಿತಿ, ಶ್ರೀಕಿ ಜತೆಗಿನ ವ್ಯಾವಹಾರಿಕ ನಂಟಿಗೆ ಸಂಬಂಧಿಸಿದ ದಾಖಲೆಗಳನ್ನು ಕೇಳಿದ್ದಾರೆ ಎಂಬುದು ಗೊತ್ತಾಗಿದೆ.

‘ಮತ್ತೆ ವಿಚಾರಣೆಯ ಅವಶ್ಯಕತೆ ಇದ್ದರೆ ನೋಟಿಸ್ ನೀಡಲಾಗುವುದು. ಆಗ ವಿಚಾರಣೆಗೆ ಹಾಜರಾಗಬೇಕು’ ಎಂದು ತನಿಖಾಧಿಕಾರಿಗಳು ಹೇಳಿ ಕಳುಹಿಸಿದ್ದಾರೆ ಎನ್ನಲಾಗಿದೆ.

ವಿಚಾರಣೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಮೊಹಮ್ಮದ್ ನಲಪಾಡ್, ‘ವೈಯಕ್ತಿಕ ಕೆಲಸದ ಕಾರಣ ಗುರುವಾರವೇ ತನಿಖಾಧಿಕಾರಿಗಳ ಮುಂದೆ ಹಾಜರಾಗಿ ವಿಚಾರಣೆ ಎದುರಿಸಿದ್ದೇನೆ. ನಾನು ಎಲ್ಲಿಯೂ ಓಡಿಹೋಗಿಲ್ಲ. ಪ್ರಕರಣದಲ್ಲಿ ಬಂಧನವಾಗುವ ಭಯವಿಲ್ಲ. ಶ್ರೀಕಿ ಪರಿಚಯ ಕುರಿತು ತನಿಖಾಧಿಕಾರಿಗಳ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ್ದೇನೆ’ ಎಂದು ಹೇಳಿದರು.

‘ಶ್ರೀಕಿ ನನ್ನ ತಮ್ಮನ ಮೂಲಕ ಪರಿಚಯವಾಗಿದ್ದ. ಈವರೆಗೂ ನನಗೂ ಹಾಗೂ ನನ್ನ ತಮ್ಮನಿಗೂ ಶ್ರೀಕಿ ಬ್ಯಾಂಕ್ ಖಾತೆಯಿಂದ ಹಣ ವರ್ಗಾವಣೆಯಾಗಿಲ್ಲ. ಕಾನೂನಿನ ಮೇಲೆ ಗೌರವವಿದೆ’ ಎಂದು ಸ್ಪಷ್ಟಪಡಿಸಿದರು.

ರಾಜ್ಯ ಸರ್ಕಾರದ ಇ-ಸಂಗ್ರಹಣಾ ಇಲಾಖೆಯ ವೆಬ್‌ಸೈಟ್ ಹ್ಯಾಕ್ ಮಾಡಿ ₹1 ಕೋಟಿ ನಗದು ವಂಚನೆ ಆರೋಪದ ಪ್ರಕರಣ ಸಂಬಂಧ ಜೂನ್ 12ರಂದು ಮೊದಲ ಬಾರಿಗೆ ಎಸ್‌ಐಟಿ ವಿಚಾರಣೆಗೆ ಹಾಜರಾಗಿದ್ದ ನಲಪಾಡ್ ಅವರು ತನಿಖಾಧಿಕಾರಿಗಳು ಕೇಳಿದ್ದ ಕೆಲವು ಪ್ರಶ್ನೆಗಳಿಗೆ ಲಿಖಿತ ಹಾಗೂ ಮೌಖಿಕವಾಗಿ ಉತ್ತರ ನೀಡಿದ್ದರು.

ಆರೋಪಿ ಶ್ರೀಕಿ, ರಾಬಿನ್ ಖಂಡೇಲ್‌ವಾಲ ಜತೆ ಸೇರಿಕೊಂಡು ಕೆಲವು ಗೇಮಿಂಗ್ ಆ್ಯಪ್‌ಗಳನ್ನು ಹ್ಯಾಕ್ ಮಾಡಿ, ಅವುಗಳ ಮಾಲೀಕರಿಂದ ಹಣ ವಸೂಲಿ ಮಾಡುತ್ತಿದ್ದರು. ಡಾರ್ಕ್‌ವೆಬ್ ಮೂಲಕ ವಿದೇಶಗಳಿಂದ ಮಾದಕ ವಸ್ತುಗಳನ್ನು ತರಿಸುತ್ತಿದ್ದರು. ಅದಕ್ಕಾಗಿ ಕ್ರಿಪ್ಟೊ ಕರೆನ್ಸಿ ಮತ್ತು ಬಿಟ್‌ಕಾಯಿನ್ ಮೂಲಕ ಹಣಕಾಸಿನ ವ್ಯವಹಾರ ನಡೆಸುತ್ತಿದ್ದರು ಎಂಬುದು ಎಸ್‌ಐಟಿ ತನಿಖೆಯಿಂದ ಗೊತ್ತಾಗಿತ್ತು.

‘ಡಿಕೆಶಿ ಜತೆ ಚರ್ಚಿಸಿಲ್ಲ’

‘ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಮ್ಮ ನಾಯಕರು. ನಿತ್ಯ ಅವರ ಮನೆಗೆ ಭೇಟಿ ನೀಡಿ, ರಾಜಕೀಯ ವಿಚಾರ ಚರ್ಚೆ ಮಾಡುತ್ತೇನೆ. ಅದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯವಿಲ್ಲ. ಎಸ್‌ಐಟಿ ನೋಟಿಸ್ ನೀಡಿರುವ ವಿಚಾರವನ್ನು ಅವರ ಜತೆ ಚರ್ಚಿಸಿಲ್ಲ’ ಎಂದು ಮೊಹಮ್ಮದ್ ನಲಪಾಡ್ ಹೇಳಿದರು.

ತನಿಖೆಯ ಭಾಗವಾಗಿ ಎಸ್‌ಐಟಿ ತನಿಖಾಧಿಕಾರಿಗಳು ಮೊಹಮ್ಮದ್ ನಲಪಾಡ್ ಅವರನ್ನು ವಿಚಾರಣೆಗೆ ಕರೆದಿದ್ದಾರೆ. ಹಣಕಾಸಿನ ವಹಿವಾಟು ಕುರಿತು ವಿಚಾರಿಸುತ್ತಾರೆ

ಜಿ.ಪರಮೇಶ್ವರ, ಗೃಹ ಸಚಿವ

ಸಾರಿಗೆ ಇನ್‌ಸ್ಪೆಕ್ಟರ್ ಮೇಲೆ ಹಿರಿಯ ಅಧಿಕಾರಿ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗದ ಪ್ರಾದೇಶಿಕ ಸಾರಿಗೆ ಅಧಿಕಾರಿ (ಆರ್‌ಟಿಒ) ಕಚೇರಿಯಲ್ಲಿ ಮೇಲಧಿಕಾರಿಯು ಕಿರಿಯ ಅಧಿಕಾರಿ ಮೇಲೆ ಹಲ್ಲೆ ನಡೆಸಿದ್ದಲ್ಲದೇ ಕಂಪ್ಯೂಟರ್ ಒಡೆದು ಹಾಕಿದ್ದಾರೆ. ವ್ಯಾಪ್ತಿ ಮೀರಿ ಕೆಲಸ ಮಾಡಲು ನಿರಾಕರಿಸಿದ್ದಕ್ಕೆ ಹಲ್ಲೆ ನಡೆಸಲಾಗಿದೆ ಎಂದು ಕಿರಿಯ ಅಧಿಕಾರಿಯು ಪೊಲೀಸ್ ಠಾಣೆಗೆ ಹಾಗೂ ಸಾರಿಗೆ ಇಲಾಖೆಗೆ ದೂರು ನೀಡಿದ್ದಾರೆ.

ಶಿವಮೊಗ್ಗ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಮೋಟಾರು ವಾಹನ ನಿರೀಕ್ಷಕರಾಗಿರುವ ಮಂಜುನಾಥ ಎಸ್.ಪಿ. ಹಲ್ಲೆಗೊಳಗಾದವರು. ಹಿರಿಯ ನಿರೀಕ್ಷಕ ಮಲ್ಲೇಶಪ್ಪ ಪಿ.ಎನ್. ಹಲ್ಲೆ ನಡೆಸಿದ ಆರೋಪಕ್ಕೆ ಗುರಿಯಾದವರು.

‘ಮಂಗಳವಾರ ಸಂಜೆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಮಲ್ಲೇಶಪ್ಪ ಕರೆ ಮಾಡಿದ್ದರು. ನನಗೆ ಪೂರ್ವ ಮಾಹಿತಿ ಇಲ್ಲದ ಕೆಲಸ ಮಾಡಲು ಒತ್ತಾಯ ಮಾಡಿದಾಗ ಕಷ್ಟಸಾಧ್ಯ ಎಂದು ಹೇಳಿದ್ದೆ. ಆಗಲೇ ಅವಾಚ್ಯವಾಗಿ ನಿಂದಿಸಿದ್ದರು. ಬೈಯದಂತೆ ಕೇಳಿಕೊಂಡಾಗ, ನೀನಿರುವಲ್ಲಿಗೆ ಬಂದು ನೋಡಿಕೊಳ್ಳುತ್ತೇನೆ ಎಂದು ಬೆದರಿಸಿದ್ದರು’ ಎಂದು ಮಂಜುನಾಥ್ ದೂರಿನಲ್ಲಿ ತಿಳಿಸಿದ್ದಾರೆ.

‘ಆನಂತರ ಕೆಲವೇ ಹೊತ್ತಿನಲ್ಲಿ ಅಂದರೆ ಸಂಜೆ ಸುಮಾರು 5.15ರ ಹೊತ್ತಿಗೆ ಕಚೇರಿಗೆ ಬಂದು ಬೈಯುತ್ತಾ ಹಲ್ಲೆ ನಡೆಸಿದರು. ಬೂಟಿನಲ್ಲಿ ಹೊಡೆಯಲು ಬಂದಾಗ ಕಚೇರಿಯಲ್ಲಿದ್ದ ಇತರರು ಅಡ್ಡಗಟ್ಟಿ ತಪ್ಪಿಸಿದರು. ‘ನಿನ್ನ ಪ್ರೊಬೇಷನರಿ ಅವಧಿಯನ್ನು ಹೇಗೆ ಘೋಷಣೆ ಮಾಡಿಕೊಳ್ಳುತ್ತೀಯಾ ಎಂದು ನೋಡುತ್ತೇನೆ’ ಎಂದು ಬೆದರಿಸಿದ್ದಲ್ಲದೇ ಪಕ್ಕದಲ್ಲಿದ್ದ ಕುರ್ಚಿಯನ್ನು ಎತ್ತಿ ಹೊಡೆದಿದ್ದು, ನಾನು ತಪ್ಪಿಸಿಕೊಂಡಿದ್ದರಿಂದ ಕಂಪ್ಯೂಟರ್‌ಗೆ ಕುರ್ಚಿ ತಾಗಿ ಕೆಳಗೆ ಬಿದ್ದು ಕಂಪ್ಯೂಟರ್ ಒಡೆದು ಹೋಗಿದೆ’ ಎಂದು ದೂರಿನಲ್ಲಿ ವಿವರಿಸಿದ್ದಾರೆ.

‘ಹಿಂದೆಯೂ ಕರ್ತವ್ಯ ವ್ಯಾಪ್ತಿಯನ್ನು ಮೀರಿದ ಕೆಲಸ ಮಾಡಲು ಒತ್ತಡ ಹೇರಿದ್ದರು. ಮಾಡದೇ ಇದ್ದಾಗ ಮೂದಲಿಸಿದ್ದರು. ಈಗ ಕಚೇರಿಯಲ್ಲಿ ಸಿಬ್ಬಂದಿಯ ಎದುರೇ ಹಲ್ಲೆ ನಡೆಸಿ, ಬೆದರಿಕೆ ಒಡ್ಡಿರುವುದು ಆಘಾತ ಉಂಟುಮಾಡಿದೆ. ಕಾನೂನಿನ ರೀತಿಯಲ್ಲಿ ಸಹಿಸಿಕೊಳ್ಳುವ ನಡವಳಿಕೆ ಇದಲ್ಲದ ಕಾರಣ ಪೊಲೀಸರಿಗೆ ದೂರು ನೀಡಲು ಅವಕಾಶ ಕೊಡಬೇಕು’ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಲಿಖಿತವಾಗಿ ಅನುಮತಿ ಕೋರಿದ್ದರು. ಮೇಲಧಿಕಾರಿಗಳು ಅನುಮತಿ ನೀಡಿದ್ದರಿಂದ ಶಿವಮೊಗ್ಗದ ಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಸಿನಿಮಾಗಳ ದೊಡ್ಡ ಯಶಸ್ಸು ಎಷ್ಟು ವರವೋ ಅಷ್ಟೇ ಶಾಪ ಎಂದಿದ್ದಾರೆ ನಟ ಕಿಶೋರ್



ಆಳ-ಅಗಲ ವಾಪಸ್ ಬಂದಿದ್ದು ₹1.70 ಲಕ್ಷ ಕೋಟಿ

ಏಕರೂಪ ನಾಗರಿಕ ಸಂಹಿತೆ ಜಾರಿಗೆ ಬದ್ಧ: ಪ್ರಧಾನಿ ಮೋದಿ 5

ಬಾಂಗ್ಲಾ: ಮತ್ತೆ ಭುಗಿಲೆದ್ದ ಹಿಂಸಾಚಾರ 8

ಸೆನ್ಸೆಕ್ಸ್	ನಿಫ್ಟಿ	₹/$
78,058	23,603	87.59

ಅನಿವಾರ್ಯಕ್ಕೆ ಮೊರೆ, ಸಾಲಗಾರರಿಗೆ ತೀರಿಸಲಾಗದ ವಿಪರೀತ ಹೊರೆ

ಫೈನಾನ್ಸ್: ಬಡ್ಡಿಯ ಹೊನ್ನ ಶೂಲ

31 ನೋಂದಾಯಿತ ಮೈಕ್ರೊ ಫೈನಾನ್ಸ್ ಕಂಪನಿಗಳು | **3,090** ಕಂಪನಿಗಳ ಶಾಖೆಗಳು | **37,967** ಕಂಪನಿಗಳ ಉದ್ಯೋಗಿಗಳು | **1.09** ಕೋಟಿ ಸಾಲದ ಖಾತೆಗಳ ಸಂಖ್ಯೆ | **₹59,368** ಕೋಟಿ ಸಾಲದ ಮೊತ್ತ | **₹1,153** ಕೋಟಿ ಸುಸ್ತಿಸಾಲದ ಮೊತ್ತ

● ರಾಜೇಶ್ ರೈ ಚಟ್ಲ

ಬೆಂಗಳೂರು: ಸಾಲ ನೀಡಿದವರ ಕಿರುಕುಳ, ಬೆದರಿಕೆಗೆ ಹೆದರಿ ಸಾವಿಗೆ ಕೊರಳೊಡ್ಡುವವರು, ಊರು ತೊರೆಯುತ್ತಿರವವರ ಸಂಖ್ಯೆ ದಿನೇದಿನೆ ಹೆಚ್ಚುತ್ತಿದ್ದು, ಸಾಲದ ಅಗಾಧತೆ ಹಾಗೂ ಬಡ್ಡಿಯ ಉರುಳು ಊಹೆಗೂ ನಿಲುಕುತ್ತಿಲ್ಲ. ಸಾಲದ ಹೊರೆಹೊತ್ತವರ ರೋದನವೂ ನಿಲ್ಲುತ್ತಿಲ್ಲ.

ಸರ್ಕಾರದ ಮಾಹಿತಿಯಂತೆ ರಾಜ್ಯದಲ್ಲಿ 31 ನೋಂದಾಯಿತ ಮೈಕ್ರೊ ಫೈನಾನ್ಸ್ ಕಂಪನಿಗಳು ₹1,152.80 ಕೋಟಿ ಸಾಲ ನೀಡಿವೆ. ನೋಂದಣಿರಹಿತ, ಪರವಾನಗಿರಹಿತ 250ಕ್ಕೂ ಸಾಲದಾತರು, 31 ಸಾವಿರಕ್ಕೂ ಹೆಚ್ಚು ಲೇವಾದೇವಿದಾರರು ಹಾಗೂ ಗಿರವಿದಾರರು ಭಾರಿ ಬಡ್ಡಿಯ ದರದಲ್ಲಿ ವಹಿವಾಟು ನಡೆಸುತ್ತಿದ್ದಾರೆ. ಬಡವರು ಮತ್ತು ಮಧ್ಯಮ ವರ್ಗದ ಕುಟುಂಬಗಳು 'ಖಾಸಗಿ ಸಾಲ'ದ 'ಪಾಶ'ದಲ್ಲಿ ಸಿಲುಕಿ ಒದ್ದಾಡುತ್ತಿವೆ.

8ನೇ ಪುಟ ನೋಡಿ

'ಮೈಕ್ರೊ ಫೈನಾನ್ಸ್' ವಿಷವರ್ತುಲ 1

ನಿಯಮ ಕಾಗದಕ್ಕಷ್ಟೇ ಸೀಮಿತ

ಎಷ್ಟು ಸಾಲ? ಎಷ್ಟು ಬೇಗ ಬೇಕು? ಎಷ್ಟು ಅವಧಿಯಲ್ಲಿ ಮರುಪಾವತಿ? ಎನ್ನುವುದರ ಮೇಲೆ ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿದಾರ ಸಂಸ್ಥೆಗಳು ಸಾಲ ನೀಡುತ್ತವೆ.

ಯಾವುದೇ ಬ್ಯಾಂಕೇತರ ಸಂಸ್ಥೆಯನ್ನು 'ಮೈಕ್ರೊ ಫೈನಾನ್ಸ್ ಕಂಪನಿ' ಎಂದು ಪರಿಗಣಿಸುವಾಗ ವ್ಯಕ್ತಿಗಳಿಗೆ ನೀಡುವ ಸಾಲದ ಮಿತಿ ₹3 ಲಕ್ಷ ಮೀರಬಾರದು ಎಂಬ ನಿಯಮವಿದೆ. ಅದು ಭದ್ರತೆ ರಹಿತ ಸಾಲವಾಗಿರಬೇಕು. ಆದರೆ, ರಾಜ್ಯದ ಸಾಲದಾತರು ನಿಯಮಗಳನ್ನು ಉಲ್ಲಂಘಿಸಿ, ಪರಸ್ಪರರ ಒಪ್ಪಿಗೆ ಮೇಲೆ ₹10 ಸಾವಿರದಿಂದ ₹10 ಲಕ್ಷದವರೆಗೂ ಸಾಲ ನೀಡಿದ್ದಾರೆ. ಹೀಗಾಗಿ, ನಿಯಮಗಳು ಇಲ್ಲಿ ಕಾಗದಕ್ಕಷ್ಟೇ ಸೀಮಿತ. ಗರಿಷ್ಠ ವಾರ್ಷಿಕ ಬಡ್ಡಿ ಶೇ 24 ದಾಟಬಾರದೆಂಬ ನಿಯಮವಿದ್ದರೂ ಗರಿಷ್ಠ ವಾರ್ಷಿಕ ಶೇ 28ರ ಬಡ್ಡಿ ವಿಧಿಸುತ್ತಿವೆ. ಮರುಪಾವತಿ ಮಾಡದೇ ಇದ್ದಾಗ ಬಡ್ಡಿಯ ಮೇಲೆ ಬಡ್ಡಿ (ಚಕ್ರ ಬಡ್ಡಿ) ಸೇರುವುದರಿಂದ ಬಾಕಿ ಮೊತ್ತ ಬೆಟ್ಟದಂತೆ ಬೆಳೆಯುತ್ತಲೇ ಹೋಗುತ್ತದೆ.

ನಿಯಮ ಉಲ್ಲಂಘನೆಯ ಪರಿ...

- ಮೈಕ್ರೊ ಫೈನಾನ್ಸ್ ಕಂಪನಿಗಳು, ಸಾಲದ ಮೇಲೆ ನಿಗದಿತ ಮಿತಿಗಿಂತ ಹಲವು ಪಟ್ಟು ಬಡ್ಡಿ
- ಸಾಲ ವಸೂಲು ಮಾಡಲು ದೌರ್ಜನ್ಯ, ಕಿರುಕುಳ, ಹಿಂಸೆ
- ಒಬ್ಬನೇ ವ್ಯಕ್ತಿಗೆ 3ರಿಂದ 4 ಮೈಕ್ರೊ ಫೈನಾನ್ಸ್ ಕಂಪನಿಗಳು ಸಾಲ ಮಂಜೂರು
- ಗ್ರಾಹಕನ ಮರುಪಾವತಿ ಸಾಮರ್ಥ್ಯ ನಿರ್ಣಯಿಸದೆ ಸಾಲ ನೀಡುವುದರಿಂದ, ಮರುಪಾವತಿ ಕಷ್ಟವಾಗಿ ಹೆಚ್ಚುವ ಹೊರೆ
- ಕೆಲವು ಮೈಕ್ರೊ ಫೈನಾನ್ಸ್ ಕಂಪನಿಗಳು ಅನಧಿಕೃತವಾಗಿ ಠೇವಣಿ ಸ್ವೀಕರಿಸುತ್ತಿರುವುದು
- ಸಾಲ ನೀಡುವಾಗ ನಿಯಮಗಳು ಮತ್ತು ಷರತ್ತುಗಳನ್ನು ಸ್ಪಷ್ಟವಾಗಿ ವಿವರಿಸದಿರುವುದು

ರಾಜ್ಯದಲ್ಲಿರುವ ಮೈಕ್ರೊ ಫೈನಾನ್ಸ್ ಕಂಪನಿಗಳು

ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ- ಎಂಎಫ್‌ಐ)	ಬೆಲ್‌ಸ್ಟಾರ್, ಬಿಎಫ್‌ಐಎಲ್, ಚೈತನ್ಯ, ಸಿಎಜಿಎಲ್, ಐಡಿಎಫ್‌ಸಿ, ಮುತ್ತೂಟ್, ನಾಬ್‌ಫಿನ್, ನವಚೇತನ, ಸಮಸ್ತ, ಆರ್‌ಒಆರ್‌ಎಸ್, ಸಾತಿನ್, ಸ್ವತಂತ್ರ, ಸ್ವಮಾನ್, ಸ್ಪಂದನ, ಸತ್ಯ ಫ್ಯೂಸನ್, ವಿರೂಚಮ್, ಆರೋಹಣ, ಪ್ರಗತಿ, ಎಲ್ ಆ್ಯಂಡ್ ಟಿ
ಏಜೆಂಟ್‌ಗಳ ಮೂಲಕ ಸಾಲ (ಬ್ಯುಜಿನೆಸ್ ಕರೆಸ್ಪಾಂಡನ್ಸ್)	ಬಿಎಸ್‌ಎಸ್, ಎನ್‌ಒಸಿಪಿಎಲ್, ಸಪ್ರಹ
ಟ್ರಸ್ಟ್–ಸಂಸ್ಥೆಗಳು	ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಸಂಗಮಿತ್ರ
ಸ್ಮಾಲ್ ಫೈನಾನ್ಸ್ ಬ್ಯಾಂಕುಗಳು	ಇಎಸ್‌ಎಎಫ್, ಫಿನ್‌ಕೇರ್, ಜನ ಸ್ಮಾಲ್ ಫೈನಾನ್ಸ್, ಸೂರ್ಯೋದಯ, ಉಜ್ಜೀವನ್, ಈಕ್ವಿಟಾಸ್

ಏರೋ ಇಂಡಿಯಾ ಏರೋ ಇಂಡಿಯಾ ವೈಮಾನಿಕ ಪ್ರದರ್ಶನಕ್ಕೆ ಪೂರ್ವಭಾವಿಯಾಗಿ ಯಲಹಂಕದಲ್ಲಿ ಸೂರ್ಯಕಿರಣ್ ಏರೋಬ್ಯಾಟಿಕ್ ತಂಡವು ಗುರುವಾರ ಪ್ರಾಯೋಗಿಕ ಪ್ರದರ್ಶನ ನೀಡಿತು. ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ತಟಸ್ಥರ ವಿರುದ್ಧ ವಿಜಯೇಂದ್ರ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಟಸ್ಥರು ಎಂದು ಹೇಳಿಕೊಳ್ಳುವ ನಾಯಕರು ಏನು ಎಂಬುದು ಗೊತ್ತು. ಇವರು ಮೊದಲಿಗೆ ಬಿ.ಎಸ್. ಯಡಿಯೂರಪ್ಪ ಅವರ ತೇಜೋವಧೆ ಮಾಡುತ್ತಿರುವ ನಾಯಕರ ಬಾಯಿ ಮುಚ್ಚಿಸಲಿ' ಎಂದು ಬಿಜೆಪಿ ರಾಜ್ಯ ಘಟಕ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

'ಎರಡೂ ಬಣದವರು ತಾಳ್ಮೆ ಕಳೆದುಕೊಳ್ಳದೇ ಯಡಿಯೂರಪ್ಪ ಮತ್ತು ಇತರ ನಾಯಕರ ಮಾರ್ಗದರ್ಶನದಲ್ಲಿ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕು' ಎಂದು ಸಂಸದ ಬಸವರಾಜ ಬೊಮ್ಮಾಯಿ ನೀಡಿರುವ ಹೇಳಿಕೆ ಕುರಿತಂತೆ ಸುದ್ದಿಗಾರರು ಪ್ರಶ್ನಿಸಿದಾಗ, ವಿಜಯೇಂದ್ರ ಅವರು ಮೇಲಿನಂತೆ ಪ್ರತಿಕ್ರಿಯಿಸಿದರು.

ತಮ್ಮ ವಿರುದ್ಧ ಪರೋಕ್ಷವಾಗಿ ಟೀಕೆ–ಟಿಪ್ಪಣಿ ಮಾಡುತ್ತಿದ್ದ ಮತ್ತು ಯಾವುದೇ ಬಣಗಳ ಜತೆ ಗುರುತಿಸಿಕೊಳ್ಳದೇ 'ತಟಸ್ಥರು' ಎಂದು ಹೇಳಿಕೊಳ್ಳುತ್ತಿದ್ದ ಆರ್.ಅಶೋಕ ಮತ್ತು ಬಸವರಾಜ ಬೊಮ್ಮಾಯಿ ಅವರ ವಿರುದ್ಧ ಪರೋಕ್ಷವಾಗಿ ಟೀಕಾ ಪ್ರಹಾರ ನಡೆಸಿದರು.

> **ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಚುನಾವಣೆ ಯಾವುದೇ ಕ್ಷಣದಲ್ಲಾದರೂ ನಡೆಯಬಹುದು. ಇದೇ 20ರೊಳಗೆ ಎಲ್ಲ ಪ್ರಕ್ರಿಯೆಯೂ ಮುಗಿಯಲಿದೆ**
> **ಬಿ.ವೈ.ವಿಜಯೇಂದ್ರ,** ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

'ವೈಯಕ್ತಿಕವಾಗಿ ನಾನು ಯಾವುದೇ ಅಪಮಾನ ಸಹಿಸಿಕೊಳ್ಳಲು ತಯಾರಿದ್ದೇನೆ. ಆದರೆ ಪಕ್ಷಕ್ಕಾಗಿ ಸುದೀರ್ಘವಾಗಿ ದುಡಿದ ಯಡಿಯೂರಪ್ಪ ಅವರನ್ನು ಅತ್ಯಂತ ಕೀಳು ಭಾಷೆಯಲ್ಲಿ ನಿಂದಿಸುವುದನ್ನು ಸಹಿಸಲು ಸಾಧ್ಯವಿಲ್ಲ. ಇವರೆಲ್ಲ ಮನಸ್ಸಿಗೆ ಬಂದಂತೆ ನಿಂದಿಸುತ್ತಿರುವಾಗ ತಟಸ್ಥ ಎಂದು ಹೇಳಿಕೊಳ್ಳುವವರು ಯಾಕೆ ಸುಮ್ಮನಿದ್ದಾರೆ? ಅದಕ್ಕೆ ಕಡಿವಾಣ ಹಾಕದೆ ಸುಮ್ಮನಿರುವುದೂ ಅಪರಾಧವೇ' ಎಂದರು.

4B ಪುಟ ನೋಡಿ

ಹಾಲಿ–ಮಾಜಿ ಸಿ.ಎಂಗೆ ಇಂದು 'ಅಗ್ನಿಪರೀಕ್ಷೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಹಗರಣದ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು' ಎಂದು ಕೋರಲಾದ ಅರ್ಜಿಯ ಮೇಲಿನ ತೀರ್ಪನ್ನು ಹೈಕೋರ್ಟ್ ಶುಕ್ರವಾರ (ಫೆ.07) ಪ್ರಕಟಿಸಲಿದೆ.

ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ತೀರ್ಪು ಪ್ರಕಟಿಸಲಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಯ್ದಿರಿಸಿರುವ ತೀರ್ಪನ್ನೂ ನ್ಯಾ.ಎಂ.ನಾಗಪ್ರಸನ್ನ ಅವರು ಶುಕ್ರವಾರ ಬೆಳಿಗ್ಗೆ 10.30ಕ್ಕೆ ಪ್ರಕಟಿಸಲಿದ್ದಾರೆ.

ವಲಸಿಗರ ಪ್ರಯಾಣದ ವೇಳೆ ನಿರ್ಬಂಧ 'ಎಸ್‌ಒಪಿ' ಭಾಗ: ಜೈಶಂಕರ್

'ದುರ್ವರ್ತನೆ: ಅಮೆರಿಕ ಜತೆ ಚರ್ಚೆ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿದ್ದಾರೆ ಎನ್ನಲಾದ ಭಾರತೀಯರನ್ನು ವಾಪಸ್ ಕಳುಹಿಸುವಾಗ ಅವರ ಜತೆ 'ಅಮಾನವೀಯವಾಗಿ ವರ್ತಿಸಬಾರದು'. ಈ ಕುರಿತು ಆ ದೇಶದ ಜತೆ ಮಾತುಕತೆ ನಡೆಸುತ್ತಿದ್ದೇವೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ತನ್ನ ನೆಲದಲ್ಲಿ ಅಕ್ರಮವಾಗಿ ನೆಲಸಿದ್ದ 104 ಭಾರತೀಯರನ್ನು ಅಮೆರಿಕವು ಬುಧವಾರ ವಾಪಸ್ ಕಳುಹಿಸಿದೆ. ಭಾರತೀಯರೊಂದಿಗೆ ಅಮೆರಿಕದ ಅಧಿಕಾರಿಗಳ ಅಮಾನವೀಯ ವರ್ತನೆಯು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಗುರುವಾರ ಗದ್ದಲಕ್ಕೆ ಕಾರಣವಾಯಿತು. ಇದರ ನಡುವೆಯೇ ಜೈಶಂಕರ್ ಅವರು ಉಭಯ ಸದನಗಳಲ್ಲಿ ಹೇಳಿಕೆ ನೀಡಿದರು.

'ಅಕ್ರಮವಾಗಿ ನೆಲಸಿರುವವರನ್ನು ವಾಪಸ್ ಕಳುಹಿಸುವಾಗ ಅವರನ್ನು ನಿರ್ಬಂಧದಲ್ಲಿ ಇರಿಸುವುದು ಅಮೆರಿಕವು 2012ರಿಂದಲೂ ಅನುಸರಿಸುತ್ತಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನದ (ಎಸ್‌ಒಪಿ) ಭಾಗ' ಎಂದರು.

4B ಪುಟ ನೋಡಿ

ವಿರೋಧ ಪಕ್ಷಗಳ ಸಂಸದರು ಕೈಗಳಿಗೆ ಸಂಕೋಲೆ ಬಿಗಿದು ಸಂಸತ್ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ಶಶಿ ತರೂರ್, ಪರಿಣಿತಿ ಶಿಂದೆ, ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್, ಎಡ ಪಕ್ಷಗಳ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡರು – ಪಿಟಿಐ ಚಿತ್ರ

ವಲಸಿಗರ ನೆರವಿಗೆ ಹೊಸ ಕಾನೂನು

ಉದ್ಯೋಗಕ್ಕಾಗಿ ವಿದೇಶಕ್ಕೆ ತೆರಳುವವರ 'ಸುರಕ್ಷಿತ ಮತ್ತು ಕ್ರಮಬದ್ಧ ವಲಸೆ'ಗೆ ನೆರವಾಗಲು ಹೊಸ ಕಾನೂನು ಜಾರಿಗೆ ಸರ್ಕಾರ ಗಂಭೀರ ಚಿಂತನೆ ನಡೆಸಿದೆ.

ಪ್ರಸ್ತಾವಿತ 'ಸಾಗರೋತ್ತರ ಸಂಚಾರ (ನೆರವು ಮತ್ತು ಕಲ್ಯಾಣ) ಮಸೂದೆ'ಯು 1983ರ ವಲಸೆ ಕಾಯ್ದೆಯ ಬದಲಿಗೆ ಜಾರಿಯಾಗಲಿದ್ದು, ಉದ್ಯೋಗಕ್ಕಾಗಿ ವಿದೇಶಕ್ಕೆ ವಲಸೆ ಹೋಗುವವರ ಪ್ರಯಾಣವನ್ನು ಸುಗಮಗೊಳಿಸಲಿದೆ.

ಕಾಂಗ್ರೆಸ್ ಸಂಸದ ಶಶಿ ತರೂರ್ ಅಧ್ಯಕ್ಷತೆಯ ವಿದೇಶಾಂಗ ವ್ಯವಹಾರಗಳ ಸಂಸದೀಯ ಸಮಿತಿಯು ಸೋಮವಾರ ಸಂಸತ್ತಿನಲ್ಲಿ ಮಂಡಿಸಿದ ವರದಿಯಲ್ಲಿ ಈ ಮಸೂದೆಗೆ ಸಂಬಂಧಿಸಿದ ವಿವರ ಇದೆ.

4B ಪುಟ ನೋಡಿ

'ಆರ್‌ಎಸ್‌ಎಸ್ ಕಾರ್ಯಸೂಚಿ ಹೇರುವ ಯತ್ನ'

ನವದೆಹಲಿ: ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ, ಕುಲಪತಿಗಳು ಮತ್ತು ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದ ಯುಜಿಸಿ ಕರಡು ನಿಯಮಗಳು ಆರ್‌ಎಸ್‌ಎಸ್‌ನ 'ಒಂದೇ ಇತಿಹಾಸ, ಒಂದೇ ಸಂಪ್ರದಾಯ, ಒಂದೇ ಭಾಷೆ' ಕಾರ್ಯಸೂಚಿಯನ್ನು ದೇಶದ ಮೇಲೆ ಹೇರುವ ಪ್ರಯತ್ನವಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಆರೋಪಿಸಿದರು. 5

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಹಾಜರಾತಿ ಕೊರತೆ; ಇಲ್ಲ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತರಗತಿಗಳಿಗೆ ನಿಯಮಿತವಾಗಿ ಹಾಜರಾಗದೆ ಶೇ 75ರಷ್ಟು ಹಾಜರಾತಿ ಕೊರತೆ ಎದುರಿಸುತ್ತಿರುವ ವಿದ್ಯಾರ್ಥಿಗಳು ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವಂತಿಲ್ಲ.

2024ನೇ ಸಾಲಿನಿಂದ ಎಸ್‌ಎಸ್‌ಎಲ್‌ಸಿಗೆ ಮೂರು ಪರೀಕ್ಷೆಗಳನ್ನು ಪರಿಚಯಿಸಿದ್ದು, ಮೊದಲ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದವರು, ಇನ್ನಷ್ಟು ಅಂಕಗಳನ್ನು ಪಡೆಯಲು ಬಯಸುವವರು ಹಾಗೂ ಅನುತ್ತೀರ್ಣರಾದವರು ಉಳಿದ ಎರಡು ಪರೀಕ್ಷೆಗಳನ್ನು ಬರೆಯಬಹುದು. ಹಾಗೆಯೇ, ಹಾಜರಾತಿ ಕೊರತೆ ಕಾರಣಕ್ಕೆ ಮೊದಲ ಪರೀಕ್ಷೆಯಿಂದ ವಂಚಿತರಾದವರಿಗೆ ಉಳಿದ ಎರಡು ಪರೀಕ್ಷೆ ತೆಗೆದುಕೊಳ್ಳಲು ಕಳೆದ ವರ್ಷ ಅವಕಾಶ ನೀಡಲಾಗಿತ್ತು.

ಈ ಬಾರಿ ಶೇ 75ರಷ್ಟು ಹಾಜರಾತಿ ಕೊರತೆ ಇರುವವರಿಗೆ ಮೂರೂ ಪರೀಕ್ಷೆ ಬರೆಯಲು ಅವಕಾಶ ನಿರಾಕರಿಸಲಾಗಿದೆ. 10ನೇ ತರಗತಿಯಲ್ಲಿ ಕಡಿಮೆ ಹಾಜರಾತಿ ಇರುವ ಮಕ್ಕಳ ಆಂತರಿಕ ಮೌಲ್ಯಮಾಪನದ ಅಂಕಗಳನ್ನೂ ಎಸ್‌ಎಟಿಎಸ್ ತಂತ್ರಾಂಶದಲ್ಲಿ ದಾಖಲಿಸದಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸುತ್ತೋಲೆ ಹೊರಡಿಸಿದೆ.

ಮರು ದಾಖಲಾತಿಗೆ ಸೂಚನೆ: ಹಾಜರಾತಿ ಕೊರತೆಯಿಂದ ಪರೀಕ್ಷೆ ಬರೆಯಲು ಸಾಧ್ಯವಾಗದ ವಿದ್ಯಾರ್ಥಿಗಳು ಹಾಗೂ ಅನುತ್ತೀರ್ಣರಾದವರನ್ನು 2025–26ನೇ ಸಾಲಿನಲ್ಲಿ 10ನೇ ತರಗತಿಗೆ ಮರುದಾಖಲು ಮಾಡುವಂತೆ ಮಂಡಳಿ ಸೂಚಿಸಿದೆ.

2024ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಹಾಜರಾತಿ ಕೊರತೆ ಇದ್ದ 15 ಸಾವಿರ ವಿದ್ಯಾರ್ಥಿಗಳು ಎರಡನೇ ಮತ್ತು ಮೂರನೇ ಪರೀಕ್ಷೆ ಬರೆದಿದ್ದರು. 2025ರ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್ 21ರಿಂದ ಏ.4ರವರೆಗೆ ನಡೆಯಲಿದೆ.

ವಿಜಯಪುರ ಜಿಲ್ಲೆಯ 21 ಸರ್ಕಾರಿ ಶಾಲೆಗಳ ಆಯ್ಕೆ

ಶೌಚಾಲಯಕ್ಕೂ ಬಂತು 'ಎಐ'

● ಬಸವರಾಜ್ ಸಂಪಳ್ಳಿ

ವಿಜಯಪುರ: ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಇರುವಂತಹ ಎಐ ತಂತ್ರಜ್ಞಾನ ಆಧಾರಿತ ಶೌಚಾಲಯಗಳ ಮಾದರಿಯಲ್ಲಿ ಜಿಲ್ಲೆಯ ಆಯ್ದ ಸರ್ಕಾರಿ ಶಾಲೆಗಳು ಸೇರಿದಂತೆ ವಿಶ್ವವಿದ್ಯಾಲಯ, ಬಸ್ ನಿಲ್ದಾಣ ಮತ್ತು ತಹಶೀಲ್ದಾರ್ ಕಚೇರಿ ಆವರಣದಲ್ಲಿ ನವದೆಹಲಿಯ ಲಾಡ್ಲಿ ಫೌಂಡೇಶನ್ ಟ್ರಸ್ಟ್ ನಿರ್ಮಿಸುತ್ತಿದೆ.

ಜಿಲ್ಲೆಯಲ್ಲಿ ಶೌಚಾಲಯಗಳೇ ಇಲ್ಲದ 21 ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಜೊತೆಗೆ ತಿಕೋಟಾ ಬಸ್ ನಿಲ್ದಾಣ, ಬಸವನ ಬಾಗೇವಾಡಿ ತಹಶೀಲ್ದಾರ್ ಕಚೇರಿ ಹಾಗೂ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ ಸೇರಿದಂತೆ ಒಟ್ಟು 24 ಎಐ ತಂತ್ರಜ್ಞಾನ ಆಧಾರಿತ ಹೈಟೆಕ್ ಶೌಚಾಲಯಗಳನ್ನು ₹3.5 ಕೋಟಿ ಸಿಎಸ್‌ಆರ್ ಅನುದಾನದಲ್ಲಿ ನಿರ್ಮಾಣ ಮಾಡಲಾಗುತ್ತಿದೆ.

ತಲಾ ₹12 ಲಕ್ಷದಿಂದ ₹13 ಲಕ್ಷ ವೆಚ್ಚದಲ್ಲಿ ಎಐ ತಂತ್ರಜ್ಞಾನದ ಹೈಟೆಕ್ ಶೌಚಾಲಯ ನಿರ್ಮಿಸಲಾಗುತ್ತಿದೆ. ಈ ಶೌಚಾಲಯಗಳಲ್ಲಿ ವಿದ್ಯಾರ್ಥಿನಿಯರು, ಮಹಿಳೆಯರ ಅನುಕೂಲಕ್ಕಾಗಿ ಪ್ಯಾಡ್ ವೆಂಡಿಂಗ್ ಮಷಿನ್, ಪ್ಯಾಡ್ ಇನ್‌ಸಿನರೇಟರ್ ಮಷಿನ್, ಸ್ಮೋಕ್ ಕಂಟ್ರೋಲ್ ಮಷಿನ್, ಏರ್ ಪ್ಯೂರಿಫಯರ್, ಸ್ಮೆಲ್ ಡಿಟೆಕ್ಟರ್ ಮಷಿನ್ ಹಾಗೂ ಡಿಆರ್‌ಡಿಒ ನಿರ್ಮಿತ ಬಯೋ ಡೈಜೆಸ್ಟರ್‌ಗಳನ್ನು ಅಳವಡಿಸಲಾಗಿದೆ.

ಶೌಚಾಲಯವನ್ನು ಜನರು ಬಳಸಿ ಹೊರಬಂದ ತಕ್ಷಣವೇ ಆಟೋ ಜೆಟ್‌ಗಳ ಮೂಲಕ ಸ್ವಚ್ಛತಾ ಕಾರ್ಯ ನಡೆಯಲಿದೆ. ಶೌಚಾಲಯದಲ್ಲಿ ವಾಸನೆ ಬಂದರೆ ಸ್ಮೆಲ್ ಡಿಟೆಕ್ಟರ್ ಮಷಿನ್ ತಕ್ಷಣವೇ ಅಲಾರ್ಮ್ ಮೊಳಗಿಸುತ್ತದೆ. ಸಂಬಂಧಿಸಿದವರ ಮೊಬೈಲ್ ಸಂಖ್ಯೆಗೆ ಸ್ವಚ್ಛತೆ ಲೋಪದ ಬಗ್ಗೆ ಮಾಹಿತಿ ರವಾನಿಸುತ್ತದೆ.

ಶೌಚಾಲಯದಲ್ಲಿ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಇರುವ ಪ್ಯಾಡ್ ವೆಂಡಿಂಗ್ ಮಷಿನ್, ಪ್ಯಾಡ್ ಇನ್‌ಸಿನರೇಟರ್ ಮಷಿನ್, ಸ್ಮೋಕ್ ಕಂಟ್ರೋಲ್ ಮಷಿನ್, ಏರ್ ಪ್ಯೂರಿಫಯರ್ ಅನ್ನು ಜಾವಿದ್ ಜಮಾದಾರ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

> **ದೇಶದಲ್ಲೇ ಪ್ರಥಮ ಬಾರಿಗೆ ವಿಜಯಪುರದಲ್ಲಿ ಪೈಲಟ್ ಪ್ರಾಜೆಕ್ಟ್‌ನಡಿ ಸರ್ಕಾರಿ ಶಾಲೆಗಳಲ್ಲಿ ಎಐ ತಂತ್ರಜ್ಞಾನ ಆಧರಿತ ಶೌಚಾಲಯ ನಿರ್ಮಾಣ ಮಾಡಲಾಗುತ್ತಿದೆ**
> **ಜಾವಿದ್ ಜಮಾದಾರ, ನಿರ್ದೇಶಕ,** ಲಾಡ್ಲಿ ಫೌಂಡೇಶನ್ ಟ್ರಸ್ಟ್

> **ಶೌಚಾಲಯ ಕೊರತೆ ಇತ್ತು. 'ಲಾಡ್ಲಿ' ಹೈಟೆಕ್ ಶೌಚಾಲಯ ನಿರ್ಮಾಣ ಮಾಡಿಕೊಟ್ಟಿರುವುದರಿಂದ ನಮ್ಮ ವಿದ್ಯಾರ್ಥಿನಿಯರಿಗೆ ಬಹಳ ಅನುಕೂಲವಾಗಿದೆ**
> **ವಿದ್ಯಾವತಿ ಸವನಹಳ್ಳಿ,** ಮುಖ್ಯ ಶಿಕ್ಷಕಿ, ಸರ್ಕಾರಿ ಕನ್ನಡ ಹೆಣ್ಣು ಮಕ್ಕಳ ಮಾದರಿ ಪ್ರಾಥಮಿಕ ಶಾಲೆ, ತಿಕೋಟಾ

4B ಪುಟ ನೋಡಿ



ನಿರ್ದೇಶಕರು ಅವಿರೋಧವಾಗಿ ಆಯ್ಕೆ

ರಾಜರಾಜೇಶ್ವರಿನಗರ: ದಿ ಐಡಿಯಲ್ ಹೋಮ್ಸ್ ಕೋ-ಆಪರೇಟಿವ್ ಬಿಲ್ಡಿಂಗ್ ಸೊಸೈಟಿಗೆ ನಿರ್ದೇಶಕರು ಅವಿರೋಧ ಆಯ್ಕೆಯಾಗಿದ್ದಾರೆ. ಸುಬ್ಬಯ್ಯ ಸಿ.ಎಂ, ರಾಜ್‌ಕುಮಾರ್. ಎಂ, ಜೈಸಿಂಹ. ಕೆ, ಜಗದೀಶ್ ಜಿ.ಎಸ್, ಎಂ.ಟಿ. ಬಿಪಿನ್, ಎಂ.ರಾಜ್‌ಕುಮಾರ್, ಡಾ.ಎಂ.ಜಿ. ಆನಂದ್, ಡಾ.ಮಿಥುನ್‌ಸೋಮಯ್ಯ, ವಿಮಲ್ ಎಲ್, ಮಾಲು.ಕೆ.ವಿ, ಕೆ.ವಿ. ವಿಜಯಲಕ್ಷ್ಮಿ, ರಾಧಾ ಶ್ರೀನಾಥ್, ಕೃಷ್ಣಂ ಎಂ.ರಾಜು, ಭಾರ್ಗವಿ. ಸಿ ಆಯ್ಕೆಯಾಗಿದ್ದಾರೆ.

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/43/2024-25 ದಿನಾಂಕ: 04-02-2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಅರ್ಜಿದಾರರಾದ **ಶ್ರೀ ಆರ್. ಮಧುಸೂಧನ್ ಬಿನ್ ಲೇಟ್ ಎನ್. ರಾಮಕೃಷ್ಣಾರೆಡ್ಡಿ** ಇವರು ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮದ ಸ.ನಂ. 124/4 ರಲ್ಲಿನ 01 ಎಕರೆ 17 1/2 ಗುಂಟೆ ವಿಸ್ತೀರ್ಣದ ಜಮೀನನ್ನು **"ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

ವಾಸಾಸಂಇ/ವಾ.ಪ್ರ/4895/ಅಡ್ವಟೋರ್/2024-25

'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಡಿ ಬಿಬಿಎಂಪಿ, ಬಿಡಿಎ, ಬಿಎಂಆರ್‌ಸಿಎಲ್ ಕಾರ್ಯನಿರ್ವಹಿಸಲು ಸೂಚನೆ

ನಗರ ಸೌಂದರ್ಯೀಕರಣಕ್ಕೆ ಜವಾಬ್ದಾರಿ ನಿಗದಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ನಮ್ಮ ಮೆಟ್ರೊ ಮಾರ್ಗಗಳಲ್ಲಿ ಡಬಲ್ ಡೆಕರ್ ಕಡ್ಡಾಯ
- ಹೆಬ್ಬಾಳ ಮೇಲ್ಸೇತುವೆ ಹೊಸ ಲೂಪ್ ಏಪ್ರಿಲ್ ಅಂತ್ಯಕ್ಕೆ ಸಿದ್ಧ
- ಅಧಿಕಾರಿಗಳೊಂದಿಗೆ ಡಿ.ಕೆ. ಶಿವಕುಮಾರ್ ನಗರ ಪ್ರದಕ್ಷಿಣೆ

ಬೆಂಗಳೂರು: 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಡಿ ಬಿಬಿಎಂಪಿ, ಬಿಡಿಎ ಹಾಗೂ ಬಿಎಂಆರ್‌ಸಿಎಲ್ ಸಹಯೋಗದಲ್ಲಿ ನಗರದ ಸಂಚಾರ ದಟ್ಟಣೆ ನಿವಾರಣೆ ಹಾಗೂ ಸೌಂದರ್ಯೀಕರಣಕ್ಕೆ ಅಗತ್ಯವಾದ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಬಿಎಂಪಿ, ಬಿಎಂಆರ್‌ಸಿಎಲ್, ಬಿಡಿಎ ನಿರ್ವಹಿಸುತ್ತಿರುವ ಕಾಮಗಾರಿಗಳನ್ನು ಗುರುವಾರ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, 'ಮೂರೂ ಸಂಸ್ಥೆಗಳು ಪರಸ್ಪರ ಸಹಯೋಗದಲ್ಲಿ ನಗರದ ಅಭಿವೃದ್ಧಿಗೆ ಪೂರಕವಾದ ಕಾಮಗಾರಿಗಳನ್ನು ಕೈಗೊಳ್ಳಲು ಜವಾಬ್ದಾರಿ ವಹಿಸಲಾಗಿದೆ' ಎಂದರು.

'ನಮ್ಮ ಮೆಟ್ರೊದ ಹೊಸ ಯೋಜನೆಗಳಲ್ಲಿ ಸುಮಾರು 40 ಕಿ.ಮೀ. ಉದ್ದದ ಡಬಲ್ ಡೆಕರ್ ನಿರ್ಮಾಣ ಮಾಡಲಾಗುವುದು. ರಸ್ತೆ ವಿಸ್ತರಣೆಗೆ ಭೂಸ್ವಾಧೀನ ಸಾಧ್ಯವಿಲ್ಲದ್ದರಿಂದ, ಮುಂದೆ ನಿರ್ಮಾಣವಾಗುವ ನಮ್ಮ ಮೆಟ್ರೊ ಮಾರ್ಗದಲ್ಲಿ ಡಬಲ್ ಡೆಕರ್ ಕಡ್ಡಾಯಗೊಳಿಸಲಾಗಿದೆ. ಇದರ ವೆಚ್ಚವನ್ನು ಬಿಬಿಎಂಪಿ ಹಾಗೂ ಬಿಎಂಆರ್‌ಸಿಎಲ್ ಸಮನಾಗಿ ಭರಿಸಲಿವೆ. ಇದೀಗ ಉದ್ದೇಶಿಸಿರುವ ಡಬಲ್ ಡೆಕರ್‌ಗೆ ₹9,800 ಕೋಟಿ ವೆಚ್ಚವಾಗಲಿದೆ' ಎಂದು ತಿಳಿಸಿದರು.

'ರಾಗಿಗುಡ್ಡದಲ್ಲಿ ನಿರ್ಮಿಸಲಾಗಿರುವ ಡಬಲ್ ಡೆಕರ್‌ನಲ್ಲಿ ಕೆಲವು ಸಮಸ್ಯೆಗಳಿವೆ. ಮುಂದಿನ ದಿನಗಳಲ್ಲಿ ಸುಧಾರಣೆ ಮಾಡಿಕೊಳ್ಳಲಾಗುತ್ತದೆ. ಮುಂದಿನ 30ರಿಂದ 40 ವರ್ಷ ಗುರಿಯಾಗಿಟ್ಟುಕೊಂಡು ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ' ಎಂದರು.

ಜಾಹೀರಾತಿಗೆ ಅವಕಾಶ: ನಮ್ಮ ಮೆಟ್ರೊ ಪಿಲ್ಲರ್‌ಗಳ ಮೇಲೆ ಜಾಹೀರಾತು ಪ್ರಕಟಣೆಗೆ ಅವಕಾಶ ಮಾಡಿಕೊಡಲು ನಿರ್ಧರಿಸಲಾಗಿದೆ. ಬಿಎಂಆರ್‌ಸಿಎಲ್ ಹಾಗೂ ಬಿಬಿಎಂಪಿ 50:50ರ ಅನುಪಾತದಲ್ಲಿ ಆದಾಯವನ್ನು ಹಂಚಿಕೊಳ್ಳಬೇಕು ಎಂದು ಸೂಚಿಸಲಾಗಿದೆ ಎಂದು ತಿಳಿಸಿದರು.

ಹೆಬ್ಬಾಳ, ಗೊರಗುಂಟೆಪಾಳ್ಯ, ಬಿಇಎಲ್ ಕಡೆಯ ರಸ್ತೆ, ಲೊಟ್ಟೆಗೊಲ್ಲಹಳ್ಳಿ, ಸುಮನಹಳ್ಳಿ ಭಾಗದಲ್ಲಿ ನಮ್ಮ ಮೆಟ್ರೊ, ಅಂಡರ್‌ಪಾಸ್, ಮೇಲ್ಸೇತುವೆ ಯೋಜನೆಗಳ ಬಗ್ಗೆ ಅಧಿಕಾರಿಗಳು ಸಮೀಕ್ಷೆ ನಡೆಸಿ ವರದಿ ನೀಡಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೆಬ್ಬಾಳ ಮೇಲ್ಸೇತುವೆ ಕಾಮಗಾರಿ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು

ತಾಂತ್ರಿಕ ಸಿಬ್ಬಂದಿಯೊಂದಿಗೆ ನಗರ ಪ್ರದಕ್ಷಿಣೆ ಮಾಡಿ, ಭೂಸ್ವಾಧೀನ ಸೇರಿದಂತೆ ಹಲವು ವಿಷಯಗಳ ಬಗ್ಗೆ ಸ್ಥಳದಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಲಾಯಿತು ಎಂದು ಹೇಳಿದರು.

ಹೆಬ್ಬಾಳ ಮೇಲ್ಸೇತುವೆಯಲ್ಲಿ ಹೊಸ ಲೂಪ್ ನಿರ್ಮಾಣ ಏಪ್ರಿಲ್ ಅಂತ್ಯಕ್ಕೆ ಮುಗಿಯಲಿದೆ ಎಂದು ಬಿಡಿಎ ಅಧಿಕಾರಿಗಳು ಭರವಸೆ ನೀಡಿದ್ದಾರೆ. ಮೇ ಮೊದಲ ವಾರದಲ್ಲಿ ವಾಹನ ಸಂಚಾರ ಆರಂಭವಾಗಬೇಕು ಎಂದು ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ಶಿವಕುಮಾರ್ ತಿಳಿಸಿದರು.

ತುಮಕೂರಿನಿಂದ ಕೆ.ಆರ್. ಪುರಕ್ಕೆ ಹೋಗುವ ರಸ್ತೆ ಬಳಿ ಸಂಚಾರ ದಟ್ಟಣೆ ತಪ್ಪಿಸಲು ಅಂಡರ್ ಪಾಸ್ ನಿರ್ಮಾಣಕ್ಕೆ ಬಿಡಿಎ, ಮೆಟ್ರೊ, ಬಿಬಿಎಂಪಿ ಸೇರಿ ಒಗ್ಗಟ್ಟಿನಿಂದ ಕೆಲಸ ಮಾಡಲು ತಿಳಿಸಲಾಗಿದೆ. ಈ ಕಾಮಗಾರಿಯನ್ನು ಬಿಡಿಎ ನಿರ್ವಹಿಸಲಿದೆ ಎಂದು ಹೇಳಿದರು.

ಮುಖ್ಯಮಂತ್ರಿಯವರೊಂದಿಗೆ ಶುಕ್ರವಾರ ನಡೆಯುವ ಸಭೆಯಲ್ಲಿ ಬಜೆಟ್‌ನಲ್ಲಿ ನಗರದ ಯೋಜನೆಗಳಿಗೆ ಬೇಕಾದ ಅನುದಾನದ ಕೋರಿ ಮನವಿ ಸಲ್ಲಿಸಲಾಗುತ್ತದೆ ಎಂದರು.

'ಮೆಟ್ರೊ ಪ್ರಯಾಣ ದರ: ಹಸ್ತಕ್ಷೇಪ ಇಲ್ಲ'

'ನಮ್ಮ ಮೆಟ್ರೊ ಪ್ರಯಾಣ ದರ ಹೆಚ್ಚಳದ ವಿಚಾರದಲ್ಲಿ ಹಸ್ತಕ್ಷೇಪ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ ಇಲ್ಲ. ಅದಕ್ಕಾಗಿ ನ್ಯಾಯಮೂರ್ತಿ ನೇತೃತ್ವದಲ್ಲಿ ಕೇಂದ್ರದ ಸಮಿತಿ ರಚಿಸಲಾಗಿದೆ. ಆ ಸಮಿತಿಯ ವರದಿಯಂತೆ ಬಿಎಂಆರ್‌ಸಿಎಲ್ ತೀರ್ಮಾನ ಮಾಡುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಸಮಿತಿ ವರದಿ ನೀಡಿದ ಬಳಿಕ ನಮ್ಮ ಸರ್ಕಾರ ಮೂಗು ತೂರಿಸುವುದಿಲ್ಲ. ಪ್ರಯಾಣ ದರ ಹೆಚ್ಚಳದ ಬಗ್ಗೆ ನಿಗಮದ ನಿರ್ಧಾರವೇ ಅಂತಿಮ' ಎಂದರು.

'ನಗರದಲ್ಲಿ ಜಲಮಂಡಳಿಯಿಂದ ಪೂರೈಕೆಯಾಗುವ ನೀರಿನ ದರ ಹೆಚ್ಚಳದ ಬಗ್ಗೆ ಅಧಿಕಾರಿಗಳು ವರದಿ ನೀಡಿದ್ದಾರೆ. 14 ವರ್ಷದಿಂದ ನೀರಿನ ದರ ಹೆಚ್ಚಳವಾಗಿಲ್ಲ. ಜಲಮಂಡಳಿಗೆ ವರ್ಷಕ್ಕೆ ₹1,000 ಕೋಟಿ ನಷ್ಟವಾಗುತ್ತಿದೆ. ದರ ಏರಿಕೆ ಸಂಬಂಧ ನೀಡಲಾಗಿರುವ ವರದಿ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುತ್ತದೆ' ಎಂದು ಮಾಹಿತಿ ನೀಡಿದರು.

'ವ್ಯವಸ್ಥಿತ ನಗರ ಮಾಡುವ ಗುರಿ'

'ಬೆಂಗಳೂರನ್ನು ಇಡೀ ವಿಶ್ವ ಎದುರು ನೋಡುತ್ತಿದೆ. ಆದ್ದರಿಂದ, ಇನ್ನೂ ವ್ಯವಸ್ಥಿತ ನಗರವನ್ನಾಗಿ ಮಾಡುವುದೇ ನನ್ನ ಗುರಿ. ಎಲ್ಲೆಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಬಹುದೋ ಅಲ್ಲೆಲ್ಲ ಯೋಜನೆ ಅನುಷ್ಠಾನಗೊಳಿಸುವುದು ನನ್ನ ಗುರಿ. ಭವಿಷ್ಯದ ಬೆಂಗಳೂರು ಉತ್ತಮವಾಗಿರಬೇಕು ಎಂಬುದು ನನ್ನ ಕನಸು' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಹೇಳಿದರು.

ಸುರಂಗ ರಸ್ತೆಯ ಬಗ್ಗೆ ಹೆಚ್ಚಿನ ವಿರೋಧ ವ್ಯಕ್ತವಾಗುತ್ತಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಯಾವುದೇ ಟೀಕೆಗಳು ಇಲ್ಲದೇ ನೀವು ಬೆಳೆಯಲು ಸಾಧ್ಯವಿಲ್ಲ. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ' ಎಂದರು. 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ'ಯನ್ನು ವಿಧಾನಮಂಡಲದಲ್ಲಿ ಮಂಡಿಸಲಾಗಿದೆ. ಪರಿಶೀಲಿಸಲು ಜಂಟಿ ಸದನ ಸಮಿತಿ ರಚಿಸಲಾಗಿದ್ದು, ಅದರ ಅಧ್ಯಕ್ಷ ರಿಜ್ವಾನ್ ಅರ್ಷದ್ ಅವರು ನಗರದ ಎಲ್ಲ ಶಾಸಕರ ಅಭಿಪ್ರಾಯ ಪಡೆದಿದ್ದಾರೆ. ನಾಗರಿಕರಿಂದಲೂ ಸಲಹೆ ಪಡೆಯುತ್ತಿದ್ದಾರೆ. ವರದಿ ಬಂದ ಬಳಿಕ ಮುಂದಿನ ಪ್ರಕ್ರಿಯೆ ನಡೆಸಲಾಗುತ್ತದೆ' ಎಂದು ಮಾಹಿತಿ ನೀಡಿದರು.

ಸುಗಮ ಸಂಗೀತ: ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಗಮ ಸಂಗೀತಕ್ಕೆ ಸಂಬಂಧಿಸಿದಂತೆ ಮೃತ್ಯುಂಜಯ ದೊಡ್ಡವಾಡ ಅವರ ಸಂಗೀತಧಾಮ ಸಂಸ್ಥೆಯು ಡಿಪ್ಲೊಮಾ ಕೋರ್ಸ್ ಹಾಗೂ ಆನಂದ ಮಾದಲಗೆರೆ ಅವರ ಗಾಯನ ಗಂಗಾ ಸಂಸ್ಥೆಯು ಸರ್ಟಿಫಿಕೆಟ್ ಕೋರ್ಸ್ ಪ್ರಾರಂಭಿಸಿವೆ.

ಇವುಗಳು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಮಾನ್ಯತೆ ಹೊಂದಿವೆ. 10 ತಿಂಗಳ ಡಿಪ್ಲೊಮಾ ಕೋರ್ಸ್‌ಗೆ ಪ್ರವೇಶ ಪಡೆಯಲು ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣರಾಗಿರಬೇಕು. 6 ತಿಂಗಳ ಸರ್ಟಿಫಿಕೆಟ್ ಕೋರ್ಸ್‌ಗೆ ಎಸ್ಸೆಸ್ಸೆಲ್ಸಿಯಲ್ಲಿ ಅನುತ್ತೀರ್ಣರಾದವರೂ ಪ್ರವೇಶ ಪಡೆಯಬಹುದಾಗಿದೆ.

ಮಾರ್ಚ್ ಮೊದಲ ವಾರದಿಂದ ತರಗತಿಗಳು ನಡೆಯಲಿದ್ದು, ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದೆ. 30 ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶ ನೀಡಲಾಗುತ್ತದೆ. ಆಸಕ್ತರು ಜೆ.ಪಿ.ನಗರದ 2ನೇ ಹಂತದಲ್ಲಿರುವ ಸಂಗೀತಧಾಮ ಸಂಸ್ಥೆ ಹಾಗೂ ಮುದ್ದಯ್ಯನಪಾಳ್ಯದಲ್ಲಿರುವ ಗಾಯನ ಗಂಗಾ ಸಂಸ್ಥೆಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9448139784 ಅಥವಾ 9591791046

ಜಾಗತಿಕ ಅಂಧತ್ವ ಸಮ್ಮೇಳನ ಇಂದಿನಿಂದ

ಬೆಂಗಳೂರು: ಭಾರತ-ಏಕ್ ಕದಮ್ ಔರ್ ಫೌಂಡೇಶನ್ ಫಾರ್ ಎಜುಕೇಶನ್ ಆ್ಯಂಡ್ ಹೆಲ್ತ್ ವತಿಯಿಂದ ಫೆಬ್ರುವರಿ 7 ಮತ್ತು 8ರಂದು ಸರ್ಜಾಪುರ ರಸ್ತೆಯ ದೊಡ್ಡಕನ್ನೆಲ್ಲಿಯಲ್ಲಿರುವ ವಿಪ್ರೊ ಕಾರ್ಪೊರೇಟ್ ಕಚೇರಿಯಲ್ಲಿ 'ಎರಡನೇ ಜಾಗತಿಕ ಅಂಧತ್ವ ಸಮ್ಮೇಳನ' ನಡೆಯಲಿದೆ.

ಈ ಸಮ್ಮೇಳನವನ್ನು ಸಂಸ್ಥೆಯ 'ಅರುಣೋದಯ' ಕಾರ್ಯಕ್ರಮದ ಭಾಗವಾಗಿ ಹಮ್ಮಿಕೊಳ್ಳಲಾಗಿದೆ. ಅಂಧರಿಗೆ ಗುಣಮಟ್ಟದ ಶಿಕ್ಷಣ, ಉದ್ಯೋಗ ಅವಕಾಶಗಳು ಹಾಗೂ ಸಮಗ್ರ ಬೆಂಬಲ ನೀಡುವ ಉದ್ದೇಶದಿಂದ ಈ ಸಮ್ಮೇಳನವನ್ನು ಆಯೋಜಿಸಲಾಗಿದೆ. ಇಲ್ಲಿ ಅಂಧರ ಶೈಕ್ಷಣಿಕ ಸಬಲೀಕರಣ, ತಂತ್ರಜ್ಞಾನ ಹಾಗೂ ನೀತಿಗಳ ಕುರಿತು ಚರ್ಚೆಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಪ್ರಕಟಣೆ

ನಮ್ಮ ಪಕ್ಷಗಾರರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ನೀಡುವ ಸಾರ್ವಜನಿಕ ನೋಟಿಸು.

ನಮ್ಮ ಪಕ್ಷಗಾರರು ಬೆಂಗಳೂರು ಜಿಲ್ಲಾ ಬೆಂಗಳೂರು ದಕ್ಷಿಣ ತಾಲೂಕಿನಲ್ಲಿ ಬರುವ ಹಂಪಾಪುರ ಗ್ರಾಮ ಕೆಂಗೇರಿ ಹೋಬಳಿಯಲ್ಲಿ ನಿರ್ಮಿಸಿರುವ ಬಡಾವಣೆ ನಿವೇಶನ ಸಂಖ್ಯೆ 1253 ಗುಂಪು MIG KHB-L&C Silicon city ಸದರಿ ಪ್ಲಾಟ್ ಪೂ-ಪ ಕ್ಕೆ 18.28 ಮೀ, ಉ-ದ ಕ್ಕೆ 12.20 ಮೀ. ಅಳತೆಯುಳ್ಳ ನಿವೇಶನದ ಮಾಲೀಕರಾದ ಶ್ರೀ ಎಂ. ಕೃಷ್ಣಗೌಡ ತಂದೆ ಮುದ್ದೇಗೌಡ (Aadhaar No.7831 6932 9575) (PAN No. AANPK 41818) ವಯಾ 63 ವರ್ಷ, ಮನೆ ನಂ. 21/A, 9ನೇ ಕ್ರಾಸ್, 5ನೇ ಮುಖ್ಯ ರಸ್ತೆ, ಆರ್.ಕೆ. ಬಡಾವಣೆ 1ನೆ ಸ್ಟೇಜ್, ಬೆಂಗಳೂರು -560070, ಸದರಿ ಪ್ಲಾಟ್ ಅಂದರೆ 1253 ಇವರ ಸ್ವಂತ ಮಾಲೀಕತ್ವ ಹಾಗೂ ಕಬ್ಜೆಯಲ್ಲಿ ಇರುತ್ತದೆ.

ಈ ಪ್ಲಾಟ್‌ಅನ್ನು ನಮ್ಮ ಪಕ್ಷಗಾರರು ಖರೀದಿ ಹಿಡಿಯುವವರಿದ್ದು ಹಾಗೂ ಈ ಒಳಗಾಗಿ ಖರೀದಿ ಸಂಚಕಾರ ಆಗಿದ್ದು ಸದರಿಯವರು ಸದರಿ ಆಸ್ತಿಯನ್ನು ನಮ್ಮ ಪಕ್ಷಗಾರರಿಗೆ ಖರೀದಿ ಕೊಡಲು ಒಪ್ಪಿಕೊಂಡಿರುತ್ತಾರೆ. ಕಾರಣ ಮೇಲ್ಕಾಣಿಸಿದ ಪ್ಲಾಟ್‌ಅನ್ನು ಖರೀದಿಸಿ ತಮ್ಮ ಹೆಸರಿಗೆ ಖರೀದಿ ಪತ್ರವನ್ನು ನಮ್ಮ ಪಕ್ಷಗಾರರು ನೊಂದಾಯಿಸಿಕೊಳ್ಳುವವರಿರುತ್ತಾರೆ. ಆದ್ದರಿಂದ ತಿಳಿಸುವುದೇನೆಂದರೆ ಮೇಲ್ಕಾಣಿಸಿದ ಆಸ್ತಿಯ ಕುರಿತು ಹಕ್ಕು ವ ಹಿತಾಸಕ್ತಿ ತಂಟೆ ವ ತಕರಾರು ಬೋಜಾ ವಗೈರೆ ಇದ್ದವರು ಈ ನೋಟಿಸು ಪ್ರಕಟವಾದ ಏಳು (07) ದಿನಗಳ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ಲೇಖಿನ ಮುಖಾಂತರ ಸಂಬಂಧಪಟ್ಟ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ತದನಂತರ ಬಂದ ಯಾವುದೇ ರೀತಿಯ ಹಕ್ಕು ವ ಹಿತಾಸಕ್ತಿ ತಂಟೆ ವ ತಕರಾರು ವ ಬೋಜಾಗಳು ನಮ್ಮ ಪಕ್ಷಗಾರರ ಮೇಲೆ ಯಾವುದೇ ರೀತಿಯಿಂದ ಭಾಂದಾಯಿಸಲಾರವು ಅಂತ ಈ ಮೂಲಕ ಕೊಟ್ಟ ಸಾರ್ವಜನಿಕ ನೋಟಿಸು.

H. R. Hooli (M.Com., LLB Spl.), Advocate High court
Address: C/o Smt. Geetha Devi S., Sriniketana, H. No. 1060, 3rd Floor, 1st Main, 4th Cross, 5th Stage, BEML Layout Rajarajeshwari Nagar, Bangalore Karnataka-560098
ಸ್ಥಳ: ಬೆಂಗಳೂರು ದಿನಾಂಕ: 07/02/2025

JOB OPPORTUNITIES

Teachers/ Professors

ORCHIDS The International School
TEACHERS WANTED
Freshers and Experienced Female candidates can only apply
English, Mathematics, Chess, Dance, Music, Theatre, Drawing, Physical Education & Other Subject Teachers
For Walk In, visit the nearest Orchids School during weekends
Kindly drop your CV to: careers@orchids.edu.in

Factory

FACTORY WORKERS Needed Male Age Below 30 Eligibility: 10th Pass or PUC Pass Location: Rajajinagar Perks: Good Salary, Training Provided Contact: 9108458798/ 9845579620

Office Boys/ Peon

WANTED HELPER & PACKER (Male) Bommanahalli (Bangalore) Ph: 9980140661/ 08025631755 Mail: starsilks@gmail.com

General

WANTED OFFICE ASSISTANTS at Textile Export Company Bommanahalli (Bangalore) Email: starsilks@gmail.com

REAL ESTATE BUYING

Industrial & Factory

General

WANTED 5000SFT to 20000sft and upto 10Acres in private industrial land and KIADB allotted land at Bengaluru Urban and Rural district.call Verna Developers, MG-Road,Blr. 9916310226/ 9353128035.

Sites

Nagarabhavi

WANTED SITE NAGARABHAVI, Visweswarayya Layout. MPM, NGEF, RHCS, Nadaprabhu Kempegowda Layout, BEML Layout.`20x30, 30x40, 40x60, 50x80. Call: 9972843809.

REAL ESTATE SELLING

Commerical

Basavanagudi

PRIME CORNER COMMERCIAL LEASE (65 YEARS): (1) 2400 SFT GROUND FLOOR; (2) 8000 SFT WITH BUILT 18000 SFT. BROKERS EXCUSE. PRICE Rs 6 to 15 cr MESSAGE ON WHATSAPP 99029-15651

Sites

Devanahalli

PLOT FOR SALE @ Jangammakote, 1200Sqft N/F in Gated Layout Near Sugaturu Village. Via Hoskote. Whatsapp/ Call: 9972528503

RENTAL PROPERTIES

Accommodation Available

Flats

LEELA RESIDENCE Bhartiya City Premium 3 Bed room + 2 Carpark semi-Furnished Contact Tel 98806-43419 what app +852-94359784

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164

PROPERTY CORNER



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

House

GANDHI BAZAAR 5BR Independent House 3BR Attached, Wardrobes, AC. Car Shed Suitable: Corporate, Office cum Residence. Rent 1.25 Lacs. Contact "GK" 94480-56369

PERSONAL

Announcements

ANNOUNCEMENT
Special honour for Retired Teachers / Professors and Lecturers
Your dedication and hardwork has shaped several students future and have made them as Better human beings too . Recognising your passion and selfless service an MNC wants to applaud your contribution done to the society.
please mail or call on the numbers below for Registration
9743371679 / 6363-243856
recognitionplatform2025@gmail.com
Note: Only Bangalore Residing Professionals Can Call Us.

Change of Name

ANNOUNCEMENT
I, ROSHAN BALADHANVI, S/o Narasimha Raghava Baladhanvi R/at C0617, Brigade Panorama, Mysore Road, Kambipura, Kumbalagodu, Bengaluru-560074, declare that in my birth certificate my mother's name is wrongly mentioned as **Bangalore Narasimha Iyengar,** my mother's correct name is **PREMA BALADHANVI** vide affidavit dt: 23-01-2025, before notary L. Gopalakrishna, Bengaluru.

CHANGE OF NAME
I, SMT. PUSHPALATHA, aged about 49 years, wife of SRI. SAMPATH KUMAR, residing at No.9, 25th Main, 3rd Cross, Avalahalli Main Road, Srinagar, Bangalore -560050. have changed my name from **LATHA to PUSHPALATHA** vide Affidavit dated 07-12-2024 sworn before advocate & Notary S. Subashini, at Bengaluru.

CHANGE OF NAME
I, FATHIMA SABEENA, declare that my Husband's Original name was **Mr. Mohammed Nawaz Gurpur** son of late Mr. C.S. Gurupur and later changed to **Mr. Mohammed Cheyyabba.** Both the names are pertaining to the same person and represents and stands to him only. His earlier name is abandon to use in lieu of his correct and changed name **MOHAMMED CHEYYABBA** for the purpose of evidencing such changed correct name, vide Affidavit dated 20-12-2024, sworn before Notary A. Nagaraja, Bangalore.

'I SWEETHA A, residing at No.27, 19th Cross, 20th B Main, Kaveri Road, SMS Layout, J.P.Nagar 5th Phase, Bengaluru-560078, (Aadhaar No: 927746090352) have changed my name to 'SHWETHA VENUGOPAL' vide affidavit 06-02-2025 before Notary MOHAMMED HUSSAIN, Bengaluru. Henceforth I shall be called 'SHWETHA VENUGOPAL' only.

I ANIL Kumar G Thricovil S/O, T.A. Gopala Rao R/o Thricovil House, Mannanam P.O Kottayam, Kerala 686561 have changed my name to Anil Gopala Rao.

LIC HFL LIC HOUSING FINANCE LTD

ಎಲ್.ಐ.ಸಿ. ಹೌಸಿಂಗ್ ಫೈನಾನ್ಸ್ ಲಿಮಿಟೆಡ್
ಬ್ಯಾಕ್ ಆಫೀಸ್, 1 ನೇ ಮಹಡಿ, ಜೀವನ್ ಮಂಗಲ್, ಹೇಯ್ಸ್ ರಸ್ತೆ, ರೆಸಿಡೆನ್ಸಿ ರಸ್ತೆ, ಬೆಂಗಳೂರು – 560025.

ಇ-ಹರಾಜು ಮಾರಾಟ ಪ್ರಕಟಣೆ

ಕೆಳಸಹಿದಾರರು ಎಲ್ಐಸಿ ಹೌಸಿಂಗ್ ಫೈನಾನ್ಸ್ ಲಿ (ಎಲ್ಐಸಿ ಹೆಚ್ಎಫ್ಎಲ್) ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 ಮತ್ತು ಸೆಕ್ಷನ್ 13(2) ರ ನಿಯಮ 3ನ್ನು ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅನ್ವಯ ಈ ಕೆಳಗಿನ ಸಾಲಗಾರರು/ಅಡಮಾನದಾರರು ಮತ್ತು ಜಾಮೀನುದಾರರಿಗೆ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಬಾಕಿ ಮೊತ್ತ ಪಾವತಿಸುವಂತೆ ಸೂಚಿಸಲಾಗಿತ್ತು. ಆದಾಗ್ಯೂ, ಸಾಲಗಾರರು/ಅಡಮಾನದಾರರು ಮತ್ತು ಜಾಮೀನುದಾರರು ಹಣ ಮರುಪಾವತಿಸುವಲ್ಲಿ ವಿಫಲರಾಗಿದ್ದು, ಕೆಳಸಹಿದಾರರು ಈ ಕೆಳಗಿನ ಆಸ್ತಿಗಳನ್ನು ಸೆಕ್ಷನ್ 13(4) ಮತ್ತು 14 ರ ಕಾಯಿದೆ ನಿಯಮ 8 ರ ಅನ್ವಯ ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ.

ಈ ಸೂಚನೆಯ ಮೂಲಕ ಸಾರ್ವಜನಿಕರು ಹಾಗೂ ಸಾಲಗಾರರು/ಜಾಮೀನುದಾರರು/ಅಡಮಾನದಾರರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಆಸ್ತಿಯನ್ನು ಎಲ್ಐಸಿ ಹೆಚ್ಎಫ್ಎಲ್ ಗೆ ಅಡಮಾನ ಮಾಡಲಾಗಿದ್ದು, ಅದನ್ನು ಅಧಿಕೃತ ಅಧಿಕಾರಿ, ಎಲ್ಐಸಿ ಹೆಚ್ಎಫ್ಎಲ್ ರವರು ಸ್ವಾಧೀನಪಡಿಸಿಕೊಂಡಿದ್ದು, ಆಸ್ತಿಗಳನ್ನು ಈ ಕೆಳಗೆ ವಿವರಿಸಿರುವಂತೆ "ಎಲ್ಲಿ ಹೇಗಿದೆಯೋ ಹಾಗೆ", "ಏನು ಇದೆಯೋ ಹಾಗೆ", ಮತ್ತು "ಯಾವುದು ಇದೆಯೋ ಹಾಗೆ" "ಯಾವುದೇ ಅವಲಂಬನೆ ಇಲ್ಲದೆ" ಮಾರಾಟ ಮಾಡಲಿರುವರು.

ಶ್ರೀ ಬಾಬು ರೆಡ್ಡಿ ಎನ್
ಸಾಲದ ಖಾತಾ ಸಂಖ್ಯೆ: 410400008907 ಮತ್ತು 411900015415

ಆಸ್ತಿಯ ವಿವರ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಆಸ್ತಿಯ ಸರ್ವೆ ನಂ. 59/2, ಹೊಸ ಸರ್ವೆ ನಂ. 59/4 ಮತ್ತು ಹಳೆ ಸರ್ವೆ ನಂ. 57/3 ಹೊಸ ಸರ್ವೆ ನಂ. 57/4 ದೊಡ್ಡತೋಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಇಲ್ಲಿದ್ದು, ಚಕ್ಕುಬಂದಿ; ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: 57/3 ನಂಬರಿನ ಆಸ್ತಿ, ಉತ್ತರಕ್ಕೆ: ಇತರರ ಆಸ್ತಿ, ದಕ್ಷಿಣಕ್ಕೆ: ಇತರರ ಆಸ್ತಿ. ವಿಸ್ತೀರ್ಣ 16.5 ಗುಂಟೆ. ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಸರ್ವೆ ನಂ. 57/3 ದೊಡ್ಡತೋಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು, ಬೆಂಗಳೂರು ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 59/2, ಪಶ್ಚಿಮಕ್ಕೆ: ಗೌರಮ್ಮರವರಿಗೆ ಸೇರಿದ ಆಸ್ತಿ, ಉತ್ತರಕ್ಕೆ: ಇತರರ ಆಸ್ತಿ, ದಕ್ಷಿಣಕ್ಕೆ: ಸರ್ಕಾರಿ ಚರಂಡಿ. ವಿಸ್ತೀರ್ಣ 1 ಎಕರೆ 5 ಗುಂಟೆ

ತಗಾದೆ ಸೂಚನೆ ದಿನಾಂಕ ಮತ್ತು ತಗಾದೆ ಮೊತ್ತ	29/10/2022 & ರೂ.10,59,57,789.00 (ರೂ.64,672,373.00+ ರೂ.41,285,416.00) ಜೊತೆಗೆ ಮುಂದುವರಿದ ಬಡ್ಡಿ, ಖರ್ಚು ಮತ್ತು ವೆಚ್ಚಗಳು
ಸ್ವಾಧೀನತೆ ದಿನಾಂಕ	ಸಾಂಕೇತಿಕ ಸ್ವಾಧೀನತೆ – 03/03/2023
ಖಾತಾ ವಿವರಗಳು	ಫಲಾನುಭವಿ ಹೆಸರು: ಎಲ್ಐಸಿ ಹೌಸಿಂಗ್ ಫೈನಾನ್ಸ್ ಲಿ., ಬ್ಯಾಂಕ್ : ಎಕ್ಸಿಸ್ ಬ್ಯಾಂಕ್, ಕೇಂದ್ರೀಯ ಸಂಗ್ರಹಣಾ ಹಬ್, ಖಾತಾ ಸಂಖ್ಯೆ:- HFLESCBAJC15415 IFSC Code: UTIB0CCH274
ಮೀಸಲು ಬೆಲೆ	ರೂ.38,95,00,000/- (ಮೂವತ್ತೆಂಟು ಕೋಟಿ ತೊಂಭತ್ತೈದು ಲಕ್ಷ ರೂಪಾಯಿಗಳು ಮಾತ್ರ)
ಇಎಂಡಿ	ರೂ.3,89,50,000 /- (ಮೂರು ಕೋಟಿ ಎಂಭತ್ತೊಂಭತ್ತು ಲಕ್ಷ ಐವತ್ತು ಸಾವಿರ ರೂಪಾಯಿಗಳು ಮಾತ್ರ)
ಈ ದಿನಾಂಕದವರೆಗೆ ಪಾವತಿಸಬೇಕಾದ ಒಟ್ಟು ಮೊತ್ತ	ರೂ.15,09,86,980.31/- (ಹದಿನೈದು ಕೋಟಿ ಒಂಭತ್ತು ಲಕ್ಷ ಎಂಭತ್ತಾರು ಸಾವಿರದ ಒಂಭೈನೂರ ಎಂಭತ್ತು ರೂಪಾಯಿ ಮತ್ತು ಪೈಸೆ ಮೂವತ್ತೊಂದು ಮಾತ್ರ)
ಇ-ಹರಾಜು ವೆಬ್‌ಸೈಟ್	https://online.lichousing.com/eauction/ & https://www.auctionbazaar.com/
ಆಸ್ತಿ ದಾಖಲೆಗಳ ಪ್ರತಿಗಳನ್ನು ಪರಿಶೀಲಿಸುವ ದಿನಾಂಕ ಮತ್ತು ಸಮಯ	19 ಫೆಬ್ರವರಿ 2025 ಮತ್ತು ಬೆಳಿಗ್ಗೆ 10:30ರಿಂದ ಮಧ್ಯಾಹ್ನ 3:00 ಗಂಟೆ
ಆಸ್ತಿ ದಾಖಲೆ ಪರಿಶೀಲಿಸುವ ವಿಳಾಸ	ಬ್ಯಾಕ್ ಆಫೀಸ್, 1 ನೇ ಮಹಡಿ, ಎಲ್ಐಸಿ ಜೀವನ್ ಮಂಗಲ್, ಹೇಯ್ಸ್ ರಸ್ತೆ, ರೆಸಿಡೆನ್ಸಿ ರಸ್ತೆ ಬೆಂಗಳೂರು, ಕರ್ನಾಟಕ – 560025.
ಆಸ್ತಿಯ ಪರಿವೀಕ್ಷಣೆ ದಿನಾಂಕ ಮತ್ತು ಹರಾಜಿನ ಸಮಯದ ಅವಧಿ	20 ಫೆಬ್ರವರಿ 2025 ಮತ್ತು ಬೆಳಿಗ್ಗೆ 10:30 ರಿಂದ ಮಧ್ಯಾಹ್ನ 1:00ಗಂಟೆ
ಸಂಪರ್ಕಿಸಬೇಕಾದ ವ್ಯಕ್ತಿ : ಅಧಿಕೃತ ಪ್ರತಿನಿಧಿಯ ಹೆಸರು	ಶ್ರೀ ಅಜಿತ್ ನಾಯರ್, ಸಹಾಯಕ ಮುಖ್ಯ ವ್ಯವಸ್ಥಾಪಕರು, ಮೊಬೈಲ್ ಸಂ. 9446368696
ಇ-ಹರಾಜು ಸೇವಾ ಪೂರೈಕೆದಾರರ ಸಂಪರ್ಕ ವಿವರ	ಶ್ರೀ ಅಬ್ದುಲ್, ಮೆ॥ ಅರ್ಕ ಇಮಾರ್ಟ್ ಪ್ರೈ.ಲಿ., ಮೊಬೈಲ್ ಸಂ.7799510999 ಇ-ಮೇಲ್ ಐಡಿ: contact@auctionbazaar.com,
ಆನ್‌ಲೈನ್ ಟೆಂಡರ್/ಬಿಡ್ ಸಲ್ಲಿಸಲು ಕೊನೆಯ ದಿನಾಂಕ	21 ಫೆಬ್ರವರಿ 2025 ಮಧ್ಯಾಹ್ನ 3 ಗಂಟೆವರೆಗೆ
ಇ-ಹರಾಜು ದಿನಾಂಕ ಮತ್ತು ಸಮಯ	24 ಫೆಬ್ರವರಿ 2025 ಮತ್ತು ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆ

ಮುಂದುವರಿದು, ಹೇಳಲಾದ ಸ್ವತ್ತುಗಳ/ಮೇಲಿನ ಸ್ವತ್ತುಗಳ ಇ-ಹರಾಜಿನ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗುತ್ತಿದ್ದು, (ಸರ್ಫೇಸಿ ಕಾಯಿದೆ 2002ರ ನಿಯಮ ನಿಬಂಧನೆಗಳ ಅನುಸಾರ) ಹೇಳಲಾದ ಆಸ್ತಿಗಳ ಖರೀದಿಗಾಗಿ ಎಲ್ಐಸಿಹೆಚ್ಎಫ್ಎಲ್ ಆನ್‌ಲೈನ್ ಮೂಲಕ "ಎಲ್ಲಿ ಹೇಗಿದೆಯೋ ಹಾಗೆ", ಎಲ್ಲಿ ಏನಿದೆಯೋ ಹಾಗಿನ ರೀತಿ", "ಯಾವುದೇ ಅವಲಂಬನೆ ಇಲ್ಲದೆ" ಮಾರಾಟ ಮಾಡಲು ಬಿಡ್‌ಗಳನ್ನು ಈ ಕೆಳಗಿನ ನಿಯಮ ಮತ್ತು ನಿಬಂಧನೆಗಳ ಅನುಸಾರ ಆಹ್ವಾನಿಸಿದೆ. 1. ಇ-ಹರಾಜನ್ನು "ಎಲ್ಲಿ ಹೇಗಿದೆಯೋ ಹಾಗೆ" "ಏನಿದೆಯೋ ಹಾಗೆ" "ಹೇಗಿದೆಯೋ ಹಾಗೆ" ಮತ್ತು "ಯಾವುದೇ ಅವಲಂಬನೆ ಇಲ್ಲದೆ" ಆನ್‌ಲೈನ್ ಮೂಲಕ ನಡೆಯಲಿದೆ. ಮತ್ತು ಎಲ್ಐಸಿ ಹೆಚ್ಎಫ್ಎಲ್ ನ ಅನುಮೋದಿತ ಇ-ಹರಾಜು ಸೇವಾ ಪೂರೈಕೆದಾರ (ಪತ್ರಿಕಾ ಜಾಹೀರಾತಿನಲ್ಲಿ ಪ್ರಕಟಿಸಿದಂತೆ) ಮೂಲಕ ನಡೆಸಲಾಗುವುದು. 2. ಅಧಿಕೃತ ಅಧಿಕಾರಿಯವರಿಗೆ ತಿಳಿದಂತೆ ಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ಯಾವುದೇ ಪರಭಾರೆ ಇರುವುದಿಲ್ಲ. ಆದಾಗ್ಯೂ ಬಿಡ್ಡುದಾರರು ಸ್ವತಂತ್ರವಾಗಿ ಪರಿಶೀಲನೆ ನಡೆಸಿ ಆಸ್ತಿಯ ಸ್ಥಳ ಮತ್ತು ಗುರುತುಗಳನ್ನು, ಉಪ-ನೋಂದಣಾಧಿಕಾರಿ/ಸಿವಿಲ್ ನ್ಯಾಯಾಲಯದಲ್ಲಿ ಸಾರ್ವಜನಿಕ ದಾಖಲೆಗಳ ಪರಿಶೀಲಿಸಿ ಭದ್ರತಾ ಸ್ತಿ ಬಗ್ಗೆ ಯಾವುದೇ ಪರಭಾರೆ ಬಗ್ಗೆ, ಶಾಸನಬದ್ಧ ಬಾಧ್ಯತೆಗಳು, ಆಸ್ತಿ ತೆರಿಗೆ ಬಾಕಿ, ಆದಾಯ ತೆರಿಗೆ, ಅಬಕಾರಿ ಶುಲ್ಕ, ಲೇಬರ್ ಬಾಕಿಗಳು, ವಿದ್ಯುತ್ ಮತ್ತು ನಿರ್ವಹಣಾ ವೆಚ್ಚ ಇತ್ಯಾದಿ ಬಗ್ಗೆ ಪರಿಶೀಲನೆ ನಡೆಸಬಹುದು.. ಯಶಸ್ವಿ ಬಿಡ್ಡುದಾರರು ಎಲ್ಲಾ ಹೊರ ಬಾಕಿಗಳನ್ನು ಅಂದರೆ ಮುನ್ಸಿಪಲ್ ತೆರಿಗೆ, ನಿರ್ವಹಣೇ/ಸೊಸೈಟಿ ದರಗಳು, ವಿದ್ಯುತ್ ದರಗಳು, ನೀರಿನ ಶುಲ್ಕಗಳು, ಮುದ್ರಾಮಕ ಶುಲ್ಕ, ನೋಂದಣಿ ಶುಲ್ಕ (ಅನ್ವಯಿಸವಂತಿದ್ದರೆ) ಯಾವುದಾದರೂ ಇದ್ದಲ್ಲಿ ಮತ್ತು ಇತರೆ ಎಲ್ಲಾ ಮೂಲ ವೆಚ್ಚಗಳು ದರಗಳು ಸೇರಿದಂತೆ ಎಲ್ಲಾ ಆಸ್ತಿಗೆ ಸಂಬಂಧಸಿದ ಎಲಾ ಹೊರ ಬಾಕಿಗಳನ್ನು ಮೀಸಲು ಬೆಲೆಯ ಮೇಲಿನಿಂದ ಪಾವತಿಸಬೇಕು. ಎಲ್ಐಸಿಹೆಚ್ಎಫ್ಎಲ್ ಯಾವುದೇ ದರ, ಬಾಕಿ, ಬಾಧ್ಯತೆ ಇತ್ಯಾದಿ ಯಾವುದೇ ಬಾಕಿಗಳಿಗೆ ಯಾವುದೇ ರೀತಿಯಲ್ಲಿ ಈ ಮೇಲೆ ತಿಳಿಸಿದಂತೆ ಜವಾಬ್ದಾರಿಯಾಗಿರುವುದಿಲ್ಲ. 3. ಅಪೇಕ್ಷಿತ ಬಿಡ್ಡುದಾರರು ತಮ್ಮ ಹೆಸರನ್ನು ಇ-ಹರಾಜು ಸೇವಾ ಪೂರೈಕೆದಾರರ ವೆಬ್‌ಸೈಟ್ ನಲ್ಲಿ ಈ ಮೇಲೆ ಮಾರಾಟ ಸೂಚನೆಯಲ್ಲಿ ತಿಳಿಸಿದಂತೆ (ಪತ್ರಿಕೆ ಜಾಹೀರಾತಿನಲ್ಲಿ ಪ್ರಕಟಿಸಿದಂತೆ) ನೋಂದಾಯಿಸಿಕೊಳ್ಳಬೇಕು. 4. ಇ-ಹರಾಜು ಮಾರಾಟವು ಸರ್ಫೇಸಿ ಕಾಯಿದೆ 2002 ರ ಲ್ಲಿ ನಿಗದಿಪಡಿಸಿದಂತೆ ನಿಯಮ ನಿಬಂಧನೆಗಳ ಅನುಸಾರ ಆಫರ್ / ಬಿಡ್ ದಾಖಲೆಗಳನ್ನು ಸಲ್ಲಿಸುವ ಮೂಲಕ ಉದ್ದೇಶಿತ/ಅಪೇಕ್ಷಿತ ಬಿಡ್ಡುದಾರರು ಇ-ಹರಾಜಿನಲ್ಲಿ ಭಾಗವಹಿಸಬಹುದು. 5. ಪ್ರತಿ ಬಿಡ್ಡುದಾರರು ಆನ್‌ಲೈನ್ ಇ-ಹರಾಜಿನಲ್ಲಿ ಭಾಗವಹಿಸಲು ಆತ/ಅವಳ ಸ್ವಂತ ಇ-ಮೇಲ್ ವಿಳಾಸ ವನ್ನು ಹೊಂದಿರಬೇಕು. ಒಂದು ಬಾರಿ ಬಿಡ್ಡುದಾರರು ತಮ್ಮನ್ನು ನೋಂದಾಯಿಸಿಕೊಂಡು ಬಿಡ್ಡಿಂಗ್‌ಗೆ ಎಲ್ಐಸಿ ಹೆಚ್ಎಫ್ಎಲ್ ಅಧಿಕೃತ ಅಧಿಕಾರಿಯವರ ಮುಂದೆ ಅರ್ಹತೆ ಪಡೆದು, ಆತ/ಅವಳು ಇ-ಹರಾಜು ಬಿಡ್ಡಿಂಗ್ ಪ್ಲ್ಯಾಟ್‌ಫಾರಂ ನಲ್ಲಿ ದಾಖಲೆಗಳನ್ನು ಸಲ್ಲಿಸಿ ಬಿಡ್ಡಿಂಗ್‌ಗೆ ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಬಹುದು. ತಮ್ಮ ಸೇವಾ ಪೂರೈಕೆದಾರರಿಂದ ಆತ/ಅವಳ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳುವುದು ಟೆಂಡರ್‌ದಾರರ/ಆನ್ ಲೈನ್ ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. 6. ಮೇಲೆ ಹೇಳಾದ ಆಸ್ತಿಗಳನ್ನು ಮೀಸಲು ಬೆಲೆಗಿಂತ ಕಡಿಮೆ ದರದಲ್ಲಿ ಮಾರಾಟ ಮಾಡಲಾಗುವುದಿಲ್ಲ. 7. ಆಫರ್/ಗಳನ್ನು ಮೇಲೆ ಹೇಳದಾದ ಅರ್ನೆಸ್ಟ್ ಠೇವಣಿ ಹಣದೊಂದಿಗೆ (ಇಎಂಡಿ) "ಆನ್‌ಲೈನ್" ಮೂಲಕ ಪೋರ್ಟಲ್ "www.auctionbazaar.com" ರಲ್ಲಿ ಇಎಂಡಿಯೊಂದಿಗೆ ಮತ್ತು ಕೆವೈಸಿ ದಾಖಲೆಗಳ ಸ್ಕ್ಯಾನ್ ಪ್ರತಿಯೊಂದಿಗೆ ಪ್ಯಾನ್ ಮತ್ತು (ಆಧಾರ್ ಕಾರ್ಡ್), ವಿಳಾಸದ ಪುರಾವೆಯನ್ನು ಸೇವಾ ಪೂರೈಕೆದಾರರಿಗೆ ಹರಾಜು ವಿವರಗಳಂತೆ ಈ ಮೇಲೆ ಹೇಳಲಾದ ದಿನಾಂಕ ಮತ್ತು ಸಮಯದ ಒಳಗಾಗಿ ಕಳುಹಿಸಬೇಕು.. ಪೂರಕ ಭದ್ರತಾದಾರರಿಂದ ಸ್ವೀಕೃತವಾಗಿಲ್ಲವಾದರೆ, ಅತೀ ಹೆಚ್ಚು ಬಿಡ್ ಮಾಡಿದವರ ಆಫರ್‌ಗಳನ್ನು ಅಧಿಕೃತ ಅಧಿಕಾರಿಯವರು ಸ್ವೀಕರಿಸಬೇಕೆಂದಿರುವುದಿಲ್ಲ. 9. ಪ್ರತೀ ಬಿಡ್‌ದಾರರು ಇ-ಹರಾಜಿನಲ್ಲಿ ಭಾಗವಹಿಸುವ ಮೊದಲು ಇಎಂಡಿಯನ್ನು ಪಾವತಿಸಿರಬೇಕು. ಹೇಳಲಾದ ಠೇವಣಿಯನ್ನು ಯಶಸ್ವಿ ಬಿಡ್‌ದಾರರಾದರೆ ಅವರ ಮೊತ್ತಕ್ಕೆ ಸರಿಹೊಂದಿಸಲಾಗುವುದು ಇಲ್ಲವಾದರೆ ಹಿಂತಿರುಗಿಸಲಾಗುವುದು. ಹೇಳಲಾದ ಅರ್ನೆಸ್ಟ್ ಠೇವಣಿ ಹಣಕ್ಕೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ. 10. ಆರಂಭದಲ್ಲಿ ಬಿಡ್ ಹೆಚ್ಚಳ ಮೊತ್ತ ಮೀಸಲು ಬೆಲೆಯ 10% ಆಗಿರುತ್ತದೆ ಆದಾಗ್ಯೂ ಅಧಿಕೃತ ಅಧಿಕಾರಿ ಬಿಡ್ಡಿಂಗ್ ಹೆಚ್ಚ ಮೊತ್ತವನ್ನು ಪ್ರತಿ ಆಸ್ತಿಯ ಬಿಡ್ಡಿಂಗ್ ಸಂದರ್ಭದಲ್ಲಿ ಬಿಡ್ಡಿಂಗ್ ಮೊತ್ತದ ಶೇಕಡಾವನ್ನು ಉಲ್ಲೇಖಿಸುವರು ಇಲ್ಲವಾದರೆ ನಿರ್ಧರಿಸಲಿರುವರು. 11. ಯಶಸ್ವಿ ಬಿಡ್‌ದಾರರು ಮಾರಾಟ ಬೆಲೆಯ ಶೇ 25 ರಷ್ಟು ಮೊತ್ತವನ್ನು ಈಗಾಗಲೇ ಪಾವತಿಸಿದ ಇಎಂಡಿ ಸರಿಹೊಂದಿಸಿ ಅಧಿಕೃತ ಅಧಿಕಾರಿಯವರಿಂದ ಮಾರಾಟ ಸ್ವೀಕೃತವಾದ 24 ಗಂಟೆಯ / ಮುಂದಿನ ಕೆಲಸದ ದಿನದಂದು ಮಾರಾಟಕ್ಕೆ ಸಂಬಂಧಪಟ್ಟಂತೆ ನಗದು ಅವಧಿಯ ಮುಕ್ತಾಯದ ಮೊದಲು ಕೂಡಲೇ ಪಾವತಿಸಬೇಕು ತಪ್ಪಿದಲ್ಲಿ ಅರ್ನೆಸ್ಟ್ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಬಾಕಿ ಉಳಿದ 75% ಮಾರಾಟ ಬೆಲೆಯನ್ನು ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗಾಗಿ ಅಥವಾ ಅಧಿಕೃತ ಅಧಿಕಾರಿಯವರ ನಿರ್ದೇಶನದಂತೆ ಪಾವತಿಸಬೇಕು. ಪಾವತಿಗೆ ಗರಿಷ್ಟ ಅವಧಿ 90 ದಿನಗಳಾಗಿದ್ದು, ಈ ಸಮಯದ ನಂತರ ಪಾವತಿಯ ಅವಧಿಯನ್ನು ವಿಸ್ತರಿಸಲಾಗುವುದಿಲ್ಲ. ಒಂದು ವೇಳೆ ಬಾಕಿ ಉಳಿದ ಹಣ ಪಾವತಿಸಲು ನಿಗದಿತ ಸಮಯದಲ್ಲಿ ವಿಫಲರಾದಲ್ಲಿ, ಈಗಾಗಲೇ ಪಾವತಿಸಿದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಧಿಕೃತ ಅಧಿಕಾರಿಯವರು ಯಶಸ್ವಿ ಬಿಡ್ಡುದಾರರಿಗೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಯಾವುದೇ ಸೂಚನೆಯನ್ನು ನೀಡುವುದಿಲ್ಲ. 12. ಯಶಸ್ವಿ ಬಿಡ್‌ದಾರರು ತಮ್ಮ ಹೆಸರಿಗೆ ಆಸ್ತಿಯನ್ನು ವರ್ಗಾಯಿಸುವಾಗ ಶಾಸನಬದ್ಧ ಬಾಕಿಗಳು, ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ ಅಥವಾ ಇನ್ನಿತರೆ ಯಾವುದೇ ತೆರಿಗೆಗಳು ಇದ್ದಲ್ಲಿ ಅವುಗಳನ್ನು ಪಾವತಿಸಬೇಕು. ಜೊತೆಗೆ ದರಗಳು, ವೆಚ್ಚಗಳು ಸೇರಿದಂತೆ ಆಸ್ತಿಯ ಬಗ್ಗೆ ಮಾರಾಟ ಬೆಲೆ ಹೊರತುಪಡಿಸಿ ಉಳಿದೆಲ್ಲವನ್ನೂ ಪಾವತಿಸಬೇಕು. 13. ಮಾರಾಟ ಪತ್ರವನ್ನು ಯಶಸ್ವಿ ಬಿಡ್‌ದಾರರ ಹೆಸರಿನಲಿ ಮಾತ್ರವೇ, ಸಂಪೂರ್ಣ ಮಾರಾಟ ಬೆಲೆಯನ್ನು ಪಾವತಿಸಿದ ನಂತರ ನೀಡಲಾಗುವುದು. 14. ಈ ಮೂಲಕ ಸಾಲಗಾರ/ರು, ಅಡಮಾನದಾರ/ರು ಮತ್ತು ಜಾಮೀನುದಾರರಿಗೆ ತಿಳಿಸುವುದೇನೆಂದರೆ ಅವರು ಸಹ ಆಸಕ್ತ ಖರೀದಿದಾರನ್ನು ಈ ಮೇಲೆ ಹೆಸರಿಸಿದ ಆಸ್ತಿಯ ಖರೀದಿಗೆ ಇ-ಹರಾಜು ನಿಯಮ ಮತ್ತು ನಿಬಂಧನೆಗಳ ಅನುಸಾರವಾಗಿ ಕರೆತರಬಹುದಾಗಿದೆ. 15. ಜಾಹೀರಾತಿನಲ್ಲಿ ತಿಳಿಸಿದಂತೆ ಆಸ್ತಿಯ ಪರಿವೀಕ್ಷಣೆ ಆಯಾ ದಿನಾಂಕದಂದೇ ನಡೆಯಲಿದೆ. ಆಸಕ್ತ ಬಿಡ್‌ದಾರರು ನಿರ್ದೇಶಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ, ಈ ಮೇಲೆ ತಿಳಿಸಿದ ವಿವರಗಳ ಅನುಸಾರ ಸಂಪರ್ಕಿಸಿ ಪಡೆದುಕೊಳ್ಳಬಹುದು. ಪರಿವೀಕ್ಷಣೆ ಸಂಬಂಧ ಎಲ್ಲಾ ವೆಚ್ಚಗಳನ್ನು/ ದಾಖಲೆಗಳ ಪ್ರತಿ ಇತ್ಯಾದಿಗಳನ್ನು ಬಿಡ್‌ದಾರರೇ ಭರಿಸಬೇಕು. 16 ಎಲ್.ಐ.ಸಿ. ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಯಾವುದೇ ಕಾರಣ / ಮುನ್ಸೂಚನೆ ನೀಡದೆ ಟೆಂಡರ್ ಮಾರಾಟ / ಹರಾಜನ್ನು ಮುಂದೂಡುವ/ ರದ್ದುಗೊಳಿಸುವ/ ಸ್ವೀಕರಿಸುವ/ತಿರಸ್ಕರಿಸುವ/ಬದಲಾಯಿಸುವ/ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. 17. ಮಾರಾಟವು ಪೂರಕ ಭದ್ರತಾದಾರರ ಅಂದರೆ ಎಲ್ಐಸಿ ಹೌಸಿಂಗ್ ಫೈನಾನ್ಸ್ ಲಿ., ನ ದೃಢೀಕರಣಕ್ಕೆ ಒಳಪಟ್ಟಿದೆ.

ಸ್ಥಳ: ಬೆಂಗಳೂರು
ದಿನಾಂಕ : 07.02.2025

ಅಧಿಕೃತ ಅಧಿಕಾರಿ
ಎಲ್.ಐ.ಸಿ. ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ಬೆಂಗಳೂರು

16x27cms

ನಾಟಕೋತ್ಸವದಲ್ಲಿ ಬಿ. ಜಯಶ್ರೀ ಅವರಿಗೆ ಉತ್ಸವದ ಗೌರವ ಸಮರ್ಪಿಸಲಾಯಿತು. ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾದ ಜೆಪಿಟಿ ಚಂದ್ರು, ಜಗದೀಶ್ ಜಾಲ, ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಬಿ.ವಿ.ರಾಜಾರಾಮ್,ಪ್ರೊ.ಬನ್ನಟ್ಟಿ, ರಂಗಕರ್ಮಿ ಬಿ.ಸುರೇಶ್, ನಾಗೇಶ್ ಬೆಟ್ಟಕೋಟೆ, ಅಕಾಡೆಮಿ ರಿಜಿಸ್ಟ್ರಾರ್ ನಿರ್ಮಲಾ ಮಠಪತಿ ಹಾಗೂ ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರದ ನಿರ್ದೇಶಕಿ ವೀಣಾ ಶರ್ಮ ಉಪಸ್ಥಿತರಿದ್ದರು

‘ಕಾವೇರಿ–2.0 ತಂತ್ರಾಂಶ ಸಮಸ್ಯೆ: ಸಾವಿರಾರು ಕೋಟಿ ನಷ್ಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ‘ಕಾವೇರಿ 2.0’ ತಂತ್ರಾಂಶದಲ್ಲಿ ಉಂಟಾದ ತಾಂತ್ರಿಕ ತೊಂದರೆಯ ಕಾರಣ ಕಳೆದ ಮೂರು ತಿಂಗಳಲ್ಲಿ ಸರ್ಕಾರಕ್ಕೆ ಸುಮಾರು ₹4,000ಕೋಟಿಯಿಂದ ₹5,000 ಕೋಟಿ ಆದಾಯ ನಷ್ಟವಾಗಿದೆ ಎಂದು ಬಿಜೆಪಿ ಮುಖ್ಯ ವಕ್ತಾರ ಅಶ್ವತ್ಥನಾರಾಯಣ ಗೌಡ ದೂರಿದರು.

ಅಶ್ವತ್ಥನಾರಾಯಣ ಗೌಡ

‘ಇ-ಖಾತೆ ಇಲ್ಲದೆ ನೋಂದಣಿ ಇಲ್ಲ’ ಎಂಬ ಹೊಸ ಷರತ್ತನ್ನು ವಿಧಿಸಿರುವುದರಿಂದ ನೋಂದಣಿ ಪ್ರಮಾಣ ಕುಸಿದು ಹೋಗಿದೆ. ಸಾರ್ವಜನಿಕರೂ ಸಮಸ್ಯೆಗೆ ಸಿಲುಕಿದ್ದಾರೆ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರಿನಲ್ಲಿ 1.70 ಲಕ್ಷ ಬಿಡಿಎ ನಿವೇಶನಗಳಿವೆ. ವಿವಿಧ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸೇರಿದ 60 ಸಾವಿರ ನಿವೇಶನಗಳಿವೆ. ಬಿಡಿಎ ಅನುಮೋದಿತ ಬಡಾವಣೆಗಳಲ್ಲಿ 30 ರಿಂದ 35 ಸಾವಿರ ನಿವೇಶನಗಳಿವೆ. ಉಳಿದ 17 ಲಕ್ಷ ಸ್ವತ್ತುಗಳನ್ನು ಕಾನೂನು ಬಾಹಿರ ಎಂದು ಘೋಷಿಸಲಾಗಿದೆ. ಯಾರಿಗೂ ಇ-ಖಾತಾ ಸಿಗುತ್ತಿಲ್ಲ ಎಂದರು.

ಕಂದಾಯ ಸಚಿವ ಕೃಷ್ಣಬೈರೇಗೌಡರಿಗೆ ಸಮಸ್ಯೆಯ ಸಂಪೂರ್ಣ ಅರಿವು ಇಲ್ಲ. ಬಿಬಿಎಂಪಿ ಹಿರಿಯ ಅಧಿಕಾರಿಗಳು ತಮ್ಮದೇ ಆದ ಸಲಹೆಗಳನ್ನು ನೀಡುತ್ತಿದ್ದು, ಇವರು ಹೇಳಿದ್ದನ್ನೇ ಸಚಿವರು ತುತ್ತೂರಿ ಊದುತ್ತಿದ್ದಾರೆ ಎಂದು ಅವರು ಹೇಳಿದರು.

ಋಣಭಾರ ಪ್ರಮಾಣಪತ್ರದ (ಇಸಿ) ಪ್ರಮಾಣೀಕೃತ ಪ್ರತಿಗಳು ಸಿಗುತ್ತಿಲ್ಲ. ಇ.ಸಿ ಕೇಳಿದರೆ ಸರ್ವರ್ ಡೌನ್ ಎಂಬ ಉತ್ತರ ಬರುತ್ತದೆ. ಅಲ್ಲದೇ, ಇ-ಖಾತಾ ಹೆಸರಿನಲ್ಲಿ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಯಾವುದೇ ಕೆಲಸಗಳು ಆಗುತ್ತಿಲ್ಲ. ಸಾಮಾನ್ಯ ಜನರು, ಬಡವರು ಕಷ್ಟಕಾಲದಲ್ಲಿ ಆಸ್ತಿ ಮಾರಾಟ ಮಾಡಲು ಅಥವಾ ಕೊಳ್ಳಲಾಗದೆ, ಬ್ಯಾಂಕಿನಲ್ಲಿ ಅಡಮಾನ ಮಾಡಿ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದರು.

‘500 ಆಸನಗಳ ಸುಸಜ್ಜಿತ ರಂಗಮಂದಿರ ನಿರ್ಮಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಲ್ಲತ್ತಹಳ್ಳಿಯ ಕಲಾ ಗ್ರಾಮದಲ್ಲಿ 500 ಆಸನಗಳ ಸುಸಜ್ಜಿತ ರಂಗಮಂದಿರ ನಿರ್ಮಿಸಿ, ರಂಗ ಚಟುವಟಿಕೆ ಗಳನ್ನು ಪ್ರೋತ್ಸಾಹಿಸಬೇಕು’ ಎಂದು ರಂಗಕರ್ಮಿ ಬಿ. ಜಯಶ್ರೀ ಅವರು ಸರ್ಕಾರಕ್ಕೆ ಮನವಿ ಮಾಡಿದರು.

ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯ, ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ನಾಟಕ ಶಾಲೆ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಜಂಟಿಯಾಗಿ ಹಮ್ಮಿಕೊಂಡಿರುವ ‘ಭಾರತ ರಂಗ ಮಹೋತ್ಸವ’ ಅಂತರ ರಾಷ್ಟ್ರೀಯ ನಾಟಕೋತ್ಸವದಲ್ಲಿ ಉತ್ಸವ ಗೌರವ ಸ್ವೀಕರಿಸಿ, ಮಾತನಾಡಿದರು.

‘ರಾಷ್ಟ್ರೀಯ ರಂಗಭೂಮಿಗೆ ಸಮಾನವಾಗಿ ಕನ್ನಡ ರಂಗಭೂಮಿ ಬೆಳೆದಿದೆ. ಆದ್ದರಿಂದ ಕಲಾಗ್ರಾಮದಲ್ಲಿ ಕೇವಲ 250 ಆಸನಗಳ ಸಭಾಂಗಣವು ರಂಗ ಪ್ರದರ್ಶನಗಳಿಗೆ ಸಾಕಾಗುವುದಿಲ್ಲ. ಇಲ್ಲಿ ಹೆಚ್ಚು ಸ್ಥಳಾವಕಾಶ ಇರುವುದರಿಂದ ಸುಸಜ್ಜಿತ ರಂಗಮಂದಿರವನ್ನು ಸರ್ಕಾರ ನಿರ್ಮಿಸಬೇಕು’ ಎಂದು ಹೇಳಿದರು.

‘ಭಾರತ ರಂಗ ಮಹೋತ್ಸವದಂತಹ ಉತ್ಸವದಿಂದ ಭಾವೈಕ್ಯ ಸಾಧ್ಯ. ಸರ್ಕಾರ ಇಂತಹ ಉತ್ಸವಗಳನ್ನು ಹೆಚ್ಚು ಆಯೋಜಿಸಬೇಕು. ರಂಗ ಪರಿಷೆಯನ್ನು ಪ್ರತಿ ವರ್ಷ 15 ದಿನಗಳು ನಡೆಸಬೇಕು. ಇಲ್ಲಿನ ರಂಗಭೂಮಿ ವೈವಿಧ್ಯಮಯ ಪ್ರಯೋಗಗಳಿಗೆ ತೆರೆದುಕೊಂಡಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸುವರ್ಣ ಮಹೋತ್ಸವ ಗೌರವ ಸ್ವೀಕರಿಸಿದ ಕಲಾಗಂಗೋತ್ರಿ ತಂಡದ ಮುಖ್ಯಸ್ಥ ಬಿ.ವಿ. ರಾಜಾರಾಮ್, ‘ನಾಟಕ ಅಕಾಡೆಮಿಯು ರಂಗ ತಂಡಗಳನ್ನು ಗುರುತಿಸಿ ಅಭಿನಂದಿಸುತ್ತಿರುವುದು ಸ್ತುತ್ಯರ್ಹ. ಈ ಮೂಲಕ ಇಡೀ ರಂಗಭೂಮಿ ಒಗ್ಗಟ್ಟಾಗಿದೆ ಎಂಬ ಸಂದೇಶ ಸಾರಿದಂತಾಗಿದೆ’ ಎಂದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ‘ರಂಗಭೂಮಿಯಲ್ಲಿ 50 ವರ್ಷಗಳು ಪೂರೈಸಿದ ಬೆಂಗಳೂರಿನ ರಂಗ ತಂಡಗಳನ್ನು ಈ ವರ್ಷ ಅಭಿನಂದಿಸಿದ್ದೇವೆ. ಮುಂದಿನ ವರ್ಷದಿಂದ ಈ ಉತ್ಸವದಲ್ಲಿ ಜಿಲ್ಲೆಗಳಲ್ಲಿನ ರಂಗ ತಂಡಗಳನ್ನು ಗೌರವಿಸಲಾಗುವುದು. ಕರ್ನಾಟಕ ಜಾನಪದ ಅಕಾಡೆಮಿ, ಸಂಗೀತ ನೃತ್ಯ ಅಕಾಡೆಮಿಯೂ ಈ ಉತ್ಸವಕ್ಕೆ ಸಹಯೋಗ ನೀಡಿದಲ್ಲಿ ಸಾಂಸ್ಕೃತಿಕ ಜಗತ್ತನ್ನೇ ಕಲಾ ಗ್ರಾಮದಲ್ಲಿ ಅನಾವರಣ ಮಾಡಲು ಸಾಧ್ಯ. ಕಲಾಗ್ರಾಮವು ಸ್ಮಶಾನವಾಗದೆ, ಸಾಂಸ್ಕೃತಿಕ ಚಟುವಟಿಕೆಗಳ ತಾಣವಾಗಬೇಕು’ ಎಂದು ಹೇಳಿದರು.

ಬಳಿಕ ಹೈದರಾಬಾದ್‌ನ ನಿಭಾ ಥಿಯೇಟರ್ ಎನ್ಸೇಂಬಲ್ ತಂಡ ಪ್ರಸ್ತುತಪಡಿಸಿದ ‘ಪಾಕುಡುರಾಲ್ಲು’ ತೆಲುಗು ನಾಟಕ ಪ್ರದರ್ಶನವಾಯಿತು. ಇದನ್ನು ನಾಜರಿನ್ ಇಷಾಕ್ ನಿರ್ದೇಶಿಸಿದ್ದರು.

ಬಿಡಿಎ ಕಾರ್ಯದರ್ಶಿ ಶಾಂತರಾಜು ಹೇಳಿಕೆ

‘ಎನ್‌ಕೆಪಿಎಲ್‌ಗೆ ಸೌಲಭ್ಯ: ಶೀಘ್ರ ಉತ್ತರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಗೆ (ಎನ್‌ಕೆಪಿಎಲ್) ಮೂಲ ಸೌಕರ್ಯ ಒದಗಿಸಿರುವ ಕುರಿತು ವಾರದೊಳಗೆ ಉತ್ತರ ನೀಡಲಾಗುವುದು ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕಾರ್ಯದರ್ಶಿ ಶಾಂತರಾಜು ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಲೇಔಟ್(ಎನ್‌ಕೆಪಿಎಲ್)ಗೆ ಮೂಲ ಸೌಕರ್ಯ ಒದಗಿಸಿರುವ ಕುರಿತು ವಿಧಾನಸಭೆ ಅರ್ಜಿ ಸಮಿತಿಯು ಗುರುವಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ದ ಅಧಿಕಾರಿಗಳ ಸಭೆ ನಡೆಸಿತು

ವಿಧಾನಸಭೆಯ ಅರ್ಜಿ ಸಮಿತಿ ಗುರುವಾರ ನಡೆದ ಸಭೆಯಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಒದಗಿಸುವ ಕಾಮಗಾರಿಗಳ ಪ್ರಗತಿಯ ಕುರಿತು ಕೇಳಿದ ಪ್ರಶ್ನೆಗಳಿಗೆ ಬಿಡಿಎ ಅಧಿಕಾರಿಗಳು ಸ್ಪಷ್ಟ ಉತ್ತರ ನೀಡಲಿಲ್ಲ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರಿಂದ ಆಯುಕ್ತ ಎನ್. ಜಯರಾಮ್ ಅವರು ಅರ್ಜಿ ಸಮಿತಿ ಸಭೆಗೆ ಹಾಜರಾಗಲಿಲ್ಲ.

ಸಮಿತಿ ಅಧ್ಯಕ್ಷ ರುದ್ರಪ್ಪ ಲಮಾಣಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ‘2024ರ ನವೆಂಬರ್‌ನೊಳಗೆ ಬಡಾವಣೆಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದಾಗಿ ನೀಡಿದ್ದ ಭರವಸೆ ಈಡೇರಿಸುವಲ್ಲಿ ಬಿಡಿಎ ವಿಫಲವಾಗಿದೆ. ಒಂಬತ್ತು ಬ್ಲಾಕ್‌ಗಳ ಪೈಕಿ ಒಂದರಲ್ಲಿ ಮಾತ್ರ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗಿದೆ. ಮನೆ ನಿರ್ಮಿಸಿಕೊಂಡಿರುವವರಿಗೆ ವಿದ್ಯುತ್ ಮತ್ತು ನೀರಿನ ಸಂಪರ್ಕವನ್ನು ಏಕೆ ಒದಗಿಸಿಲ್ಲ’ ಎಂದು ಕಾರ್ಯದರ್ಶಿಯವರನ್ನು ಪ್ರಶ್ನಿಸಲಾಯಿತು.

ಬಿಡಿಎ ಆಯುಕ್ತರು ಸಭೆಗೆ ಹಾಜರಾಗುವ ಕುರಿತು ಸ್ಪಷ್ಟ ಮಾಹಿತಿ ಇಲ್ಲದ ಕಾರಣ, ನಿರ್ದಿಷ್ಟ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವಂತೆ ಶಾಂತರಾಜು ಅವರಿಗೆ ಸಮಿತಿ ಪತ್ರವನ್ನು ನೀಡಿತು. ಇದಕ್ಕೆ ಪ್ರತಿಕ್ರಿಯಿಸಿದ ಶಾಂತರಾಜು, ‘ಒಂದು ವಾರದೊಳಗೆ ಉತ್ತರಗಳನ್ನು ನೀಡುವುದಾಗಿ’ ಭರವಸೆ ನೀಡಿದರು.

ಕೆಲವು ಬ್ಲಾಕ್‌ಗಳಲ್ಲಿ ರಸ್ತೆಗಳ ಡಾಂಬರೀಕರಣಕ್ಕೆ ಬಿಡಿಎ ನಡೆಸಿದ ಇತ್ತೀಚಿನ ಟೆಂಡರ್ ಪ್ರಕ್ರಿಯೆಯಲ್ಲಿ ಗುತ್ತಿಗೆದಾರರಿಗೆ 24 ತಿಂಗಳ ಕಾಲಾವಕಾಶ ನೀಡಲಾಗಿದೆ ಎಂಬುದನ್ನು ಶಾಸಕ ಸುರೇಶ್ ಕುಮಾರ್ ಉಲ್ಲೇಖಿಸಿದರು. 2024ರ ನವೆಂಬರ್‌ಗೆ ಅಂತಿಮ ಗಡುವು ಮುಗಿದಿದ್ದರೂ ಗಣನೀಯ ಪ್ರಮಾಣದ ಕೆಲಸಗಳು ಬಾಕಿ ಉಳಿದಿರುವುದನ್ನು ಸಮಿತಿ ಸದಸ್ಯರು ಕಾರ್ಯದರ್ಶಿ ಗಮನಕ್ಕೆ ತಂದರು. ಫೆಬ್ರವರಿ 20ರಂದು ಈ ವಿಷಯವನ್ನು ಮತ್ತೆ ಚರ್ಚೆಗೆ ತರಲು ನಿರ್ಧರಿಸಲಾಯಿತು.

ಶಾಸಕರಾದ ಎಸ್. ಸುರೇಶ್ ಕುಮಾರ್, ಎಸ್. ಟಿ. ಸೋಮಶೇಖರ್, ಯು.ಬಿ. ಬಣಕಾರ್, ಸಿ.ಎನ್. ಬಾಲಕೃಷ್ಣ, ಮಂತರ್ ಗೌಡ, ಅವಿನಾಶ್ ಉಮೇಶ ಜಾಧವ್ ಮತ್ತು ಎಚ್.ಡಿ.ತಮ್ಮಯ್ಯ ಸಭೆಯಲ್ಲಿ ಭಾಗವಹಿಸಿದ್ದರು.

‘ಮೂಲ ಸೌಲಭ್ಯಗಳನ್ನು ಒದಗಿಸುವುದಾಗಿ ಬಿಡಿಎ ನೀಡಿದ ಭರವಸೆ ಈಡೇರಿಲ್ಲ. ಒಳಚರಂಡಿ ಕಾಮಗಾರಿಗಾಗಿ ರಸ್ತೆ ಅಗೆಯುವ ಶುಲ್ಕವಾಗಿ ಸುಮಾರು ₹31 ಸಾವಿರ ಸಂಗ್ರಹಿಸುತ್ತಿದೆ. ಮೂಲ ಸೌಕರ್ಯ ಇಲ್ಲದ ಕಾರಣ ನಿವೇಶನ ಮಾಲೀಕರು ಮನೆಗಳನ್ನು ನಿರ್ಮಿಸಲು ಮುಂದಾಗುತ್ತಿಲ್ಲ. ನಿವೇಶನ ಹಂಚಿಕೆಯಾಗಿ ಒಂಬತ್ತು ವರ್ಷ ಕಳೆದರೂ ಮೂಲ ಸೌಕರ್ಯ ಮರೀಚಿಕೆಯಾಗಿದೆ’ ಎಂದು ಎನ್‌ಪಿಕೆಎಲ್ ಮುಕ್ತ ವೇದಿಕೆ ಅಧ್ಯಕ್ಷ ಚನ್ನಬಸವರಾಜು ದೂರಿದರು.

ನಗರದಲ್ಲಿ ಇಂದು

ರಾಜಗೋಪುರ ಕುಂಭಾಭಿಷೇಕ, ಲೋಕಾರ್ಪಣೆ ಮಹೋತ್ಸವ: ಸಾನ್ನಿಧ್ಯ: ಸಚ್ಚಿದಾನಂದ ಭಾರತಿ ಶ್ರೀಪಾದ, ವಿಶ್ವಭೂಷಣ ತೀರ್ಥ ಸ್ವಾಮೀಜಿ, ವಿದ್ಯಾಪ್ರಸನ್ನತೀರ್ಥ ಶ್ರೀಪಾದ, ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಬೃಹತ್ ಮುಕ್ತಿನಾಗ ದೇವಾಲಯ, ದೊಡ್ಡ ಆಲಮರದ ರಸ್ತೆ, ರಾಮೋಹಳ್ಳಿ, ಬೆಳಿಗ್ಗೆ 8.10ರಿಂದ

ಗವಿಗಂಗಾಧರೇಶ್ವರ ಬ್ರಹ್ಮರಥೋತ್ಸವ: ಬೆಳಿಗ್ಗೆ 10.30ಕ್ಕೆ ಅಭಿಷೇಕ, ಕಲಶ ಸ್ಥಾಪನೆ, ಸಂಜೆ 6.30ಕ್ಕೆ ಭೂತ ವಾಹನೋತ್ಸವ, ಆಯೋಜನೆ ಮತ್ತು ಸ್ಥಳ: ಗವಿಗಂಗಾಧರೇಶ್ವರ ದೇವಸ್ಥಾನ, ಗವಿಪುರ, ಗುಟ್ಟಹಳ್ಳಿ, ಹನುಮಂತನಗರ

ಎನ್‌ಎಚ್‌ಆರ್‌ಡಿ ನ್ಯಾಷನಲ್ ಕಾನ್ಫರೆನ್ಸ್–2025, 13ನೇ ಎಚ್‌ಆರ್ ಶೋಕೇಸ್: ಆಯೋಜನೆ: ಎನ್‌ಎಚ್‌ಆರ್‌ಡಿ ಬೆಂಗಳೂರು ಚಾಪ್ಟರ್, ಸ್ಥಳ: ದಿ ಲಲಿತ್ ಅಶೋಕ್ ಬೆಂಗಳೂರು, ಬೆಳಿಗ್ಗೆ 9ರಿಂದ

ದೊಡ್ಡರಂಗೇಗೌಡರ ಜನ್ಮದಿನಾಚರಣೆ, ‘ನಿಲುವು’ ಕಿರುಚಿತ್ರ ಪ್ರಕಟಣಾ ಪ್ರತಿ ಬಿಡುಗಡೆ: ಟಿ.ಎಸ್. ನಾಗಾಭರಣ, ಉಪಸ್ಥಿತಿ: ದೊಡ್ಡರಂಗೇಗೌಡ, ಅಧ್ಯಕ್ಷತೆ: ಮನು ಬಳಿಗಾರ್, ಪ್ರಾಸ್ತಾವಿಕ ನುಡಿ: ಉಪೇಂದ್ರ ಕುಮಾರ್ ಎಂ.ಆರ್., ಅತಿಥಿಗಳು: ಬೈರಮಂಗಲ ರಾಮೇಗೌಡ, ವ.ಚ. ಚನ್ನೇಗೌಡ, ಬಿ.ಆರ್. ಹಿರೇಮಠ, ವೆ. ಅಜಿತ್‌ಕುಮಾರ್, ಆಯೋಜನೆ: ಸಮನ್ವಯ ಸಾಹಿತಿ ಡಾ. ದೊಡ್ಡರಂಗೇಗೌಡರ ಅಭಿಮಾನಿಗಳ ಬಳಗ, ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎರಡನೇ ಮುಖ್ಯರಸ್ತೆ, ಎನ್.ಆರ್. ಕಾಲೊನಿ, ಸಂಜೆ 4ರಿಂದ



ದೊಡ್ಡರಂಗೇಗೌಡ

ಭಾರತ ರಂಗ ಮಹೋತ್ಸವ ಅಂತರರಾಷ್ಟ್ರೀಯ ನಾಟಕೋತ್ಸವ: ಉತ್ಸವದ ಗೌರವ: ಟಿ.ಎನ್. ಸೀತಾರಾಂ, ‘ಯಯಾತಿ’ ನಾಟಕದ ಪ್ರಸ್ತುತಿ: ಬಾಗ್‌ಬಾನ್ ಥಿಯೇಟರ್ ಗ್ರೂಪ್ ಮಹಾರಾಷ್ಟ್ರ, ಭಾಷೆ: ಹಿಂದಿ, ನಿರ್ದೇಶನ: ಅಸ್ಲಂ ಯೂನುಸ್ ಶೇಖ್, ಸ್ಥಳ: ಕಲಾ ಗ್ರಾಮ ಮಲ್ಲತ್ತಹಳ್ಳಿ, ಸಂಜೆ 5ರಿಂದ

‘ಸಾಹಿತ್ಯ ಸಹವಾಸ’ ಪುಸ್ತಕ ಬಿಡುಗಡೆ: ನರಹಳ್ಳಿ ಬಾಲಸುಬ್ರಹ್ಮಣ್ಯ, ಅಧ್ಯಕ್ಷತೆ: ಶರತ್ ಅನಂತಮೂರ್ತಿ, ಉಪಸ್ಥಿತಿ: ಎಸ್ತರ್ ಅನಂತಮೂರ್ತಿ, ಸುಧೀಶ್ ವೆಂಕಟೇಶ್, ಚಂದನ್‌ಗೌಡ, ಪುಸ್ತಕ ಪರಿಚಯ–ಸಂವಾದ: ಗೀತಾ ವಸಂತ್, ಎನ್.ಎ.ಎಂ. ಇಸ್ಮಾಯಿಲ್, ಸಿ.ಎಸ್. ಮಹೇಶ್ ಕುಮಾರ್, ಆಯೋಜನೆ: ಸಂಸ್ಕೃತಿ ಸಂಭ್ರಮ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 6ರಿಂದ

ಸೇಂಟ್ ಮಾರ್ಕ್ ಕಲೋತ್ಸವ: ಅತಿಥಿಗಳು: ಎಸ್. ಮುನಿರಾಜು, ಮಿಮಿಕ್ರಿ ಗೋಪಿ, ಲಕ್ಷ್ಮೀ ಭಟ್, ವೆಂಕಟೇಶ್‌ಗೌಡ ಬಿ.ಎಂ., ಸತ್ಯಮಂಗಲ ಮಹಾದೇವ, ವೈ.ಬಿ.ಎಚ್. ಜೈದೇವ್, ಲಿಂಗರಾಜು ಎ., ಆಯೋಜನೆ: ಸೇಂಟ್ ಮಾರ್ಕ್ಸ್ ಇಂಗ್ಲಿಷ್ ಶಾಲೆ, ಸ್ಥಳ: ಸಾಯಿ ಕಲ್ಯಾಣ ಮಂಟಪ, ಹೆಸರಘಟ್ಟ ಮುಖ್ಯರಸ್ತೆ, ಟಿ. ದಾಸರಹಳ್ಳಿ, ಸಂಜೆ 5

‘ಡಾ.ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿ’ ಪ್ರದಾನ: ಕೆ. ಮರುಳಸಿದ್ದಪ್ಪ, ಬಸವರಾಜ ಕಲ್ಗುಡಿ, ಪ್ರಶಸ್ತಿ ಸ್ವೀಕರಿಸುವವರು: ಮೀನಾಕ್ಷಿ ಬಾಳಿ, ಎಸ್.ಜಿ. ಸಿದ್ಧರಾಮಯ್ಯ, ಪ್ರಾಸ್ತಾವಿಕ ನುಡಿ: ದಂಡಪ್ಪ, ಅಭಿನಂದನಾ ಭಾಷಣ: ನೀಲಾ ಕೆ., ಕೆ.ವೈ. ನಾರಾಯಣಸ್ವಾಮಿ, ಆಯೋಜನೆ: ಡಾ.ಜಿಎಸ್ಎಸ್ ವಿಶ್ವಸ್ಥ ಮಂಡಲಿ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4.30ರಿಂದ

ಜಿ.ಎಸ್. ಶಿವರುದ್ರಪ್ಪ

60ನೇ ನಾದಜ್ಯೋತಿ ಸಂಗೀತ ಸಂಭ್ರಮ–2025: ಗಾಯನ: ಎನ್. ಶಾಂತಗೋಪಾಲನ್, ಪಿಟೀಲು: ನಿಶಾಂತ್ ಚಂದ್ರನ್, ಮೃದಂಗ: ಅರ್ಜುನ್ ಕುಮಾರ್, ಘಟ: ರಂಗನಾಥ ಚಕ್ರವರ್ತಿ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್, ಮಲ್ಲೇಶ್ವರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಸಿನಿಮಾ ಪುರವಣಿ

ಕಿಶೋರ್

‘ದೊಡ್ಡ ಯಶಸ್ಸು ಬಹಳ ಅಪಾಯಕಾರಿ’

ನಟ ಕಿಶೋರ್ ಅಭಿನಯದ ‘ಅನಾಮಧೇಯ ಅಶೋಕ್ ಕುಮಾರ್’ ಸಿನಿಮಾ ಇಂದು(ಫೆ.7) ತೆರೆಕಾಣುತ್ತಿದೆ. ಈ ಸಂದರ್ಭದಲ್ಲಿ ಸಿನಿಮಾ ಕ್ಷೇತ್ರದಲ್ಲಿನ ಬೆಳವಣಿಗೆಗಳು, ಹೊಸ ಸಿನಿಮಾ ಹಾಗೂ ಅವರ ಮುಂದಿನ ಯೋಜನೆಗಳ ಬಗ್ಗೆ ಅವರೊಂದಿಗೆ ಮಾತುಕತೆ.

ಅಭಿಲಾಷ್ ಪಿ.ಎಸ್.

• ಭಿನ್ನವಾದ ಸಿನಿಮಾಗಳು ಚಿತ್ರಮಂದಿರಗಳಲ್ಲಿ ಉಳಿಯುತ್ತಿಲ್ಲ. ಪ್ರೇಕ್ಷಕರ ಬದಲಾದ ಮನಃಸ್ಥಿತಿಯ ಬಗ್ಗೆ...

ಬದಲಾದ ಮನಃಸ್ಥಿತಿಗೆ ಹಲವು ಕಾರಣಗಳಿವೆ. ಒಂದು ಸಿನಿಮಾದವರು. ಆಗಿನ ಸಿನಿಮಾಗಳ ರೀತಿ ಈಗಿನ ಸಿನಿಮಾಗಳಿಲ್ಲ. ಹಾಗೆಯೇ ಆಗಿನ ಜನರ ರೀತಿ ಈಗಿನ ಜನರೂ ಇಲ್ಲ. ಪ್ರೇಕ್ಷಕ, ಆತನೂ ಒಬ್ಬ ಮನುಷ್ಯ. ಆಧುನೀಕರಣ, ತಂತ್ರಜ್ಞಾನದ ಅಭಿವೃದ್ಧಿ ಆತನ ಮೇಲೂ ಪರಿಣಾಮ ಬೀರಿದೆ. ಬದಲಾದ ಸಾಮಾಜಿಕ, ರಾಜಕೀಯ ಪರಿಸ್ಥಿತಿಯನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಬಂಡವಾಳಶಾಹಿಯ ಪರಿಣಾಮದಿಂದಾಗಿ ಮನುಷ್ಯನ ಮೂಲ ಸೌಲಭ್ಯಗಳ ಪರಿಕಲ್ಪನೆಯೂ ಬದಲಾಗಿವೆ. ಜೀವನದ ಕಲ್ಪನೆ, ಜೀವನದ ಮೌಲ್ಯಗಳ ಕಲ್ಪನೆ ಬದಲಾಗಿದೆ. ಹೀಗಿರುವಾಗ ಆತನ ಕಲೆಯ, ಕಲಾಭಿವ್ಯಕ್ತಿಯ ಬಗೆಗಿನ ಕಲ್ಪನೆ, ಕಲಾಭಿರುಚಿ ಬದಲಾಗುತ್ತದೆ. ಹಿಂದಿನ ಕಲಾಭಿರುಚಿ ಈಗಿನ ಜನರಿಗೆ ಇಲ್ಲ. ಹಣ ಎಂಬುವುದು ಜನರ ಜೀವನದ ನಿರ್ಧಾರವನ್ನು ತೆಗೆದುಕೊಳ್ಳುತ್ತಿದೆ. ಅವನ ಕಲ್ಪನೆಯ ಸೌಲಭ್ಯಗಳು ಹಣದಿಂದ ಸಿಗುತ್ತಿರುವಾಗ, ಕಲಾಭಿರುಚಿಯ ಅಭಿಪ್ರಾಯವೂ ಬದಲಾಗಿದೆ. ಕಲೆ ಎಂದರೆ ಮನರಂಜನೆ ಎಂದಷ್ಟೇ ಆಗಿದೆ. ಮನುಷ್ಯ ಒತ್ತಡದ ಪರಿಸ್ಥಿತಿಯಲ್ಲಿ ಜೀವನ ಸಾಗಿಸುತ್ತಿರುವುದರಿಂದ ಅವನಿಗೆ ಮನರಂಜನೆ ಸಿಕ್ಕರಷ್ಟೇ ಸಾಕಾಗಿದೆ. ಅವನನ್ನು ಪ್ರಶ್ನಿಸುವ, ಚಿಂತನೆಗೆ ಹಚ್ಚುವಂತಹ ಸಿನಿಮಾಗಳು ಬೇಡವಾಗಿದೆ. ‘ಸಿನಿಮಾಗೆ ಯಾಕೆ ಬರ್ತೀವಿ, ವಾರಪೂರ್ತಿ ದುಡಿದಿರುತ್ತೇವೆ ನಮಗೆ ಮನರಂಜನೆ ಸಿಕ್ಕಿದರೆ ಸಾಕಪ್ಪ’ ಎನ್ನುವಷ್ಟರ ಮಟ್ಟಿಗೆ ಕಲಾಭಿವ್ಯಕ್ತಿಯ ಬೆಲೆ ಇಳಿದಿದೆ. ಇವತ್ತು ಸಿನಿಮಾ ಮಾತ್ರವಲ್ಲ, ಜನಪದ ಕಲಾವಿದರಿಗೆ, ನೃತ್ಯಪಟುಗಳಿಗೆ, ಚಿತ್ರಕಲೆಗೂ ಬೆಲೆ ಇಲ್ಲದಂತಾಗಿದೆ. ಸಿನಿಮಾ ಉಳಿದರೆ ಜನರ ದನಿ ಉಳಿದುಕೊಳ್ಳುತ್ತದೆ, ಪ್ರಜಾಪ್ರಭುತ್ವ ಉಳಿದುಕೊಳ್ಳುತ್ತದೆ.

• ಸಿನಿಮಾ ಅಭಿರುಚಿ ಬದಲಾಗಿದೆಯೇ...?

ಸಿನಿಮಾ ಎನ್ನುವುದು ಕೇವಲ ಮನರಂಜನೆಯ ಸಾಧನವಲ್ಲ. ಅದು ಚಿಂತನೆಗೆ ದೂಡುವ, ಮನುಷ್ಯ ಮನುಷ್ಯನ ನಡುವೆ ಸಂವಾದ ಏರ್ಪಡಿಸುವ, ಸಮಾಜ ಜಾಗೃತಿಯ ಸಾಧನ. ಎಳೆದ ತಕ್ಷಣ ಕಿಕ್ ಕೊಡುವ ಸಿಗರೇಟ್ ಮಾತ್ರವೇ ಜಾಸ್ತಿ ವ್ಯಾಪಾರ ಆಗುವುದು. ಸಿನಿಮಾಗೂ ಇದೇ ಸ್ಥಿತಿ ಬಂದಿದೆ. ಸಮಾಜವೇ ಆ ಮಟ್ಟಿಗೆ ತಂದಿಟ್ಟುಬಿಟ್ಟಿದೆ. ಬಂಡವಾಳಶಾಹಿ ವ್ಯವಸ್ಥೆ ಹಾಗೂ ಕೊಳ್ಳುಬಾಕ ಸಂಸ್ಕೃತಿಯೇ ಇದರ ಪ್ರಮುಖ ಅಪರಾಧಿಗಳು. ಈ ಹಿಂದೆ ಸಿನಿಮಾ ಮೇಲೆ ಆಸಕ್ತಿ, ಪ್ರೀತಿ ಇದ್ದವರು ನಷ್ಟವಾದರೂ ಸರಿ ಎನ್ನುತ್ತಾ ವಿತರಣೆ, ಪ್ರದರ್ಶನವನ್ನು ಮಾಡುತ್ತಿದ್ದರು. ಇಂತಹವರು ಈಗ ಕಡಿಮೆಯಾಗಿದ್ದಾರೆ. ‘ಫೋಟೋ’ ಎಂಬ ಸಿನಿಮಾಗೆ ಪ್ರಕಾಶ್ ರಾಜ್ ಬೆನ್ನೆಲುಬಾಗಿ ನಿಂತರು. ಚಿತ್ರಮಂದಿರಗಳಲ್ಲಿ ಕನ್ನಡ ಸಿನಿಮಾ ಬಿಡುಗಡೆ ಬಳಿಕ ಅದನ್ನು ಪೋಷಿಸುವುದು ವಿತರಕರು, ಪ್ರದರ್ಶಕರ ಕೆಲಸ, ಜವಾಬ್ದಾರಿ ಅಲ್ಲವೇ?.

• ‘ಅನಾಮಧೇಯ ಅಶೋಕ್ ಕುಮಾರ್’ನಲ್ಲಿ ನಿಮ್ಮ ಪಾತ್ರವೇನು?

ಈ ಸಿನಿಮಾ ಮೂಲಕ ಒಂದು ಹೊಸ ತಂಡದ ಜೊತೆ ಕೆಲಸ ಮಾಡಿರುವ ಖುಷಿ ಇದೆ. ಪತ್ರಕರ್ತನ ಪಾತ್ರವನ್ನು ನಾನಿಲ್ಲಿ ಮಾಡಿದ್ದೇನೆ. ಕಥೆ ಬಹಳ ಕುತೂಹಲಕಾರಿಯಾಗಿದೆ. ಸರ್ಕಲ್ ಇನ್‌ಸ್ಪೆಕ್ಟರ್ ಹಾಗೂ ಪತ್ರಕರ್ತನ ನಡುವೆ ನಡೆಯುವ ವಾದ ಚಿತ್ರದ ಕಥಾಹಂದರ. ಇದು ಯಾರ ಕಥೆಯೂ ಆಗಿರಬಹುದು. ಎಲ್ಲರಿಗೂ ಇದು ಕನೆಕ್ಟ್ ಆಗಲಿದೆ. ಬಹಳ ಚೆನ್ನಾಗಿ ಇದಕ್ಕೆ ಕಮರ್ಷಿಯಲ್ ರೂಪ ನೀಡಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾಗಳನ್ನು ನಾವು ಬಹಳ ಪರಿಣಾಮಕಾರಿಯಾಗಿ ಮಾಡಿದರೂ ಸೋಲುತ್ತಿದ್ದೇವೆ. ಮಲಯಾಳದಲ್ಲಿ ಈ ಜಾನರ್ ಗೆಲ್ಲುತ್ತಿದೆ. ಏಕೆಂದರೆ ಅಲ್ಲಿ ಬರಹಗಾರರಿಗೆ ಬಹಳ ಪ್ರಾಮುಖ್ಯತೆ ನೀಡುತ್ತಾರೆ. ಬರಹಗಾರರು ಬರಹಗಾರರಾಗಿಯೇ ಉಳಿದುಕೊಳ್ಳುತ್ತಿದ್ದಾರೆ ಎಂದರೆ ಅವರಿಗೆ ಒಳ್ಳೆಯ ಬೆಲೆ ಸಿಗುತ್ತಿದೆ ಎಂದರ್ಥ. ಸಾಹಿತ್ಯವನ್ನು ಸಿನಿಮಾ ಭಾಗವಾಗಿಯೇ ಇಟ್ಟುಕೊಂಡು, ಉಳಿಸಿಕೊಂಡು ಬಂದಿದ್ದಾರೆ. ಹೀಗಾಗಿಯೇ ಸರಳವಾದ ಕಥೆ ತೆಗೆದುಕೊಂಡರೂ ಬರವಣಿಗೆಯಲ್ಲಿ ಅದನ್ನು ಗಟ್ಟಿಗೊಳಿಸುತ್ತಾರೆ. ಆ ಜಗತ್ತಿನೊಳಗೆ ಕರೆದುಕೊಂಡು ಹೋಗುವ ಸಾಮರ್ಥ್ಯ ಅವರ ಬರವಣಿಗೆಗೆ ಇದೆ. ನಮ್ಮಲ್ಲಿ ಈ ನಿಟ್ಟಿನಲ್ಲಿ ಹೆಜ್ಜೆ ಇಡಬೇಕಾಗಿದೆ. ಉತ್ತಮವಾದ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾ ಮಾಡಿದರೂ ಅದನ್ನು ತಲುಪಿಸುವಲ್ಲಿಯೂ ನಾವು ಸೋಲುತ್ತಿದ್ದೇವೆ.

• ಸಿನಿಮಾ ನಿರ್ಮಾಣ ಎನ್ನುವುದು ದಾರಿ ತಪ್ಪುತ್ತಿದೆಯೇ?

‘ಕಾಂತಾರ’, ‘ಕೆಜಿಎಫ್’ ಗೆದ್ದಿತು ಎಂದಾಕ್ಷಣ ಕನ್ನಡ ಸಿನಿಮಾ ಎಲ್ಲಿಗೋ ಹೋಯಿತು ಎಂದೇನಿಲ್ಲ. ಕನ್ನಡ ಸಿನಿಮಾ ಎಲ್ಲಿಗೂ ಹೋಗಿಲ್ಲ. ಇನ್ನೂ ಕುಸಿಯುತ್ತಿದ್ದೇವೆ. ದೊಡ್ಡ ಉದಾಹರಣೆ ಮಾಡಿಟ್ಟು ಎಲ್ಲರೂ ಆ ಮಟ್ಟವನ್ನೇ ತಲುಪುತ್ತೇವೆ ಎಂದು ಹೋದರೆ ನಾವು ಎಲ್ಲಿಗೂ ತಲುಪುತ್ತಿಲ್ಲ. ಹಿಂದೆ ಹಿಟ್ ಆದ ಹತ್ತು ಸಿನಿಮಾಗಳ ಹೆಸರನ್ನಾದರೂ ಹೇಳಬಹುದುದಿತ್ತು. ಈಗ ಇವೆರಡನ್ನು ಬಿಟ್ಟರೆ ಹೇಳಿಕೊಳ್ಳಲು ಬೇರೆ ಸಿನಿಮಾಗಳೇ ಇಲ್ಲ. ಈ ಯಶಸ್ಸುಗಳೇ ಶಾಪವಾದಂತಿದೆ. ಏಕೆಂದರೆ ಕನ್ನಡ ಸಿನಿಮಾವೊಂದು ಈ ಮಟ್ಟಕ್ಕೂ ಹೋಗಬಹುದು ಹಾಗೂ ನೂರಾರು ಕೋಟಿ ಸಂಪಾದನೆಯನ್ನೂ ಮಾಡಬಹುದು ಎಂಬ ನಿರೀಕ್ಷೆಯನ್ನು ಈ ಸಿನಿಮಾಗಳು ಹುಟ್ಟುಹಾಕಿವೆ. ಎಲ್ಲರಿಗೂ ನೂರಾರು ಕೋಟಿ ಗಳಿಸುವ ಆಸೆಯಿದೆ. ‘ಕಾಂತಾರ’, ‘ಕೆಜಿಎಫ್’ ರೀತಿಯೇ ಸಿನಿಮಾ ಮಾಡಬೇಕು ಎಂದು ಹೊರಡುತ್ತಾರೆ. ಅನುಕರಣೆ ಮಾಡಲು ಹೋಗಿ ಎಡವುತ್ತಿದ್ದಾರೆ. ಈ ಎರಡೂ ಸಿನಿಮಾಗಳ ಸ್ಟಾರ್‌ಗಳು ದೊಡ್ಡ ಸ್ಟಾರ್‌ಗಳಾಗಿ ಆಯಿತು. ಉಳಿದ ಸ್ಟಾರ್‌ಗಳಿಗೂ ಇದು ಒತ್ತಡವಾಗಿದೆ. ನಾವು ಆ ಮಟ್ಟಕ್ಕೆ ಬೆಳೆಯಲಿಲ್ಲ ಎಂದರೆ ನಮ್ಮ ಉಳಿವು ಎಲ್ಲಿದೆ ಎಂಬ ಪ್ರಶ್ನೆ ಅವರಿಗೆ ಕಾಡಿದೆ. ದೊಡ್ಡದಾಗಿ ಮಾರುಕಟ್ಟೆ ಮಾಡಿದರೆ, ಹೆಚ್ಚು ದಿನ ಶೂಟಿಂಗ್ ಮಾಡಿದರೆ ಗೆಲ್ಲುತ್ತೇವೆ ಎಂಬ ಭ್ರಮೆಯೂ ಎಡವಲು ಕಾರಣ. ದೊಡ್ಡ ಯಶಸ್ಸುಗಳು ಬಹಳ ಅಪಾಯಕಾರಿ. ‘ಕಾಂತಾರ’, ‘ಕೆಜಿಎಫ್’ ಡೀಸೆಂಟ್ ಹಿಟ್ ಆಗಿದ್ದಿದ್ದರೆ ಯಾರಿಗೂ ಇಷ್ಟು ಒತ್ತಡವಿರುತ್ತಿರಲಿಲ್ಲ. ಯಾರೂ ₹100–₹200 ಕೋಟಿ ಹಾಕುತ್ತಿರಲಿಲ್ಲ. ಈ ಎರಡೂ ಯಶಸ್ಸುಗಳು ಕನ್ನಡ ಚಿತ್ರರಂಗಕ್ಕೆ ಎಷ್ಟು ವರವೋ, ಅಷ್ಟೇ ಶಾಪ ಕೂಡಾ.

• ವಾರದಲ್ಲಿ ಎಂಟು ಹತ್ತು ಸಿನಿಮಾ ಬಿಡುಗಡೆ ಆಗುತ್ತಿವೆ?

ಸರ್ವರಿಗೂ ಸಮಬಾಳು ಸಮಪಾಲು ಪ್ರಜಾಪ್ರಭುತ್ವದ ಮೂಲಸಿದ್ಧಾಂತ. ಇಲ್ಲಿ ನಿಯಂತ್ರಣ ಸಲ್ಲದು ಎನ್ನುವುದು ನನ್ನ ಅಭಿಪ್ರಾಯ. ಸಿನಿಮಾ ಮಾಡುವ ಹಕ್ಕು ಎಲ್ಲರಿಗೂ ಇದೆ. ಸಿನಿಮಾ ಹಿಡಿದಿಟ್ಟುಕೊಂಡರೆ ಆ ನಿರ್ದೇಶಕ, ನಿರ್ಮಾಪಕ ಮುಂದೆ ಸಿನಿಮಾ ಮಾಡುವುದು ಕಷ್ಟವಾಗಲಿದೆ. ನಮ್ಮ ಮಾರುಕಟ್ಟೆ ಎಷ್ಟಿದೆಯೋ ಅದಕ್ಕಿಂತ ಹೆಚ್ಚಿನ ಸಿನಿಮಾಗಳನ್ನು ಮಾಡುತ್ತಿದ್ದೇವೆ.

• ಹೊಸ ತಂಡದ ಜೊತೆ ಕೆಲಸದ ಅನುಭವ..

ಇದು ನಮ್ಮ ಕರ್ತವ್ಯ. ಒಂದು ಹಂತಕ್ಕೆ ಸಿನಿಮಾದಲ್ಲಿ ಗುರುತಿಸಿಕೊಂಡ ನಂತರ ಎಲ್ಲರೂ ಹೊಸಬರ ಜೊತೆ ನಿಂತುಕೊಳ್ಳುವ ಪ್ರಯತ್ನ ಮಾಡಬೇಕು. ಹೊಸಬರಿಗೆ ಒಂದು ಹಂತಕ್ಕೆ ಪ್ರೋತ್ಸಾಹ ಸಿಕ್ಕಿದರೆ ಅವರು ಅನುಭವದಲ್ಲಿ ಬೆಳೆಯುತ್ತಾರೆ. ತಪ್ಪು ಮಾಡದೇ ಮೊದಲ ಹೆಜ್ಜೆಯಿಂದಲೇ ಸರಿ ಇರಬೇಕು ಎಂದು ಬಯಸುವುದೂ ತಪ್ಪು. ❖

ಮುಂದಿನ ಪ್ರಾಜೆಕ್ಟ್‌ಗಳು...

ಹಾರರ್ ಥ್ರಿಲ್ಲರ್ ಜಾನರ್‌ನ ‘ಐದು’ ಸಿನಿಮಾದ ಚಿತ್ರೀಕರಣ ಕೊನೆಯ ಹಂತದಲ್ಲಿದೆ. ‘ಅಲ್ಪವಿರಾಮ’ ಸಿನಿಮಾವೂ ಅಂತಿಮ ಹಂತದಲ್ಲಿದೆ. ನಾನು ನಿರ್ದೇಶನ ಮಾಡುತ್ತಿರುವ ‘ಡ್ರೈವ್’ ಸಿನಿಮಾವನ್ನು ಪೂರ್ಣಗೊಳಿಸಬೇಕಾಗಿದೆ. ಸುದರ್ಶನ್ ರಂಗಪ್ರಸಾದ್ ಅವರು ನಿರ್ದೇಶಿಸುತ್ತಿರುವ ‘ಅರವಣಿಪುರಂ’ ಸಿನಿಮಾ ಶೂಟಿಂಗ್ ಆರಂಭವಾಗಬೇಕಿದೆ. ಇನ್ನೆರಡು ಸಿನಿಮಾಗಳು ಮಾತುಕತೆ ಹಂತದಲ್ಲಿವೆ. ಮಲಯಾಳದಲ್ಲಿ ‘ವಡಕ್ಕನ್’ ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ.

ರಾಣಾಗೆ ಪ್ರಿಯಾಂಕ ಜೋಡಿ

ಪ್ರಿಯಾಂಕ

‘ಏಕ್ ಲವ್ ಯಾ’ ಸಿನಿಮಾ ಮೂಲಕ ಚಂದನವನ ಪ್ರವೇಶಿಸಿದ್ದ ನಟ ರಾಣಾ ಇದೀಗ ಏಳುಮಲೆ ಏರಿದ್ದಾರೆ. ಅವರಿಗೆ ಜೋಡಿಯಾಗಿ ‘ಮಹಾನಟಿ’ ವಿಜೇತೆ ಪ್ರಿಯಾಂಕ ಆಚಾರ್ ನಟಿಸಲಿದ್ದಾರೆ. ನಟಿ ರಕ್ಷಿತಾ ತಮ್ಮನಾದ ರಾಣಾ ನಟಿಸುತ್ತಿರುವ ಹೊಸ ಸಿನಿಮಾವನ್ನು ನಿರ್ದೇಶಕ ತರುಣ್ ಕಿಶೋರ್ ಸುಧೀರ್ ಹಾಗೂ ಅಟ್ಲಾಂಟಾ ನಾಗೇಂದ್ರ ನಿರ್ಮಾಣ ಮಾಡುತ್ತಿದ್ದಾರೆ. ‘ಗುರುಶಿಷ್ಯರು’ ಸಿನಿಮಾ ಯಶಸ್ಸಿನ ಬಳಿಕ ತರುಣ್ ನಿರ್ಮಾಣ ಮಾಡುತ್ತಿರುವ ಎರಡನೇ ಸಿನಿಮಾ ಇದಾಗಿದೆ. ‘ಏಳುಮಲೆಯ ಮಡಿಲಲ್ಲಿ ಎದೆ ನಡುಗಿಸಿದ ಪ್ರೇಮಕಥೆ’ ಎಂಬ ಟ್ಯಾಗ್‌ಲೈನ್ ಹೊಂದಿರುವ ಈ ಸಿನಿಮಾವನ್ನು ಪುನೀತ್ ರಂಗಸ್ವಾಮಿ ನಿರ್ದೇಶಿಸುತ್ತಿದ್ದಾರೆ.

ನೈಜ ಘಟನೆ ಆಧಾರಿತ ಈ ಪ್ರೇಮಕಥೆ ಪುನೀತ್ ಅವರ ಚೊಚ್ಚಲ ನಿರ್ದೇಶನದ ಸಿನಿಮಾವಾಗಿದೆ. ‘ರಾಬರ್ಟ್’ ಸಿನಿಮಾ ಮೂಲಕ ಆಶಾ ಭಟ್, ‘ಕಾಟೇರ’ ಸಿನಿಮಾ ಮೂಲಕ ನಟಿ ಮಾಲಾಶ್ರೀ ಅವರ ಪುತ್ರಿ ಆರಾಧನಾ ರಾಮ್ ಅನ್ನು ನಾಯಕಿಯಾಗಿ ಪರಿಚಯಿಸಿದ್ದ ತರುಣ್, ಇದೀಗ ಮತ್ತೋರ್ವ ಹೊಸ ನಟಿಯನ್ನು ಚಂದನವನಕ್ಕೆ ಕರೆತಂದಿದ್ದಾರೆ. ‘ಮಹಾನಟಿ’ ರಿಯಾಲಿಟಿ ಶೋನ ತೀರ್ಪುಗಾರರಾಗಿದ್ದಾಗಲೇ ಪ್ರಿಯಾಂಕ ಅವರ ಅಭಿನಯವನ್ನು ಮೆಚ್ಚಿಕೊಂಡಿದ್ದ ತರುಣ್, ತಮ್ಮದೇ ನಿರ್ಮಾಣದ ಹೊಸ ಸಿನಿಮಾದಲ್ಲಿ ಅವರಿಗೆ ಅವಕಾಶ ನೀಡಿದ್ದಾರೆ. ಅದ್ವೈತ್ ಗುರುಮೂರ್ತಿ ಈ ಚಿತ್ರದ ಛಾಯಾಚಿತ್ರಗ್ರಹಣ ಮಾಡುತ್ತಿದ್ದು, ಸದ್ಯ ಚಿತ್ರದ ಶೂಟಿಂಗ್ ನಡೆಯುತ್ತಿದೆ. ❖

ರಾಕ್ಷಸ ಚಿತ್ರದಲ್ಲಿ ಸೋನಲ್

ಸೋನಲ್

ಪ್ರಜ್ವಲ್ ದೇವರಾಜ್ ನಟನೆಯ ‘ರಾಕ್ಷಸ’ ಸಿನಿಮಾ ಶಿವರಾತ್ರಿಯಂದು (ಫೆ.26) ಬಿಡುಗಡೆಯಾಗುತ್ತಿದ್ದು, ಚಿತ್ರದಲ್ಲಿ ನಾಯಕಿಯಾಗಿ ಸೋನಲ್ ಮೊಂತೆರೋ ಅಭಿನಯಿಸಿದ್ದಾರೆ. ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ.

ಯೋಗರಾಜ್ ಭಟ್ ನಿರ್ದೇಶನದ ‘ಪಂಚತಂತ್ರ’ ಸಿನಿಮಾ ಮೂಲಕ ಗಾಂಧಿನಗರದಲ್ಲಿ ಗುರುತಿಸಿಕೊಂಡ ನಟಿ ಸೋನಲ್ ಮೊಂತೆರೋ ಸದ್ಯ ಸಾಲು ಸಾಲು ಸಿನಿಮಾಗಳಲ್ಲಿ ತೊಡಗಿಸಿಕೊಂಡಿದ್ದಾರೆ. ‘ಮಮ್ಮಿ’, ‘ದೇವಕಿ’ ಸಿನಿಮಾ ಖ್ಯಾತಿಯ ಲೋಹಿತ್ ‘ರಾಕ್ಷಸ’ ಸಿನಿಮಾ ನಿರ್ದೇಶಿಸಿದ್ದಾರೆ. ಇವರ ಸಿನಿಮಾಗಳಲ್ಲಿ ನಾಯಕಿಯ ಪಾತ್ರಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇದ್ದು, ಸೋನಲ್ ಪಾತ್ರವೂ ಗಮನಸೆಳೆಯುವಂತಿದೆ ಎಂದಿದೆ ಚಿತ್ರತಂಡ. ಈವರೆಗೆ 36ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಪ್ರಜ್ವಲ್, ಇವೆಲ್ಲಕ್ಕಿಂತಲೂ ವಿಭಿನ್ನವಾಗಿ ‘ರಾಕ್ಷಸ’ ಚಿತ್ರದ ಮೂಲಕ ಪ್ರೇಕ್ಷಕರೆದುರಿಗೆ ಬರಲಿದ್ದಾರೆ. ಚಿತ್ರದಲ್ಲಿ ಶೋಭರಾಜ್, ವತ್ಸಲಾ ಮೋಹನ್, ಸಿದ್ಲಿಂಗು ಶ್ರೀಧರ್, ಆರ್ನ ರಾಥೋಡ್ ಸೇರಿದಂತೆ ಅನೇಕ ಕಲಾವಿದರು ಅಭಿನಯಿಸಿದ್ದಾರೆ. ‘ರಾಕ್ಷಸ’ ಸಿನಿಮಾದ ಶೇ 80ರಷ್ಟು ಚಿತ್ರೀಕರಣ ರಾಮೋಜಿ ಫಿಲಂ ಸಿಟಿಯಲ್ಲಿ ನಡೆದಿದೆ. ಶಾನ್ವಿ ಎಂಟರ್‌ಟೈನ್‌ಮೆಂಟ್‌ನಡಿ ದೀಪು ಬಿ.ಎಸ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ಜೇಬಿನ್ ಪಿ ಜೋಕಬ್ ಛಾಯಾಚಿತ್ರಗ್ರಹಣ, ವಿನೋದ್ ಸಾಹಸ ನಿರ್ದೇಶನವಿದೆ. ❖

ಕಳೆದ ಶುಕ್ರವಾರ (ಜ.31) ಎಂಟು ಕನ್ನಡ ಸಿನಿಮಾಗಳು ಬಿಡುಗಡೆಗೊಂಡಿದ್ದವು. ಇಂದು (ಫೆ.7) ಚಂದನವನದ ತೆರೆಗಳಲ್ಲಿ ಹತ್ತು ಸಿನಿಮಾಗಳು ತೆರೆಕಾಣುತ್ತಿವೆ.

ಇಂದು 10 ಸಿನಿಮಾಗಳು ಬಿಡುಗಡೆ

ದೀಪಕ್, ಪಾರ್ವತಿ ನಾಯರ್

ಮಿಸ್ಟರ್ ರಾಣಿ

‘ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ’ ಚಿತ್ರ ನಿರ್ದೇಶಿಸಿದ್ದ ಮಧುಚಂದ್ರ ನಿರ್ದೇಶಿಸಿರುವ ಚಿತ್ರವಿದು. ಕಿರುತೆರೆ ನಟ ದೀಪಕ್ ಸುಬ್ರಹ್ಮಣ್ಯ ಚಿತ್ರದ ನಾಯಕ. ಹೀರೊ ಆಗಬೇಕೆಂದು ಎಂಜಿನಿಯರಿಂಗ್ ಮುಗಿಸಿ ಸಿನಿಮಾರಂಗಕ್ಕೆ ಬಂದ ಹುಡುಗ ಆಕಸ್ಮಿಕವಾಗಿ ನಾಯಕಿಯಾಗಿಬಿಡುತ್ತಾನೆ. ಆತ ಹುಡುಗಿಯೆಂದು ಡ್ರಾಮಾ ಮಾಡಿ ಎಲ್ಲರನ್ನೂ ಹೇಗೆ ಯಾಮಾರಿಸಿದ, ನಂಬರ್ ಒನ್ ಹೀರೊಯಿನ್ ಹೇಗೆ ಆದ? ಇವನು ಹುಡುಗಿ ಎಂದುಕೊಂಡು ಪ್ರೀತಿಸಿದ ಹುಡುಗರ ಕಥೆ ಏನಾಯಿತು? ಎನ್ನುವುದೇ ಚಿತ್ರದ ಕಥಾಹಂದರ. ಪಾರ್ವತಿ ನಾಯರ್, ಮಧುಚಂದ್ರ, ರೂಪ ಪ್ರಭಾಕರ್ ಮುಂತಾದವರು ತಾರಾಗಣದಲ್ಲಿದ್ದಾರೆ. ‘ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ’ ಖ್ಯಾತಿಯ ಶ್ರೀವತ್ಸ ಶ್ಯಾಮ್ ನಾಯಕನ ಸ್ನೇಹಿತನಾಗಿ ಬಣ್ಣಹಚ್ಚಿದ್ದಾರೆ. ಎಕ್ಸೆಲ್ ಆರ್ಬಿಟ್ ಕ್ರಿಯೇಷನ್ಸ್ ಸಂಸ್ಥೆ ಬಂಡವಾಳ ಹೂಡಿದೆ. ಜೂಡಾ ಸ್ಯಾಂಡಿ ಹಾಗೂ ರಿತ್ವಿಕ್ ಮುರಳೀಧರ್ ಸಂಗೀತ, ರವೀಂದ್ರನಾಥ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ತಲ್ವಾರ್

ಮುರಳಿ ಅವರ ನಿರ್ದೇಶನದ ಈ ಚಿತ್ರದಲ್ಲಿ ಧರ್ಮ ಕೀರ್ತಿರಾಜ್ ನಾಯಕನಾಗಿ ನಟಿಸಿದ್ದಾರೆ. ಧರ್ಮ ಮಾಸ್ ಅವತಾರದಲ್ಲಿ ಕಾಣಿಸಿಕೊಂಡಿದ್ದು, ಟಚ್ ಸ್ಟೋನ್ ಪಿಕ್ಚರ್ ಬ್ಯಾನರ್ ಮೂಲಕ ಸುರೇಶ್ ಬೈರಸಂದ್ರ ಚಿತ್ರ ನಿರ್ಮಾಣ ಮಾಡಿದ್ದಾರೆ. ಚಿತ್ರದ ಕಥೆ, ಚಿತ್ರಕಥೆ ಮುರಳಿ ಅವರದ್ದು. ಸಿನಿಮಾ ಆ್ಯಕ್ಷನ್ ಹಾಗೂ ಭಾವನಾತ್ಮಕ ಕಥಾಹಂದರವನ್ನು ಹೊಂದಿದೆ. ಚಿತ್ರದಲ್ಲಿ ನಾಯಕಿಯಾಗಿ ಅದಿತಿ ಅಭಿನಯಿಸಿದ್ದು, ಅವರಿಲ್ಲಿ ಎರಡು ಶೇಡ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ತಾರಾಗಣದಲ್ಲಿ ಜೆಕೆ, ಅವಿನಾಶ್, ಶರತ್ ಲೋಹಿತಾಶ್ವ ಮುಂತಾದವರಿದ್ದಾರೆ.

ಭಗೀರಥ

ರಾಮ್ ಜನಾರ್ದನ್ ನಿರ್ದೇಶನದ ಈ ಚಿತ್ರವನ್ನು ಸಾಯಿ ರಮೇಶ್ ಪ್ರೊಡಕ್ಷನ್ ಲಾಂಛನದಲ್ಲಿ ಚೇತನ್ ಎಸ್. ರಮೇಶ್, ಕೆ. ರಮೇಶ್ ಹಾಗೂ ಬಿ. ಭೈರಪ್ಪ ನಿರ್ಮಿಸಿದ್ದಾರೆ. ಎಸ್.ಜಯಪ್ರಕಾಶ್ ಚಿತ್ರದ ನಾಯಕ. ‘ಗಾಯತ್ರಿ’ ಎಂಬ ಹೆಸರಿನ ಪತ್ರಕರ್ತೆಯಾಗಿ ಚಂದನ ರಾಘವೇಂದ್ರ ನಟಿಸಿದ್ದಾರೆ. ನಿಸರ್ಗ ಅಣ್ಣಪ್ಪ, ರೂಪಶ್ರೀ ತಾರಾಬಳಗದಲ್ಲಿದ್ದಾರೆ. ಥ್ರಿಲ್ಲರ್ ಮಂಜು ಸಾಹಸ ಸಂಯೋಜನೆ ಚಿತ್ರಕ್ಕಿದೆ.

ಈ ಚಿತ್ರಗಳ ಜೊತೆಗೆ **‘ಮಂಡ್ಯ’**, **‘ಎಲ್ಲೋ ಜೋಗಪ್ಪ ನಿನ್ನರಮನೆ’** ಹಾಗೂ **‘ಶರಣರ ಶಕ್ತಿ’** ಎಂಬ ಸಿನಿಮಾಗಳೂ ಬಿಡುಗಡೆಯಾಗುತ್ತಿವೆ.

ಗಜರಾಮ

ತಪಸ್ವಿನಿ

‘ಬಿಚ್ಚುಗತ್ತಿ’ ಖ್ಯಾತಿಯ ನಟ ರಾಜವರ್ಧನ್ ನಟನೆಯ, ಸುನಿಲ್ ಕುಮಾರ್ ನಿರ್ದೇಶನದ ಸಿನಿಮಾವಿದು. ಚಿತ್ರದಲ್ಲಿ ರಾಜವರ್ಧನ್‌ಗೆ ಜೋಡಿಯಾಗಿ ‘ಹರಿಕಥೆ ಅಲ್ಲ ಗಿರಿಕಥೆ’ ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ತಪಸ್ವಿನಿ ಪೂಣಚ್ಚ ನಟಿಸಿದ್ದಾರೆ. ಕಬೀರ್ ಸಿಂಗ್ ಖಳನಾಯಕನಾಗಿ ಕಾಣಿಸಿಕೊಂಡಿದ್ದು, ಪೊಲೀಸ್ ಪಾತ್ರದಲ್ಲಿ ದೀಪಕ್ ನಟಿಸಿದ್ದಾರೆ. ನಟ ರಾಗಿಣಿ ದ್ವಿವೇದಿ ಹಾಡೊಂದಕ್ಕೆ ಹೆಜ್ಜೆ ಹಾಕಿದ್ದಾರೆ. ಕೆ.ಎಸ್. ಚಂದ್ರಶೇಖರ್ ಛಾಯಾಚಿತ್ರಗ್ರಹಣ, ಜ್ಞಾನೇಶ್ ಬಿ. ಮಠದ್ ಸಂಕಲನ, ಧನಂಜಯ್ ಅವರ ನೃತ್ಯ ನಿರ್ದೇಶನವಿದೆ. ಮನೋಮೂರ್ತಿ ಸಂಗೀತ ಚಿತ್ರಕ್ಕಿದೆ. ಲೈಫ್‌ಲೈನ್ ಫಿಲ್ಮ್ ಪ್ರೊಡಕ್ಷನ್ ಅಡಿಯಲ್ಲಿ ನರಸಿಂಹಮೂರ್ತಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಅನಾಮಧೇಯ ಅಶೋಕ್ ಕುಮಾರ್

ಕಿಶೋರ್ ಹಾಗೂ ಹರ್ಷಿಲ್ ಕೌಶಿಕ್ ಮುಖ್ಯಭೂಮಿಕೆಯಲ್ಲಿರುವ ಈ ಚಿತ್ರವನ್ನು ಸಾಗರ್ ಕುಮಾರ್ ನಿರ್ದೇಶಿಸಿದ್ದಾರೆ. ಎಸ್ ಕೆ ಎನ್ ಫಿಲಂಸ್ ಲಾಂಛನದಲ್ಲಿ ನಿರ್ಮಲಾ ಕುಮಾರ್ ಹಾಗೂ ರಮ್ಯ ಸಾಗರ್ ಕುಮಾರ್ ನಿರ್ಮಿಸಿರುವ ಈ ಚಿತ್ರಕ್ಕೆ ನಿರ್ಮಾಣದಲ್ಲಿ ಕಿಶೋರ್ ಅವರೂ ಸಾಥ್ ನೀಡಿದ್ದಾರೆ. ಇದು ಸಾಗರ್ ಅವರ ನಿರ್ದೇಶನದ ಚೊಚ್ಚಲ ಸಿನಿಮಾ. ‘ದೇಶದಲ್ಲಿ ನಡೆದ ಕೆಲವು ಅಪರಾಧ ಘಟನೆಗಳು ಹಾಗೂ ಮಾಜಿ ಪೊಲೀಸ್ ಅಧಿಕಾರಿಯೊಬ್ಬರು ಬರೆದ ಪುಸ್ತಕ ಈ ಚಿತ್ರದ ಕಥೆಗೆ ಸ್ಫೂರ್ತಿ. ಪ್ರಸಿದ್ಧ ವಕೀಲರೊಬ್ಬರ ಕೊಲೆಯ ಸುತ್ತ ನಡೆಯುವ ಕಥೆ ಇದಾಗಿದೆ’ ಎಂದು ಕಥಾಹಂದರವನ್ನು ಸಾಗರ್ ಬಿಚ್ಚಿಟ್ಟಿದ್ದಾರೆ. ಕಿಶೋರ್ ಪತ್ರಕರ್ತನ ಪಾತ್ರದಲ್ಲಿ ಹಾಗೂ ಹರ್ಷಿಲ್ ಸರ್ಕಲ್ ಇನ್‌ಸ್ಪೆಕ್ಟರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.



ಹರ್ಷಿಲ್ ಕೌಶಿಕ್

ಅನ್‌ಲಾಕ್ ರಾಘವ

ಶೀರ್ಷಿಕೆಯೇ ಹೇಳುವಂತೆ ಈ ಚಿತ್ರದ ನಾಯಕ ಅನ್‌ಲಾಕ್ ತಜ್ಞ. ಆದರೆ ಏನನ್ನು ಅನ್‌ಲಾಕ್ ಮಾಡುತ್ತಾನೆ, ಹೇಗೆ ಅನ್‌ಲಾಕ್ ಮಾಡುತ್ತಾನೆ ಎನ್ನುವುದೇ ಚಿತ್ರದ ಕಥಾಹಂದರ. ಮಿಲಿಂದ್ ಗೌತಮ್ ಹಾಗೂ ರೇಚಲ್ ಡೇವಿಡ್ ನಟನೆಯ ಈ ಚಿತ್ರಕ್ಕೆ ‘ರಾಮಾ ರಾಮಾ ರೇ’ ಮತ್ತು ‘ಮ್ಯಾನ್ ಆಫ್ ದಿ ಮ್ಯಾಚ್’ ಖ್ಯಾತಿಯ ಡಿ.ಸತ್ಯಪ್ರಕಾಶ್ ಕಥೆ, ಚಿತ್ರಕಥೆ ಹೆಣೆದಿದ್ದಾರೆ. ನಟ ಉಪೇಂದ್ರ ಅವರ ಗರಡಿಯಲ್ಲಿ ಕೆಲಸ ಮಾಡಿರುವ, ‘ರಾಜು ಜೇಮ್ಸ್ ಬಾಂಡ್’ ಚಿತ್ರದ ನಿರ್ದೇಶಕ ದೀಪಕ್ ಮಧುವನಹಳ್ಳಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಮಯೂರ ಮೋಷನ್ ಪಿಕ್ಚರ್ಸ್ ಹಾಗೂ ಐಪ್ಲೆಕ್ಸ್ ಸಹಯೋಗದಲ್ಲಿ ಮಂಜುನಾಥ ಡಿ. ಹಾಗೂ ಗಿರೀಶ್ ಕುಮಾರ್ ಎನ್. ನಿರ್ಮಿಸಿರುವ ಚಿತ್ರಕ್ಕೆ ಜೆ. ಅನೂಪ್ ಸೀಲಿನ್ ಸಂಗೀತ ಸಂಯೋಜನೆ ಇದೆ. ಸಾಧು ಕೋಕಿಲ, ಶೋಭರಾಜ್, ಅವಿನಾಶ್, ರಮೇಶ್ ಭಟ್, ವೀಣಾ ಸುಂದರ್, ಧರ್ಮಣ್ಣ ಕಡೂರು, ಸಾಯಿ ಕುಡ್ಲ, ಭೂಮಿ ಶೆಟ್ಟಿ ಮೊದಲಾದವರು ತಾರಾಬಳಗದಲ್ಲಿದ್ದಾರೆ. ❖

ಮಿಲಿಂದ್, ರೇಚಲ್ ಡೇವಿಡ್

ಅಧಿಪತ್ರ

ರೂಪೇಶ್ ಶೆಟ್ಟಿ ನಾಯಕನಾಗಿ ಹಾಗೂ ಜಾಹ್ನವಿ ನಾಯಕಿಯಾಗಿ ಅಭಿನಯಿಸಿರುವ ಚಿತ್ರವಿದು. ಚಯನ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ರೂಪೇಶ್ ಕಾಣಿಸಿಕೊಂಡಿದ್ದಾರೆ. ‘ಬೃಹತಿ’ ಎಂಬ ಪಾತ್ರದಲ್ಲಿ ನಿರೂಪಕಿ ಜಾಹ್ನವಿ ನಟಿಸಿದ್ದಾರೆ. ಇದು ಇವರ ಚೊಚ್ಚಲ ಸಿನಿಮಾ. ಚಿತ್ರದಲ್ಲಿ ಕರಾವಳಿಯ ಸಂಸ್ಕೃತಿಯ ಭಾಗವಾದ ಹುಲಿ ಕುಣಿತ, ಯಕ್ಷಗಾನ, ದೈವಾರಾಧನೆ ಸೇರಿದಂತೆ ಹಲವು ವಿಷಯಗಳಿವೆ. ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನ ಈ ಸಿನಿಮಾದಲ್ಲಿ ಕರಾವಳಿ ಭಾಗದ ಆಟಿ ಕಳಂಜ ಸಂಸ್ಕೃತಿಯನ್ನು ಕಟ್ಟಿಕೊಡಲಾಗಿದೆ.

'ಸಖಿ ಸಾರಥಿ' ಚಾಲನಾ ತರಬೇತಿಗೆ ಚಾಲನೆ ನೀಡಿದ ಉಮಾ ಮಹಾದೇವನ್

'ಸ್ವಚ್ಛವಾಹಿನಿ' ಮಹಿಳೆಯರೇ ಚಲಾಯಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶದಲ್ಲಿ ಕಸ ವಿಲೇವಾರಿ ಮಾಡುವ ವಾಹನ 'ಸ್ವಚ್ಛ ವಾಹಿನಿ'ಯನ್ನು ಮಹಿಳೆಯರೇ ಚಲಾಯಿಸುವಂತಾಗಬೇಕು. ಎಲ್ಲ ಪಂಚಾಯಿತಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್ ಸೂಚಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಗುರುವಾರ ಹಮ್ಮಿಕೊಂಡಿದ್ದ 'ಸಖಿ ಸಾರಥಿ-ಸ್ವಾವಲಂಬನೆಯೆಡೆಗೆ ಮೊದಲ ಹೆಜ್ಜೆ' ಸ್ವಸಹಾಯ ಗುಂಪಿನ ಮಹಿಳೆಯರಿಗೆ ಲಘು ಮತ್ತು ಭಾರಿ ವಾಹನಗಳ ಚಾಲನಾ ತರಬೇತಿ ನೀಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೂರು ವರ್ಷದ ಹಿಂದೆ 'ಸ್ವಚ್ಛ ವಾಹಿನಿ' ಚಲಾಯಿಸಲು ಒಬ್ಬರೂ ಮಹಿಳೆಯರು ಇರಲಿಲ್ಲ. 5,000 ಮಹಿಳೆಯರಿಗೆ ಚಾಲನಾ ತರಬೇತಿ ನೀಡಿದ್ದರಿಂದ 3,500 ಮಹಿಳೆಯರು 'ಸ್ವಚ್ಛ ವಾಹಿನಿ' ಚಲಾಯಿಸುತ್ತಿದ್ದಾರೆ.

ನಗರ ಜಿಲ್ಲಾ ಪಂಚಾಯಿತಿ ಆಯೋಜಿಸಿದ್ದ ಸಖಿ ಸಾರಥಿ–ಸ್ವಾವಲಂಬನೆಯಡೆಗೆ ಮೊದಲ ಹೆಜ್ಜೆ: ಲಘು, ಭಾರಿ ವಾಹನ ಚಾಲನಾ ತರಬೇತಿ, ವಿವಿಧ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ, ಆರೋಗ್ಯ ಶಿಬಿರ ಮತ್ತು ಸಿರಿಧಾನ್ಯ ಮೇಳದಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ಮತ್ತು ಸಿಇಒ ಕೆ.ಎಸ್.ಲತಾ ಕುಮಾರಿ ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ವೀಕ್ಷಿಸಿದರು

ಪ್ರತಿ ಪಂಚಾಯಿತಿಯಲ್ಲಿ ಮಹಿಳೆಯರೇ ಚಾಲಕರಾಗಬೇಕು ಎಂದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ (ಎಂ-ನರೇಗಾ) ಮೂರು ವರ್ಷದ ಹಿಂದೆ ಶೇಕಡ 47ರಷ್ಟು ಮಹಿಳೆಯರಿದ್ದರು. ಈಗ ಶೇ 54ರಷ್ಟು ಇದ್ದಾರೆ. ಪುರುಷರು ದೂರದ ಊರಿಗೆ ಹೋಗಿ ಕೆಲಸ ಮಾಡಲು ಅವಕಾಶ ಇರುತ್ತದೆ. ಮಹಿಳೆಯರು ಹೆಚ್ಚಿನ ಬಾರಿ ತಮ್ಮೂರಿನಲ್ಲೇ ಇರಬೇಕಾಗುತ್ತದೆ. ಊರಲ್ಲಿದ್ದುಕೊಂಡೇ ಕೆಲಸ ಮಾಡಲು ಎಂ-ನರೇಗಾ ಉಪಯೋಗವಾಗುತ್ತದೆ ಎಂದು ತಿಳಿಸಿದರು.

ಸಂವಿಧಾನದ ಆಶಯದಂತೆ ಎಲ್ಲರೂ ಸಮಾನರಾಗಬೇಕಿದ್ದರೆ ಮಹಿಳೆಯರಿಗೆ ಪ್ರೋತ್ಸಾಹ ಸಿಗಬೇಕು. ಕನ್ನಡ ನಾಡು ಸರ್ವಜನಾಂಗದ ಶಾಂತಿಯ ತೋಟವಾಗಬೇಕಿದ್ದರೆ ಪರಿಸರ ಸ್ವಚ್ಛವಾಗಿರಬೇಕು. ಹಸಿರು ಉಳಿಯಬೇಕು. ಮಹಿಳೆಯರು ಧೈರ್ಯದಿಂದ ಮುನ್ನುಗ್ಗಿ ಸಂವಿಧಾನದ ಆಶಯದಂತೆ ಕೆಲಸ ಮಾಡಬೇಕು. ಆಗ ಸಮಾನತೆ ಬರಲು ಸಾಧ್ಯ. ಹಳ್ಳಿಗಳಲ್ಲಿ ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡಿದರೆ ಭಾರತ ಸಂವಿಧಾನ ಗಟ್ಟಿಯಾಗುತ್ತದೆ ಎಂದು ವಿಶ್ಲೇಷಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲತಾ ಕುಮಾರಿ ಕೆ.ಎಸ್. ಮಾತನಾಡಿ, 'ಚಾಲನಾ ಕ್ಷೇತ್ರದಲ್ಲಿ ಸಮಾನತೆ ಮರೀಚಿಕೆಯಾಗಿದೆ. ಒಟ್ಟು ಶೇ 6.8ರಷ್ಟು ಮಹಿಳೆಯರು ಮಾತ್ರ ನಾಲ್ಕು ಚಕ್ರದ ವಾಹನಗಳನ್ನು ಓಡಿಸುವ ಚಾಲನಾ ಪರವಾನಗಿ ಹೊಂದಿದ್ದಾರೆ. ಅದರಲ್ಲಿ ವಾಣಿಜ್ಯ ವಾಹನಗಳನ್ನು ಚಲಾಯಿಸುವ ಮಹಿಳೆಯರ ಪ್ರಮಾಣ ಶೇ 1ರಷ್ಟು ಮಾತ್ರ ಇದೆ' ಎಂದು ಬೇಸರಿಸಿದರು.

ವಿವಿಧ ಸ್ವಸಹಾಯ ಗುಂಪುಗಳಿಂದ 160ಕ್ಕೂ ಅಧಿಕ ಮಹಿಳೆಯರು ಚಾಲನಾ ತರಬೇತಿ ಪಡೆಯಲಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆರು ಸ್ವಚ್ಛವಾಹಿನಿ ಚಾಲಕರಾಗಲು ಎಲ್ಲ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ಕ್ರಮ ಕೈಗೊಳ್ಳಬೇಕು. ಯಾರಿಗಾದರೂ ಕಷ್ಟವಾಗುವುದಿದ್ದರೆ ಎರಡನೇ ಬಾರಿ ತರಬೇತಿ ನೀಡಿ ಅವರನ್ನು ಪಿಡಿಒಗಳು ಸಜ್ಜುಗೊಳಿಸಬೇಕು ಎಂದು ಸಲಹೆ ನೀಡಿದರು.

ವಿವಿಧ ಸ್ವಸಹಾಯ ಗುಂಪುಗಳು ತಯಾರಿಸಿದ್ದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ, ಆರೋಗ್ಯ ಶಿಬಿರ ಮತ್ತು ಸಿರಿಧಾನ್ಯ ಮೇಳ ನಡೆಯಿತು.

1,122 ಗಾಯಕರಿಂದ 'ವಚನ ಗಾಯನ ವೈಭವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಗ ಸಂಸ್ಥಾನದ ವತಿಯಿಂದ 1,122 ಗಾಯಕರಿಂದ 'ವಚನ ಗಾಯನ ವೈಭವ'ವನ್ನು ಫೆಬ್ರುವರಿ 7ರಂದು ಆಯೋಜಿಸಲಾಗಿದೆ.

ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿರುವ ಸಂಸ ಬಯಲು ರಂಗ ಮಂದಿರದಲ್ಲಿ ನಡೆಯುವ 'ವಚನ ಗಾಯನ ವೈಭವ'ದಲ್ಲಿ ಹನ್ನೊಂದು ವಚನಗಳನ್ನು ಏಕಕಾಲದಲ್ಲಿ ಸಮೂಹ ಗಾಯನದ ಮೂಲಕ ಪ್ರಸ್ತುತಪಡಿಸಲಾಗುತ್ತದೆ ಎಂದು ರಂಗ ಸಂಸ್ಥಾನದ ಅಧ್ಯಕ್ಷ ಬಂಡ್ಲಹಳ್ಳಿ ವಿಜಯಕುಮಾರ ತಿಳಿಸಿದ್ದಾರೆ.

ವಚನಗಳಿಗೆ ಎಚ್‌.ಕೆ. ನಾರಾಯಣ, ವಿಜಯಕುಮಾರ, ವೆಂಕಟೇಶ್ ಅಲ್ಕೋಡ್ ಹಾಗೂ ಅರ್ಚನಾ ಭೋಜ್ ಅವರು ರಾಗ ಸಂಯೋಜನೆ ಮಾಡಿದ್ದಾರೆ. ತರಳಬಾಳು ಶಾಖಾ ಮಠದ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಅವರು ಹೇಳಿದ್ದಾರೆ.

ಹೂಡಿಕೆದಾರರ ಸಮಾವೇಶ 19 ದೇಶಗಳು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೆ. 11ರಿಂದ 14ರವರೆಗೆ ನಡೆಯುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ 19 ದೇಶಗಳು ಭಾಗವಹಿಸಲಿವೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಫ್ರಾನ್ಸ್, ನೆದರ್‌ಲೆಂಡ್, ಜಪಾನ್, ಥಾಯ್ಲೆಂಡ್, ಮಲೇಷ್ಯಾ, ದಕ್ಷಿಣ ಕೊರಿಯಾ, ಇಸ್ರೇಲ್, ನಾರ್ವೆ, ಸ್ವಿಟ್ಜರ್‌ಲೆಂಡ್, ತೈವಾನ್, ಜರ್ಮನಿ, ಆಸ್ಟ್ರೇಲಿಯಾ, ಡೆನ್ಮಾರ್ಕ್, ಪೋಲೆಂಡ್, ಇಟಲಿ, ಬ್ರಿಟನ್, ಸ್ಲೊವೇನಿಯಾ, ಬಹರೇನ್ ಮತ್ತು ಸಿಂಗಪುರ ಭಾಗವಹಿಸಲಿವೆ. ಏರೊಸ್ಪೇಸ್, ನವೀಕರಿಸಬಹುದಾದ ಇಂಧನ, ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರ್ ಮತ್ತು ಅತ್ಯಾಧುನಿಕ ತಯಾರಿಕೆ ವಲಯಗಳಲ್ಲಿ ಕರ್ನಾಟಕ ಬಂಡವಾಳ ಹೂಡಿಕೆಗೆ ಮುಂಚೂಣಿಯಲ್ಲಿದೆ. ಈ ಅಂಶವನ್ನು ಜಾಗತಿಕ ಉದ್ಯಮ ಜಗತ್ತಿಗೆ ಸಮಾವೇಶದ ಮೂಲಕ ಪರಿಚಯಿಸಲಾಗುತ್ತಿದೆ ಎಂದಿದ್ದಾರೆ.

'ಪರಿಸರಸ್ನೇಹಿ ವಿದ್ಯುತ್ ಚಾಲಿತ ವಾಹನಗಳು, ರಕ್ಷಣೆ, ಜೈವಿಕ ತಂತ್ರಜ್ಞಾನ, ಸಂಶೋಧನೆ ಹಾಗೂ ಅಭಿವೃದ್ಧಿ ಮತ್ತು ಗರಿಷ್ಠ ನಿಖರತೆಯ ಬಿಡಿಭಾಗ ತಯಾರಿಕಾ ವಲಯಗಳಲ್ಲಿನ ಬೆಳವಣಿಗೆಯ ಮೇಲೆ ಆವಿಷ್ಕಾರದ ಭವಿಷ್ಯದ ಮೇಲೆ ಬೆಳಕು ಚೆಲ್ಲಲಿದೆ.

ಎಂ.ಬಿ.ಪಾಟೀಲ

ರಾಜ್ಯದ ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಇ) ಹಾಗೂ ನವೋದ್ಯಮ ಬೆಳವಣಿಗೆಗೆ ವೇಗ ನೀಡಲಿದೆ. ಡಿಜಿಟಲೀಕರಣ ಅಳವಡಿಸಿಕೊಳ್ಳಲು 2,000ಕ್ಕೂ ಹೆಚ್ಚು ಎಸ್‌ಎಂಇಗಳಿಗೆ ತರಬೇತಿ ನೀಡಲಾಗಿದೆ. ಡಿಜಿಟಲ್ ಪರಿವರ್ತನೆಗಾಗಿ 100 ಎಸ್‌ಎಂಇಗಳಿಗೆ ಅಗತ್ಯ ನೆರವು ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

'ಮೂಲ ಸಲಕರಣೆ ತಯಾರಿಸುವ (ಒಇಎಂ) ದೊಡ್ಡ ಕಂಪನಿಗಳ ಜತೆಗೆ ವಹಿವಾಟು ಕುದುರಿಸಿಕೊಳ್ಳಲು ಎಸ್‌ಎಂಇಗಳಿಗೆ ನೆರವಾಗಲು ಕೃತಕ ಬುದ್ಧಿಮತ್ತೆ ಆಧಾರಿತ ಅಂತರ್ಜಾಲ ತಾಣ ಅಭಿವೃದ್ಧಿಪಡಿಸಲಾಗಿದೆ. ಬಂಡವಾಳ ಹೂಡಿಕೆ ಸುಲಲಿತಗೊಳಿಸಲು ಕೃತಕ ಬುದ್ಧಿಮತ್ತೆ ನೆರವಿನ ಏಕಗವಾಕ್ಷಿ ವ್ಯವಸ್ಥೆ ಅಭಿವೃದ್ಧಿಪಡಿಸಲಾಗಿದೆ. ಇದು ಭೂಮಿ ಹಂಚಿಕೆ, ಹೂಡಿಕೆದಾರರ ಕುಂದುಕೊರತೆ ನಿವಾರಣೆಗೆ ನೆರವಾಗಲಿದೆ' ಎಂದಿದ್ದಾರೆ.

'ಬಿಲ್ ಪಾವತಿ: ಸಚಿವರ ಗಮನಕ್ಕೆ ಬಾರದೇ ಅಕ್ರಮ ನಡೆಯಿತೆ?'

ಪ್ರಜಾವಾಣಿ ವಾರ್ತೆ

ತ್ಯಾಜ್ಯ ವಿಲೇವಾರಿ ಅಕ್ರಮ

ಬೆಂಗಳೂರು: ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಮೂರು ವರ್ಷಗಳಿಂದ ಘನ ತ್ಯಾಜ್ಯ ವಿಲೇವಾರಿ ಗುತ್ತಿಗೆಯಲ್ಲಿ ₹2.37 ಕೋಟಿ ಮೊತ್ತದ ನಕಲಿ ಬಿಲ್ ಸೃಷ್ಟಿಸಿ, ಹಣ ಪಡೆದ ಪ್ರಕರಣದ ಕುರಿತು ತನಿಖೆಗೆ ಆದೇಶಿಸಲಾಗಿದೆ. ಆದರೆ, ಈ ವಿಚಾರ ಸ್ಥಳೀಯ ಶಾಸಕರೂ ಆಗಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಗಮನಕ್ಕೆ ಬಂದಿಲ್ಲ ಎಂದರೆ ನಂಬಲು ಸಾಧ್ಯವಿಲ್ಲ ಎಂದು ಬಿಜೆಪಿ ರಾಜ್ಯ ವಕ್ತಾರ ಪ್ರಕಾಶ್ ಹೇಳಿದ್ದಾರೆ.

'ಸ್ಥಳೀಯ ಶಾಸಕರ ಗಮನಕ್ಕೆ ಬರದೇ ಯಾವುದೇ ಬಿಲ್ ಪಾವತಿ ಆಗುವುದಿಲ್ಲ. ದಿನೇಶ್ ತಪ್ಪು ಮಾಹಿತಿ ನೀಡುತ್ತಿದ್ದಾರೆ' ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ತಮ್ಮ ಕ್ಷೇತ್ರದಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ಆಗುತ್ತಿದೆಯೇ? ಜನರಿಗೆ ಸಮಸ್ಯೆ ಆಗುತ್ತಿದೆಯೇ ಎಂಬುದರ ಬಗ್ಗೆ ಗಮನ ಕೊಡದೇ ಕರ್ತವ್ಯದಲ್ಲಿ ಸಂಪೂರ್ಣ ವಿಫಲ ರಾಗಿದ್ದಾರೆ. ಈ ಹಗರಣಕ್ಕೆ ಸಂಬಂಧಿಸಿದಂತೆ ಸರ್ಕಾರವು ಬಿಬಿಎಂಪಿ ವಿಶೇಷ ಕಮಿಷನರ್ ವಿಕಾಸ್ ಕಿಶೋರ್ ಅವರನ್ನು ತನಿಖೆಗೆ ನೇಮಿಸಿದೆ. ಅಧಿಕಾರಿಗಳು ಕೈಜೋಡಿಸದೇ ಗುತ್ತಿಗೆದಾರ ಇಷ್ಟು ದೊಡ್ಡ ಮೊತ್ತ ಪಡೆಯಲು ಸಾಧ್ಯವಿಲ್ಲ ಎಂದೂ ಅವರು ದೂರಿದರು.

ಕ್ಷೇತ್ರದ ವ್ಯಾಪ್ತಿಯಲ್ಲಿ ಇತ್ತೀಚೆಗೆ ಗೇಟ್ ಬಿದ್ದು ಮಗು ಸತ್ತು ಹೋಗಿದೆ. ಕಳಪೆ ಕಾಮಗಾರಿಯಿಂದ ಈ ರೀತಿ ಆಗಿದೆ. ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಿಸಿಲ್ಲ. ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಕಳಪೆ ಕಾಮಗಾರಿ ವ್ಯಾಪಕವಾಗಿದೆ. ತಮ್ಮ ಮೂಗಿನಡಿ ನಡೆಯುವ ಅವ್ಯವಹಾರಗಳನ್ನು ಕೂಡ ದಿನೇಶ್ ಗುಂಡೂರಾವ್ ಅವರು ಗಮನಿಸದೆ ಇರುವುದು ಶೋಚನೀಯ ಎಂದರು.

ಬಿಜೆಪಿ ರಾಜ್ಯ ಘಟಕದ ಮುಖ್ಯ ವಕ್ತಾರ ಅಶ್ವತ್ಥ ನಾರಾಯಣ್, ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾ ಸಮಿತಿ ಅಧ್ಯಕ್ಷ ಸಪ್ತಗಿರಿಗೌಡ, ಉತ್ತರ ಜಿಲ್ಲಾ ಸಮಿತಿ ಅಧ್ಯಕ್ಷ ಹರೀಶ್ ಪತ್ರಿಕಾಗೋಷ್ಠಿಯಲ್ಲಿದ್ದರು.

ವಾದ್ಯಗಾರರಿಗೆ ಶಿವಲಿಂಗ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಚನಜ್ಯೋತಿ ಬಳಗದ ಸಂಸ್ಥಾಪಕ ಕೆ.ಪಿ. ಶಿವಲಿಂಗಯ್ಯನವರ ಸ್ಮರಣೆಯಲ್ಲಿ ನೀಡುವ 'ಶಿವಲಿಂಗ ಪ್ರಶಸ್ತಿ'ಯನ್ನು ಮೂವರು ವಾದ್ಯಗಾರರಿಗೆ ಪ್ರಕಟಿಸಲಾಗಿದೆ.

ಕೀಬೋರ್ಡ್ ವಾದಕ ಪುಣ್ಯೇಶ್ ಕುಮಾರ್, ತಬಲಾ ವಾದಕ ಗುರುರಾಜ ಆಚಾರ್ಯ, ರಿದಂ ಪ್ಯಾಡ್ ವಾದಕ ಎ. ಮಹೇಂದ್ರ ಅವರಿಗೆ 'ಶಿವಲಿಂಗ ಪ್ರಶಸ್ತಿ- 2025' ಪ್ರಕಟಿಸಲಾಗಿದೆ. ಪ್ರಶಸ್ತಿಯು ₹10 ಸಾವಿರ ನಗದು, ವಸ್ತ್ರ, ಸ್ಮರಣಿಕೆಯನ್ನು ಒಳಗೊಂಡಿದೆ ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ತಿಳಿಸಿದ್ದಾರೆ.

ವಚನ ಸಂಗೀತಕ್ಕೆ ಜೊತೆಯಾಗಿ ವಚನಗಳನ್ನು ಮನ ಮನಕ್ಕೆ ತಲುಪಿಸುತ್ತಿರುವುದನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಫೆಬ್ರುವರಿ 14ರ ಸಂಜೆ 4 ಗಂಟೆಗೆ ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ 'ವಚನ ರಸದೌತಣ' ಸಂಚಿಕೆಯೂ ಬಿಡುಗಡೆಯಾಗಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಪುಣ್ಯೇಶ್ ಕುಮಾರ್

ಎ.ಮಹೇಂದ್ರ

ಗುರುರಾಜ ಆಚಾರ್ಯ

10ಕ್ಕೆ ಬ್ರಹ್ಮರಥೋತ್ಸವ

ಬೆಂಗಳೂರು: 'ವಿಶ್ವಕರ್ಮ ಸೇವಾ ಸಮಿತಿಯಿಂದ 42ನೇ ವರ್ಷದ ಭಗವಾನ್ ವಿಶ್ವಕರ್ಮ ಬ್ರಹ್ಮ ರಥೋತ್ಸವ ಮತ್ತು ವಿಶ್ವಕರ್ಮ ಜನ ಜಾಗೃತಿ ಸಮಾವೇಶವನ್ನು ಇದೇ 10ರಂದು ನಗರದಲ್ಲಿ ಆಚರಿಸಲಾಗುತ್ತಿದೆ' ಎಂದು ವಿಶ್ವಕರ್ಮ ಸೇವಾ ಸಮಿತಿ ಅಧ್ಯಕ್ಷ ಆರ್. ಮಧುಸೂದನ್ ತಿಳಿಸಿದ್ದಾರೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಪೂರ್ವ ವಲಯ, ಆರ್.ಟಿ. ನಗರ, ಬೆಂಗಳೂರು – 560 032.
ದೂರವಾಣಿ: 080–23530771, 23430305
ಸಂ: ನಕೇಗ್ರಂ/ಪೂವ/ಲೆ.ಪ.ವಿ/ಪು.ತಾ.ಕೆ:72/843/2024–25 ದಿನಾಂಕ: 05.02.2025
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಪೂರ್ವವಲಯ, ಆರ್.ಟಿ.ನಗರ, ಬೆಂಗಳೂರು ಇಲ್ಲಿನ **ಪುಸ್ತಕಗಳ ತಾಂತ್ರಿಕ ಕಾರ್ಯ ನಿರ್ವಹಿಸಲು ರೂ. 30,00,000/–** (ರೂಪಾಯಿ ಮೂವತ್ತು ಲಕ್ಷಗಳು ಮಾತ್ರ) ಗಳನ್ನು ನಿಗದಿಪಡಿಸಿಕೊಳ್ಳಲಾಗಿದೆ. ಅದರಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 13.02.2025 ಸಾಯಂಕಾಲ 4:00 ಗಂಟೆಗೆ**. ಸದರಿ ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ, ಪೂರ್ವವಲಯ, ಆರ್.ಟಿ.ನಗರ ಬೆಂಗಳೂರು ಇವರಿಂದ ಕಛೇರಿ ವೇಳೆಯಲ್ಲಿ ಪಡೆಯತಕ್ಕದ್ದು.
ಸಹಿ/– ಉಪನಿರ್ದೇಶಕರು
ವಾಸಾಸಂಇ/ವಾಪ್ರ/ಜಿಎ/4897/2024–25 ನಗರ ಕೇಂದ್ರ ಗಂಥಾಲಯ, ಪೂರ್ವ ವಲಯ, ಬೆಂಗಳೂರು.

TIMKEN
ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100 ದೂರವಾಣಿ : 080 41362000 ಫ್ಯಾಕ್ಸ್ : 080 41362010
ಇ–ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in
ಡಿಸೆಂಬರ್ 31, 2024ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳು ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶ
ಟಿಮ್‌ಕೆನ್ ಇಂಡಿಯಾ ನಿಯಮಿತದ ('ದಿ ಕಂಪನಿ') 5ನೇ ಫೆಬ್ರವರಿ, 2025 ರಂದು ನಡೆದ ತನ್ನ ಸಭೆಯಲ್ಲಿ ಡಿಸೆಂಬರ್ 31, 2024ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳು ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶವನ್ನು ನಿರ್ದೇಶಕರ ಮಂಡಳಿಯು ಅನುಮೋದಿಸಿದ್ದು ಇದನ್ನು ಎರಡು ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ದಾಖಲಿಸಿದೆ. ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶವು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ, BSE: https://www.bseindia.com/xml-data/corpfiling/AttachLive/044ccc71-4125-4334-bf1d-b7f3ecb60424.pdf ಮತ್ತು ಎನ್‌ಎಸ್‌ಇ: NSE : https://nsearchives.nseindia.com/corporate/SE_Intimation_Financial_ResultwithUDIN_05022025200406.pdf ಮತ್ತು https://www.timken.com/wp-content/uploads/2025/02/Unaudited-Financial-Results-for-the-quarter-ended-31-December-2024.pdf. ಕಂಪನಿಯ ವೆಬ್‌ಸೈಟ್‌ನಲ್ಲಿ ಸಹ ಲಭ್ಯವಿದೆ. ಫಲಿತಾಂಶವನ್ನು ಕೆಳಕಂಡ ಕ್ವಿಕ್ ರೆಸ್ಪಾನ್ಸ್ (ಕ್ಯೂಆರ್) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಪ್ರಕ್ರಿಯಿಸಬಹುದು.
QR Code
6 ಫೆಬ್ರವರಿ, 2025
ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/–
ಸಂಜಯ್ ಕೌಲ್
ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು
DIN: 05159352

ರೊಬೊಟಿಕ್ ಶಸ್ತ್ರಚಿಕಿತ್ಸೆಯಿಂದ ಶೀಘ್ರ ಚೇತರಿಕೆ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಂಪ್ರದಾಯಿಕ ವಿಧಾನದ ಬದಲು, ರೊಬೊಟಿಕ್ ತಂತ್ರಜ್ಞಾನ ಆಧಾರಿತ ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆಗೆ ಒಳಗಾದ್ದರಿಂದ ಶೀಘ್ರ ಚೇತರಿಸಿಕೊಳ್ಳಲು ಸಾಧ್ಯವಾಯಿತು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಗುರುವಾರ ಇಲ್ಲಿನ ಬನ್ನೇರುಘಟ್ಟದ ಫೋರ್ಟಿಸ್ ಆಸ್ಪತ್ರೆ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ತಮಗಾದ ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆ ಅವಧಿಯ ಅನುಭವವನ್ನು ಹಂಚಿಕೊಂಡರು.

'ಕೆಲ ದಿನಗಳಿಂದ ಮೊಣಕಾಲಿನ ನೋವು ಕಾಡುತ್ತಿತ್ತು. ಮೆಟ್ಟಿಲುಗಳನ್ನು ಹತ್ತಲು ಸಹ ಸಾಧ್ಯವಾಗುತ್ತಿರಲಿಲ್ಲ. ಯಾವುದೇ ತೈಲ ಹಚ್ಚಿದರೂ ಪ್ರಯೋಜನ ಕಾಣಲಿಲ್ಲ. ನಂತರ ಸ್ನೇಹಿತರ ಸಲಹೆಯಂತೆ ಫೋರ್ಟಿಸ್ ಆಸ್ಪತ್ರೆಯಲ್ಲಿ ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆಗೆ ಒಳಗಾದೆ. ನನ್ನ ನಿರೀಕ್ಷೆಗೂ ಮೀರಿ ಅಲ್ಪಾವಧಿಯಲ್ಲಿಯೇ ಚೇತರಿಕೆ ಕಂಡಿದ್ದೇನೆ. ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆಗೆ ಒಳಗಾಗುವವರು ರೊಬೊಟಿಕ್ ತಂತ್ರಜ್ಞಾನ ಆಧಾರಿತ ಶಸ್ತ್ರಚಿಕಿತ್ಸೆಯನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ' ಎಂದು ಹೇಳಿದರು.



ರಾಮಲಿಂಗಾರೆಡ್ಡಿ

ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ಶಾಖೆಯ ಅಧ್ಯಕ್ಷ ಡಾ.ವಿ.ವಿ. ಚಿನಿವಾಲರ್, 'ನಾನೂ ಸಹ ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟು, ಚೇತರಿಸಿಕೊಂಡಿದ್ದೇನೆ. ವೈದ್ಯಕೀಯ ಲೋಕಕ್ಕೆ ರೊಬೊಟಿಕ್ ತಂತ್ರಜ್ಞಾನದ ಆಗಮನವು ರೋಗಿಗಳಿಗೆ ಅನುಕೂಲಕರವಾಗಿದೆ' ಎಂದು ಹೇಳಿದರು.

ಫೋರ್ಟಿಸ್ ಆಸ್ಪತ್ರೆಯ ಮೂಳೆ ಶಸ್ತ್ರಚಿಕಿತ್ಸೆ ವಿಭಾಗದ ಡಾ.ನಾರಾಯಣ್ ಹುಲ್ಸೆ ಅವರು ಮಾತನಾಡಿ, 'ರೊಬೊಟ್ ನೆರವು ವೈದ್ಯ ಲೋಕದಲ್ಲಿ ಹೊಸ ಅಧ್ಯಾಯ ಸೃಷ್ಟಿಸಿದೆ. ಮೊಣಕಾಲು, ಸೊಂಟ ಇತರೆ ಕೀಲು ಬದಲಾವಣೆಯಂತಹ ಶಸ್ತ್ರಚಿಕಿತ್ಸೆಗಳಲ್ಲಿ ರೊಬೊಟಿಕ್ ತಂತ್ರಜ್ಞಾನವು ನಿಖರ ಶಸ್ತ್ರಚಿಕಿತ್ಸೆಗೆ ನೆರವಾಗಲಿದೆ' ಎಂದು ತಿಳಿಸಿದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪ ನಿರ್ದೇಶಕರ ಕಛೇರಿ ಜಿಲ್ಲಾ ಕೇಂದ್ರ ಗ್ರಂಥಾಲಯ
ಕೋಲಾರ–563 101
ಫ್ಯಾ: 08152–222821, ಇ–ಮೇಲ್: dcl_kolar@ymail.com
ಸಂ: ಜಿಕೇಗ್ರಂಕೋ/ಆವಿ/ಇ–ಟೆಂಡರ್/37/403/2024–25 ದಿನಾಂಕ: 06.02.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
2024–25ನೇ ಸಾಲಿನಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯ, ಕೋಲಾರ ಈ ಕಛೇರಿಗೆ ಸಾರ್ವಜನಿಕ ಓದುಗರಿಗೆ ಅಗತ್ಯವಿರುವ ಅಲ್‌ಇನ್‌ಒನ್ ಕಂಪ್ಯೂಟರ್, ಯುಪಿಎಸ್, ಪ್ರಿಂಟರ್ ವಿತ್ ಸ್ಕ್ಯಾನರ್ ಗಳನ್ನು ಖರೀದಿಸಲು ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಎರಡು ವರ್ಷಗಳ ಅನುಭವವುಳ್ಳ ನೊಂದಾಯಿತ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ.20,00,000/– (ಇಪ್ಪತ್ತು ಲಕ್ಷ ರೂಗಳು ಮಾತ್ರ)** ಇ.ಎಂ.ಡಿ ಮೊತ್ತ **ರೂ.40,000/– (ನಲವತ್ತು ಸಾವಿರ ರೂಗಳು ಮಾತ್ರ)** ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಕರ್ನಾಟಕ ಸರ್ಕಾರದ http://eproc.karnataka.gov.in ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: **14.02.2025** ಸಮಯ **ಸಂಜೆ : 3.00 ಗಂಟೆ,** ತಾಂತ್ರಿಕ ಲಕೋಟೆಯನ್ನು ದಿನಾಂಕ: **15.02.2025ರ ಸಂಜೆ : 3.00 ಗಂಟೆಗೆ** ತೆರೆಯಲಾಗುವುದು.
ಟೆಂಡರ್‌ದಾರರು ಹೆಚ್ಚಿನ ವಿವರಗಳನ್ನು ಈ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯುವುದು.
ಸಹಿ/– ಉಪ ನಿರ್ದೇಶಕರು (ಹೆ.ಪ್ರ),
ಜಿಲ್ಲಾ ಕೇಂದ್ರ ಗ್ರಂಥಾಲಯ, ಕೋಲಾರ.
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ:447/ಕೆಎಸ್‌ಎಂಸಿಎ/2024–25

SOBHA
SOBHA LIMITED
CIN : L45201KA1995PLC018475
Regd. Office: 'SOBHA' Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103
Ph: +91-80-49320000, Email: investors@sobha.com, Website: www.sobha.com
UNAUDITED STANDALONE AND CONSOLIDATED FINANCIAL RESULTS FOR THE QUARTER AND NINE MONTHS ENDED DECEMBER 31, 2024
The Unaudited Standalone and Consolidated Financial Results of Sobha Limited ("the Company") along with the Limited Review Reports of the Statutory Auditors of the Company for the quarter and nine months ended December 31, 2024 have been reviewed by the Audit Committee and approved by Board of Directors of the Company at their Meeting held on February 06, 2025, in terms of Regulation 33 of SEBI (Listing Obligations and Disclosure Requirements) Regulations, 2015.
The aforementioned financial results along with the Limited Review Reports of the Statutory Auditors thereon are available on the website of BSE Limited (BSE) (www.bseindia.com) and National Stock Exchange of India Limited (NSE) (www.nseindia.com) and on the Company's website at https://www.sobha.com/investor-relations/. The same can also be accessed by scanning the QR Code provided below:
For Sobha Limited
Sd/-
Bijan Kumar Dash
Company Secretary & Compliance Officer
Date: February 06, 2025
Place: Bangalore

ಫೆ. 9ಕ್ಕೆ ಪುರಂದರ, ತ್ಯಾಗರಾಜರ ಆರಾಧನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಗುರುಗುಹ ಸಂಗೀತ ಮಹಾವಿದ್ಯಾಲಯದ ಬೆಂಗಳೂರಿನ 10 ಉಪ ಶಾಖೆಗಳಲ್ಲಿ ಫೆಬ್ರುವರಿ 9ರಂದು ಪುರಂದರ ದಾಸರ ಹಾಗೂ ತ್ಯಾಗರಾಜರ ಆರಾಧನಾ ಮಹೋತ್ಸವ ನಡೆಯಲಿದೆ.

ಕೆಂಗೇರಿ ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ ಓಂಕಾರ ಆಶ್ರಮದಲ್ಲಿ ಫೆ. 9ರ ಬೆಳಿಗ್ಗೆ 7.30ರಿಂದ ಪ್ರಾಕಾರ ಸಂಕೀರ್ತನೆ ನಡೆಯಲಿದೆ. ನಂತರ ಓಂಕಾರ ಆಶ್ರಮದ ಮಧುಸೂಧನಾನಂದ ಪುರಿ ಸ್ವಾಮೀಜಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಬೆಳಿಗ್ಗೆ 9.30ರಿಂದ ಮಹಾವಿದ್ಯಾಲಯದ ಕಿರಿಯ ವಿದ್ಯಾರ್ಥಿಗಳಿಂದ ಗೋಷ್ಠಿ ಗಾಯನ, ಹಿರಿಯ ವಿದ್ಯಾರ್ಥಿಗಳಿಂದ ವಿವಿಧ ಪಂಚರತ್ನ ಕೃತಿಗಳಲ್ಲಿ ಆಯ್ದ ಕೃತಿಗಳ ಗೋಷ್ಠಿ ಗಾಯನ ನಡೆಸಿಕೊಡಲಿದ್ದಾರೆ. ಮಧ್ಯಾಹ್ನ 2ರಿಂದ ಮಹಾವಿದ್ಯಾಲಯದ ಕಿರಿಯ ವಿದ್ಯಾರ್ಥಿಗಳಿಂದ ಗೋಷ್ಠಿ ಗಾಯನ, ಶಿಬಿರಾರ್ಥಿಗಳಿಂದ ದೇವರ ನಾಮಗಳ ಗೋಷ್ಠಿ ಗಾಯನ ಆಯೋಜಿಸಲಾಗಿದೆ. ವಿದ್ವಾನ್ ಮೈಸೂರು ಪಿ.ಎಸ್. ಶ್ರೀಧರ್ ಹಾಗೂ ವಿದ್ವಾನ್ ನಿಖಿಲ್ ಕುಮಾರ್ ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

Swiggy
Swiggy Limited
(formerly known as Swiggy Private Limited, Bundl Technologies Private Limited)
CIN: L74110KA2013PLC096530
Registered office: No. 55, Sy No. 8-14, Ground Floor, I&J Block, Embassy Tech Village, Outer Ring Road, Devarbisanahalli, Bengaluru- 560103, Karnataka, India.
Tel: 080-68422422 | Email ID: ir@swiggy.in | Web site: www.swiggy.com
Statement of unaudited financial results (standalone and consolidated) for the quarter and nine months ended December 31, 2024
The board of directors of the Company, at the meeting held on **February 05, 2025,** approved the unaudited financial results of the Company for the quarter and nine months ended December 31, 2024 ("Financial Results").
The Financial results along with the Limited Review Report, have been posted on the Company's website at **https://www.swiggy.com/corporate/investor-relations/financial-results** and can be accessed by scanning the QR code.
For and on behalf of the Board of Directors
Swiggy Limited (formerly known as Swiggy Private Limited, Bundl Technologies Private Limited)
Sd/-
Sriharsha Majety
Managing Director & Group Chief Executive Officer
DIN: 06680073
Location: Bengaluru
Date: February 05, 2025
Note: The above intimation is in accordance with Regulation 33 read with regulation 47 (1) of the SEBI (Listing Obligations and Disclosure Requirements) Regulations, 2015.

DAMODAR VALLEY CORPORATION
COMMERCIAL DEPARTMENT, DVC TOWERS, VIP ROAD, KOLKATA – 700054
NOTIFICATION
(1) Damodar Valley Corporation (DVC) has made applications for its generating stations namely MTPS Unit 7 & 8 (Mejia Thermal Power Station, Unit 7 & 8) before the Hon'ble Central Electricity Regulatory Commission, New Delhi for determination of tariff for the period 2019-24 & 2024-29 in terms of CERC Regulations.
(2) **The beneficiaries of the generating station area:** (a) BSES-Rajdhani Power Ltd., (b) BSES-Yamuna Power Ltd., (c) Tata Power Delhi Distribution Ltd., (d) Haryana Power Generation Corporation Ltd., (e) Kerala State Electricity Board Limited (f) Bangalore Electricity Supply Company, (g) Hubli Electricity Supply Company, (h) Gulbarga Electricity Supply Corporation, (i) Mangalore Electricity Supply Company Limited (j) Chamundeshwari Electricity Supply Corporation, (k) Tata Steel Limited
(3) **Installed Capacity of the generating stations:**

Sl. No.	Name of the Power Station	Capacity (MW)	COD of first/last unit Commissioned
1.	Mejia Thermal Power Station, Unit 7 & 8	2 x 500 = 1000	02.08.2011/16.08.2012

(4) **Total Capital Cost for individual station of DVC:** (in Rs. Lakh)

Power Stations (MTPS Unit 7 & 8)	Capital Cost as allowed by CERC as on 31.03.2019	Capital Cost as claimed on 31.03.2024	Capital Cost as claimed on 31.03.2029
Capital Cost	513995.01	526970.98	567027.28

(5) **Authority which has approved the capital cost**: Central Electricity Regulatory Commission.
(6) **Schedule date of commercial operation**: Not applicable
(7) **Actual date of commercial operation of individual station:** As stated under Sl. 3 above
(8) **Details of Tariff:** (in Rs. Lakh)

Thermal Power Stations	Capacity charges/ Energy charges	Name of the Power House	Year wise tariff sought to be determined as per True-up Petition for 2019-24					Year wise tariff sought to be determined as per claimed in Tariff Petition for 2024-29				
			2019-20	2020-21	2021-22	2022-23	2023-24	2024-25	2025-26	2026-27	2027-28	2028-29
Thermal Power Stations	Capacity charge (in Rs. Lakh)	MTPS#7 & 8	129550.85	124678.52	126347.59	120354.07	117507.01	121534.78	111647.19	114334.55	111417.53	104807.46
	*Energy charge (in P/kWh)	MTPS#7 & 8	284.264	294.084	274.875	295.195	333.062	370.04	370.04	370.04	370.04	370.04

* Energy charge will vary as per CERC regulation.
(9) A copy of the application made for determination of tariff is posted on the DVC website **www.dvc.gov.in**
(10) The suggestions & objections if any, on the proposals for determination of tariff contained in the application be filed by any person, including the beneficiary before the Secretary, **Central Electricity Regulatory Commission, 6th, 7th & 8th Floors, Tower B, World Trade Centre, Nauroji Nagar, New Delhi-110029** with a copy to the applicant within 30 days of publication of the notice.
Place: Kolkata
Date: 07.02.2025
Senior General Manager (Commercial)
(INF&PR/Comml/98/24-25)

ಸಾಗರದಲ್ಲಿ ಗುರುವಾರ ಏರ್ಪಡಿಸಿದ್ದ ಸಂವಿಧಾನ ಸನ್ಮಾನ ಕಾರ್ಯಕ್ರಮವನ್ನು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಉದ್ಘಾಟಿಸಿದರು

'ಗಾಂಧಿ, ಅಂಬೇಡ್ಕರ್ ವ್ಯಕ್ತಿತ್ವಕ್ಕೆ ನಕಲಿ ಗಾಂಧಿಗಳಿಂದ ಮಸಿ'

ಪ್ರಜಾವಾಣಿ ವಾರ್ತೆ

ಸಾಗರ (ಶಿವಮೊಗ್ಗ ಜಿಲ್ಲೆ): 'ಕೆಲವು ನಕಲಿ ಗಾಂಧಿಗಳು ಡಾ.ಬಿ.ಆರ್. ಅಂಬೇಡ್ಕರ್ ರಚಿಸಿರುವ ಶ್ರೇಷ್ಠ ಸಂವಿಧಾನವನ್ನು ತಮ್ಮ ಟೂಲ್ ಕಿಟ್ ಆಗಿ ಬಳಸಿಕೊಂಡು ವಿಚಿತ್ರವಾಗಿ ಆಡುತ್ತ ಗಾಂಧಿ, ಅಂಬೇಡ್ಕರ್ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ' ಎಂದು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಆರೋಪಿಸಿದರು.

ಸಿಟಿಜನ್ ಫಾರ್ ಸೋಶಿಯಲ್ ಜಸ್ಟೀಸ್ ಸಂಸ್ಥೆ ಗುರುವಾರ ಇಲ್ಲಿ ಏರ್ಪಡಿಸಿದ್ದ 'ಸಂವಿಧಾನ ಸನ್ಮಾನ' ಕಾರ್ಯಕ್ರಮ ಉದ್ಘಾಟಿಸಿ ಅವರು ದಿಕ್ಸೂಚಿ ಭಾಷಣ ಮಾಡಿದರು.

'ಸಂವಿಧಾನ ಆಧುನಿಕ ಸ್ಮೃತಿ ಇದ್ದಂತೆ. ಮನುಸ್ಮೃತಿ, ಭಗವದ್ಗೀತೆಯನ್ನು ಹೇಗೆ ಇಟ್ಟುಕೊಳ್ಳುತ್ತೇವೋ ಅದೇ ರೀತಿ ಸಂವಿಧಾನವನ್ನೂ ಇಟ್ಟುಕೊಳ್ಳಬೇಕು. ಜೊತೆಗೆ ರಾಜಕೀಯ ಹಿತಾಸಕ್ತಿಗಾಗಿ ಸಂವಿಧಾನವನ್ನು ದುರ್ಬಳಕೆ ಮಾಡಿಕೊಳ್ಳುವವರ ಬಗ್ಗೆ ಜಾಗೃತರಾಗಿರಬೇಕು' ಎಂದು ಅವರು ಕಿವಿಮಾತು ಹೇಳಿದರು.

'ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ 75ಕ್ಕೂ ಹೆಚ್ಚು ಬಾರಿ ತಿದ್ದುಪಡಿ ತಂದು ಸಂವಿಧಾನವನ್ನು ವಿರೂಪಗೊಳಿಸುವ ಕೆಲಸ ಮಾಡಿದೆ. ಸಂವಿಧಾನದ ನಿಜವಾದ ಆಶಯವನ್ನು ಕಾಪಾಡುವ ಕಾಳಜಿಯನ್ನು ಸಂಘ ಪರಿವಾರ ಮತ್ತು ಬಿಜೆಪಿ ವ್ಯಕ್ತಪಡಿಸುವುದರ ಜೊತೆಗೆ ಆ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿವೆ' ಎಂದರು.

'ಕಾಂಗ್ರೆಸ್ ಮುಖಂಡರು ಪ್ರತಿದಿನ ಅಂಬೇಡ್ಕರ್ ಅವರ ಜಪ ಮಾಡುತ್ತಿದ್ದಾರೆ. ಆದರೆ, ಈ ಹಿಂದೆ ಸ್ವತಃ ಅಂಬೇಡ್ಕರ್ ಅವರು ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಅವರನ್ನು ಸೋಲಿಸಿದ್ದು ಕಾಂಗ್ರೆಸ್ ಪಕ್ಷ. ಅಂಬೇಡ್ಕರ್ ಮರಣ ಹೊಂದಿದ ಕೆಲವೇ ತಿಂಗಳ ನಂತರ ಅವರ ಪತ್ನಿಗೆ ಸರ್ಕಾರಿ ವಸತಿ ಸೌಲಭ್ಯ ನಿರಾಕರಿಸಿದ್ದು, ಅಂಬೇಡ್ಕರ್ ಸ್ಮಾರಕ ನಿರ್ಮಿಸಲು ವಿರೋಧ ತೋರಿದ್ದು ಇದೇ ಕಾಂಗ್ರೆಸ್' ಎಂದು ಅವರು ದೂರಿದರು.

'ಬಿಜೆಪಿಯವರಿಗೆ ಸಂವಿಧಾನದ ಬಗ್ಗೆ ಗೌರವವಿಲ್ಲ ಎಂದು ಕಾಂಗ್ರೆಸ್ ನಿರಂತರವಾಗಿ ಸುಳ್ಳು ಪ್ರಚಾರದಲ್ಲಿ ತೊಡಗಿದೆ. ಆದರೆ, ಸಂವಿಧಾನಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿರುವುದು ಬಿಜೆಪಿಯ ಹೆಗ್ಗಳಿಕೆ' ಎಂದು ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಹೇಳಿದರು.

ವಿಜ್ಞಾನ ಪ್ರತಿಭಾ ಪ್ರಶಸ್ತಿ ಸ್ಪರ್ಧೆಯಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುವ ಅಭಿನವ್ ಕೋಟೆಗಾರ್ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು.

ನಿವೃತ್ತ ಸಿಪಿಐ ಮಂಜಪ್ಪ ಅಧ್ಯಕ್ಷತೆ ವಹಿಸಿದ್ದರು. ದೇವಪ್ಪ ಹೊಸಕೊಪ್ಪ, ಎ.ಟಿ.ನಾಗರತ್ನ, ಗಾಯತ್ರಿ ಮಲ್ಲೇಶಪ್ಪ, ರವಿ ಗೌತಮಪುರ, ವಿಕಾಸ್ ಪುತ್ತೂರು, ರೇಖಾ, ನಂದಿನಿ, ಪರಶುರಾಮ್, ಸತೀಶ್ ಕೆ, ಕೆ.ಆರ್.ಗಣೇಶ್ ಪ್ರಸಾದ್ ಹಾಜರಿದ್ದರು.

ಬಿಜೆಪಿ ಬಗ್ಗೆ ಅಪಪ್ರಚಾರ: ಸಂತೋಷ್

ಶಿವಮೊಗ್ಗ: 'ಕಳೆದೊಂದು ದಶಕದಿಂದ ಅಂಬೇಡ್ಕರ್ ಹಾಗೂ ಸಂವಿಧಾನ ಮುಂದಿಟ್ಟುಕೊಂಡು ದೊಡ್ಡ ಪ್ರಮಾಣದಲ್ಲಿ ವಿವಾದ ಸೃಷ್ಟಿಸುವ ಕೆಲಸ ಕಾಂಗ್ರೆಸ್ ಕೃಪಾಪೋಷಣೆಯ ಅರ್ಬನ್ ನಕ್ಸಲರ ವರ್ಗ ದೇಶದಲ್ಲಿ ನಿರಂತರವಾಗಿ ಮಾಡುತ್ತಿದೆ' ಎಂದು ಬಿ.ಎಲ್.ಸಂತೋಷ್ ಟೀಕಿಸಿದರು. ನಗರದಲ್ಲಿ ಸಿಟಿಜನ್ ಫಾರ್ ಸೋಶಿಯಲ್ ಜಸ್ಟೀಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂವಿಧಾನ ಸನ್ಮಾನ ಮತ್ತು ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಆರ್‌ಎಸ್‌ಎಸ್ ಸಂವಿಧಾನ ವಿರೋಧಿಯಾಗಿದೆ. ಬಿಜೆಪಿ ಸಂವಿಧಾನ ರದ್ದುಪಡಿಸುತ್ತದೆ ಎಂಬುದು ಈ ಅಪಪ್ರಚಾರ ನಿರತ ನಗರ ನಕ್ಸಲರ ವಾದ ಎಂದರು.

ಅಮೆರಿಕದ 'ಅಮಾನವೀಯ ವರ್ತನೆ': ಕೇಂದ್ರ ಸರ್ಕಾರದ ಸ್ಪಷ್ಟನೆಗೆ ವಿರೋಧ ಪಕ್ಷಗಳ ಆಗ್ರಹ

ಸಂಸತ್ತಿನ ಉಭಯ ಸದನಗಳಲ್ಲಿ ಗದ್ದಲ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಅಕ್ರಮ ವಲಸೆ ಹೋಗಿರುವ ಭಾರತೀಯರ ಜತೆ ಅಮೆರಿಕದ 'ಅಮಾನವೀಯ ವರ್ತನೆ'ಯು ಸಂಸತ್ತಿನಲ್ಲಿ ಗುರುವಾರ ಪ್ರತಿಧ್ವನಿಸಿತು. ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಸ್ಪಷ್ಟನೆ ಕೋರಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳು ಭಾರಿ ಪ್ರತಿಭಟನೆ ನಡೆಸಿದವು.

ವಲಸಿಗರಿಗೆ ಕೈಕೋಳ ತೊಡಿಸಿದ ಕ್ರಮವನ್ನು ವಿರೋಧಿಸಿ ವಿಪಕ್ಷಗಳ ಸದಸ್ಯರು ಸ್ಪೀಕರ್ ಪೀಠದ ಮುಂದೆ ಪ್ರತಿಭಟನೆ ನಡೆಸಿದ್ದರಿಂದ ಲೋಕಸಭೆ ಕಲಾಪವನ್ನು ನಾಲ್ಕು ಸಲ ಮುಂದೂಡಲಾಯಿತು.

ಬೆಳಿಗ್ಗೆ ಪ್ರಶ್ನೋತ್ತರ ಅವಧಿಯಲ್ಲಿ ಕಲಾಪವನ್ನು ಮೊದಲ ಬಾರಿ ಮುಂದೂಡಿದರೆ, ಆ ಬಳಿಕ ಮಧ್ಯಾಹ್ನ 12 ಮತ್ತು 2ಕ್ಕೆ ಮುಂದೂಡಲಾಯಿತು. ವಿದೇಶಾಂಗ ವ್ಯವಹಾರಗಳ ಸಚಿವರು ಮಧ್ಯಾಹ್ನ 3.30ಕ್ಕೆ ಲೋಕಸಭೆಯಲ್ಲಿ ಹೇಳಿಕೆ ನೀಡುವರು ಎಂದು ಸಚಿವ ಅರ್ಜುನ್ ರಾಮ್ ಮೇಘವಾಲ್ ತಿಳಿಸಿದರು.

ವಿಪಕ್ಷಗಳ ಸದಸ್ಯರ ಗದ್ದಲದ ನಡುವೆಯೇ ಎಸ್.ಜೈಶಂಕರ್ ಅವರು ಮಧ್ಯಾಹ್ನ 3.30ಕ್ಕೆ ಪ್ರಕಟಣೆ ಓದಿದರು. ಆ ಬಳಿಕವೂ ಗದ್ದಲ ಮುಂದುವರಿದ ಕಾರಣ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

ಅವಮಾನ ಸಹಿಸದು: ಭಾರತೀಯರಿಗೆ ಆಗಿರುವ ಅವಮಾನವನ್ನು 'ಇಂಡಿಯಾ' ಮೈತ್ರಿಕೂಟ ಸಹಿಸದು ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು. ಅಮೆರಿಕವು ವಾಪಸ್ ಕಳುಹಿಸಿದ ವಲಸಿಗರಲ್ಲಿ ಒಬ್ಬರು ಮಾಡಿರುವ ವಿಡಿಯೊ ಹಂಚಿಕೊಂಡ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, 'ಪ್ರಧಾನಿ ಅವರೇ, ಈ ವ್ಯಕ್ತಿಯ ನೋವನ್ನು ಆಲಿಸಿ. ಭಾರತೀಯರು ಘನತೆ ಮತ್ತು ಮಾನವೀಯತೆಗೆ ಅರ್ಹರು. ಕೈಕೋಳಕ್ಕೆ ಅರ್ಹರಲ್ಲ' ಎಂದು ಹೇಳಿದರು.

'ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿರುವ ತನ್ನ ದೇಶದ ಪ್ರಜೆಗಳನ್ನು ಕರೆಸಿಕೊಳ್ಳಲು ಕೊಲಂಬಿಯಾವು ವಿಶೇಷ ವಿಮಾನವನ್ನು ಕಳುಹಿಸಿದೆ. ಭಾರತ ಏಕೆ ಅಂತಹ ಕೆಲಸ ಮಾಡಿಲ್ಲ' ಎಂದು ರಾಜ್ಯಸಭೆ ಸದಸ್ಯರಾದ ರಣದೀಪ್ ಸುರ್ಜೇವಾಲಾ, ಸಾಕೇತ್ ಗೋಖಲೆ ಮತ್ತು ಜಾನ್ ಬ್ರಿಟ್ಟಾಸ್ ಅವರು ಪ್ರಶ್ನಿಸಿದರು.

'ದುರ್ವರ್ತನೆ: ಅಮೆರಿಕ ಜತೆ ಮಾತುಕತೆ'

ಒಂದನೇ ಪುಟದಿಂದ...

ಪ್ರಯಾಣದ ಉದ್ದಕ್ಕೂ ತಮಗೆ ಕೈಕೋಳ ತೊಡಿಸಿ, ಕಾಲುಗಳಿಗೆ ಸರಪಳಿ ಬಿಗಿಯಲಾಗಿತ್ತು ಎಂದು ಬುಧವಾರ ಅಮೃತಸರಕ್ಕೆ ಬಂದಿಳಿದ ವಲಸಿಗರಲ್ಲಿ ಕೆಲವರು ಹೇಳಿಕೆ ಕೊಟ್ಟಿದ್ದಾರೆ.

'ಅಮೆರಿಕವು ಅಕ್ರಮ ವಲಸಿಗರನ್ನು ಆಯಾ ದೇಶಕ್ಕೆ ವಾಪಸ್ ಕಳುಹಿಸುವ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ನಡೆಸುತ್ತಿದ್ದು, ವಲಸೆ ಮತ್ತು ಕಸ್ಟಮ್ಸ್ ಇಲಾಖೆ (ಐಸಿಇ) ಅಧಿಕಾರಿಗಳು ಆ ಕೆಲಸ ನಿರ್ವಹಿಸುತ್ತಾರೆ. ವಲಸಿಗರನ್ನು ಕಳುಹಿಸಲು ಮಿಲಿಟರಿ ವಿಮಾನಗಳನ್ನು ಬಳಸುವ ನಿಯಮವನ್ನು ಐಸಿಇ 2012ರಲ್ಲೇ ಜಾರಿಗೆ ತಂದಿದೆ. ಹೀಗಾಗಿ ಈ ಪ್ರಕ್ರಿಯೆ ಹೊಸತಲ್ಲ. ಹಲವಾರು ವರ್ಷಗಳಿಂದಲೂ ಇದೆ' ಎಂದರು.

'ಅಕ್ರಮವಾಗಿ ನೆಲಸಿರುವ ವಲಸಿಗರನ್ನು ವಾಪಸ್ ಕಳುಹಿಸುವಾಗ ಅವರನ್ನು ನಿರ್ಬಂಧದಲ್ಲಿ ಇರಿಸಲಾಗುತ್ತದೆ. ಪ್ರಯಾಣದ ವೇಳೆ ವೈದ್ಯಕೀಯ ಸೇವೆಯ ಅಗತ್ಯವಿದ್ದರೆ ಒದಗಿಸಲಾಗುತ್ತದೆ. ಆಹಾರ ಸೇರಿದಂತೆ ಇತರ ಅಗತ್ಯಗಳನ್ನು ಪೂರೈಸಲಾಗುತ್ತದೆ. ಶೌಚಾಲಯಕ್ಕೆ ತೆರಳುವ ಸಮಯದಲ್ಲಿ ಕೈಕೋಳವನ್ನು ತಾತ್ಕಾಲಿಕವಾಗಿ ತೆಗೆಯಲಾಗುತ್ತದೆ. ವಿಶೇಷ ವಿಮಾನ, ಪ್ರಯಾಣಿಕರ ವಿಮಾನ ಮತ್ತು ಮಿಲಿಟರಿ ವಿಮಾನಗಳಿಗೆ ಈ ನಿಯಮ ಅನ್ವಯವಾಗುತ್ತದೆ. ಪ್ರಯಾಣದ ವೇಳೆ ಮಹಿಳೆಯರು ಮತ್ತು ಮಕ್ಕಳ ಮೇಲೆ ಯಾವುದೇ ನಿರ್ಬಂಧ ಇರುವುದಿಲ್ಲ. 2025ರ ಫೆಬ್ರುವರಿ 5ರಂದು ಅಮೆರಿಕದಿಂದ ಬಂದ ಮಿಲಿಟರಿ ವಿಮಾನಕ್ಕೂ ಇದೇ ನಿಯಮ ಅನ್ವಯವಾಗಿತ್ತು' ಎಂದು ವಿವರಿಸಿದ್ದಾರೆ.

'ವಿದೇಶದಲ್ಲಿ ಅಕ್ರಮವಾಗಿ ನೆಲಸಿರುವುದು ಕಂಡುಬಂದಲ್ಲಿ ತಮ್ಮ ಪ್ರಜೆಗಳನ್ನು ವಾಪಸ್ ಕರೆಸಿಕೊಳ್ಳುವುದು ಎಲ್ಲಾ ದೇಶಗಳ ಬಾಧ್ಯತೆಯಾಗಿದೆ. ಇದು ಯಾವುದೋ ನಿರ್ದಿಷ್ಟ ದೇಶಕ್ಕೆ ಅನ್ವಯಿಸುವ ಅಥವಾ ಭಾರತದಲ್ಲಿ ಮಾತ್ರ ಇರುವ ನೀತಿಯಲ್ಲ' ಎಂದು ಸಚಿವರು ತಿಳಿಸಿದ್ದಾರೆ.



15 ವರ್ಷ: 15,756 ವಲಸಿಗರು ವಾಪಸ್

ನವದೆಹಲಿ (ಪಿಟಿಐ): ಅಮೆರಿಕವು 2009ರಿಂದ ಇದುವರೆಗೆ ಒಟ್ಟು 15,756 ಭಾರತೀಯರನ್ನು 'ಅಕ್ರಮ ವಲಸಿಗರು' ಎಂದು ಹೇಳಿ ಭಾರತಕ್ಕೆ ವಾಪಸ್ ಕಳುಹಿಸಿರುವುದಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಗುರುವಾರ ರಾಜ್ಯಸಭೆಗೆ ತಿಳಿಸಿದರು.

2019ರಲ್ಲಿ ಅತಿಹೆಚ್ಚು ಮಂದಿಯನ್ನು (2,042) ಭಾರತಕ್ಕೆ ಕಳುಹಿಸಿದೆ ಎಂದು ಮಾಹಿತಿ ನೀಡಿದರು.

ವಲಸಿಗರಿಗೆ ನೆರವಾಗಲು ಹೊಸ ಕಾನೂನು

ಒಂದನೇ ಪುಟದಿಂದ...

'ಸಮಕಾಲೀನ ಜಾಗತಿಕ ವಲಸೆ ಪ್ರಕ್ರಿಯೆ ಮತ್ತು ಭಾರತದ ನಾಗರಿಕರ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು, 1983ರ ವಲಸೆ ಕಾಯ್ದೆಯನ್ನು ಬದಲಿಸುವ ಅಗತ್ಯವನ್ನು ಸಮಿತಿಯು ಒತ್ತಿ ಹೇಳಿದೆ' ಎಂದು ವರದಿ ತಿಳಿಸಿದೆ.

'ತುಂಬಾ ವಿಳಂಬದ ನಂತರ, ಸಚಿವಾಲಯವು 'ಸಾಗರೋತ್ತರ ಸಂಚಾರ (ನೆರವು ಮತ್ತು ಕಲ್ಯಾಣ) ಮಸೂದೆ–2024' ಎಂಬ ಹೆಸರಿನ ಹೊಸ ಕಾನೂನು ಜಾರಿಗೆ ತರುವುದನ್ನು ಗಂಭೀರವಾಗಿ ಪರಿಗಣಿಸುತ್ತಿದೆ' ಎಂದು ಹೇಳಿದೆ.

ಶೌಚಾಲಯಕ್ಕೂ ಬಂತು 'ಎ.ಐ'

ಒಂದನೇ ಪುಟದಿಂದ...

'ಲಾಡ್ಲಿ ಫೌಂಡೇಶನ್ ಟ್ರಸ್ಟ್ ದೇಶದಲ್ಲಿ ಪ್ರಥಮ ಬಾರಿಗೆ ವಿಜಯಪುರ ಜಿಲ್ಲೆಯನ್ನು ಪೈಲಟ್ ಪ್ರಾಜೆಕ್ಟ್ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಂಡು, ಎಐ ತಂತ್ರಜ್ಞಾನ ಆಧಾರಿತ ಶೌಚಾಲಯ ನಿರ್ಮಾಣ ಮಾಡುತ್ತಿದೆ' ಎಂದು ಟ್ರಸ್ಟ್‌ನ ನಿರ್ದೇಶಕ ಹಾಗೂ ಸಲಹೆಗಾರ ಜಾವಿದ್ ಜಮಾದಾರ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರಥಮ ಹಂತದಲ್ಲಿ ಒಂಬತ್ತು ಸರ್ಕಾರಿ ಶಾಲೆಗಳಲ್ಲಿ ಮತ್ತು ಮೂರು ಸಾರ್ವಜನಿಕ ಸ್ಥಳಗಳಲ್ಲಿ ಸಾಮೂಹಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಸಾರ್ವಜನಿಕ ಬಳಕೆಗೆ ಶೀಘ್ರ ಒದಗಿಸಲಾಗುವುದು. ಇನ್ನುಳಿದಂತೆ 12 ಸರ್ಕಾರಿ ಶಾಲೆಗಳ ಶೌಚಾಲಯಗಳನ್ನು ನವೀಕರಿಸುವ ಕಾರ್ಯ ಕೈಗೊಳ್ಳಲಾಗಿದ್ದು, ಅವುಗಳಲ್ಲೂ ಎಐ ತಂತ್ರಜ್ಞಾನ ಅಳವಡಿಕೆ ಮಾಡಲಾಗುವುದು' ಎಂದರು.

'ಈ ಶೌಚಾಲಯಗಳನ್ನು ಹೇಗೆ ಬಳಸಬೇಕು, ಹೇಗೆ ನಿರ್ವಹಣೆ ಮಾಡಬೇಕು, ಸ್ವಚ್ಛತೆ ಹೇಗೆ ಕಾಪಾಡಬೇಕು ಎಂಬುದರ ಕುರಿತು ಶಾಲಾ ಮಕ್ಕಳಿಗೆ, ಎಸ್‌ಡಿಎಂಸಿ ಅಧ್ಯಕ್ಷ, ಸದಸ್ಯರಿಗೆ, ಶಿಕ್ಷಕರಿಗೆ ತರಬೇತಿ ನೀಡಿ, ಜಾಗೃತಿ ಮೂಡಿಸಲಾಗಿದೆ. ಶೌಚಾಲಯದಲ್ಲಿ ಸ್ವಚ್ಛತೆ ಇಲ್ಲದೇ ಇದ್ದರೆ ನನಗೆ ಹಾಗೂ ಜಿಲ್ಲಾಧಿಕಾರಿ, ಲಾಡ್ಲಿ ಫೌಂಡೇಶನ್‌ನ ಕೇಂದ್ರ ಕಚೇರಿಗೆ ಸಂದೇಶ ಬರಲಿದೆ. ತಕ್ಷಣ ನಾವು ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರಿಗೆ ಸ್ವಚ್ಛತೆ ಕೈಗೊಳ್ಳಲು ಸೂಚಿಸುತ್ತೇವೆ' ಎಂದರು.

'ಡಿಆರ್‌ಡಿಒ ಸಿದ್ಧಪಡಿಸಿರುವ ಬಯೋ ಡೈಜೆಸ್ಟರ್ ಅನ್ನು ಶೌಚಾಲಯಗಳ ಹೊರಭಾಗದಲ್ಲಿ ಕೂರಿಸಲಾಗಿದೆ. ಈ ಬಯೋ ಡೈಜೆಸ್ಟರ್ ಶೌಚಾಲಯದ ಮಲಿನ ನೀರನ್ನು ಶುದ್ಧೀಕರಿಸಿ ಹೊರಹಾಕಲಿದೆ. ಈ ನೀರನ್ನು ಶಾಲೆಯ ಉದ್ಯಾನದಲ್ಲಿರುವ ಗಿಡ, ಮರಗಳಿಗೆ ಬಳಸಬಹುದಾಗಿದೆ' ಎಂದು ತಿಳಿಸಿದರು.

ಶೈಕ್ಷಣಿಕ ಕಿಟ್ ವಿತರಣೆ: 'ಲಾಡ್ಲಿ ಫೌಂಡೇಶನ್ ಟ್ರಸ್ಟ್‌ನಿಂದ ಜಿಲ್ಲೆಯ ಶಾಲಾ ವಿದ್ಯಾರ್ಥಿಗಳಿಗೆ ಬ್ಯಾಗ್, ಕಂಪಾಸ್ ಬಾಕ್ಸ್, ಪೆನ್, ಪೆನ್ಸಿಲ್, ಸ್ವಚ್ಛತಾ ಕೈಪಿಡಿ ಒಳಗೊಂಡ 5,600 ಶೈಕ್ಷಣಿಕ ಕಿಟ್‌ಗಳನ್ನು ಹಂಚಲಾಗಿದೆ' ಎಂದರು.

ತಟಸ್ಥರ ವಿರುದ್ಧ ವಿಜಯೇಂದ್ರ ವಾಗ್ದಾಳಿ

ಒಂದನೇ ಪುಟದಿಂದ...

'ಯಡಿಯೂರಪ್ಪ ಮೇಲಿನ ವಾಗ್ದಾಳಿ ತಡೆಯಲು ರಾಷ್ಟ್ರೀಯ ನಾಯಕರೇ ಬರಬೇಕಾ? ಈ ನಾಯಕರಿಗೆ ಜವಾಬ್ದಾರಿ ಇಲ್ಲವಾ? ನನ್ನ ವಿರುದ್ಧ ಎಷ್ಟೇ ದೂಷಣೆ, ಟೀಕೆಗಳು ಬಂದರೂ ಸುಮ್ಮನೆ ಇದ್ದೇನೆ. ತಿರುಗೇಟು ನೀಡಲು ಬರುವುದಿಲ್ಲ ಎಂದಲ್ಲ. ಅಧ್ಯಕ್ಷನಾಗಿರುವುದರಿಂದ ಪ್ರತಿಕ್ರಿಯೆ ನೀಡುತ್ತಿಲ್ಲ. ಆ ಘನತೆ ಕಾಯ್ದುಕೊಂಡಿದ್ದೇನೆ. ಇದರಿಂದ ಕಾರ್ಯಕರ್ತರನ್ನು ಅವಮಾನ ಮಾಡಿದಂತಾಗುತ್ತದೆ' ಎಂದು ವಿಜಯೇಂದ್ರ ಹೇಳಿದರು.

'ನನ್ನ ಕುರಿತು ವರಿಷ್ಠರಿಗೆ ಯಾವುದೇ ರೀತಿ ದೂರು ಕೊಡಲಿ, ಇಲ್ಲವೆ ನಾಲ್ಕು ಗೋಡೆಗಳ ಮಧ್ಯೆ ಮಾತನಾಡಲಿ. ಅದನ್ನು ಬಿಟ್ಟು ಪ್ರತಿನಿತ್ಯವೂ ಸಾರ್ವಜನಿಕವಾಗಿ ಬಾಯಿಗೆ ಬಂದಂತೆ ಮಾತನಾಡುವುದು ಪಕ್ಷದ ಲಕ್ಷಾಂತರ ಕಾರ್ಯಕರ್ತರಿಗೆ ಮಾಡುವ ಅಪಮಾನ. ನಾನು ತಿರುಗೇಟು ನೀಡಲಾರಂಭಿಸಿದರೆ, ಅದರಿಂದ ಅವರು ಕುಗ್ಗಿ ಹೋಗುತ್ತಾರೆ. ಪಕ್ಷದ ಸಂಘಟನೆಯ ಮೇಲೆ ಪರಿಣಾಮ ಬೀರುತ್ತದೆ' ಎಂದರು.

'ಪಕ್ಷದ ಎಲ್ಲ ಹಿರಿಯರ ಜತೆಗೆ ಗೌರವದಿಂದಲೇ ನಡೆದುಕೊಂಡಿದ್ದೇನೆ. ಸಲಹೆ–ಸೂಚನೆಗಳನ್ನು ತೆಗೆದುಕೊಂಡೇ ಕಾರ್ಯನಿರ್ವಹಿಸುತ್ತಿದ್ದೇನೆ. ಯಾರನ್ನೂ ಕಡೆಗಣಿಸಿಲ್ಲ. ಅಂತಹ ಜಾಯಮಾನವೂ ನನ್ನದಲ್ಲ' ಎಂದು ಅವರು ಹೇಳಿದರು.

ನನಗೂ ಅನುಭವವಿದೆ: 'ವಿಜಯೇಂದ್ರಗೆ ಅನುಭವ ಇಲ್ಲ' ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ನಾನು ಮೊದಲಿಗೆ ಕಾರ್ಯಕರ್ತನಾಗಿ ಬಿಜೆಪಿಯಲ್ಲಿ ಕೆಲಸ ಆರಂಭಿಸಿದೆ. ಆ ಬಳಿಕ ಬಿಜೆಪಿ ನಗರ ಜಿಲ್ಲೆ ಪ್ರಧಾನ ಕಾರ್ಯದರ್ಶಿ, ಬಿಜೆಪಿ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿ, ರಾಜ್ಯ ಬಿಜೆಪಿ ಉಪಾಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದೆ. ಸದಸ್ಯತ್ವ ಅಭಿಯಾನ ಮತ್ತು ಸಂಘಟನಾ ಪರ್ವದಲ್ಲೂ ಕರ್ನಾಟಕ ರಾಜ್ಯ ಘಟಕ ದೇಶದಲ್ಲೇ ಮುಂಚೂಣಿಯಲ್ಲಿದೆ. ಹೀಗಾಗಿ ನನಗೆ ಅನುಭವದ ಕೊರತೆ ಇದೆ ಎಂದು ಹೇಳುವುದರಲ್ಲಿ ಹುರುಳಿಲ್ಲ. ಅಧ್ಯಕ್ಷ ಚುನಾವಣೆ ಮುಗಿದ ಮೇಲೆ ಎಲ್ಲದ್ದಕ್ಕೂ ಉತ್ತರ ಕೊಡುತ್ತೇನೆ' ಎಂದರು.

'ಇಲ್ಲಿ ನಡೆಯುತ್ತಿರುವ ಚಟುವಟಿಕೆಗೆ ಹೈಕಮಾಂಡ್ ಅಥವಾ ಬಿ.ಎಲ್. ಸಂತೋಷ್ ಅವರ ಬೆಂಬಲವಿಲ್ಲ. ಆ ರೀತಿ ಬಿಂಬಿಸುವುದೂ ಸರಿಯಲ್ಲ' ಎಂದೂ ವಿಜಯೇಂದ್ರ ಹೇಳಿದರು.

ಯಾವುದೇ ಗುಂಪಿನ ಸಭೆ ಕರೆದಿಲ್ಲ: ಬಸವರಾಜ ಬೊಮ್ಮಾಯಿ

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ದುರಾಡಳಿತ ಮಿತಿ ಮೀರಿದ್ದು, ಜನಸಾಮಾನ್ಯರು, ರೈತರು, ಮಹಿಳೆಯರು ಸಂಕಷ್ಟದಲ್ಲಿದ್ದಾರೆ. ಆತ್ಮಹತ್ಯೆ ಪ್ರಕರಣಗಳೂ ಹೆಚ್ಚುತ್ತಿವೆ. ಇದರ ವಿರುದ್ಧ ಸಮರ ಸಾರಬೇಕಾದ ಬಿಜೆಪಿಯಲ್ಲಿ ಆಂತ ರಿಕ ಭಿನ್ನಾಭಿಪ್ರಾಯದ ಮಾತಿನ ಸಮರ ದುರದೃಷ್ಟಕರ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

'ಪಕ್ಷದಲ್ಲಿ ವರಿಷ್ಠರ ತೀರ್ಮಾನವೇ ಅಂತಿಮ. ನಾನು ಯಾವುದೇ ಗುಂಪುಗಾರಿಕೆಯಲ್ಲಿ ನಂಬಿಕೆ ಇಟ್ಟವನಲ್ಲ. ಆದ್ದರಿಂದ ನಾನು ಯಾವುದೇ ಗುಂಪಿನ ಸಭೆ ಕರೆಯುವ ಪ್ರಶ್ನೆಯೂ ಉದ್ಭವಿಸುವುದಿಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಎಲ್ಲರನ್ನೂ ಒಂದುಗೂಡಿಸುವ ಪ್ರಾಮಾಣಿಕ ಪ್ರಯತ್ನ ಮಾಡುವ ಹಲವಾರು ಮುಖಂಡರಲ್ಲಿ ನಾನೂ ಒಬ್ಬ. ಎರಡೂ ಕಡೆ ತಾಳ್ಮೆ ಕಳೆದುಕೊಳ್ಳದೆ ಬಿ.ಎಸ್.ಯಡಿಯೂರಪ್ಪ ಮತ್ತು ಇತರ ಹಿರಿಯ ಮುಖಂಡರ ಮಾರ್ಗದರ್ಶನದಲ್ಲಿ ಒಟ್ಟಿಗೆ ಕುಳಿತು ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಬೇಕು. ಇಲ್ಲದಿದ್ದರೆ ವರಿಷ್ಠರ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಬೇಕು' ಎಂದಿದ್ದಾರೆ.

'ವರಿಷ್ಠರು ಕೂಡಲೇ ಕರ್ನಾಟಕದಲ್ಲಿನ ಪಕ್ಷದ ಬೆಳವಣಿಗೆಯ ಬಗ್ಗೆ ಗಮನ ಹರಿಸಿ, ಎಲ್ಲ ಪ್ರಮುಖರ ಜೊತೆಗೆ ಚರ್ಚೆ ಮಾಡಿ, ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ ಎನ್ನುವ ನಂಬಿಕೆ ನನಗಿದೆ' ಎಂದೂ ಹೇಳಿದ್ದಾರೆ.

ಪ್ರಸಾದ್ ಅತ್ತಾವರ ಸೇರಿ 11 ಆರೋಪಿಗಳಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಬಿಜೈನಲ್ಲಿರುವ ಕಲರ್ಸ್ ಯೂನಿಸೆಕ್ಸ್ ಸಲೂನ್ ಮೇಲೆ 2025ರ ಜ.23 ರಂದು ದಾಳಿ ನಡೆಸಿದ ಪ್ರಕರಣದಲ್ಲಿ ರಾಮಸೇನೆಯ ಮುಖಂಡ ಪ್ರಸಾದ್ ಅತ್ತಾವರ ಸೇರಿದಂತೆ 11 ಆರೋಪಿಗಳಿಗೆ ಇಲ್ಲಿನ ಎರಡನೇ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿದೆ.

'ಕಿಡಿಗೇಡಿಗಳ ಗುಂಪು ಸಲೂನ್ ಮೇಲೆ ದಾಳಿ ನಡೆಸಿದ್ದು, ಪೀಠೋಪಕರಣಗಳನ್ನು ಜಖಂ ಮಾಡಿದೆ. ಸಲೂನ್‌ನಲ್ಲಿದ್ದ ಇಬ್ಬರು ಮಹಿಳಾ ಸಿಬ್ಬಂದಿ ಮೇಲೆ ಗುಂಪಿನಲ್ಲಿದ್ದ ಕೆಲವರು ಹಲ್ಲೆ ನಡೆಸಿ, ಜೀವ ಬೆದರಿಕೆ ಒಡ್ಡಿದ್ದಾರೆ' ಎಂದು ಆರೋಪಿಸಿ ಸಲೂನ್ ಮಾಲೀಕ ನಗರದ ಆನೆಗುಂಡಿಯ ಸುಧೀರ್ ಶೆಟ್ಟಿ ನಗರದ ಬರ್ಕೆ ಠಾಣೆಗೆ ದೂರು ನೀಡಿದ್ದರು. ಈ ಸಂಬಂಧ ಪೊಲೀಸರು ಒಟ್ಟು 14 ಮಂದಿಯನ್ನು ಬಂಧಿಸಿದ್ದರು.

ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 329 (2) (ಅಕ್ರಮ ಪ್ರವೇಶ), ಸೆಕ್ಷನ್ 324 (5) (ಸೊತ್ತುಗಳ ನಾಶ), ಸೆಕ್ಷನ್ 74 (ಮಹಿಳೆಯರ ಮೇಲೆ ಹಲ್ಲೆ, ಮಾನಭಂಗಯತ್ನ), ಸೆಕ್ಷನ್ 351 (3) (ಕ್ರಿಮಿನಲ್ ಬೆದರಿಕೆ ಒಡ್ಡುವುದು), ಸೆಕ್ಷನ್ 115 (2) (ಹಲ್ಲೆ ನಡೆಸುವುದು), ಸೆಕ್ಷನ್ 109 (ಕೊಲೆಯತ್ನ), ಸೆಕ್ಷನ್ 352 (ಅಪಮಾನಗೊಳಿಸಿ ಶಾಂತಿಭಂಗ ಮಾಡುವುದು) ಹಾಗೂ ಸೆಕ್ಷನ್ 190ರ (ಅಕ್ರಮ ಕೂಟ ರಚಿಸಿ ಅಪರಾಧ ಕೃತ್ಯ ನಡೆಸುವುದು) ಅಡಿ ಪ್ರಕರಣ ದಾಖಲಾಗಿತ್ತು.

'ಆರೋಪಿಗಳು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿರುವ ಇಲ್ಲಿನ ಎರಡನೇ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಪ್ರೀತಿ ಕೆ.ಪಿ. ಅವರು 11 ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿದ್ದಾರೆ' ಎಂದು ಆರೋಪಿಗಳ ಪರ ವಕೀಲ ಮಯೂರ ಕೀರ್ತಿ ತಿಳಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಯೋಜನೆ–ಪೂರ್ವ),
ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡ (ಪಿಯುಬಿ),
21ನೇ ಮಹಡಿ, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001.

ಸಂಖ್ಯೆ: ಕಾಅ/ಯೋ–ಪೂ/ಟೆಂಡರ್/09/2024–25 ದಿನಾಂಕ: 06–02–2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಏಕ ಮತ್ತು ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಯೋಜನೆ – ಪೂರ್ವ ವಿಭಾಗ), ಪೂರ್ವ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಬಿಬಿಎಂಪಿ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–1, ಕೆಡಬ್ಲ್ಯೂ–2 & ಕೆಡಬ್ಲ್ಯೂ–3)

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
	ಕೆಳಕಂಡ ಬಿಬಿಎಂಪಿ ಶಾಲೆಗಳಲ್ಲಿ ವಾಲಿಬಾಲ್ ಕೋರ್ಟ್ ನಿರ್ಮಾಣ ಕಾಮಗಾರಿ.
1	ಬಾಲಕಿಯರ ಪ್ರೌಢ ಶಾಲೆ, ಆಸ್ಟೀನ್ ಟೌನ್. (ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 9.30, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 23250.00
2	ಬಾಲಕರ ಪ್ರೌಢ ಶಾಲೆ, ಆಸ್ಟೀನ್ ಟೌನ್. (ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 9.20, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 23000.00
3	ಬ್ರಾಡ್‌ವೇ ಪ್ರೌಢ ಶಾಲೆ. (ಎಸ್.ಟಿ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 9.28, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 11600.00
4	ಪೂರ್ವ ವಲಯದ ಶಾಂತಿನಗರ, ಶಿವಾಜಿನಗರ ಹಾಗೂ ಪುಲಿಕೇಶಿನಗರ ಮತಕ್ಷೇತ್ರದ ಬಿಬಿಎಂಪಿ ನರ್ಸರಿ ಶಾಲೆಗಳು / ಪ್ರೈಮರಿ ಶಾಲೆಗಳು / ಪ್ರೌಢ ಶಾಲೆಗಳು / ಪಿಯು ಮತ್ತು ಪದವಿ ಕಾಲೇಜು ಇಲ್ಲಿ ಆರ್.ಓ ಪ್ಲಾಂಟ್‌ನ ಸರಬರಾಜು, ಸ್ಥಾಪನೆ ಹಾಗೂ ಕಾರ್ಯಾರಂಭ ಮಾಡುವ ಕಾಮಗಾರಿ. (ಪ್ಯಾಕೇಜ್–01) – ಪ್ರವರ್ಗ–2 (ಎ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 23.30, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50000.00
	ಕೆಳಕಂಡ ಪೂರ್ವ ವಲಯದ ಮತಕ್ಷೇತ್ರದಲ್ಲಿನ ಬಿಬಿಎಂಪಿ ನರ್ಸರಿ / ಪ್ರೈಮರಿ / ಪ್ರೌಢ ಶಾಲೆಗಳು / ಪಿಯು ಹಾಗೂ ಪದವಿ ಕಾಲೇಜು ಇಲ್ಲಿ ಮಳೆ ನೀರು ಕೊಯ್ಲು ಸ್ಥಾಪನೆ ಮತ್ತು ಒದಗಿಸುವ ಕಾಮಗಾರಿ.
5	ಶಾಂತಿನಗರ, ಶಿವಾಜಿನಗರ ಹಾಗೂ ಪುಲಿಕೇಶಿನಗರ. (ಪ್ಯಾಕೇಜ್–02) – ಪ್ರವರ್ಗ–2 (ಎ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 49.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 98000.00
6	ಸಿ.ವಿ. ರಾಮನ್ ನಗರ, ಹೆಬ್ಬಾಳ ಹಾಗೂ ಸರ್ವಜ್ಞನಗರ. (ಪ್ಯಾಕೇಜ್–03) – (ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 19.80, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 49500.00
	ಕೆಳಕಂಡ ವಾರ್ಡ್ ಶಾಲೆಗಳಲ್ಲಿ ಫೇಸ್ ಲಿಫ್ಟಿಂಗ್ ಅಂದಾಜು, ದುರಸ್ತಿಗಳು, ಉನ್ನತೀಕರಣ ಹಾಗೂ ಇತರೆ ಅಗತ್ಯ ಕಾಮಗಾರಿಗಳು.
7	ವಾರ್ಡ್ ಸಂಖ್ಯೆ. 111. (ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 6.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 15000.00
8	ವಾರ್ಡ್ ಸಂಖ್ಯೆ. 110. (ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 29.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 58000.00
9	ವಾರ್ಡ್ ಸಂಖ್ಯೆ. 80. (ಎಸ್.ಸಿ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 15.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 18750.00
10	ವಾರ್ಡ್ ಸಂಖ್ಯೆ. 89. (ಎಸ್.ಸಿ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 9.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 11250.00
11	ವಾರ್ಡ್ ಸಂಖ್ಯೆ. 116. (ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 23.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50000.00
12	ವಾರ್ಡ್ ಸಂಖ್ಯೆ. 63. (ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 20.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50000.00
13	ವಾರ್ಡ್ ಸಂಖ್ಯೆ. 92. (ಪ್ರವರ್ಗ–1) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 31.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 62000.00
	ಕೆಳಕಂಡ ವಾರ್ಡ್ ಸಂಖ್ಯೆ. 98, ಜೋಗುಪಾಳ್ಯದಲ್ಲಿ ದುರಸ್ತಿಗಳು, ಉನ್ನತೀಕರಣ ಹಾಗೂ ಇತರೆ ಅಗತ್ಯ ಕಾಮಗಾರಿಗಳು.
14	ಪ್ರೈಮರಿ ಶಾಲೆ. (ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 15.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 37500.00
15	ಪ್ರೌಢ ಶಾಲೆ. (ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 20.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50000.00
16	ಬಾಲಕಿಯರ ಕಾಲೇಜ್. (ಎಸ್.ಸಿ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 27.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 27000.00
17	ಬೆಂಗಳೂರಿನ ಆಸ್ಟೀನ್ ಟೌನ್ ಹತ್ತಿರದ ಮಾಯ ಬಜಾರ್ ಸ್ಲಂ ಇಲ್ಲಿ ಶಿಶುವಿಹಾರ ಹಾಗೂ ಪ್ರೈಮರಿ ಶಾಲೆ ನಿರ್ಮಾಣ. (ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 140.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,10,000.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **12–02–2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಭರ್ತಿ ಮಾಡಿದ ಟೆಂಡರ್ ಡಾಕ್ಯೂಮೆಂಟ್‌ನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **20–02–2025 ರಂದು ಸಂಜೆ 4.00 ಗಂಟೆವರೆಗೆ.** 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **21–02–2025 ರಂದು ಸಂಜೆ 4.30 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಯೋಜನೆ – ಪೂರ್ವ ವಿಭಾಗ), ಬಿಬಿಎಂಪಿ.

Karnataka Gramin Bank
(A Scheduled Bank established by Government of India, sponsored by Canara Bank)
Head Office: Ballari - Email : apmgroup@kgbk.in

TENDER NOTIFICATION

Proposals are invited from eligible bidders for selection of service provider for providing CBS & allied application services for Karnataka Gramin Bank and Kerala Gramin Bank.

For detailed information about RFP and necessary bidding documents, please visit the official websites of KAGB: **https://karnatakagraminbank.com**, KGB: **https://keralagbank.com**, Canara Bank: **https://canarabank.com/** & NIC Website: **https://eprocure.gov.in/epublish/app.**

Amendments, if any, will be hosted only on the official websites of Karnataka Gramin Bank & Kerala Gramin Bank.

Last Date for Bid submission: 07.03.2025 (03:00 PM)

Sd/-
General Manager

TAMILNADU NEWSPRINT AND PAPERS LIMITED
Kagithapuram - 639 136. Karur Dist. Tamil Nadu.
Phone: 04324-277001. (10 Lines)
E-mail: purchase.recycle@tnpl.co.in

NOTICE INVITING TENDER

Tender No.	Material Description	Due date
242513 006209	Procurement of 1000 MT ± 5% Office Waste Paper (White Records) in Bale form from Karnataka for TNPL Unit - I at Kagithapuram.	14.02.2025

Corrigendum if any will be issued in TNPL Website and NIC portal only. Detailed Terms & conditions are available in the tender document at our websites: **www.tnpl.com / https://tntenders.gov.in/nicgep/app**

DIPR/501/Tender/2025 — *TNPL - Maker of bagasse based eco-friendly Paper*

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಸಂಖ್ಯೆ : ಲೋ.ಇ./ಬಾ.ವಿ./ಪಿ.ಬಿ./ಕೆ.ಡಬ್ಲ್ಯೂ/2024–25/3813 ದಿನಾಂಕ : 05–02–2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999 – 2000 ರ ಪ್ರಕಾರ ಆಕ್ಟ 2000 ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ – 1, 2, 3, 4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ಬಾಗಲಕೋಟೆ** ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಯ ಟೆಂಡರ್ ಅಹ್ವಾನಿಸಲಾಗಿದೆ.

ವರ್ಕ ಇಂಡೆಂಟ್ ನಂ. ಸಾಮಾನ್ಯ : **17848, 17593, 17786, 17894, 18031, 17784, 17785, 17969, 18072, 18450, 17629, 17631, 17632, 17317, 17803, 18274, 17636, 17628, 18293, 18082, 17996, 18120.**

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 500.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 80.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ್ ಅಹ್ವಾನಿಸಲಾಗಿದೆ.

ಅ) ಪ್ರೀ ಬಿಡ್ ಮೀಟಿಂಗ್ ದಿನಾಂಕ	:	18–02–2025 ರ ಬೆಳಿಗ್ಗೆ 11.30 ಘಂಟೆಯವರೆಗೆ.
ಬ) ಟೆಂಡರ್ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ	:	20–02–2025 ರ ಸಂಜೆ 5.30 ಘಂಟೆಯವರೆಗೆ.
ಕ) ಟೆಂಡರ್ ಸ್ವೀಕರಿಸುವ ದಿನಾಂಕ	:	27–02–2025 ರ ಸಂಜೆ 4.00 ಘಂಟೆಯವರೆಗೆ.
ಡ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	28–02–2025 ರ ಸಂಜೆ 4.30 ಘಂಟೆಯವರೆಗೆ.
ಬ) ಆರ್ಥಿಕ ಬಿಡ್ ತೆರೆಯುವ ದಿನಾಂಕ	:	01–03–2025 ರ ಸಂಜೆ 4.30 ಘಂಟೆಯವರೆಗೆ.

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ : **https://kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/475/ಮಣಿಪಾಲ್/2024–25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–5/.ಟೆಂಡರ್.ಅಧಿಸೂಚನೆ/2024–25/6537 ದಿನಾಂಕ: 04–02–2025

ಅಲ್ಪಾವಧಿ ಟೆಂಡರ್ ಅಧಿಸೂಚನೆ.

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ Appendix-E 5054(ಠೇವಣಿ)ಯಲ್ಲಿ (10) ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ. ಇಂಡೆಂಟ್ ಸಂಖ್ಯೆ: 18027, 17625, 17992, 15968, 15969, 17621–ಸಾಮಾನ್ಯ (06), 19032, 17702– ಪ್ರವರ್ಗ || (ಎ) (02), 17708–ಎಸ್.ಸಿ (01) ಮತ್ತು 18026–ಎಸ್.ಟಿ (01), 2) ಕಾಮಗಾರಿ ಅಂದಾಜು ಮೊತ್ತ: **ಕನಿಷ್ಠ ರೂ. 100.00 ಲಕ್ಷಗಳು ಗರಿಷ್ಠ ರೂ. 200.00 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಮೂರನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಇ ಎಮ್ ಡಿ ಮೊತ್ತ : **ಕನಿಷ್ಠ ರೂ. 84,601.69 ಗರಿಷ್ಠ ರೂ. 2,53,832.54,** 5) ಪ್ರೀ ಬಿಡ್ ಮೀಟಿಂಗ್ : 12.02.2025 (11.00 Hrs), 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : 13.02.2025(17.30 Hrs), 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 17.02.2025 (16.30 Hrs), 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18.02.2025 (16.30 Hrs), 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : 21.02.2025 (16.30 Hrs), 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಸೂಚನೆ: ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 12) ಅಂತರ್ಜಾಲ ತಾಣದ ವಿಳಾಸ : https://kppp.karnataka.gov.in, 13) ಗಮನಿಸಬೇಕಾದ ಅಂಶಗಳು : **ಟಿಪ್ಪಣಿ:** 1) ಈ ಕೆಳಗೆ ಸಹಿ ಮಾಡಿರುವವರು ಯಾವೂದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವೂದೆ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ವಾ.ಸಾ.ಸಂ.ಇ/ಕಲಬುರಗಿ/925/ಕೆ.ಎಸ್.ಎಂ.ಸಿ.&ಎ/2024–25 ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂ: ಮು.ಪ್ರ.ವ್ಯ(ತಾ)/ಉ.ಪ್ರ.ವ್ಯ(ಎಪಿಸಿಸಿ & ಪ್ರೊ)/ಕಾನಿಇಂ/ಸ.ಕಾ.ನಿ.ಇಂ/2024–25 ದಿನಾಂಕ:06.02.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಸಂಯೋಜಿತ ಪ್ಯಾಕೇಜ್** ಅಡಿಯಲ್ಲಿ, ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣೆ ಸಂಖ್ಯೆ/ಕಾಮಗಾರಿಯ ವಿವರ
ಕವಿಪ್ರನಿನಿ/2024–25/ಎಸ್‌ಎಸ್/ವರ್ಕ್_ಇಂಡೆಂಟ್ 1965

ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ
ಕಾಮಗಾರಿ–ಎ: ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ **66/11ಕೆವಿ ಬಿಳಿಕೆರೆ ಉಪಕೇಂದ್ರದಲ್ಲಿ** 1x12.5 ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನು 1x20 ಎಂವಿಎ, 66/11 ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ.
ಕಾಮಗಾರಿ–ಬಿ: ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕಿನ **66/11ಕೆವಿ ಮಡಿಕೇರಿ ಉಪಕೇಂದ್ರದಲ್ಲಿ** 1x8ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನು 1x12.5ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ
ಕಾಮಗಾರಿ–ಸಿ: ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ **66/11ಕೆವಿ ಬೆಸಗರಹಳ್ಳಿ ವಿದ್ಯುತ್ ಉಪಕೇಂದ್ರದಲ್ಲಿ** 1x8ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನು 1x12.5ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ
ಕಾಮಗಾರಿ–ಡಿ: ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ **66/11ಕೆವಿ ಕೊಪ್ಪ ಉಪಕೇಂದ್ರದಲ್ಲಿ** 1x12.5ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕ–2ನ್ನು 1x20ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ.
ಕಾಮಗಾರಿ –ಇ: ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ **66/11ಕೆವಿ ಕೆ.ಎಂ.ದೊಡ್ಡಿ ಉಪಕೇಂದ್ರದಲ್ಲಿ** 1x12.5ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನು 1x20ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿಗಳನ್ನು ಭಾಗಶ: ಟರ್ನ್‌ಕೀ ಆಧಾರದ ಮೇಲೆ ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು (11ಕೆವಿ ಸ್ವಿಚ್‌ಗೇರ್ ಪೂರೈಕೆಯನ್ನು ಹೊರತುಪಡಿಸಿ) ಮತ್ತು ಎಲ್ಲಾ ಉಪಕರಣಗಳು / ಸಾಮಗ್ರಿಗಳ ಸ್ಥಾಪನೆ (ಕಳಚಿಹಾಕುವಿಕೆ ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ 11.02.2025 ರಂದು 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 27.02.2025 15.00 ಗಂಟೆ.** ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ನಿಗಮ ಕಛೇರಿ, 2ನೇ ಮಹಡಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009.

ಸಂವಿಧಾನ ರಚನಾಸಭೆಯ ಚರ್ಚೆಗಳನ್ನು ಓದಿದರೆ ಯುಸಿಸಿ ಅರ್ಥವಾಗುವುದು: ಪ್ರಧಾನಿ

ಯುಸಿಸಿ ಜಾರಿಗೆ ಬದ್ಧ: ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿ ಮಾಡಬೇಕು ಎಂಬುದು ಸಂವಿಧಾನ ರಚನಾಕಾರರ ಉದ್ದೇಶವಾಗಿತ್ತು. ಸಂವಿಧಾನ ರಚನಾಕಾರರ ಈ ಆಶಯವನ್ನು ಕಾರ್ಯಗತಗೊಳಿಸಲು ನಾವು ಬದ್ಧ' ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸುವ ಈ ವೇಳೆ ಅವರು ಮಾತು ಹೇಳಿದ್ದಾರೆ.

'ಯುಸಿಸಿ ಎಂದರೆ ಏನು ಎಂದು ಕೆಲವರು ಯೋಚನೆ ಮಾಡಬಹುದು. ಸಂವಿಧಾನ ರಚನಾಸಭೆಯಲ್ಲಿ ನಡೆದಿದ್ದ ಚರ್ಚೆಗಳನ್ನು ಓದಿದಾಗ ಅವರಿಗೆ ಈ ಕುರಿತು ತಿಳಿಯಲಿದೆ' ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಯುಸಿಸಿ ಜಾರಿಯ ಅಗತ್ಯತೆ ಕುರಿತು ಪರಾಮರ್ಶೆ ಮಾಡುವುದಕ್ಕಾಗಿ ಗುಜರಾತ್ ಸರ್ಕಾರ ಸಮಿತಿ ರಚಿಸಿರುವ ಬೆನ್ನಲ್ಲೇ ಮೋದಿ ಅವರಿಂದ ಈ ಹೇಳಿಕೆ ಹೊರಬಿದ್ದಿದೆ. ಉತ್ತರಾಖಂಡ, ಯುಸಿಸಿ ಜಾರಿಗೊಳಿಸಿರುವ ಮೊದಲ ರಾಜ್ಯವಾಗಿದೆ.

ದೇಶದಲ್ಲಿ ಯುಸಿಸಿ ಜಾರಿಗೊಳಿಸಬೇಕು ಎಂದು ಸಂವಿಧಾನ ರಚನಾ-ಸಭೆಯಲ್ಲಿ ನಡೆದ ಚರ್ಚೆ ವೇಳೆ ಕೆಲ ಸದಸ್ಯರು ಪ್ರತಿಪಾದಿಸಿದ್ದರು ಎಂಬುದು ದಾಖಲೆಗಳಿಂದ ತಿಳಿದುಬರುತ್ತದೆ.

'ಯುಸಿಸಿಯಿಂದ ತಾರತಮ್ಯ ತೊಲಗಿ, ಏಕತೆ ಸಾಧ್ಯವಾಗಲಿದೆ' ಎಂಬುದು ಯುಸಿಸಿ ಪರ ಇದ್ದವರ ವಾದವಾಗಿತ್ತು. ಇಂತಹ ಕ್ರಮದಿಂದ ಅಲ್ಪಸಂಖ್ಯಾತರ ಹಕ್ಕುಗಳು ಹಾಗೂ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಲಿದೆ ಎಂಬ ವಾದವನ್ನೂ ಕೆಲವರು ಮಂಡಿಸಿದ್ದರು.

ಯುಸಿಸಿ ವಿಚಾರದಲ್ಲಿ ಕೆಲವರು ರಾಜಕೀಯ ಮಾಡಬಹುದು. ಇದನ್ನು ಸವಾಲಾಗಿ ಸ್ವೀಕರಿಸಿ, ಸಂವಿಧಾನ ರಚನಾಕಾರರ ಉದ್ದೇಶವನ್ನು ನಾವು ಈಡೇರಿಸುತ್ತೇವೆ

ನರೇಂದ್ರ ಮೋದಿ, ಪ್ರಧಾನಿ

ರಾಜಕೀಯ ಅಸ್ತ್ರವಾಗಬಾರದು: ಜೈರಾಮ್

ನವದೆಹಲಿ (ಪಿಟಿಐ): ಏಕರೂಪ ನಾಗರಿಕ ಸಂಹಿತೆಯು (ಯುಸಿಸಿ) ದೇಶವನ್ನು 'ಶಾಶ್ವತವಾಗಿ ಧ್ರುವೀಕರಣ'ದ ಸ್ಥಿತಿಯಲ್ಲಿ ಇರಿಸಲು ಒಂದು ರಾಜಕೀಯ ಅಸ್ತ್ರವಾಗಬಾರದು ಎಂದು ಕಾಂಗ್ರೆಸ್ ಗುರುವಾರ ಹೇಳಿದೆ.

ನಿಜವಾದ ಸಹಮತವನ್ನು ಮೂಡಿಸುವ ಉದ್ದೇಶದಿಂದ ವ್ಯಾಪಕ ಸಮಾಲೋಚನೆ ನಡೆಸಿದ ನಂತರವೇ ಯುಸಿಸಿ ಜಾರಿಗೆ ತರಲು ಸಾಧ್ಯ ಎಂದು ಕಾಂಗ್ರೆಸ್ ಅಭಿಪ್ರಾಯಪಟ್ಟಿದೆ.

ಉತ್ತರಾಖಂಡದಲ್ಲಿ ಆಡಳಿತಾರೂಢ ಬಿಜೆಪಿಯು ಯುಸಿಸಿಯನ್ನು ಜಾರಿಗೆ ತಂದ ಕೆಲವೇ ದಿನಗಳಲ್ಲಿ ಕಾಂಗ್ರೆಸ್ ಪಕ್ಷವು ಈ ಮಾತು ಹೇಳಿದೆ. ಯುಸಿಸಿಯ ಅಗತ್ಯದ ಬಗ್ಗೆ ಅಧ್ಯಯನ ನಡೆಸಲು ಹಾಗೂ ಕರಡು ಮಸೂದೆಯನ್ನು ಸಿದ್ಧಪಡಿಸಲು ಗುಜರಾತ್ ಸರ್ಕಾರವು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ-ಯೊಬ್ಬರ ನೇತೃತ್ವದಲ್ಲಿ ಸಮಿತಿ ರಚಿಸಿದೆ.

ಉತ್ತರಾಖಂಡದಲ್ಲಿ ರೂಪಿಸಿರುವ ಯುಸಿಸಿ ನಿಯಮಗಳು ಪರಿಣಾಮಕಾರಿಯಾಗಿಲ್ಲ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ ವಿಭಾಗ) ಜೈರಾಮ್ ರಮೇಶ್ ಅವರು ಹೇಳಿದ್ದಾರೆ. 'ಕೌಟುಂಬಿಕ ಕಾನೂನುಗಳ ಬಗ್ಗೆ ಕಳೆದ ಒಂದು ದಶಕದಲ್ಲಿ ವ್ಯಕ್ತವಾದ ಕಳವಳಗಳ ಬಗ್ಗೆ ಈ ಕಾನೂನು ಸ್ಪಂದಿಸುವ ಕೆಲಸ ಮಾಡಿಲ್ಲ. ಬಿಜೆಪಿಯ ವಿಭಜನಕಾರಿ ಕಾರ್ಯಸೂಚಿಯ ಭಾಗವಾಗಿ ಇದನ್ನು ಬಲವಂತದಿಂದ ಹೇರಲಾಗಿದೆ' ಎಂದು ರಮೇಶ್ ಅವರು ಹೇಳಿದ್ದಾರೆ.



ಸಂವಿಧಾನದ 44ನೆಯ ವಿಧಿಯಲ್ಲಿ ಹೇಳಿರುವಂತಹ ಏಕರೂಪ ನಾಗರಿಕ ಸಂಹಿತೆಯು, ದೇಶದಲ್ಲಿ ನಿಜವಾದ ಸಹಮತ ಮೂಡಿಸುವ ಉದ್ದೇಶದಿಂದ ವಿಸ್ತೃತ ಚರ್ಚೆಗಳು, ಮಾತುಕತೆಗಳು ನಡೆದ ನಂತರವಷ್ಟೇ ರೂಪುಗೊಳ್ಳಲು ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಹೊಗಳುತ್ತಲೇ ಖರ್ಗೆ ಕಾಲೆಳೆದ ಮೋದಿ

ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಹೊಗಳಿದ ಪ್ರಧಾನಿ ನರೇಂದ್ರ ಮೋದಿ, ಲಘು ಧಾಟಿಯಲ್ಲಿ ಆಗಾಗ ಅವರ ಕಾಲೆಳೆದ ಪ್ರಸಂಗಕ್ಕೆ ರಾಜ್ಯಸಭೆ ಗುರುವಾರ ಸಾಕ್ಷಿಯಾಯಿತು.

ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲೆ ನಡೆದ ಚರ್ಚೆ ವೇಳೆ, ಕಾಂಗ್ರೆಸ್ ವಿರುದ್ಧವೂ ಮೋದಿ ಚಾಟಿ ಬೀಸಿದರು.

'ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ನನಗೆ ಅಪಾರ ಗೌರವ ಇದೆ. ಸಾರ್ವಜನಿಕ ಜೀವನದಲ್ಲಿ ಇಷ್ಟು ದೀರ್ಘ ಅವಧಿ ಇರುವುದು ಸುಲಭದ ಮಾತಲ್ಲ' ಎಂದು ಹೇಳಿದರು.

ಆಗ, ಖರ್ಗೆ ಅವರು ಮಾತನಾಡಲು ಮುಂದಾದರು. ಅದಕ್ಕೆ ಅವಕಾಶ ನೀಡದೇ ಮಾತು ಮುಂದುವರಿಸಿದ ಮೋದಿ, 'ನಿಮ್ಮ ಕುರಿತ ಇಂತಹ ಮಾತುಗಳು ನಿಮ್ಮ ಮನೆಯಲ್ಲಿ (ಪಕ್ಷದಲ್ಲಿ) ಕೇಳಿಬರುವುದಿಲ್ಲ. ಅದಕ್ಕೆ ನಾನೇ ಹೇಳುತ್ತಿರುವೆ' ಎಂದಾಗ, ಸದನ ನಗೆಯಿಂದ ತುಂಬಿತು.

ಇದಕ್ಕೂ ಮುನ್ನ ಮಾತನಾಡಿದ ಖರ್ಗೆ ಅವರು, ಹಿಂದಿಯ ಖ್ಯಾತ ಕವಿ ಗೋಪಾಲದಾಸ್ ನೀರಜ್ ಅವರ ಕವನ ಉಲ್ಲೇಖಿಸಿದ್ದರು.

'ತಮ್ಮ ಭಾಷಣದಲ್ಲಿ ಕವನ-ಶಾಯರಿಗಳನ್ನು ಉಲ್ಲೇಖಿಸುವ ಹವ್ಯಾಸ ಖರ್ಗೆ ಅವರಿಗಿದೆ' ಎಂದ ಮೋದಿ, ನೀರಜ್ ಅವರ ಮತ್ತೊಂದು ಕವನವನ್ನು ಹೇಳುವ ಮೂಲಕ ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ನಡೆಸಿದರು.

'ಕವಿ ನೀರಜ್ ಈ ಕವಿತೆಗಳನ್ನು ಯಾವಾಗ ಬರೆದಿದ್ದರು ಎಂಬುದು ಖರ್ಗೆ ಅವರಿಗೆ ಗೊತ್ತಿದೆ. ಆದರೆ, ತಮ್ಮ ನೋವನ್ನು ಕಾಂಗ್ರೆಸ್ ಪಕ್ಷದೊಳಗೆ ವ್ಯಕ್ತಪಡಿಸಲು ಅವರಿಗೆ ಆಗುತ್ತಿಲ್ಲ' ಎಂದು ಕುಟುಕಿದರು.

'ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರ ಬಗ್ಗೆಯೂ ನನಗೆ ಅಪಾರ ಗೌರವ ಇದೆ. ಈ ನಾಯಕರು ಸಾರ್ವಜನಿಕ ಬದುಕಿನಲ್ಲಿ ದೀರ್ಘ ಸಮಯ ಕಳೆಯುವ ಜೊತೆಗೆ ಗಮನಾರ್ಹ ಸಾಧನೆಯನ್ನೂ ಮಾಡಿದ್ದಾರೆ' ಎಂದರು.

ರಾಜ್ಯಪಾಲ ರವಿ ನಡೆ ಪ್ರಶ್ನಿಸಿದ ಸುಪ್ರೀಂ ಕೋರ್ಟ್

ತಮ್ಮದೇ ಪ್ರಕ್ರಿಯೆ ಆಳವಡಿಸಿಕೊಂಡಿದ್ದಾರೆಯೇ?

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ತಮಿಳುನಾಡಿನ ವಿಧಾನಸಭೆಯ ಅಂಗೀಕಾರ ಪಡೆದಿರುವ ಮಸೂದೆಗಳಿಗೆ ಅಂಕಿತ ಹಾಕದೆ ಇರುವ ರಾಜ್ಯಪಾಲ ಆರ್.ಎನ್. ರವಿ ಅವರ ನಡೆಯನ್ನು ಪ್ರಶ್ನಿಸಿರುವ ಸುಪ್ರೀಂ ಕೋರ್ಟ್, ಅವರು 'ತಮ್ಮದೇ ಆದ ಪ್ರಕ್ರಿಯೆಗಳನ್ನು ಅಳವಡಿಸಿಕೊಂಡಿರು-ವಂತೆ ಕಾಣುತ್ತಿದೆ' ಎಂದು ಹೇಳಿದೆ.

ಹೀಗೆ ಮಾಡುವ ಮೂಲಕ ರವಿ ಅವರು ಸಂವಿಧಾನದ 200ನೆಯ ವಿಧಿಯ ಆಶಯಕ್ಕೆ ಸೋಲಾಗುವಂತೆ ಮಾಡುತ್ತಿರುವಂತಿದೆ ಎಂದೂ ಹೇಳಿದೆ. ತಮಿಳುನಾಡು ಸರ್ಕಾರ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರು ಇರುವ ವಿಭಾಗೀಯ ಪೀಠವು, ಮಸೂದೆಗಳಿಗೆ ರಾಜ್ಯಪಾಲರು ಎಷ್ಟು ಕಾಲ ಅಂಕಿತ ಹಾಕದೆ ಇರಬಹುದು ಎಂದು ಪ್ರಶ್ನಿಸಿದೆ.

ರಾಜ್ಯಪಾಲರು ಮಸೂದೆಗೆ ಸಹಿ ಹಾಕುತ್ತಿಲ್ಲ, ಮಸೂದೆಗಳನ್ನು ಮರುಪರಿಶೀಲಿಸುವಂತೆ ವಿಧಾನಸಭೆಯನ್ನು ಕೋರುತ್ತಲೂ ಇಲ್ಲ. ಹೀಗೆ ಮಾಡುವುದರಿಂದ ಏನೂ ಸ್ಪಷ್ಟವಾಗುವುದಿಲ್ಲ ಎಂದು ಪೀಠ ಹೇಳಿದೆ.

ವಿಧಾನಸಭೆ ಅಂಗೀಕಾರ ನೀಡಿದ ಮಸೂದೆಗಳಿಗೆ ಅಂಕಿತ ಹಾಕುವ ಅಥವಾ ಆ ಮಸೂದೆಗಳನ್ನು ತಡೆಹಿಡಿಯುವ ಅಧಿಕಾರವನ್ನು 200ನೆಯ ವಿಧಿಯು ರಾಜ್ಯಪಾಲರಿಗೆ ನೀಡುತ್ತದೆ. ರಾಜ್ಯಪಾಲರು ಮಸೂದೆಯನ್ನು ವಿಧಾನಸಭೆಗೆ ಮರುಪರಿಶೀಲನೆಗೆ ಕಳುಹಿಸುವ ಅಧಿಕಾರವನ್ನೂ ಹೊಂದಿದ್ದಾರೆ.

ತಮಿಳುನಾಡು ಸರ್ಕಾರದ ಪರವಾಗಿ ಹಿರಿಯ ವಕೀಲರಾದ ರಾಕೇಶ್ ದ್ವಿವೇದಿ, ಎ.ಎಂ. ಸಿಂಘ್ವಿ, ಮುಕುಲ್ ರೋಹಟಗಿ ಮತ್ತು ಪಿ. ವಿಲ್ಸನ್ ಅವರು ಮಂಡಿಸಿದ ವಾದಗಳನ್ನು ಆಲಿಸಿದ ಪೀಠವು ತಾನು ಪರಿಗಣಿಸಬೇಕಿರುವ ವಿಷಯಗಳು ಯಾವುವು ಎಂಬುದನ್ನು ಅಂತಿಮಗೊಳಿಸಿತು.

ರಾಜ್ಯಪಾಲರ ಪರವಾಗಿ ವಾದಿಸಿದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು, ರಾಜ್ಯಪಾಲರ ಹುದ್ದೆ ಬಹಳ ಸಣ್ಣದು ಎಂದು ಬಿಂಬಿಸಲು ಸರ್ಕಾರ ಯತ್ನಿಸಿದೆ ಎಂದರು. ಆದರೆ ಪೀಠವು, 'ರಾಜ್ಯಪಾಲರ ಅಧಿಕಾರದ ಮಹತ್ವವನ್ನು ತಗ್ಗಿಸಲು ನಾವು ಬಯಸುವುದಿಲ್ಲ. ಅವರ ಕಾರ್ಯಗಳನ್ನು ಪರಿಶೀಲಿಸುತ್ತಿದ್ದೇವೆ' ಎಂದು ಹೇಳಿತು.

ಪೀಠವು ಪರಿಶೀಲಿಸಲಿರುವ ಅಂಶಗಳು

- ವಿಧಾನಸಭೆಯು ಮಸೂದೆಗೆ ಅಂಗೀಕಾರ ನೀಡಿ ಅದನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸುತ್ತದೆ. ರಾಜ್ಯಪಾಲರು ಸಹಿ ಹಾಕುವುದಿಲ್ಲ. ಆದರೆ ಮಸೂದೆಗೆ ಮತ್ತೆ ಅಂಗೀಕಾರ ನೀಡುವ ವಿಧಾನಸಭೆಯು ಅದನ್ನು ಅಂಕಿತಕ್ಕೆ ಮತ್ತೆ ರಾಜ್ಯಪಾಲರಿಗೆ ಕಳುಹಿಸುತ್ತದೆ. ಆಗಲೂ ಅದನ್ನು ತಡೆಹಿಡಿಯುವ ಅಧಿಕಾರ ರಾಜ್ಯಪಾಲರಿಗೆ ಇದೆಯೇ?
- ರಾಜ್ಯಪಾಲರಿಗೆ ಮಸೂದೆಗಳಿಗೆ ಸಹಿ ಹಾಕುವ, ಹಾಕದೆ ಇರುವ ವಿಚಾರದಲ್ಲಿ ಇರುವ ಪರಮಾಧಿಕಾರ ಏನು, ಅಂತಹ ಅಧಿಕಾರಕ್ಕೆ ಸಂವಿಧಾನದ ಚೌಕಟ್ಟಿನಲ್ಲಿ ಸ್ಥಾನವಿದೆಯೇ?
- ಮಸೂದೆಗಳನ್ನು ರಾಷ್ಟ್ರಪತಿಯವರ ಗಮನಕ್ಕೆ ತರುವ ರಾಜ್ಯಪಾಲರ ಅಧಿಕಾರವು ಕೆಲವು ನಿರ್ದಿಷ್ಟ ವಿಷಯಗಳಿಗೆ ಸೀಮಿತವೇ ಅಥವಾ ಅದರ ಆಚೆಗೂ ಆ ಅಧಿಕಾರ ಇದೆಯೇ?
- ರಾಷ್ಟ್ರಪತಿಯವರಿಗೆ ಮಸೂದೆಯನ್ನು ರವಾನಿಸುವಾಗ ರಾಜ್ಯಪಾಲರು ಪರಿಗಣಿಸುವ ಅಂಶಗಳು ಯಾವುವು, ಸಂವಿಧಾನದ 200ನೆಯ ವಿಧಿಯನ್ನು ಹೇಗೆ ವ್ಯಾಖ್ಯಾನಿಸಬೇಕು?

'ಆರ್‌ಎಸ್‌ಎಸ್ ಕಾರ್ಯಸೂಚಿಗೆ ಯತ್ನ'

ಯುಜಿಸಿ ಕರಡು ವಿರೋಧಿ ಪ್ರತಿಭಟನೆಯಲ್ಲಿ ಪಾಲ್ಗೊಂಡ ರಾಹುಲ್ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ, ಕುಲಪತಿಗಳು ಮತ್ತು ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದ ಯುಜಿಸಿ ಕರಡು ನಿಯಮಗಳು ಆರ್‌ಎಸ್‌ಎಸ್‌ನ 'ಒಂದೇ ಇತಿಹಾಸ, ಒಂದೇ ಸಂಪ್ರದಾಯ, ಒಂದೇ ಭಾಷೆ' ಕಾರ್ಯಸೂಚಿಯನ್ನು ದೇಶದ ಮೇಲೆ ಹೇರುವ ಪ್ರಯತ್ನವಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಆರೋಪಿಸಿದರು.

ಯುಜಿಸಿ ಕರಡು ವಿರೋಧಿಸಿ ಡಿಎಂಕೆ ವಿದ್ಯಾರ್ಥಿ ಘಟಕ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಆರ್‌ಎಸ್‌ಎಸ್ ತನ್ನ 'ದಿವಾಳಿ'ಗೊಂಡ ಈ ಸಿದ್ಧಾಂತವನ್ನು ದೇಶದ ಮೇಲೆ ಹೇರಲು ಜನರು ಅವಕಾಶ ನೀಡುವುದಿಲ್ಲ ಎಂದರು.

ವಿವಿಧ ರಾಜ್ಯಗಳ ಶಿಕ್ಷಣ ವ್ಯವಸ್ಥೆಯೊಂದಿಗೆ ಆರ್‌ಎಸ್‌ಎಸ್ ಮಾಡುತ್ತಿರುವ ಈ ಪ್ರಯತ್ನ ಅದರ ಕಾರ್ಯಸೂಚಿಯನ್ನು ಹೇರುವ ಮತ್ತೊಂದು ಪ್ರಯತ್ನ-ವಾಗಿದೆ. ಅದಕ್ಕಾಗಿಯೇ, ಸಂವಿಧಾನದ ಮೇಲೂ ದಾಳಿ ಮಾಡುತ್ತಿದೆ ಎಂದರು.

'ತಮಿಳು ಜನರು ತಮ್ಮದೇ ಆದ ಇತಿಹಾಸ, ಭಾಷೆ, ಸಂಪ್ರದಾಯ ಹೊಂದಿದ್ದಾರೆ. ಅವರಿಗೆ ಹೋರಾಟಗಳ ಇತಿಹಾಸವಿದೆ. ಯುಜಿಸಿಯ ಹೊಸ ಕರಡು ನಿಯಮಗಳನ್ನು ಮತ್ತು ಆರ್‌ಎಸ್‌ಎಸ್‌ನ ಆಧಿಪತ್ಯ ಹೇರುವುದು ಆ ಜನರಿಗೆ ಮತ್ತು ಉಳಿದ ರಾಜ್ಯಗಳಿಗೂ ಮಾಡುವ ಅವಮಾನ. ಸಂವಿಧಾನದ ಮೇಲೆ ದಾಳಿ ಮಾಡುವುದು ಅಸಾಧ್ಯವೆಂದು ಆರ್‌ಎಸ್‌ಎಸ್‌ಗೆ ಮನವರಿಕೆ ಮಾಡಲು ಈ ರೀತಿಯ ಪ್ರತಿಭಟನೆಗಳು ನಡೆದಾಗ ನಮ್ಮ ರಾಜ್ಯ, ಸಂಸ್ಕೃತಿ, ಸಂಪ್ರದಾಯ ಹಾಗೂ ಇತಿಹಾಸಗಳ ಮೇಲೆ ಅವರಿಗೆ ದಾಳಿ ಮಾಡಲು ಸಾಧ್ಯವಾಗದು' ಎಂದರು.

ಪ್ರತಿಭಟನೆ ಬೆಂಬಲಿಸಿ ಪಾಲ್ಗೊಂಡಿದ್ದ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿ, 'ಎನ್‌ಇಪಿ ಎನ್ನುವುದು ವಿಶ್ವವಿದ್ಯಾಲಯಗಳನ್ನು ಉದ್ಯಮಿಗಳಿಗೆ ವಹಿಸುವ ಪಿತೂರಿ. ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರದ ಎಲ್ಲ ಅಧಿಕಾರಗಳ ಸ್ವಾಧೀನ ಬಯಸುತ್ತಿದೆ. ರಾಜಕಾರಣಿಗಳನ್ನು ಕೈಗಾರಿಕೋದ್ಯಮಿಗಳ ಸೇವಕರನ್ನಾಗಿ ಮಾಡಲು ಬಯಸುತ್ತಿದೆ. ನಾವು ಎಂದಿಗೂ ಎನ್‌ಇಪಿಯನ್ನು ಬೆಂಬಲಿಸುವುದಿಲ್ಲ' ಎಂದು ಅಖಿಲೇಶ್ ಹೇಳಿದರು.

ಯುಜಿಸಿ ಕರಡು ವಿರೋಧಿಸಿ ನವದೆಹಲಿಯಲ್ಲಿ ಡಿಎಂಕೆ ವಿದ್ಯಾರ್ಥಿ ಘಟಕ ಗುರುವಾರ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾತನಾಡಿದರು – ಪಿಟಿಐ ಚಿತ್ರ

ಯುಜಿಸಿ ಕರಡು: ಪ್ರತಿಕ್ರಿಯೆ ಸಲ್ಲಿಸುವ ಗಡುವು ವಿಸ್ತರಣೆ

ನೇಮಕಾತಿ ಮತ್ತು ಬಡ್ತಿಗೆ ಸಂಬಂಧಿಸಿ ಯುಜಿಸಿ ರೂಪಿಸಿರುವ ಹೊಸ ಕರಡು ನಿಯಮಾವಳಿ ಕುರಿತು ಪ್ರತಿಕ್ರಿಯೆಗಳನ್ನು ಸಲ್ಲಿಸಲು ನಿಗದಿಪಡಿಸಿದ್ದ ಫೆ.5ರ ಗಡುವನ್ನು ಇದೇ 28ರವರೆಗೆ ವಿಸ್ತರಿಸಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಪ್ರತಿಕ್ರಿಯೆ ಸಲ್ಲಿಸಲು ಕೊನೆ ದಿನಾಂಕ ವಿಸ್ತರಿಸುವಂತೆ ಸಂಬಂಧಿಸಿದ ಎಲ್ಲ ಭಾಗೀದಾರರಿಂದ ಬಂದಿದ್ದ ಕೋರಿಕೆಗಳನ್ನು ಪರಿಗಣಿಸಿ, ಈ ಗಡುವನ್ನು ವಿಸ್ತರಿಸಲಾಗಿದೆ ಎಂದು ಯುಜಿಸಿ ಕಾರ್ಯದರ್ಶಿ ಮನೀಶ್ ಜೋಶಿ ತಿಳಿಸಿದ್ದಾರೆ.

ಕರ್ನಾಟಕ ಸೇರಿ 6 ರಾಜ್ಯಗಳು ಯುಜಿಸಿಯ ಕರಡು ನಿಯಮಗಳ ವಿರುದ್ಧ ನಿರ್ಣಯ ಕೈಗೊಂಡಿವೆ. ಕೇಂದ್ರ ತಕ್ಷಣವೇ ಈ ಕರಡು ನಿಯಮಗಳನ್ನು ಹಿಂಪಡೆಯಬೇಕು

ಜೈರಾಮ್ ರಮೇಶ್

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಪ್ರಧಾನ್ ಕಿಡಿ

'ವಿಪಕ್ಷ ನಾಯಕರು ತಮ್ಮ ಸವಕಲು ರಾಜಕೀಯ ನಿರೂಪಣೆ-ಗಳನ್ನು ಸಾಧಿಸಲು, ಯುಜಿಸಿಯ ಪ್ರಗತಿಪರ ಶೈಕ್ಷಣಿಕ ಸುಧಾರಣೆಗಳ ಬಗ್ಗೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಈ ಸುಧಾರಣೆಗಳನ್ನು ಅವರು ಕಾಲ್ಪನಿಕ ಬೆದರಿಕೆಗಳಾಗಿ ತಿರುಚುತ್ತಿದ್ದಾರೆ' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಗುರುವಾರ ಟೀಕಿಸಿದರು.

'ಸಂವಿಧಾನ ರಕ್ಷಣೆಯ ಸ್ವಯಂಘೋಷಿತ ಚಾಂಪಿಯನ್ ರಾಹುಲ್ ಅವರು ಒಂದಿಷ್ಟು ಸಮಯ ಮೀಸಲಿಟ್ಟು ಯುಜಿಸಿ ಕರಡು ನಿಯಮಗಳನ್ನು ಓದುವಂತೆ ಸಲಹೆ ನೀಡುವೆ' ಎಂದು ಪ್ರಧಾನ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಚಂದ್ರಯಾನ–4': 2027ಕ್ಕೆ ಚಾಲನೆ– ಸಚಿವ ಜಿತೇಂದ್ರ

ನವದೆಹಲಿ (ಪಿಟಿಐ): 'ಚಂದ್ರನ ಮೇಲ್ಮೈನಲ್ಲಿನ ಕಲ್ಲುಗಳ ಮಾದರಿಗಳನ್ನು ಹೊತ್ತು ಭೂಮಿಗೆ ತರಲು 2027ರ ವೇಳೆಗೆ 'ಚಂದ್ರಯಾನ 4' ಯೋಜನೆಗೆ ಚಾಲನೆ ನೀಡಲಾಗುವುದು' ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಹೇಳಿದರು.

ಜಿತೇಂದ್ರ ಸಿಂಗ್

'ಕಲ್ಲುಗಳ ಮಾದರಿಗಳನ್ನು ಹೊರುವ ಶಕ್ತಿ ಹೊಂದಿರುವ ಎರಡು ಪ್ರತ್ಯೇಕ ರಾಕೆಟ್‌ಗಳನ್ನು ಉಡ್ಡಯನ ಮಾಡಲಾಗುವುದು. ಈ ರಾಕೆಟ್‌ಗಳಲ್ಲಿ ಐದು ವಿವಿಧ ಸಲಕರಣೆಗಳು ಇರಲಿವೆ. ಇವುಗಳನ್ನು ಕ್ಷಕೆಯಲ್ಲಿ ಜೋಡಿಸಲಾಗುವುದು' ಎಂದರು.

'ಮುಂದಿನ ವರ್ಷ ಮಾನವರನ್ನು ಬಾಹ್ಯಾಕಾಶಕ್ಕೆ ಕಳುಹಿಸಿ, ಸುರಕ್ಷಿತವಾಗಿ ವಾಪಸು ಕರೆಸಿಕೊಳ್ಳುವ 'ಗಗನಯಾನ' ಯೋಜನೆಯನ್ನು ಕೂಡ ಜಾರಿ ಮಾಡಲಾಗುವುದು. 2026ರಲ್ಲಿ 'ಸಮುದ್ರಯಾನ' ಯೋಜನೆ ಜಾರಿ ಮಾಡಲಿದ್ದೇವೆ. ಸಮುದ್ರದ 6 ಸಾವಿರ ಮೀಟರ್‌ನಷ್ಟು ಆಳಕ್ಕೆ ಮೂವರು ವಿಜ್ಞಾನಿಗಳು ತೆರಳಲಿದ್ದಾರೆ' ಎಂದು ಮಾಹಿತಿ ನೀಡಿದರು.

ಲಾ ನಿನಾ ಪರಿಣಾಮ ಇದ್ದರೂ ತಾಪಮಾನ ಏರಿಕೆ



ನವದೆಹಲಿ (ಪಿಟಿಐ): ಈ ವರ್ಷದ ಜನವರಿ ತಿಂಗಳು ವಿಶ್ವವು ಕಂಡ ಅತ್ಯಂತ ಹೆಚ್ಚು ತಾಪಮಾನದ 'ಜನವರಿ ತಿಂಗಳು' ಎಂದು ಯುರೋಪಿನ ಹವಾಮಾನ ಏಜೆನ್ಸಿ ಹೇಳಿದೆ. ಜಾಗತಿಕ ತಾಪಮಾನ ಕಡಿಮೆ ಮಾಡುವ 'ಲಾ ನಿನಾ' ಪರಿಣಾಮ ಇದ್ದರೂ ಜನವರಿಯಲ್ಲಿ ತಾಪಮಾನ ಹೆಚ್ಚಾಗಿತ್ತು ಎಂದು ಹೇಳಿದೆ.

2024ರಲ್ಲಿ ಜಗತ್ತು ಇದುವರೆಗೆ ದಾಖಲಾಗಿರುವ ಅತ್ಯಂತ ಹೆಚ್ಚಿನ ತಾಪಮಾನದ ವರ್ಷವನ್ನು ಕಂಡಿತ್ತು. ಯುರೋಪಿನ ಹವಾಮಾನ ಏಜೆನ್ಸಿಯಾದ 'ಕೋಪರ್ನಿಕಸ್ ಕ್ಲೈಮೇಟ್ ಚೇಂಜ್ ಸರ್ವಿಸ್' ನೀಡಿರುವ ಮಾಹಿತಿ ಪ್ರಕಾರ ಈ ವರ್ಷದ ಜನವರಿಯಲ್ಲಿ ದಾಖಲಾಗಿರುವ ಜಾಗತಿಕ ಸರಾಸರಿ ತಾಪಮಾನವು 13.23 ಡಿಗ್ರಿ ಸೆಲ್ಸಿಯಸ್ ಆಗಿತ್ತು. ಇದು ಅಲ್ಲಿಯವರೆಗಿನ ಅತ್ಯಂತ ಹೆಚ್ಚಿನ ತಾಪಮಾನದ ತಿಂಗಳಾದ 2024ರ ಜನವರಿಯ ಸರಾಸರಿ ತಾಪಮಾನಕ್ಕಿಂತ 0.09 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು. 'ಲಾ ನಿನಾ ಸ್ಥಿತಿ ನಿರ್ಮಾಣ ಆಗಿದ್ದರೂ ಜನವರಿಯಲ್ಲಿ ದಾಖಲೆ ಮಟ್ಟದ ತಾಪಮಾನ ಕಂಡುಬಂದಿದೆ' ಎಂದು ಏಜೆನ್ಸಿಯ ಉಪ ನಿರ್ದೇಶಕಿ ಸಮಂತಾ ಬರ್ಗಸ್ ಹೇಳಿದ್ದಾರೆ.

ಯುದ್ಧ ವಿಮಾನ ಪತನ

ಗ್ವಾಲಿಯರ್ (ಪಿಟಿಐ): ಭಾರತೀಯ ವಾಯುಸೇನೆಯ ಮೀರಾಜ್–2000 ಯುದ್ಧ ವಿಮಾನವು ತಾಂತ್ರಿಕ ದೋಷದಿಂದಾಗಿ ಮಧ್ಯಪ್ರದೇಶದ ಶಿವಪುರಿ ಜಿಲ್ಲೆಯಲ್ಲಿ ಗುರುವಾರ ಪತನಗೊಂಡಿದೆ.

ಇಬ್ಬರು ಪೈಲಟ್‌ಗಳು ಪ್ರಾಣಾಪಾಯದಿಂದ ಪಾರಾಗಿದ್ದು, ಅವರನ್ನು ಹೆಲಿಕಾಪ್ಟರ್ ಮೂಲಕ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸೇನೆಯ ವಕ್ತಾರರು ತಿಳಿಸಿದ್ದಾರೆ. 'ಯುದ್ಧ ವಿಮಾನವು ಮಧ್ಯಾಹ್ನ 2.40ಕ್ಕೆ ಬರ್‌ಹೆತ್ ಸನಿ ಗ್ರಾಮದ ಕೃಷಿಭೂಮಿಯೊಂದರಲ್ಲಿ ಬಿದ್ದಿದ್ದು, ಬಳಿಕ ಬೆಂಕಿಗಾಹುತಿಯಾಗಿದೆ. ಈ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ' ಎಂದು ಹೇಳಿದ್ದಾರೆ.

ಪರೀಕ್ಷಾ ಪೇ ಚರ್ಚಾ: ಸದ್ಗುರು, ದೀಪಿಕಾ ಮೇರಿ ಕೋಮ್ ಭಾಗಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಈ ಬಾರಿಯ ವಿದ್ಯಾರ್ಥಿಗಳ ಜತೆಗಿನ ಪರೀಕ್ಷಾ ಪೇ ಚರ್ಚಾ (ಪಿಪಿಸಿ) ವಿಭಿನ್ನವಾಗಿರಲಿದ್ದು, ಬಾಲಿವುಡ್ ನಟಿ ದೀಪಿಕಾ ಪಡುಕೋಣೆ, ಸದ್ಗುರು ಜಗ್ಗಿ ವಾಸುದೇವ್, ಬಾಕ್ಸರ್ ಮೇರಿ ಕೋಮ್ ಸೇರಿದಂತೆ ಹಲವು ಖ್ಯಾತನಾಮರು ಪಾಲ್ಗೊಳ್ಳಲಿದ್ದಾರೆ.

ಪಿಪಿಸಿಯ 8ನೇ ಆವೃತ್ತಿಯಲ್ಲಿ ಪ್ಯಾರಾ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತೆ ಅವನಿ ಲೇಖರಾ, ಬ್ಯಾಡ್ಮಿಂಟನ್ ಆಟಗಾರ ಸುಹಾಸ್ ಯತಿರಾಜ್ ಸೇರಿ ಅನೇಕರು ಪಾಲ್ಗೊಳ್ಳಲಿದ್ದಾರೆ. ಇದೇ 10ರಂದು ನಿಗದಿಯಾಗಿರುವ ಪಿಪಿಸಿ, ಎಂಟು ಸಂಚಿಕೆಗಳನ್ನು ಒಳಗೊಂಡಿರಲಿದೆ. ಈ ಚರ್ಚೆಯಲ್ಲಿ 100 ವಿದ್ಯಾರ್ಥಿಗಳ ಗುಂಪಿನೊಂದಿಗೆ ಗಣ್ಯರು ತಮ್ಮ ಅನುಭವ ಹಂಚಿಕೊಳ್ಳಲಿದ್ದಾರೆ.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯಿತಿ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ದೂರವಾಣಿ ಸಂಖ್ಯೆ:08262-220936 E-Mail: zpedckm@rediffmail.com

ಟೆಂಡರ್ ಪ್ರಕಟಣೆ ಸಂಖ್ಯೆ:21/2024-25 ದಿನಾಂಕ:01.02.2025

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ. ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಕಡೂರು, ಕೊಪ್ಪ, ನ.ರಾ.ಪುರ, ಶೃಂಗೇರಿ, ತರೀಕೆರೆ ಮತ್ತು ಅಜ್ಜಂಪುರ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ ರೂ.54.74 ಲಕ್ಷಗಳು ಮತ್ತು ಕನಿಷ್ಠ ಅಂದಾಜು ಮೊತ್ತ ರೂ.4.00 ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ, Standard Tender Document KW-1,2&3 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್‌ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು ದಿನಾಂಕ:01.02.2025 ರಿಂದ ದಿನಾಂಕ:10.02.2025 ರವರೆಗೆ ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:12.02.2025 ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:15.02.2025 ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು **kppp.karnataka.gov.in website** ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with 'A++' Grade

Accredited by NAAC with A++

ಪರೀಕ್ಷಾ ಭವನ, ಜ್ಞಾನಭಾರತಿ, ಬೆಂಗಳೂರು – 560 056.

ಸಂಖ್ಯೆ: ಪವಿ-3/ಬ್ಯಾಟರಿ/ಖರೀದಿ/ಕೊಟೇಷನ್/2024-25 ದಿನಾಂಕ: 03.02.2025

ಅಧಿಸೂಚನೆ

ಬೆಂಗಳೂರು ವಿಶ್ವವಿದ್ಯಾಲಯದ ಅವಿಭಾಜ್ಯ ಅಂಗವಾದ ಪರೀಕ್ಷಾ, ವಿಭಾಗದ ಡಿಜಿಟಲ್ ಮೌಲ್ಯಮಾಪನ ಸರ್ವರ್ ಕೊಠಡಿಗೆ 32 ಬ್ಯಾಟರಿಗಳನ್ನು ಬೈ-ಬ್ಯಾಕ್ ಮಾದರಿಯಲ್ಲಿ ಖರೀದಿಸಲು ದ್ವಿ ಲಕೋಟೆ ಪದ್ಧತಿ (2 Cover System) ಅಂದರೆ ತಾಂತ್ರಿಕ ಮತ್ತು ಹಣಕಾಸು ದರಪಟ್ಟಿಯನ್ನು ನೊಂದಾಯಿತ ಸಂಸ್ಥೆ/ಕಂಪನಿಗಳಿಂದ ಆಹ್ವಾನಿಸಲಾಗಿದೆ.

ತಾಂತ್ರಿಕ ಮತ್ತು ಹಣಕಾಸು ಬಿಡ್ಡಿನ ಅರ್ಹತೆ/ವಿಶೇಷತೆಗಳನ್ನು ಷರತ್ತು ಹಾಗೂ ನಿಬಂಧನೆಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ **bangaloreuniversity.karnataka.gov.in** ನಿಂದ ಡೌನ್‌ಲೋಡ್ ಮಾಡಿ ಪಡೆಯಬಹುದಾಗಿದೆ. ದರಪಟ್ಟಿಯನ್ನು ಅಧೀಕ್ಷಕರು, ಪರೀಕ್ಷಾ ವಿಭಾಗ-3 ಪರೀಕ್ಷಾ ಭವನ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56, ಇವರಿಗೆ ಈ ಅಧಿಸೂಚನೆ ಪ್ರಕಟಗೊಂಡ 30 ದಿನಗಳೊಳಗಾಗಿ ಸಲ್ಲಿಸತಕ್ಕದ್ದು, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-229611210 ಮತ್ತು ಇ-ಮೇಲ್ **regeval_ex3@bub.ernet.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/-

ಕುಲಸಚಿವರು(ಮೌಲ್ಯಮಾಪನ)

CITATION

BEFORE THE HON'BLE FAMILY COURT JUDGE AT: KOPPAL

R.A. No. 66/2022

BETWEEN:

Syeda Zulekhabee W/o Syed Wazir Basha ...Appellant

AND

Syed Ali Shah & Others ..Respondents

To,

Respondents:

3(a). Asma W/o Late Syed Latif Shah, Age: 55 Years, Occu: House Hold, R/o: Usman Shah Camp, Munirabad Dam, Tq: Koppal, Dist: Koppal.

3(b). Adanan S/o Late Syed Latif Shah, Age: 8 Years, Occu: House Hold, R/o: Usman Shah Camp, Munirabad Dam, Tq: Koppal, Dist: Koppal. Represented through next friend natural mother Asma W/o Late Syed Latif Shah.

5(b). Syed Amir-ul-haq Quadri @ Nyamat S/o Syed Moulvi Peer Syed Shah Shamushu Haq Quadri, Age: 30 Years, Occu: Agril., R/o: Munirabad Dam, Tq & Dist: Koppal.

5(c). Syed Mohin-ul-haq Quadri S/o Syed Moulvi Peer Syed Shah Shamushu Haq Quadri, Age: 30 Years, Occu: Agril., R/o: Munirabad Dam, Tq & Dist: Koppal.

8(b). Smt. Syeda Farzana W/o Syed Ahmed Ali, Age: 40 Years, Occu: House Hold, R/o: Banashankari, JHBCS Layout, Bangalore.

WHERE AS the above named Appellant filed appeal against you & other respondents.

You are hereby summoned to appear before this Hon'ble Court in person or by a pleader duly instructed and able to answer all material question relating to the application/appeal or who shall be accompanied by some person able to answer all such question on the 20th day of February 2025 at 11'0'a.m. to answer the claim and as the day fixed for your appearance is appointed for the final disposal of the appeal, you must be prepared to produce on that day all this witness upon whose evidence and all the documents upon which you intend to rely in support of your defense.

Take notice that on default of your appearance the day before above the suit will be heard and determined in your absence.

Given under my hand the seal of this Court, this 4th Day of February 2025.

|| By ORDER OF THE COURT ||

Sd/- CMO / Sheristedar

Prl. Family Court, Koppal

Through

Sd/- Sri C.S. Karkihalli,

Advocate for Appellant

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ಆನಂದ ಭರಿತ ಜೀವನಕ್ಕೆ ಆರಾಮದ ನಂದನವನ

ಅದುವೇ ವಸತಿ ಬಡಾವಣೆಯ ಸಾಕಾರ

ರಾಯಚೂರಿನಲ್ಲಿ ವಸತಿ ನಿವೇಶನಗಳ ಇ-ಹರಾಜು

ನಗರಕ್ಕೆ ಸಮೀಪದಲ್ಲಿ

ಕಾಯಬೇಡಿ ಇದು ಹೂಡಿಕೆ ಮಾಡುವ ಸಮಯ

ಪ್ರಧಾನ ಸ್ಥಳ:

ರಾಯಚೂರು ನಗರದ ಕೆಐಎಡಿಬಿಯ ವಸತಿ ಬಡಾವಣೆ



ಕ್ರಮ ಸಂಖ್ಯೆ	ಕೈಗಾರಿಕಾ ಪ್ರದೇಶದಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಪ್ಲಾಟ್‌ಗಳು	ವಸತಿ ಪ್ಲಾಟ್‌ಗಳ ವಿವರಗಳು			
		LIG	MIG	HIG	Total
1	ರಾಯಚೂರು (ಸೆಕ್ಟರ್ 2)	81	205	89	375
2	ರಾಯಚೂರು (ಸೆಕ್ಟರ್ 3)	73	143	81	297

ಪ್ರವೇಶ ದ್ವಾರ | ಪ್ರಮುಖ ಸಂಪರ್ಕ | ಹೆದ್ದಾರಿಗೆ ಹತ್ತಿರ | ವಿಶಾಲ ರಸ್ತೆಗಳು | ವಿದ್ಯುತ್ | 24/7 ಭದ್ರತೆ | ನೀರು ಸರಬರಾಜು | ನಿರ್ಮಿಸಲು ಸಿದ್ಧವಿರುವ ವಸತಿ ಪ್ರಧಾನ ಪ್ಲಾಟ್‌ಗಳು | ವಿಮಾನ ನಿಲ್ದಾಣಕ್ಕೆ ಹತ್ತಿರ | ಗೇಟೆಡ್ ಕಮ್ಯೂನಿಟಿ

"ಲೈವ್" ಹರಾಜು ದಿನಾಂಕ 08ನೇ & 09ನೇ ಮಾರ್ಚ್ 2025

ನೊಂದಣಿ: ಪ್ರಾರಂಭದ ದಿನ : 17ನೇ ಫೆಬ್ರವರಿ 2025

ಕೊನೆಯ ದಿನಾಂಕ: 06ನೇ ಮಾರ್ಚ್ 2025

"ಭಾಗವಹಿಸಲು" : ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್: https://kppp.karnataka.gov.in

ಸಹಾಯವಾಣಿಯ ನೋಂದಣಿ ಮಾತ್ರ

ಶ್ರೀ ವಿಜಯಕುಮಾರ್ C.O - Mob No : 9986791981 | ಶ್ರೀ ಹಾಜಿ C.O - Mob No : 9964089307

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಕೆಐಎಡಿಬಿ ವಲಯ ಕಛೇರಿ, #Com-2,

ರಾಯಚೂರು ಗ್ರೋಥ್ ಸೆಂಟರ್, ವಸತಿ ಬಡಾವಣೆ, ಯರಮರಸ್, ರಾಯಚೂರು – 584 134

ಇಮೇಲ್: doballari@kiadb.in | ವೆಬ್‌ಸೈಟ್: www.kiadb.in

ಸಂಪರ್ಕದ ವಿವರಗಳು: **84314 96301 / 79752 34573/94481 09286**

ನೊಂದಣಿ ಹಾಗೂ ಬಿಡ್ಡಿಂಗ್‌ಗಾಗಿ ದಯಮಾಡಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಗೆ: **https://kppp.karnataka.gov.in** ಭೇಟಿ ನೀಡಿ

ವಾಯುಪಡೆಯ ಯುದ್ಧ ವಿಮಾನಗಳು ಪ್ರದರ್ಶಿಸಿದ ಕಸರತ್ತು

ಶಬ್ದದ ವೇಗಕ್ಕಿಂತಲೂ ಹೆಚ್ಚಿನ ವೇಗದ ಸುಖೋಯ್

ಏರೋ ಇಂಡಿಯಾ–2025ರ ಅಂಗವಾಗಿ ನಡೆದ ತಾಲೀಮು ವೇಳೆ ಯುದ್ಧವಿಮಾನಗಳು ಪ್ರದರ್ಶಿಸಿದ ಕಸರತ್ತನ್ನು ಜನರು ಕುತೂಹಲದಿಂದ ವೀಕ್ಷಿಸಿದರು

ಏರೋ ಇಂಡಿಯಾ–2025ಕ್ಕೆ ಪೂರ್ವಭಾವಿ ಪ್ರದರ್ಶನ

ಮೈನವಿರೇಳಿಸಿದ ವೈಮಾನಿಕ ತಾಲೀಮು

ಲಘು ಯುದ್ಧ ಹೆಲಿಕಾಪ್ಟರ್‌ಗಳಿಂದ (ಎಲ್‌ಸಿಎಚ್) ತಾಲೀಮು

ಚಿತ್ರಗಳು: ಬಿ.ಕೆ. ಜನಾರ್ದನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಗಸದಲ್ಲಿ ಹಕ್ಕಿಗಳ ಗುಂಪಿನಂತೆ ಸಾಗುತ್ತಿದ್ದ ವಿಮಾನಗಳು ಒಮ್ಮೆಗೇ ಕುಸಿದುಬಿದ್ದಂತೆ, ಲಂಬವಾಗಿ ನೆಲದತ್ತ ನುಗ್ಗಿದಾಗ ಅವುಗಳನ್ನು ನೋಡುತ್ತ ನಿಂತಿದ್ದವರು ತುಸು ಅಧೀರರಾದದ್ದಂತೂ ಸುಳ್ಳಲ್ಲ. ಇನ್ನೇನು ನೆಲಕ್ಕೆ ಅಪ್ಪಳಿಸಿಯೇ ಬಿಟ್ಟವು ಎನಿಸುವಾಗ ಕಣ್ಣು ಮಿಟುಕಿಸುವಷ್ಟರಲ್ಲೇ ಮತ್ತೆ ದಿಕ್ಕು ಬದಲಿಸಿ ಆಗಸದತ್ತ ಚಿಮ್ಮಿದವು. ಆದರೆ ಅವು ಎಬ್ಬಿಸಿದ ಬಿಸಿಗಾಳಿ ಮಿಶ್ರಿತ ದೂಳು ನೋಡುಗರಿಗೆ ಅಪ್ಪಳಿಸಿತು.

ನಗರದಲ್ಲಿ ಯಲಹಂಕದ ವಾಯುನೆಲೆಯಲ್ಲಿ ನಡೆಯಲಿರುವ 'ಏರೋ ಇಂಡಿಯಾ–2025' ವೈಮಾನಿಕ ಪ್ರದರ್ಶನದ ಪೂರ್ವಭಾವಿ ಅಭ್ಯಾಸದ ಭಾಗವಾಗಿ ಗುರುವಾರ ಆಯೋಜಿಸಿದ್ದ ತಾಲೀಮಿನಲ್ಲಿ ಭಾರತೀಯ ವಾಯುಪಡೆಯ ಸೂರ್ಯಕಿರಣ್ ಏರೋಬಾಟಿಕ್ಸ್ ತಂಡವು (ಎಸ್‌ಕೆಎಟಿ) ಸೃಷ್ಟಿಸಿದ ಮೈನವಿರೇಳಿಸುವ ಸನ್ನಿವೇಶವಿದು.

ಯಲಹಂಕ ವಾಯುನೆಲೆಯ ಬಯಲು ಪ್ರದೇಶದಲ್ಲಿ ನಡೆದ ಎರಡು ತಾಸಿನ ತಾಲೀಮನ್ನು ವೀಕ್ಷಿಸಲು ವಿಶೇಷ ಆಹ್ವಾನಿತರಿಗಷ್ಟೇ ಅವಕಾಶವಿತ್ತು. ವೈಮಾನಿಕ ಪ್ರದರ್ಶನದ ಕಿರು ಝಲಕ್‌ನಂತಿದ್ದ ತಾಲೀಮನ್ನು ವಾಯುಪಡೆಯ ಅಧಿಕಾರಿಗಳು, ಅವರ ಕುಟುಂಬದವರು, ಸಿಬ್ಬಂದಿ, ಪತ್ರಕರ್ತರು ಮತ್ತು ಕುಟುಂಬದವರು ಕಣ್ಣು–ಕಿವಿ ತುಂಬಿಕೊಂಡರು.



ವಿಶ್ವದ ಅತ್ಯಂತ ವೇಗದ ಯುದ್ಧ ವಿಮಾನಗಳಲ್ಲಿ ಒಂದೆನಿಸಿರುವ ಸುಖೋಯ್ ಎಂಕೆ30–ಐ ನೆಲದಿಂದ ಕೆಲವೇ ಅಡಿಗಳ ಮೇಲೆ ಹಾರಿಹೋಗಿ, ಸೃಷ್ಟಿಸಿದ ಜೆಟ್‌ಬ್ಲಾಸ್ಟ್‌ಗೆ ಅಲ್ಲಿ ನೆರೆದಿದ್ದವರು ತೂರಾಡಿದರು. ಅದರ ಹಿಂದೆಯೇ ಬಂದಪ್ಪಳಿಸಿದ ಸದ್ದಿಗೆ ಒಂದೆಡೆ ಎಲ್ಲರೆದೆ ಕಂಪಿಸಿದರೆ, ಹಲವರ ತಲೆಯಲ್ಲಿದ್ದ ಟೋಪಿಗಳು ಹಾರಿಹೋದವು. ಎಚ್‌ಎಎಲ್ ನಿರ್ಮಿತ ಲಘು ಬಹುಪಯೋಗಿ ಹೆಲಿಕಾಪ್ಟರ್, ಬಿ–1ಬಿ ಲ್ಯಾನ್ಸರ್ಸ್ ತೋರಿದ ಕಸರತ್ತಿಗೆ ನೋಡುಗರ ಉದ್ಗಾರವೇ ಮೆಚ್ಚುಗೆ.

ಆದರೆ ಹೆಚ್ಚು ಮೈನವಿರೇಳಿಸಿದ್ದು ಸೂರ್ಯಕಿರಣ್ ತಂಡದ ಕಸರತ್ತುಗಳು. ಆಗಸದಲ್ಲಿ ಹೊಗೆಯುಗುಳುತ್ತಾ ಚಿತ್ತಾರ ಮೂಡಿಸುವುದರ ಹೊತ್ತಿಗೆ, ಪೈಲಟ್‌ಗಳು ವಿವಿಧ ವಿನ್ಯಾಸಗಳಲ್ಲಿ ಹಾರಾಟ ನಡೆಸಿದ್ದು ಆಕರ್ಷಕವಾಗಿತ್ತು. ಮೂರು ವಿಮಾನಗಳು, ಐದು ವಿಮಾನಗಳು, ಆರು ವಿಮಾನಗಳು, ಕಡೆಗೆ ಒಂಬತ್ತು ವಿಮಾನಗಳನ್ನು ಒಟ್ಟಿಗೇ ಹಾರಿಸಿ, ನೋಡುಗರ ಕೂದಲು ನಿಮಿರುವಂತೆ ಮಾಡಿದರು.

ಒಂಬತ್ತು ವಿಮಾನಗಳು ಒಟ್ಟಿಗೇ ಸುರುಳಿ ಸುತ್ತಿ, ಆಗಸದಲ್ಲಿ ಧೂಮದ ಸುರಂಗ ನಿರ್ಮಿಸಿದವು. ಪ್ರತಿ ವಿಮಾನದ ಹಾದಿಯನ್ನು ಮತ್ತೊಂದು ಅಡ್ಡಹಾಯ್ದು ಕಿ.ಮೀ.ಗಟ್ಟಲೆ ದೂರ ಕ್ರಮಿಸಿದ್ದು ಪೈಲಟ್‌ಗಳ ಅತೀವ ಕೌಶಲ, ಏಕಾಗ್ರತೆ ಮತ್ತು ಪರಸ್ಪರ ಸಮನ್ವಯಕ್ಕೆ ಸಾಕ್ಷಿಯಂತಿತ್ತು.

ಒಂದೆಡೆ ನೆತ್ತಿ ಸುಡುತ್ತಿದ್ದ ಬಿಸಿಲು, ಮತ್ತೊಂದೆಡೆ ಕಾದ ನೆಲ, ಇದರ ಮಧ್ಯೆ ಮುಖಕ್ಕಪ್ಪಳಿಸುವ ದೂಳು ಮತ್ತು ಕಿವಿಗಡಚ್ಚಿಕ್ಕಿಸುವಂತಹ ಸದ್ದಿನ ಮಧ್ಯೆಯೂ ವೈಮಾನಿಕ ಕಸರತ್ತನ್ನು ನೋಡುಗರು ಕಣ್ತುಂಬಿಕೊಂಡರು. ಟೋಪಿ, ತಂಪು ಕನ್ನಡಕಗಳನ್ನು ಧರಿಸಿದ್ದವರು ಆಗಸದೆತ್ತರದಲ್ಲಿ ಮೂಡುತ್ತಿದ್ದ ಕಸರತ್ತನ್ನೂ ಕಣ್ತುಂಬಿಕೊಂಡರು. ಬರಿಗೈಲಿ ಬಂದಿದ್ದವರು ಕಣ್ಣು ಕುಕ್ಕುತ್ತಿದ್ದ ಬಿಸಿಲಿಗೆ ಹಿಡಿಶಾಪ ಹಾಕಿದರು.

ವಾಯುಪಡೆಯ ಪ್ಯಾರಾಗ್ಲೈಡರ್ ಪ್ರದರ್ಶಿಸಿದ ಸಾಹಸ -ಪಿಟಿಐ ಚಿತ್ರ

ಮುಖ್ಯಾಂಶಗಳು

- ನೋಡುಗರ ಉತ್ಸಾಹ ತಗ್ಗಿಸದ ಸಂಚಾರ ದಟ್ಟಣೆ, ಬಿಸಿಲು
- ಬಳ್ಳಾರಿ ರಸ್ತೆ, ಪಾಲನಹಳ್ಳಿ ರಸ್ತೆಗಳಲ್ಲಿ ಕಿ.ಮೀ.ಗಟ್ಟಲೆ ದಟ್ಟಣೆ
- ಯುದ್ಧವಿಮಾನಗಳ ಕಸರತ್ತಿಗೆ ಮನಸೋತ ನೋಡುಗರು

ವೈಮಾನಿಕ ತಾಲೀಮು ವೇಳೆ ಜನರು ಸೆಲ್ಫಿ ತೆಗೆದುಕೊಂಡರು

ಆಗಸದಲ್ಲಿ ಚಿತ್ತಾರ... ವಾಯುನೆಲೆ ದೂಳುಮಯ...

ಸುದ್ದಿ 2 ನಿಮಿಷ

'ಪ್ರಾಜೆಕ್ಟ್ ಈ ಶಾಲೆ ಬಿಯಾಂಡ್ ಎಜುಕೇಶನ್' ಪ್ರಶಸ್ತಿ ಪ್ರದಾನ

ಬೆಂಗಳೂರು: ವಿಮೂವ್ ಫೌಂಡೇಶನ್ ವತಿಯಿಂದ ಜಕ್ಕೂರು ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ 'ಪ್ರಾಜೆಕ್ಟ್ ಈ ಶಾಲೆ ಬಿಯಾಂಡ್ ಎಜುಕೇಶನ್ ಪ್ರಶಸ್ತಿ' ಪ್ರದಾನ ಕಾರ್ಯಕ್ರಮದಲ್ಲಿ ಮಾಸ್ಟರ್ ಪ್ಲಾಂಟ್ಸ್ ಆರ್ಕೆಸ್ಟ್ರಾ ಹಾರ್ಮೋನಿಯಾ ಸಂಗೀತ ಕಛೇರಿಯನ್ನು ಡೆನ್ಮಾರ್ಕ್‌ನ ಟ್ರಿಟಾನ್ ಪ್ರಸ್ತುತಪಡಿಸಿದರು.

'ವಿದ್ಯಾರ್ಥಿಗಳು ಪರಿಸರ ದೊಂದಿಗೆ ನಿಕಟ ಸಂಪರ್ಕ ಬೆಳೆಸಿಕೊಳ್ಳುವಂತೆ ಪ್ರೇರೇಪಿಸಲು ತಂತ್ರಜ್ಞಾನದ ನೆರವಿನಲ್ಲಿ ಸಸ್ಯಗಳಿಂದ ಸಂಗೀತವನ್ನು ಹೊಮ್ಮಿಸಲಾಯಿತು. ತಂತ್ರಜ್ಞಾನದ ಸಹಾಯದಿಂದ ಸಸ್ಯಗಳು ಸೃಷ್ಟಿಸಿದ ರಾಗಗಳಿಗೆ ಜಾನಪದ ಗಾಯಕ ರಾಮ್‌ಕುಮಾರ್ ಶಿಂಧೆ ಮತ್ತು ಅವರ ಪುತ್ರಿ ಗೀತಾ ಶಿಂಧೆ ಬೆನಗಿ ಹಾಡಿನ ರಾಗ ಸೇರಿಸಿ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು' ಎಂದು ವಿಮೂವ್ ಫೌಂಡೇಶನ್‌ನ ವಿನಯ್ ಶಿಂಧೆ ಹೇಳಿದರು.

'ಹವಾಮಾನ ವೈಪರಿತ್ಯ, ಡಿಜಿಟಲ್ ಶಿಕ್ಷಣ, ಆರ್ಥಿಕ ಶಿಕ್ಷಣ, ಜೀವನ ಕೌಶಲ ವಿಷಯಗಳಲ್ಲಿ ಉತ್ತಮ ಸಾಧನೆ ಮಾಡಿದ 18 ವಿದ್ಯಾರ್ಥಿಗಳಿಗೆ 'ಪ್ರಾಜೆಕ್ಟ್ ಈ ಶಾಲೆ ಬಿಯಾಂಡ್ ಎಜುಕೇಶನ್ ಪ್ರಶಸ್ತಿ' ನೀಡಲಾಯಿತು. ಜಕ್ಕೂರು ಪ್ರೌಢಶಾಲೆ ಹಾಗೂ ಕಾಲೇಜು, ಗ್ಲೋಬಲ್ ಕಲ್ಚರ್ ಬಳಗದ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಿತು' ಎಂದರು.

ಜಕ್ಕೂರು ಪ್ರೌಢಶಾಲೆಯ ಉಪ ಪ್ರಾಂಶುಪಾಲ ಮಂಜುನಾಥ್ ಎನ್.ಎಸ್., ಕಾಲೇಜಿನ ಪ್ರಾಂಶುಪಾಲ ಆನಂದ್ ಮೂರ್ತಿ ಇದ್ದರು.

ತನಿಖಾಧಿಕಾರಿ ನಡೆಗೆ ನ್ಯಾಯಾಧೀಶರ ಅಸಮಾಧಾನ

ಬೆಂಗಳೂರು: 'ಎಚ್‌ಎಂಟಿ ವಾರ್ಡ್‌ನ ಪೀಣ್ಯದ ಎಸ್.ಆರ್.ಎಸ್. ರಸ್ತೆಯ ಪ್ರಥಮ ದರ್ಜೆ ಕಾಲೇಜು ಪಕ್ಕದ ಅಕ್ಕಮಹಾದೇವಿ ಕೊಳೆಗೇರಿಯ 100 ಮೀಟರ್ ಪ್ರದೇಶದಲ್ಲಿ ಶೆಡ್‌ಗಳನ್ನು ನಿರ್ಮಿಸಿಕೊಂಡಿದ್ದ 53 ಕುಟುಂಬಗಳನ್ನು ತೆರವುಗೊಳಿಸಲು ಯಾರ ಆದೇಶವಿತ್ತು ಎಂಬುದರ ಬಗ್ಗೆ ಗುರುವಾರ ವಿವರಣೆ ನೀಡಬೇಕು' ಎಂದು ನಿರ್ದೇಶಿಸಿದ್ದ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಆದೇಶ ಪಾಲನೆ ಮಾಡದ ತನಿಖಾಧಿಕಾರಿ ನಡೆಗೆ ನ್ಯಾಯಾಧೀಶರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

'ತೆರವು ಕಾರ್ಯಾಚರಣೆ ವೇಳೆ ಮಾದಿಗ ಸಮುದಾಯದ 20 ವರ್ಷದ ಮಹಿಳೆಯ ಮೇಲೆ ಸ್ಥಳೀಯ ಶಾಸಕ ಮುನಿರತ್ನ ಜಾತಿನಿಂದನೆಯ ದೌರ್ಜನ್ಯ ನಡೆಸಿದ್ದಾರೆ' ಎಂದು ಆರೋಪಿಸಲಾದ ಕ್ರಿಮಿನಲ್ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಮುನಿರತ್ನ ಸಲ್ಲಿಸಿರುವ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ತನಿಖಾಧಿಕಾರಿ, 'ವರದಿ ಸಲ್ಲಿಕೆಗೆ ಇನ್ನಷ್ಟು ಸಮಯಾವಕಾಶ ನೀಡಬೇಕು' ಎಂದು ಕೋರಿದರು. ಈ ಮನವಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಶುಕ್ರವಾರ ತಪ್ಪದೇ ವರದಿ ಸಲ್ಲಿಸಬೇಕು' ಎಂದು ಎಚ್ಚರಿಕೆಯ ನಿರ್ದೇಶನ ನೀಡಿ ವಿಚಾರಣೆ ಮುಂದೂಡಿದರು. ಅರ್ಜಿದಾರ ಮುನಿರತ್ನ ಪರ ಹೈಕೋರ್ಟ್ ವಕೀಲ ಎಸ್.ಎಸ್. ಶ್ರೀನಿವಾಸ್ ರಾವ್ ಹಾಗೂ ದೂರುದಾರ ಮಹಿಳೆಯ ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಹಾಜರಿದ್ದರು.

₹7.5 ಲಕ್ಷ ನಗದು, ನಕಲಿ ದಾಖಲೆ ವಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಭೂಮಾಪನ ಇಲಾಖೆಯ ಸೂಪರ್‌ವೈಸರ್ ಸುರೇಶ್ ಬಾಬು
- ಹೊಸಕೋಟೆ ಸಮೀಪದ ಫ್ಯಾಕ್ಟರಿಯ ಅತಿಥಿಗೃಹ ಮೇಲೂ ದಾಳಿ

ಸುರೇಶ್‌ಬಾಬು

ಕೋಲಾರ: ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹಾಗೂ ಭೂಮಾಪನ ಇಲಾಖೆಯ ಸರ್ವೆ ಸೂಪರ್‌ವೈಸರ್ ಜಿ.ಸುರೇಶ್ ಬಾಬು ಅವರಿಗೆ ಸಂಬಂಧಿಸಿದ ನಿವಾಸ, ಹೊಸಕೋಟೆ ಸಮೀಪದ ಫ್ಯಾಕ್ಟರಿಯ ಅತಿಥಿಗೃಹ ಸೇರಿದಂತೆ ಐದು ಕಡೆ ಏಕಕಾಲದಲ್ಲಿ ಲೋಕಾಯುಕ್ತ ಪೊಲೀಸರು ಗುರುವಾರ ದಾಳಿ ನಡೆಸಿ ಸುಮಾರು ₹7.50 ಲಕ್ಷ ನಗದು ಹಾಗೂ ನಕಲಿ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಕೆ ಹಾಗೂ ಜಮೀನಿನ ಪೋಡಿ ಸಂಬಂಧ ನಕಲಿ ದಾಖಲೆ ಮಾಡಿರುವ ಆರೋಪ ಹಿನ್ನೆಲೆಯಲ್ಲಿ ಲೋಕಾಯುಕ್ತ ಜಿಲ್ಲಾ ಪೊಲೀಸ್ ಅಧೀಕ್ಷಕ ವಿ.ಧನಂಜಯ್ ನೇತೃತ್ವದಲ್ಲಿ ಈ ದಾಳಿ ನಡೆದಿದೆ.

ನಗರದ ಹಾರೋಹಳ್ಳಿ ರಸ್ತೆಯ ಜಯನಗರದ 9ನೇ ಕ್ರಾಸ್ ಬಳಿಯ ಸುರೇಶ್ ಬಾಬು ಅವರಿಗೆ ಸಂಬಂಧಿಸಿದ ನಿವಾಸ ಶೋಧಿಸಿದ್ದು, ₹7.5 ಲಕ್ಷ ನಗದು ಹಾಗೂ ಹಲವಾರು ದಾಖಲೆಗಳು ಲಭಿಸಿವೆ. ಅಲ್ಲದೆ, ಹೊಸಕೋಟೆಯ ರಿಂಗ್ ರಸ್ತೆಯ ಫ್ಯಾಕ್ಟರಿಯ ಅತಿಥಿ ಗೃಹ ಶೋಧಿಸಿದ್ದು, ಜಮೀನಿನ ಪೋಡಿಗೆ ಸಂಬಂಧಿಸಿದ ಹಲವಾರು ನಕಲಿ ದಾಖಲೆಗಳು ಸಿಕ್ಕಿವೆ ಎಂದು ತಿಳಿಸಿವೆ.

ನಗರದಲ್ಲಿರುವ ಭೂಮಾಪನ ಇಲಾಖೆಯ ಕಚೇರಿಯನ್ನೂ ಶೋಧಿಸಿದ್ದು, ಕೆಲ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ.

ಪರವಾನಗಿ ಸರ್ವೆಯರ್‌ಗಳಾದ ಸಂದೀಪ್ ಅವರ ಕೋಟೆ ಬಡಾವಣೆಯ ನಿವಾಸ, ಸುನಿಲ್ ಅವರ ಧರ್ಮರಾಯ ನಗರ ಬಡಾವಣೆಯ ನಿವಾಸವನ್ನು ಶೋಧಿಸಿದ್ದು, ಕೆಲ ದಾಖಲೆಗಳು ಲಭ್ಯವಾಗಿವೆ ಎಂದು ತಿಳಿದುಬಂದಿದೆ.

ಕೆಎಸ್‌ಆರ್‌ಟಿಸಿ ಏಕಸ್ವಾಮ್ಯಕ್ಕೆ ಅಂಕುಶ

ಕಾಯ್ದೆ ಎತ್ತಿ ಹಿಡಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸರ್ಕಾರವು 2003ರಲ್ಲಿ ಜಾರಿಗೆ ತಂದಿದ್ದ ಕಾನೂನನ್ನು ಸುಪ್ರೀಂ ಕೋರ್ಟ್ ಗುರುವಾರ ಎತ್ತಿ ಹಿಡಿದಿದೆ.

ಬಸ್ ಕಾರ್ಯಾಚರಣೆಗಳ ಮೇಲೆ ಕೆಎಸ್‌ಆರ್‌ಟಿಸಿಯ ಏಕಸ್ವಾಮ್ಯವನ್ನು ಕಿತ್ತು ಹಾಕಿ, ಹೆಚ್ಚುತ್ತಿರುವ ಸಾರ್ವಜನಿಕ ಸಾರಿಗೆ ಅಗತ್ಯಗಳನ್ನು ಪೂರೈಸಲು ಖಾಸಗಿ ಕಂಪನಿಗಳಿಗೆ ಅವಕಾಶ ಮಾಡಿಕೊಡಲಾಗುತ್ತದೆ ಎಂಬುದು ಈ ಕಾಯ್ದೆಯ ಸಾರ.

ಖಾಸಗಿಯಾಗಿ ನಿರ್ವಹಿಸಲ್ಪಡುವ ಕಾಂಟ್ರಾಕ್ಟ್ ಕ್ಯಾರೇಜ್ ಬಸ್‌ಗಳನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ಅವುಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಂತ್ರಣಕ್ಕೆ ತರುವ ಉದ್ದೇಶದಿಂದ ಜಾರಿಗೆ ತರಲಾಗಿದ್ದ 1976ರ ಹಿಂದಿನ ಶಾಸನವನ್ನು ರದ್ದುಗೊಳಿಸುವ 2003ರ ಕಾನೂನನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಪ್ರಸನ್ನ ಬಿ. ವರಾಳೆ ಅವರ ಪೀಠವು ಎತ್ತಿಹಿಡಿದಿದೆ.

ಕೆಎಸ್‌ಆರ್‌ಟಿಸಿ ಮತ್ತು ಇತರರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಪೀಠ, 'ಹಿಂದಿನ ಕಾನೂನಿನ ರದ್ದತಿಯು ಶಾಸಕಾಂಗದ ಅನಿಯಂತ್ರಿತ ಕ್ರಿಯೆ ಅಲ್ಲ. ಬದಲಿಗೆ, ಅಸ್ತಿತ್ವದಲ್ಲಿರುವ ನಿಯಂತ್ರಣ ಚೌಕಟ್ಟಿನಲ್ಲಿನ ಗುರುತಿಸಲ್ಪಟ್ಟ ನ್ಯೂನತೆಗಳನ್ನು ಮತ್ತು ಸಾರಿಗೆ ವಲಯವನ್ನು ಉದಾರೀಕರಣಗೊಳಿಸುವ ಅಗತ್ಯ ಬೆಂಬಲಿಸುವ ಉದ್ದೇಶ ಮತ್ತು ಸ್ಪಷ್ಟ ಕಾರಣಗಳ ಆಧಾರದ ಮೇಲೆ ತೆಗೆದುಕೊಂಡಿರುವ ಕ್ರಮವಾಗಿದೆ' ಎಂದು ಅಭಿಪ್ರಾಯಪಟ್ಟಿದೆ.

ಕೆಸಿಸಿಎ ಕಾಯ್ದೆಯ ಮೂಲಕ ಕೆಎಸ್‌ಆರ್‌ಟಿಸಿಗೆ ದೊರೆತಿರುವ ಏಕಸ್ವಾಮ್ಯತೆಯನ್ನು ಕಿತ್ತು ಹಾಕುವುದು ಮತ್ತು ಹೆಚ್ಚುತ್ತಿರುವ ಸಾರ್ವಜನಿಕ ಸಾರಿಗೆ ಅಗತ್ಯಗಳನ್ನು ಪೂರೈಸಲು ಖಾಸಗಿ ಬಸ್‌ಗಳಿಗೆ ಅವಕಾಶ ಕಲ್ಪಿಸುವುದು ಇದರ ಉದ್ದೇಶವಾಗಿತ್ತು ಎಂದು ನ್ಯಾಯಪೀಠ ತಿಳಿಸಿದೆ.

ಕರ್ನಾಟಕ ಹೈಕೋರ್ಟ್‌ನ ವಿಭಾಗೀಯ ಪೀಠದ ತೀರ್ಪನ್ನು ಒಪ್ಪಿಕೊಂಡಿರುವ ನ್ಯಾಯಪೀಠ, ಈ ಕಾಯ್ದೆ ರದ್ದತಿಯ ಕ್ರಮವು ಆಧುನಿಕ ಸಾರಿಗೆಯ ಪ್ರಾಯೋಗಿಕ ವಾಸ್ತವಿಕತೆಗೆ ತಕ್ಕನಾದ ಕ್ರಮವಾಗಿದೆ ಎಂದಿದೆ.

ಹೆಚ್ಚುತ್ತಿರುವ ಸಾರ್ವಜನಿಕ ಸೇವೆಗಳು, ನಗರ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ, ಸಮರ್ಥ ಸೇವೆ ಮತ್ತು ಹೆಚ್ಚು ಬದಲಾಗುವ ನಿಯಂತ್ರಣ ನಿಯಮಗಳಂತಹ ಸಮಕಾಲೀನ ಸವಾಲುಗಳನ್ನು ಎದುರಿಸಲು ಈ ಕ್ರಮ ಅಗತ್ಯ ಎಂದು ನ್ಯಾಯಪೀಠ ಹೇಳಿದೆ.

ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜ್ (ಸ್ವಾಧೀನ) ಕಾಯ್ದೆ– 1976 ಅನ್ನು ರದ್ದುಗೊಳಿಸುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಕಾಯ್ದೆ–2003ರ ಸೆಕ್ಷನ್ 3 ಸಾಂವಿಧಾನಿಕವಾಗಿದೆ ಎಂದು ಪೀಠ ಅಭಿಪ್ರಾಯ ಪಟ್ಟಿದೆ.ರಾಜ್ಯ ಶಾಸಕಾಂಗವು ಕಾಯ್ದೆಯನ್ನು ರದ್ದುಗೊಳಿಸಲು ತನ್ನ ಅಧಿಕಾರವನ್ನು ಸರಿಯಾಗಿ ಚಲಾಯಿಸಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಹೈಕೋರ್ಟ್ 2011ರ ಮಾರ್ಚ್ 28ರಂದು ನೀಡಿದ್ದ ತೀರ್ಪಿನ ವಿರುದ್ಧ ಕೆಎಸ್‌ಆರ್‌ಟಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಾಲಯ ವಜಾಗೊಳಿಸಿದೆ. ಕೆಸಿಸಿಎ ಕಾಯ್ದೆಯನ್ನು ರದ್ದುಗೊಳಿಸುವುದು ಅಸಂವಿಧಾನಿಕ ಎಂದು ಕೆಎಸ್‌ಆರ್‌ಟಿಸಿ ಮಾಡಿದ ವಾದವನ್ನು ನ್ಯಾಯಾಲಯ ತಿರಸ್ಕರಿಸಿದೆ.

ಗ್ರಾಮೀಣ ವಿದ್ಯಾರ್ಥಿಗಳಿಗೆ ವಿಜ್ಞಾನದ ಸಾಧನೆ ಪರಿಚಯ

ಪ್ರಿಯಾಂಕ್ ಖರ್ಗೆ

ಬೆಂಗಳೂರು: ಇದೇ 28ರಂದು ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಗ್ರಾಮ ಪಂಚಾಯಿತಿಗಳ ಅರಿವು ಕೇಂದ್ರಗಳಿಗೆ ಬರುವ ಮಕ್ಕಳಿಗೆ ವಿಜ್ಞಾನ ಕ್ಷೇತ್ರದ ಸಾಧನೆಗಳು, ವಿಜ್ಞಾನಿಗಳ ಪರಿಚಯ ಸೇರಿ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಅಲ್ಲದೇ, ವಾರ್ಷಿಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ನಿಟ್ಟನಲ್ಲಿ ಶಾಲಾ ಶಿಕ್ಷಕರಿಂದ, ಹಿರಿಯರಿಂದ ಮಕ್ಕಳಿಗೆ ಮಾರ್ಗದರ್ಶನ ನೀಡುವುದರ ಜತೆಗೆ ಆತ್ಮಸ್ಥೈರ್ಯ ತುಂಬಲಾಗುವುದು. ಪೋಷಕರು ಮತ್ತು ಮಕ್ಕಳೊಂದಿಗೆ ಸೌಹಾರ್ದ ಸಭೆ ನಡೆಸಲಾಗುವುದು. ಈ ಮೂಲಕ ಉತ್ತಮ ಫಲಿತಾಂಶ ತರಲು ಪ್ರಯತ್ನಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಓದುವ ಬೆಳಕು' ಕಾರ್ಯಕ್ರಮದಡಿ, ಇಡೀ ತಿಂಗಳು 'ಗ್ರಂಥಾಲಯದೆಡೆಗೆ ನಾನು ನನ್ನ ಸ್ನೇಹಿತರು' ಅಭಿಯಾನ ಹಮ್ಮಿಕೊಳ್ಳ ಲಾಗುವುದು. ಇದ ರಡಿ ಗ್ರಾಮೀಣ ಪ್ರದೇಶದ ಎಲ್ಲ ಮಕ್ಕಳು ಮತ್ತು ಹದಿಹರೆಯದವರಲ್ಲಿ ಓದುವ ಹವ್ಯಾಸ ಹೆಚ್ಚಿಸಲು ಅರಿವು ಕೇಂದ್ರಗಳ ಉಪಯೋಗ ಪಡೆಯಲು ಪ್ರೇರೇಪಿಸಲಾಗುವುದು. ಅಲ್ಲಿ ತಮ್ಮ ಇಷ್ಟದ ಕಥೆಗಳ ಪುಸ್ತಕಗಳನ್ನು ಆಯ್ದು ಗಟ್ಟಿಯಾಗಿ ಓದುವ ಚಟುವಟಿಕೆಯಲ್ಲಿ ತೊಡಗಿಸಲಾಗುವುದು ಎಂದು ವಿವರಿಸಿದ್ದಾರೆ.

ಉರ್ದು ದಿನಾಚರಣೆ, ಪ್ರಶಸ್ತಿ ಪ್ರದಾನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುನೈಟೆಡ್ ಕೌನ್ಸಿಲ್ ಫಾರ್ ಎಜುಕೇಷನ್ ಆ್ಯಂಡ್ ಕಲ್ಚರ್ (ಯುಸಿಇಸಿ) ವತಿಯಿಂದ ಫೆಬ್ರುವರಿ 8ರಂದು ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ಉರ್ದು ದಿನಾಚರಣೆ (ಜಶ್ನೆ–ಎ–ಯೂಮ್–ಎ–ಉರ್ದು) ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯುಸಿಇಸಿಯ ಟ್ರಸ್ಟಿಗಳಾದ ಶಾಯಿಸ್ತಾ ಯೂಸೂಫ್, ಇಕ್ಬಾಲ್ ಅಹಮದ್ ಬೇಗ್, 'ಕಾರ್ಯಕ್ರಮದಲ್ಲಿ ಮಾಜಿ ಐಎಎಸ್ ಅಧಿಕಾರಿಗಳಾದ ಅಜೀಜುಲ್ ಬೇಗ್, ಅದೋನಿ ಸೈಯದ್ ಸಲೀಂ, ಮಹಮ್ಮದ್ ಸಲಾಹುದ್ದೀನ್, ಮೀರ್ ಅನೀಸ್ ಅಹಮದ್, ಮಾಜಿ ಕೆಎಎಸ್ ಅಧಿಕಾರಿ ಎಂ.ಎ. ಖಾಲಿದ್ ಅವರಿಗೆ 'ಉರ್ದು ದೋಸ್ತ್' ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಕಲಾವಿದ ಮಹಮ್ಮದ್ ಅಯಾಜುದ್ದೀನ್ ಪಟೇಲ್ ಅವರಿಗೆ 'ಮಮ್ತಾಜ್ ಶಿರೀನ್ ಪ್ರಶಸ್ತಿ', ಕ್ವಿಜ್ ಟೈಮ್ ಸಂಪಾದಕ ಹಮೀದ್ ಇಕ್ಬಾಲ್ ಸಿದ್ದಿಕಿ ಅವರಿಗೆ 'ಮಹಮ್ಮೂದ್ ಅಯಾಜ್ ಪ್ರಶಸ್ತಿ', ಬೀದರ್ ಶಾಹೀನ್ ಕಾಲೇಜಿನ ಪ್ರಾಧ್ಯಾಪಕಿ ಶಾಯಿಸ್ತಾ ನಾಜ್ ಅವರಿಗೆ 'ಉರೂಜ್–ಎ–ನಿಸಾ ಪ್ರಶಸ್ತಿ' ಪ್ರದಾನ ಮಾಡಲಾಗುತ್ತದೆ' ಎಂದು ವಿವರಿಸಿದರು.

'ಈ ಕಾರ್ಯಕ್ರಮದಲ್ಲಿ ಆಯೋಜಿಸಿರುವ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ 800 ವಿವಿಧ ಶಾಲೆಗಳ 2,000ಕ್ಕೂ ಹೆಚ್ಚು ವಿದ್ಯಾರ್ಥಿಗಳ ಭಾಗವಹಿಸಲಿದ್ದಾರೆ. ಕೇಂದ್ರದ ಮಾಜಿ ಸಚಿವ ಕೆ. ರಹಮಾನ್ ಖಾನ್, ಸಚಿವ ಜಮೀರ್ ಅಹಮದ್ ಖಾನ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ವಿಧಾನ ಪರಿಷತ್ ಸದಸ್ಯೆ ಬಲ್ಕೀಸ್ ಬಾನು, ಕರ್ನಾಟಕ ಉರ್ದು ಅಕಾಡೆಮಿಯ ಅಧ್ಯಕ್ಷ ಮೌಲಾನಾ ಮಹಮ್ಮದ್ ಅಲಿ ಖಾಜಿ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ನಾಲ್ಕು ಜಲಾಶಯಗಳಲ್ಲಿ 82 ಟಿಎಂಸಿ ಅಡಿ ನೀರು ಸಂಗ್ರಹ; ಕುಡಿಯುವ ನೀರಿಗಿಲ್ಲ ತೊಂದರೆ

ಬೇಸಿಗೆಯಲ್ಲೂ ತುಂಬಿದೆ ಕಾವೇರಿ ಕಣಿವೆ

• ಆರ್. ಜಿತೇಂದ್ರ

ಮೈಸೂರು: ಹಳೇ ಮೈಸೂರು ಭಾಗದ ಜೀವನದಿ ಕಾವೇರಿ ಕಣಿವೆಯ ನಾಲ್ಕು ಜಲಾಶಯಗಳು ಈ ಬಾರಿ ಬೇಸಿಗೆಯ ಆರಂಭದಲ್ಲೂ ಉತ್ತಮ ನೀರಿನ ಸಂಗ್ರಹ ಹೊಂದಿದ್ದು, ಸದ್ಯಕ್ಕೆ ಕುಡಿಯುವ ನೀರಿನ ಕೊರತೆ ಇಲ್ಲ.

ಕಾವೇರಿ ಮತ್ತು ಅದರ ಉಪನದಿಗಳಿಗೆ ಅಡ್ಡಲಾಗಿ ರಾಜ್ಯದಲ್ಲಿ ನಾಲ್ಕು ಜಲಾಶಯಗಳು ನಿರ್ಮಾಣವಾಗಿದ್ದು, ಅವು ಹಳೇ ಮೈಸೂರು ಭಾಗದ ಮೈಸೂರು, ಮಂಡ್ಯ, ಹಾಸನ, ಕೊಡಗು, ಚಾಮರಾಜನಗರ, ತುಮಕೂರು ಹಾಗೂ ರಾಜಧಾನಿ ಬೆಂಗಳೂರಿನ ಜನರ ಕುಡಿಯುವ ನೀರಿನ ಅಗತ್ಯತೆಯನ್ನು ಪೂರೈಸುತ್ತಾ ಬಂದಿವೆ. ಈ ಭಾಗದ ಕೃಷಿಗೂ ಬೆನ್ನೆಲುಬಾಗಿವೆ.

ಈ ಜಲಾಶಯಗಳು ಒಟ್ಟು ಗರಿಷ್ಠ 114 ಟಿಎಂಸಿ ಅಡಿ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿದ್ದು, ಅದರಲ್ಲಿ ಪ್ರಸ್ತುತ 82 ಟಿಎಂಸಿ ಅಡಿಯಷ್ಟು ನೀರಿನ ಸಂಗ್ರಹವಿದೆ. 'ಡೆಡ್ ಸ್ಟೋರೇಜ್' ಹೊರತುಪಡಿಸಿ 60 ಟಿಎಂಸಿ ಅಡಿಯಷ್ಟು ನೀರು ಬಳಕೆಗೆ ಲಭ್ಯವಿದೆ.

2023ರಲ್ಲಿ ಹಳೇ ಮೈಸೂರು ಭಾಗದಲ್ಲಿ ಬರಗಾಲದ ಕಾರಣ ಜಲಾಶಯಗಳು ಭರ್ತಿಯೇ ಆಗಿರಲಿಲ್ಲ. ಸರಾಸರಿ ಶೇ 45ರಷ್ಟು ನೀರಿನ ಕೊರತೆ ಆಗಿದ್ದು, ಕುಡಿಯುವ ನೀರು ಪೂರೈಕೆಯಲ್ಲೂ ವ್ಯತ್ಯಯ ಆಗಿತ್ತು. ಆದರೆ ಈ ವರ್ಷ ಆಶಾದಾಯಕ ವಾತಾವರಣವಿದೆ.

ಕೆಆರ್‌ಎಸ್‌ನದ್ದೇ ಸಿಂಹಪಾಲು: ಕಾವೇರಿ ಕಣಿವೆಯಲ್ಲಿ ಕೆಆರ್‌ಎಸ್‌ನದ್ದೇ ಸಿಂಹ ಪಾಲು. ಡಿಸೆಂಬರ್ ಅಂತ್ಯದವರೆಗೂ ಭರ್ತಿಯಾಗಿದ್ದ ಜಲಾಶಯದಲ್ಲಿ ಈಗಲೂ 119 ಅಡಿಗಳಷ್ಟು (ಗರಿಷ್ಠ 124.29 ಅಡಿ) ನೀರಿನ ಸಂಗ್ರಹವಿದೆ. 33.51 ಅಡಿಯಷ್ಟು ನೀರು ಬಳಕೆಗೆ ಲಭ್ಯವಿದೆ.

ಬೆಂಗಳೂರು ನಗರ, ರಾಮನಗರ ಜಿಲ್ಲೆಗಳಿಗೆ ಕಾವೇರಿ ನದಿಯಿಂದ ನೀರು ಪೂರೈಕೆಯಾಗುತ್ತಿದೆ. ಮೈಸೂರು, ಮಂಡ್ಯಕ್ಕೂ ಇದೇ ಆಧಾರ. ಕುಡಿಯುವ ನೀರಿನ ಉದ್ದೇಶಕ್ಕಾಗಿಯೇ ಜಲಾಶಯದಿಂದ ತಿಂಗಳಿಗೆ ಸರಾಸರಿ 3.5ರಿಂದ 4 ಟಿಎಂಸಿ ಅಡಿ ನೀರು ಬಳಸಲಾಗುತ್ತಿದೆ.

ಹಾಸನದ ಹೇಮಾವತಿ ಜಲಾಶಯದಿಂದ ತುಮಕೂರು, ತಿಪಟೂರು, ತುರುವೇಕೆರೆ, ಗುಬ್ಬಿ, ಶಿರಾ, ಮಂಡ್ಯ ಜಿಲ್ಲೆಯ ನಾಗಮಂಗಲ, ಕೆ.ಆರ್.ಪೇಟೆ, ಪಾಂಡವಪುರ, ಹಾಸನ ಜಿಲ್ಲೆಯ ಹಾಸನ ನಗರ, ಸಕಲೇಶಪುರ, ಅರಕಲಗೂಡು, ಹೊಳೆನರಸೀಪುರ, ಚನ್ನರಾಯಪಟ್ಟಣ, ಅರಸೀಕೆರೆ ಪಟ್ಟಣಕ್ಕೆ ಕುಡಿಯುವ ನೀರನ್ನು ಪೂರೈಸ ಲಾಗುತ್ತಿದೆ. ಕಬಿನಿ ಜಲಾಶಯವು ಮೈಸೂರು ಭಾಗಕ್ಕೆ ಕುಡಿಯುವ ನೀರಿನ ಮೂಲವಾಗಿದೆ.

'ಸದ್ಯ ಕುಡಿಯುವ ನೀರಿನ ದೃಷ್ಟಿಯಿಂದ ನಾಲ್ಕೂ ಜಲಾಶಯಗಳಲ್ಲಿ ಉತ್ತಮ ನೀರಿನ ಸಂಗ್ರಹ ಇದ್ದು, ಯಾವುದೇ ತೊಂದರೆ ಆಗದು' ಎನ್ನುತ್ತಾರೆ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು.

ಮೈಸೂರು ಜಿಲ್ಲೆಯ ತಿ. ನರಸೀಪುರ ತಾಲ್ಲೂಕಿನ ಕುರುಬೂರು ಸಮೀಪ ಭತ್ತದ ನಾಟಿಗಾಗಿ ಗದ್ದೆಯನ್ನು ಹಸನಗೊಳಿಸುವ ಕಾಯಕದಲ್ಲಿ ನಿರತನಾದ ರೈತ

ಚಿತ್ರ: ಅನೂಪ್ ರಾಘ ಟಿ.

> ಕೆಆರ್‌ಎಸ್, ಕಬಿನಿ, ಹಾರಂಗಿಯಲ್ಲಿ ನೀರಿನ ಸಂಗ್ರಹ ಉತ್ತಮವಾಗಿದೆ. ಮೂರು ಜಲಾಶಯಗಳ ವ್ಯಾಪ್ತಿಯ ಕಾಲುವೆಗಳಿಗೆ ನೀರು ಹರಿಸಿ ರೈತರ ಹಿತ ಕಾಯಬೇಕು
>
> **ಬಡಗಲಪುರ ನಾಗೇಂದ್ರ**
> ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ

> ಕಬಿನಿ ಜಲಾಶಯ ವ್ಯಾಪ್ತಿಯ ನಾಲೆಗಳಿಗೆ ಎರಡನೇ ಬೆಳೆಗೆ ನೀರು ಹರಿಸುವಂತೆ ಈಗಾಗಲೇ ಮನವಿ ಮಾಡಿದ್ದೇವೆ. ಸರ್ಕಾರ ಶೀಘ್ರ ಸಭೆ ನಡೆಸಿ ತೀರ್ಮಾನ ಕೈಗೊಳ್ಳಬೇಕು
>
> **ಕುರುಬೂರು ಶಾಂತಕುಮಾರ್**
> ಅಧ್ಯಕ್ಷ, ರಾಜ್ಯ ರೈತ ಸಂಘಟನೆಗಳ ಒಕ್ಕೂಟ

ಎರಡನೇ ಬೆಳೆಗೂ ನೀರು

ಜಲಾಶಯಗಳಲ್ಲಿ ಉತ್ತಮ ನೀರಿನ ಸಂಗ್ರಹವಿರುವುದರಿಂದ ಈ ವರ್ಷ ಕೆಲವೆಡೆ ಎರಡನೇ ಬೆಳೆಗಳಿಗೂ ನೀರು ಹರಿಸಲಾಗುತ್ತಿದೆ. ಹೇಮಾವತಿ ಜಲಾಶಯದಿಂದ ಸದ್ಯ ಬಲದಂಡೆ ಕಾಲುವೆಗಳಿಗೆ ನಿತ್ಯ 200 ಕ್ಯುಸೆಕ್‌ನಷ್ಟು ನೀರು ಹರಿಯುತ್ತಿದೆ. ಕೆಆರ್‌ಎಸ್‌ನಿಂದ ನದಿ ಹಾಗೂ ಕಾಲುವೆಗಳಿಗೆ 1600 ಕ್ಯುಸೆಕ್‌ನಷ್ಟು ನೀರು ಹರಿದಿದೆ. ಇದರಿಂದ ಇವುಗಳ ವ್ಯಾಪ್ತಿಯ ಕೃಷಿ ಜಮೀನುಗಳಲ್ಲಿ ಕೃಷಿ ಚಟುವಟಿಕೆ ಗರಿಗೆದರಿದ್ದು, ಭತ್ತದ ಕೃಷಿ ಬಿರುಸಿನಿಂದ ನಡೆದಿದೆ.

ಹೇಮಾವತಿ ಜಲಾಶಯವು ಒಟ್ಟು 7.03 ಲಕ್ಷ ಎಕರೆಗೆ ನೀರುಳಿಸುತ್ತಿದ್ದರೆ, ಕೆಆರ್‌ಎಸ್ ಜಲಾಶಯದಿಂದ ವಿಶ್ವೇಶ್ವರಯ್ಯ ಮೂಲಕ ಮೈಸೂರು ಹಾಗೂ ಮಂಡ್ಯ ಜಿಲ್ಲೆಯ 3.4 ಲಕ್ಷ ಎಕರೆ ಪ್ರದೇಶಕ್ಕೆ ನೀರು ಹರಿದಿದೆ. ಕಟ್ಟುನೀರು ಪದ್ಧತಿ ಅನುಸರಿಸುವುದಾಗಿ ಮಾಹಿತಿ ನೀಡಲಾಗಿದೆ.

ಕಳೆದ ವರ್ಷ ಬರಗಾಲದ ಕಾರಣಕ್ಕೆ ಮೊದಲ ಬೆಳೆಗಳಿಗೇ ನೀರು ಸಿಗದೇ ರೈತರು ಪರದಾಡಿದ್ದರು. ಕೆಆರ್‌ಎಸ್ ವ್ಯಾಪ್ತಿಯಲ್ಲಿ ಕಟ್ಟುನೀರು ಪದ್ಧತಿ ಮೂಲಕ ನೀರು ಹರಿಸಲಾಗಿತ್ತು.

ನಿರ್ಮಾಣ ಹಂತದ ಕಟ್ಟಡದಲ್ಲಿ ಬೆಂಕಿ ಅವಘಡ • ಕಟ್ಟಡದಿಂದ ಹೊರಬಂದ ಐವರು ಪಾರು

ಇಬ್ಬರು ಕಾರ್ಮಿಕರು ಸಜೀವ ದಹನ

ಪ್ರಜಾವಾಣಿ ವಾರ್ತೆ

ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿರುವ ದೃಶ್ಯ

ಉದಯ ಭಾನು

ರೋಷನ್

ನೆಲಮಂಗಲ: ಮಾದನಾಯಕನಹಳ್ಳಿ ಠಾಣಾ ವ್ಯಾಪ್ತಿಯಲ್ಲಿನ ನಿರ್ಮಾಣ ಹಂತದ ಕಟ್ಟಡದಲ್ಲಿ ಗುರುವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ ಇಬ್ಬರು ಕಾರ್ಮಿಕರು ಸಜೀವ ದಹನವಾಗಿದ್ದಾರೆ.

ಮರಗೆಲಸ ಹಾಗೂ ಪೇಂಟಿಂಗ್ ಕೆಲಸ ಮಾಡುತ್ತಿದ್ದ ಉತ್ತರ ಪ್ರದೇಶದ ಉದಯ್ ಭಾನು (40) ಹಾಗೂ ಬಿಹಾರದ ರೋಷನ್ (23) ಮೃತ ಕಾರ್ಮಿಕರು.

ಮಾಗಡಿ ರಸ್ತೆಯ ಸೀಗೆಹಳ್ಳಿಯ ಶಿವಾನಿ ಗ್ರೀನ್ಸ್ ಬಡಾವಣೆಯಲ್ಲಿ ಸತೀಶ್ ಎಂಬುವರು ಮೂರು ಅಂತಸ್ತಿನ ಕಟ್ಟಡ ನಿರ್ಮಿಸುತ್ತಿದ್ದರು. ಬಹುತೇಕ ಪೂರ್ಣಗೊಂಡಿದ್ದ ಕಟ್ಟಡದಲ್ಲಿ ಪೇಂಟಿಂಗ್ ಹಾಗೂ ಮರಗೆಲಸ ಬಾಕಿ ಉಳಿದಿದ್ದವು. ಎಂಟು ಕಾರ್ಮಿಕರು ಕೆಲಸ ಮಾಡುತ್ತಿದ್ದ ವೇಳೆ ಬೆಂಕಿ ಕಾಣಿಸಿಕೊಂಡಿದೆ. ನೋಡ ನೋಡುತ್ತಿದ್ದಂತೆ ಬೆಂಕಿ ಎಲ್ಲೆಡೆ ಆವರಿಸಿಕೊಂಡಿತು.

ಐವರು ಹೊರಗೆ ಓಡಿ ಬಂದು ಜೀವ ಉಳಿಸಿಕೊಂಡರೆ, ಮೂವರು ಒಳಗೆ ಸಿಲುಕಿಕೊಂಡರು. ಎರಡನೇ ಮಹಡಿಯಲ್ಲಿ ಉದಯ್ ಹಾಗೂ ಮೂರನೇ ಮಹಡಿಯಲ್ಲಿ ರೋಷನ್ ಅವರ ಮೃತದೇಹ ಸಂಪೂರ್ಣ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದೆ. ಕಟ್ಟಡದ ಮೇಲೆ ಟ್ಯಾಂಕ್‌ನಲ್ಲಿ ಬಚ್ಚಿಟ್ಟುಕೊಂಡಿದ್ದ ಕಾರ್ಮಿಕರೊಬ್ಬರನ್ನು ಅಗ್ನಿಶಾಮಕ ಸಿಬ್ಬಂದಿ ರಕ್ಷಣೆ ಮಾಡಿದರು.

ಅಗ್ನಿಶಾಮಕ ವಾಹನಗಳ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

'ಕಾರ್ಯಾಚರಣೆ ವೇಳೆ ಕಟ್ಟಡದಲ್ಲಿ ಸಿಲುಕಿದ್ದ ಕಾರ್ಮಿಕರೊಬ್ಬರನ್ನು ರಕ್ಷಿಸಲಾಗಿದೆ. ಇಬ್ಬರು ಕಾರ್ಮಿಕರ ಶವಗಳು ಪತ್ತೆಯಾಗಿವೆ. ರಾಜಾಜಿನಗರ ಹಾಗೂ ಪೀಣ್ಯ ಅಗ್ನಿಶಾಮಕ ಠಾಣೆಗಳಿಂದ ಹೆಚ್ಚುವರಿ ತಲಾ ಒಂದೊಂದು ವಾಹನಗಳನ್ನು ತರಿಸಿಕೊಂಡು ಸಂಪೂರ್ಣವಾಗಿ ಬೆಂಕಿ ನಂದಿಸಲಾಗಿದೆ' ಎಂದು ಅಗ್ನಿಶಾಮಕ ದಳದ ಹಿರಿಯ ಅಧಿಕಾರಿ ಕಿಶೋರ್ ತಿಳಿಸಿದರು.

'ಕಟ್ಟಡಕ್ಕೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದುಕೊಳ್ಳಲಾಗಿತ್ತು. ಮರ ಪಾಲೀಶ್ ಮಾಡುವ ಥಿನ್ನರ್ ಹಾಗೂ ರಾಸಾಯನಿಕ ಶೇಖರಣೆ ಮಾಡಲಾಗಿತ್ತು. ಕಾರ್ಮಿಕರು ಅಡುಗೆ ಮಾಡುತ್ತಿದ್ದ ಸ್ಥಳದಲ್ಲಿ ಸಣ್ಣ ಪ್ರಮಾಣದ ಎಲ್‌ಪಿಜಿ ಸಿಲಿಂಡರ್ ದೊರೆತಿದೆ. ಆದರೆ, ಸ್ಫೋಟಗೊಂಡಿಲ್ಲ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರೆಸಲಾಗಿದೆ' ಎಂದು ಪೊಲೀಸರು ಹೇಳಿದರು.

ಸರಣಿ ಕಳ್ಳತನ: ನಗದು ದೋಚಿ ಪರಾರಿ

ಅಪರಾಧ ಸುದ್ದಿ

ಬೆಂಗಳೂರು: ಕೆ.ಪಿ. ಅಗ್ರಹಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ಬೆಳಗಿನ ಜಾವ ಬೇಕರಿ, ಔಷಧ ಅಂಗಡಿ ಸೇರಿ ಮೂರು ಕಡೆ ಕಳ್ಳತನವಾಗಿದೆ.

ಕೆ.ಪಿ. ಅಗ್ರಹಾರದ ಚೋಳೂರು ಪಾಳ್ಯ ಮುಖ್ಯ ರಸ್ತೆಯಲ್ಲಿ ಔಷಧ ಅಂಗಡಿ, ನಂದಿನಿ ಪಾರ್ಲರ್ ಹಾಗೂ ಬೇಕರಿಯ ಶಟರ್‌ಗಳ ಬೀಗಗಳನ್ನು ಕಳ್ಳರು ಮುರಿದು, ನಗದು ಹಾಗೂ ವಸ್ತುಗಳನ್ನು ದೋಚಿ ಪರಾರಿಯಾಗಿದ್ದಾರೆ.

ಎರಡು ದ್ವಿಚಕ್ರ ವಾಹನದಲ್ಲಿ ಬಂದ ಐವರು ಕಳ್ಳರು, ಮೊದಲು ಬೇಕರಿಯೊಂದರ ಶಟರ್ ಮುರಿದು ಸುಮಾರು ₹5 ಸಾವಿರ ನಗದು ಕಳ್ಳತನ ಮಾಡಿದ್ದಾರೆ. ಬಳಿಕ ಅದೇ ರಸ್ತೆಯಲ್ಲಿರುವ ವಿಶ್ವ ಮೆಡಿಕಲ್ ಶಾಪ್‌ನ ಶಟರ್ ಬೀಗ ಮುರಿದು ₹ 1 ಲಕ್ಷ ಹಾಗೂ ನಂದಿನಿ ಪಾರ್ಲರ್‌ನಲ್ಲಿದ್ದ ₹ 4,000 ನಗದು ದೋಚಿ ಪರಾರಿಯಾಗಿದ್ದಾರೆ.

ಬೆರಳಚ್ಚು ತಜ್ಞರು ಹಾಗೂ ಶ್ವಾನದಳ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಮೂರು ಕಡೆಗಳಲ್ಲಿ ನಡೆದಿರುವ ಕಳ್ಳತನದ ಹಿಂದೆ ಒಂದೇ ಗ್ಯಾಂಗ್ ಇರುವ ಅನುಮಾನವಿದೆ. ಕಳ್ಳತನ ಕೃತ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ಪತ್ತೆಗೆ ಶೋಧ ಕಾರ್ಯ ಕೈಗೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಗುರುವಾರ ರಾತ್ರಿ 11 ಗಂಟೆಗೆ ಅಂಗಡಿಗೆ ಬೀಗ ಹಾಕಿ ಮನೆಗೆ ಹೋಗಿದ್ದೆ. ಅಂಗಡಿ ಪಕ್ಕದಲ್ಲಿ ವಾಸವಿರುವ ಯುವಕ ಬೆಳಿಗ್ಗೆ ಕರೆ ಮಾಡಿ ವಿಷಯ ತಿಳಿಸಿದ. ಅಂಗಡಿಯಲ್ಲಿಟ್ಟಿದ್ದ ನಗದು ಹಾಗೂ ಔಷಧಗಳ ಕಳ್ಳತನವಾಗಿದೆ' ಎಂದು ವಿಶ್ವ ಮೆಡಿಕಲ್ ಅಂಗಡಿ ಮಾಲೀಕ ಮಂಜುನಾಥ್ ತಿಳಿಸಿದರು.

ನ್ಯಾಕ್ ಪರಿಶೀಲನಾ ಸಮಿತಿಯ ಲಂಚ ಪ್ರಕರಣ

ಪ್ರೊ.ಗಾಯತ್ರಿ ದೇವರಾಜ ಅಮಾನತು

ಪ್ರಜಾವಾಣಿ ವಾರ್ತೆ

ದಾವಣಗೆರೆ: ನ್ಯಾಕ್ ಪರಿಶೀಲನಾ ಸಮಿತಿಯ ಲಂಚ ಪ್ರಕರಣದಲ್ಲಿ ಸಿಬಿಐನಿಂದ ಬಂಧನಕ್ಕೆ ಒಳಗಾಗಿರುವ ದಾವಣಗೆರೆ ವಿಶ್ವವಿದ್ಯಾಲಯದ ಮೈಕ್ರೊ ಬಯಾಲಜಿ ವಿಭಾಗದ ಪ್ರೊ. ಗಾಯತ್ರಿ ದೇವರಾಜ ಅವರನ್ನು ಕರ್ತವ್ಯದಿಂದ ಅಮಾನತು ಮಾಡಲಾಗಿದೆ.

ಗುರುವಾರ ನಡೆದ ದಾವಣಗೆರೆ ವಿಶ್ವವಿದ್ಯಾಲಯದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಈ ಕುರಿತು ಚರ್ಚಿಸಿ, ಗಾಯತ್ರಿ ಅವರನ್ನು 6 ತಿಂಗಳ ಅವಧಿಗೆ ಅಮಾನತು ಮಾಡಿ ನಿರ್ಣಯ ಕೈಗೊಳ್ಳಲಾಗಿದೆ.

'ಕೆಸಿಎಸ್‌ಆರ್ ನಿಯಮಗಳ ಪ್ರಕಾರ ಪ್ರೊ. ಗಾಯತ್ರಿ ದೇವರಾಜ ಅವರನ್ನು ಅಮಾನತುಗೊಳಿಸಲಾಗಿದೆ. ಆದೇಶದ ಪ್ರತಿಯನ್ನು ರಾಜ್ಯಪಾಲರು ಹಾಗೂ ಸರ್ಕಾರಕ್ಕೆ ಕಳಿಸಿಕೊಡಲಾಗುವುದು' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಡಿ. ಕುಂಬಾರ ತಿಳಿಸಿದರು.

ನ್ಯಾಕ್ ತಪಾಸಣಾ ಸಮಿತಿಯ ಸದಸ್ಯರೂ ಆಗಿರುವ ಗಾಯತ್ರಿ ಅವರನ್ನು ಲಂಚ ಪಡೆದ ಆರೋಪದಲ್ಲಿ ಸಿಬಿಐ ಅಧಿಕಾರಿಗಳು ಈಚೆಗೆ ವಿಚಾರಣೆಗೆ ಒಳಪಡಿಸಿ ಬಂಧಿಸಿದ್ದರು. ವಿಶ್ವವಿದ್ಯಾಲಯದ ಕುಲಸಚಿವೆಯಾಗಿಯೂ ಕಾರ್ಯ ನಿರ್ವಹಿಸಿದ್ದ ಅವರ ನಿವಾಸಕ್ಕೂ ಭೇಟಿ ನೀಡಿ ಪರಿಶೀಲಿಸಿದ್ದರು.

ಎಕ್ಸ್‌ಪ್ರೆಸ್ ಮೇಲ್ಸೇತುವೆಯಲ್ಲಿ ಸರಣಿ ಅಪಘಾತ

ನಾಲ್ಕು ಕಿ.ಮೀ. ವಾಹನಗಳ ಸಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಲೆಕ್ಟ್ರಾನಿಕ್ ಸಿಟಿ ಮತ್ತು ಸಿಲ್ಕ್ ಬೋರ್ಡ್ ನಡುವಿನ ಎಕ್ಸ್‌ಪ್ರೆಸ್ ಮೇಲ್ಸೇತುವೆಯಲ್ಲಿ ಗುರುವಾರ ಸಂಭವಿಸಿದ ಸರಣಿ ಅಪಘಾತದಲ್ಲಿ ನಾಲ್ಕು ಕಾರುಗಳು ಜಖಂಗೊಂಡವು. ಇದರಿಂದ ಮೇಲ್ಸೇತುವೆಯಲ್ಲೇ ನೂರಾರು ವಾಹನಗಳು ನಿಂತು, ಸುಮಾರು ಒಂದು ತಾಸು ಸಂಚಾರ ದಟ್ಟಣೆ ಉಂಟಾಯಿತು.

ಗುರುವಾರ ಸಂಜೆ ಸುಮಾರು 6.30ಕ್ಕೆ ಅಪಘಾತ ಸಂಭವಿಸಿದೆ. ಮೇಲ್ಸೇತುವೆಯಲ್ಲಿ ಚಲಿಸುತ್ತಿದ್ದ ಕಾರಿನ ಚಾಲಕ ಏಕಾಏಕಿ ಬ್ರೇಕ್ ಹಾಕಿದ ಪರಿಣಾಮ ಹಿಂದೆ ಬರುತ್ತಿದ್ದ ಮೂರು ಕಾರುಗಳು ಒಂದಕ್ಕೊಂದು ಡಿಕ್ಕಿ ಹೊಡೆದುಕೊಂಡಿವೆ. ಅಪಘಾತದಲ್ಲಿ ಒಬ್ಬರಿಗೆ ಗಂಭೀರ ಗಾಯವಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರಿನ ಚಾಲಕರು ಹಾಗೂ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸರಣಿ ಅಪಘಾತ ಸಂಭವಿಸಿದ್ದರಿಂದ ಸುಮಾರು ನಾಲ್ಕು ಕಿ.ಮೀ. ಉದ್ದ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಎಲೆಕ್ಟ್ರಾನಿಕ್ ಸಿಟಿ-ಸಿಲ್ಕ್ ಬೋರ್ಡ್ ಮೇಲ್ಸೇತುವೆ ಸೇರಿದಂತೆ ಸುತ್ತಮುತ್ತಲ ರಸ್ತೆಗಳಲ್ಲಿ ಸುಮಾರು ಒಂದು ತಾಸು ವಾಹನ ಸಂಚಾರ ದಟ್ಟಣೆ ಉಂಟಾಯಿತು. ವಾಹನಗಳು ಮುಂದಕ್ಕೆ ಸಾಲದೇ ಸವಾರರು ಹೈರಣಾದರು.

ಸ್ಥಳಕ್ಕೆ ಭೇಟಿ ನೀಡಿದ ಸಂಚಾರ ವಿಭಾಗ ಪೊಲೀಸರು, ಸರಣಿ ಅಪಘಾತದಿಂದ ಹಾನಿಯಾಗಿದ್ದ ಕಾರುಗಳನ್ನು ತೆರವುಗೊಳಿಸಿದರು. ಸಂಚಾರ ದಟ್ಟಣೆಯಿಂದಾಗಿ ವಾಹನಗಳು ನಿಧಾನವಾಗಿ ಮುಂದೆ ಸಾಗಿದವು. ವಾಹನ ಸುಗಮ ಸಂಚಾರಕ್ಕೆ ಸುಮಾರು ಎರಡು ತಾಸು ಹಿಡಿಯಿತು.

ಅರಮನೆ ಸುತ್ತ ದಟ್ಟಣೆ

ಅರಮನೆ ಮೈದಾನದಲ್ಲಿ ಸಚಿವ ಬೈರತಿ ಸುರೇಶ್ ಅವರ ಮಗ ಹಾಗೂ ಯಲಹಂಕ ಶಾಸಕ ಎಸ್.ಆರ್ ವಿಶ್ವನಾಥ್ ಅವರ ಮಗಳ ಮದುವೆ ಸಮಾರಂಭವಿದ್ದ ಕಾರಣ ಸಂಚಾರ ದಟ್ಟಣೆ ಉಂಟಾಯಿತು.

ವಿಂಡ್ಸರ್‌ಮ್ಯಾನರ್ ಕೆಳಸೇತುವೆಯಿಂದ ಮೇಖ್ರಿ ವೃತ್ತದವರೆಗೆ ವಾಹನ ದಟ್ಟಣೆ ಹೆಚ್ಚಾಗಿತ್ತು. ನಿಧಾನಗತಿಯಲ್ಲಿ ಸಂಚಾರವಿದ್ದಿದ್ದರಿಂದ ವಾಹನ ಸವಾರರು ಪರದಾಡಿದರು.

'ಅನ್ವೇಷಣಾ': ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆವಿಷ್ಕಾರಗಳನ್ನು ಉತ್ತೇಜಿಸಲು, ಯುವ ವಿಜ್ಞಾನಿಗಳನ್ನು ಬೆಂಬಲಿಸಲು ಸುಧಾರಿತ ವಿಜ್ಞಾನ ಸಂಶೋಧನಾ ಯೋಜನೆಗಳಲ್ಲಿ ಭಾಗವಹಿಸಲು 9ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗಿನ ಆಸಕ್ತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

'ಪ್ರಯೋಗ' ಸಂಶೋಧನಾ ಸಂಸ್ಥೆಯ ವಿಜ್ಞಾನ ಸಂಶೋಧನಾ ಕಾರ್ಯಕ್ರಮವಾದ 'ಅನ್ವೇಷಣಾ' ಮೂಲಕ ಹಸಿರು ರಸಾಯನ ವಿಜ್ಞಾನ, ಭೂ ವಿಜ್ಞಾನ, ಕೃಷಿ ವಿಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದ ಅಧ್ಯಯನಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿದೆ. ಇಲ್ಲಿಯವರೆಗೆ ಮೂರು ಆವೃತ್ತಿಗಳಲ್ಲಿ 60 ವಿದ್ಯಾರ್ಥಿಗಳನ್ನು ಒಳಗೊಂಡ 20 ಸಂಶೋಧನಾ ಯೋಜನೆಗಳು ಪೂರ್ಣಗೊಂಡಿವೆ. ಈ ವಿದ್ಯಾರ್ಥಿಗಳು ಹಾರ್ವರ್ಡ್, ಆಕ್ಸ್‌ಫರ್ಡ್ ಸೇರಿದಂತೆ ವಿವಿಧ ವಿಶ್ವವಿದ್ಯಾಲಯಗಳ ನಿಯತ ಕಾಲಿಕಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ ಎಂದು 'ಪ್ರಯೋಗ' ತಿಳಿಸಿದೆ.

ಈ ಬಾರಿ 'ಅನ್ವೇಷಣಾ'ದ ನಾಲ್ಕನೇ ಆವೃತ್ತಿ ನಡೆಯಲಿದೆ. ವಿಜ್ಞಾನದ ಬಗ್ಗೆ ಆಸಕ್ತಿ ಹೊಂದಿರುವ, ವೈಜ್ಞಾನಿಕ ಸಂಶೋಧನೆಯಲ್ಲಿ ವೃತ್ತಿ ಜೀವನ ನಡೆಸಲು ಬಯಸುವ ವಿದ್ಯಾರ್ಥಿಗಳಿಗಾಗಿ ಈ ಕಾರ್ಯಕ್ರಮ ವಿನ್ಯಾಸಗೊಳಿಸಲಾಗಿದೆ. ಫೆಬ್ರುವರಿ 24ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಭಾರತದ ಎಲ್ಲ ರಾಜ್ಯಗಳಿಂದ ಅರ್ಜಿ ಸಲ್ಲಿಸಲು ಮುಕ್ತ ಅವಕಾಶ ನೀಡಲಾಗಿದೆ. ಅರ್ಜಿ ಸಲ್ಲಿಸಿದವರನ್ನು ಕಿರುಪಟ್ಟಿ ಮಾಡಿ ಮಾರ್ಚ್ 6 ಮತ್ತು 7ರಂದು ಸಂದರ್ಶನ ನಡೆಸಲಾಗುವುದು.

ಯೋಜನೆಗಳು ಏಪ್ರಿಲ್‌ನಲ್ಲಿ ಆರಂಭವಾಗಲಿವೆ. ಆಗಸ್ಟ್‌ನಲ್ಲಿ 'ಪ್ರಯೋಗ' ಕ್ಯಾಂಪಸ್‌ನಲ್ಲಿ ಮೌಖಿಕ ಪರೀಕ್ಷೆ ನಡೆಸಿ, ಪ್ರಮಾಣಪತ್ರ ನೀಡುವ ಮೂಲಕ ಕಾರ್ಯಕ್ರಮ ಕೊನೆಗೊಳ್ಳಲಿದೆ. ವಿದ್ಯಾರ್ಥಿಗಳಿಗೆ ಮತ್ತು ಶಾಲೆಗಳಿಗೆ ಯಾವುದೇ ಶುಲ್ಕಗಳಿರುವುದಿಲ್ಲ. ಆಸಕ್ತರು www.prayoga.org.in/anveshana ಮೂಲಕ ಅರ್ಜಿ ಸಲ್ಲಿಸಬಹುದು. ವಿವರಗಳು ಮತ್ತು ಪ್ರಶ್ನೆಗಳಿದ್ದರೆ anveshana@prayoga.org.in ಸಂಪರ್ಕಿಸುವಂತೆ 'ಪ್ರಯೋಗ' ಸಂಸ್ಥೆ ಕೋರಿದೆ.

ಪತ್ನಿಗೆ ವಾಟ್ಸ್‌ಆ್ಯಪ್ ಸಂದೇಶ್ ಕಳುಹಿಸುತ್ತಿದ್ದ ಸ್ನೇಹಿತ

ಹಲ್ಲೆ ನಡೆಸಿ ಪರಾರಿಯಾಗಿದ್ದ ಚಾಲಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಗೆ ನಿರಂತರವಾಗಿ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸುತ್ತಿದ್ದ ಸ್ನೇಹಿತನಿಗೆ ಮದ್ಯ ಕುಡಿಸಿ ಮಾರಾಕಾಸ್ತ್ರಗಳಿಂದ ಮಾರಣಾಂತಿಕ ಹಲ್ಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಲ್ಲೆಗೊಳಗಾದ ಕಿರಣ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಿರಣ್ ಸಹೋದರ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು, ಆರೋಪಿ ಅರ್ಜುನ್‌ನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ.

'ಫ್ಯಾಬ್ರಿಕೇಷನ್ ಕೆಲಸ ಮಾಡುತ್ತಿದ್ದ ಕಿರಣ್ ಹಾಗೂ ಕಾರು ಚಾಲಕ ಅರ್ಜುನ್ ಇಬ್ಬರೂ ಸ್ನೇಹಿತರು. ಅರ್ಜುನ್ ಮನೆಗೆ ಕಿರಣ್ ಬಂದು ಹೋಗುತ್ತಿದ್ದ. ಈ ಮಧ್ಯೆ ಸ್ನೇಹಿತನ ಪತ್ನಿಯ ಮೊಬೈಲ್ ನಂಬರ್ ಪಡೆದುಕೊಂಡು, ನಿರಂತರವಾಗಿ ಕರೆ ಮಾಡುತ್ತಿದ್ದ ಹಾಗೂ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸುತ್ತಿದ್ದ. ಈ ವಿಷಯ ಗೊತ್ತಾಗಿ, ಆರೋಪಿ ಕೋಪಗೊಂಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಸ್ನೇಹಿತನಿಗೆ ಬುದ್ಧಿ ಕಲಿಸಲು ಸಂಚು ರೂಪಿಸಿದ್ದ ಅರ್ಜುನ್, ಫೆಬ್ರುವರಿ 4ರಂದು ಆತನನ್ನು ಬಾರ್‌ಗೆ ಕರೆದೊಯ್ದು ಮದ್ಯ ಕುಡಿಸಿದ್ದ. ಬಳಿಕ ಗಾಣಿಗರ ಸರ್ಕಲ್ ಬಳಿ ಲಾಂಗ್‌ನಿಂದ ಕುತ್ತಿಗೆ ಮೇಲೆ ಹಲ್ಲೆ ಮಾಡಿ ಪರಾರಿಯಾಗಿದ್ದ. ಸ್ಥಳೀಯರು ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದ್ದರು' ಎಂದು ಹೇಳಿದ್ದಾರೆ.

ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ ಮಾತನಾಡಿ, 'ಕೆಲವು ದಿನಗಳಿಂದ ಆರೋಪಿಯ ಪತ್ನಿಯನ್ನು ಸಂಪರ್ಕಿಸಲು ಕಿರಣ್ ಯತ್ನಿಸುತ್ತಿದ್ದ. ಬುದ್ಧಿ ಕಲಿಸುವ ಉದ್ದೇಶದಿಂದ ಸ್ನೇಹಿತನ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

ಏಳು ವರ್ಷ ಬಳಿಕ ಸಿಕ್ಕಿ ಬಿದ್ದ ಕೊಲೆ ಆರೋಪಿ

ಬೆಂಗಳೂರು: ಪಶ್ಚಿಮ ಬಂಗಾಳದ ಡಾರ್ಜಿಲಿಂಗ್‌ನಲ್ಲಿ 2010ರಲ್ಲಿ ನಡೆದಿದ್ದ ಅಖಿಲ ಭಾರತೀಯ ಗೂರ್ಖಾ ಲೀಗ್ (ಎಬಿಜಿಎಲ್) ಅಧ್ಯಕ್ಷ ಮದನ್ ತಮಂಗ್ ಕೊಲೆ ಪ್ರಕರಣದ ಆರೋಪಿ ಪೂರಣ್ ಬಹದ್ದೂರ್ ರಾಯ್‌ನನ್ನು ಸಿಬಿಐ ಅಧಿಕಾರಿಗಳು ನಗರದಲ್ಲಿ ಗುರುವಾರ ಬಂಧಿಸಿದ್ದಾರೆ.

2017ರಿಂದ ಆರೋಪಿಯು ತಲೆಮರೆಸಿಕೊಂಡಿದ್ದ. ಇತ್ತೀಚೆಗೆ ಆರೋಪಿ ಪೂರಣ್ ನಗರಕ್ಕೆ ಸ್ಥಳಾಂತರವಾಗಿರುವ ಬಗ್ಗೆ ಸಿಬಿಐಗೆ ಮಾಹಿತಿ ಲಭಿಸಿತು. ಆನೇಕಲ್ ತಾಲ್ಲೂಕಿನಲ್ಲಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

2010ರ ಮೇ 21ರಂದು ನಡೆದ ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡಿತ್ತು. ಹಲವು ಬಾರಿ ವಾರಂಟ್ ಜಾರಿಗೊಳಿಸಿದ್ದರೂ ಆರೋಪಿ ಕೋಲ್ಕತ್ತದ ಸಿಟಿ ಸೆಷನ್ಸ್ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗಿರಲಿಲ್ಲ. ನವೆಂಬರ್ 20ರಂದು, ಆರೋಪಿ ವಿರುದ್ಧ ಮತ್ತೆ ವಾರಂಟ್ ಹೊರಡಿಸಲಾಗಿತ್ತು.

ಆನೇಕಲ್‌ನಲ್ಲಿ ಆರೋಪಿಯನ್ನು ಬಂಧಿಸಿದ್ದು, ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು ಎಂದು ಸಿಬಿಐ ತಿಳಿಸಿದೆ.

ಗೂಂಡಾ ಕಾಯ್ದೆಯಡಿ ರೌಡಿ ಬಂಧನ

ಬೆಂಗಳೂರು: ನಿರಂತರವಾಗಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ ರೌಡಿಶೀಟರ್ ಅಕ್ರಮ್ ಖಾನ್ ಅಲಿಯಾಸ್ ಅಕ್ಕು ಎಂಬಾತನನ್ನು ಗೋವಿಂದಪುರ ಠಾಣೆ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿದ್ದಾರೆ.

'2011ರಿಂದಲೂ ನಿರಂತರವಾಗಿ ಅಪರಾಧ ಕೃತ್ಯಗಳಲ್ಲಿ ಅಕ್ರಮ್ ಭಾಗಿಯಾಗಿದ್ದಾನೆ. ಕೊಲೆ ಪ್ರಯತ್ನ, ಹಲ್ಲೆ, ಸುಲಿಗೆ ಸೇರಿ 21 ಪ್ರಕರಣಗಳಲ್ಲಿ ಆರೋಪಿಯಾಗಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ಪ್ರಕರಣವೊಂದರಲ್ಲಿ ಜಾಮೀನು ಪಡೆದು ಬಿಡುಗಡೆಯಾದ ಬಳಿಕ ನ್ಯಾಯಾಲಯದ ವಿಚಾರಣಾ ಪ್ರಕ್ರಿಯೆಗಳಿಗೆ ಹಾಜರಾಗದೆ ತಲೆ ಮರೆಸಿಕೊಂಡಿದ್ದ. ಈತನ ವಿರುದ್ಧ ಎಂಟು ಜಾಮೀನು ರಹಿತ ವಾರಂಟ್‌ಗಳು ಜಾರಿಯಾಗಿವೆ. ಆರೋಪಿಯು ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವ ಕಾರಣ ಬಂಧಿಸಿ, ಕಲಬುರಗಿ ಕೇಂದ್ರ ಕಾರಾಗೃಹದ ವಶಕ್ಕೆ ನೀಡಲಾಗಿದೆ ಎಂದು ಹೇಳಿದರು.

ಪರಿಸರ ಸ್ನೇಹಿ ಕೊಠಡಿಯ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಟೆಟ್ರಾ ಪ್ಯಾಕ್‌ನಿಂದ ನಿರ್ಮಿಸಿದ ಡೆಸ್ಕ್‌ಗಳಲ್ಲಿ ಕುಳಿತಿರುವ ಚಿಣ್ಣರು.

ಬೆಂಗಳೂರು: ಟೆಟ್ರಾ ಪ್ಯಾಕ್ ಸಂಸ್ಥೆಯು ಮಲ್ಲೇಶ್ವರದ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ನಿರ್ಮಿಸಿರುವ ಪರಿಸರ ಸ್ನೇಹಿ ತರಗತಿ ಕೊಠಡಿಯನ್ನು ಬುಧವಾರ ಉದ್ಘಾಟಿಸಲಾಯಿತು.

'ಕೇಂದ್ರ ಶಿಕ್ಷಣ ಸಚಿವಾಲಯದ ವಿದ್ಯಾಂಜಲಿ ಯೋಜನೆ ಅಡಿಯಲ್ಲಿ ಈ ತರಗತಿ ಕೊಠಡಿಯನ್ನು ನಿರ್ಮಿಸಲಾಗಿದೆ. ಟೆಟ್ರಾ ಪ್ಯಾಕ್‌ನ ಪ್ಯಾಕೇಜಿಂಗ್ ವಸ್ತುಗಳನ್ನು ಮರುಬಳಕೆ ಮಾಡಿಕೊಂಡು 25 ಡ್ಯುಯಲ್ ಡೆಸ್ಕ್, ಪುಸ್ತಕಗಳನ್ನು ಇಡುವ ಎರಡು ಕಪಾಟುಗಳು, ಕಪ್ಪುಹಲಗೆ ಮತ್ತು ಇತರೆ ಪೀಠೋಪಕರಣಗಳನ್ನು ನಿರ್ಮಿಸಲಾಗಿದೆ' ಎಂದು ವಿದ್ಯಾಲಯದ ಪ್ರಾಂಶುಪಾಲ ಅನಿಲ್ ಕುಮಾರ್ ತಿಳಿಸಿದರು.

'ವಿದ್ಯಾರ್ಥಿಗಳಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಲು ಈ ಯೋಜನೆ ಸಹಕಾರಿ ಆಗಿದೆ. ಆರ್‌ಯುಆರ್ ಗ್ರೀನ್‌ಲೈಫ್ ಸಂಸ್ಥೆಯು ಪ್ಲಾಸ್ಟಿಕ್ ಸೇರಿದಂತೆ ಮರುಬಳಕೆ ಮಾಡುವ ವಸ್ತುಗಳು ಹಾಗೂ ತ್ಯಾಜ್ಯ ನಿರ್ವಹಣೆಯ ಕುರಿತು ವಿದ್ಯಾರ್ಥಿಗಳಿಗೆ ಕಾರ್ಯಾಗಾರ ನಡೆಸಿತು' ಎಂದರು.

ಟೆಟ್ರಾ ಪ್ಯಾಕ್‌ನ ದಕ್ಷಿಣ ಏಷ್ಯಾದ ವ್ಯವಸ್ಥಾಪಕ ನಿರ್ದೇಶಕ ಕ್ಯಾಸಿಯೊ ಸಿಮೊಸ್ ಮಾತನಾಡಿ, 'ನಮ್ಮ ಗುರಿ ಕೇವಲ ಉತ್ಪನ್ನಗಳನ್ನು ಮರುಬಳಕೆ ಮಾಡುವುದು ಅಲ್ಲ. ಆದರೆ, ಸಮುದಾಯಗಳ ಮತ್ತು ಭವಿಷ್ಯದ ಪೀಳಿಗೆಯ ಮೇಲೆ ಶಾಶ್ವತವಾದ ಪರಿಣಾಮ ಬೀರುವುದು ಆಗಿದೆ. ನಾವು ಒಂದು ವರ್ಷದಲ್ಲಿ 1,000 ಮರುಬಳಕೆಯ ಉತ್ಪನ್ನಗಳನ್ನು ದಾನ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದೇವೆ' ಎಂದು ಹೇಳಿದರು.

ದೊಡ್ಡಗುಬ್ಬಿ ಗ್ರಾ.ಪಂ. ಅಧ್ಯಕ್ಷ ಆಯ್ಕೆ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ದೊಡ್ಡಗುಬ್ಬಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಮಾಲಾ ಮಾರುತಿಕುಮಾರ್ ಆಯ್ಕೆಯಾಗಿದ್ದಾರೆ. ಚಂದ್ರಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಬುಧವಾರ ಚುನಾವಣೆ ನಡೆಯಿತು.

ಬೆಂಗಳೂರು ರೇಸ್

ಈಸ್‌ನಾಟ್ ಶೀ ಬ್ಯೂಟಿಫುಲ್ ಮತ್ತು ಟಚ್ ಆಫ್ ಗ್ರೇ ಪ್ರಧಾನ ಆಕರ್ಷಣೆ

ಸುರೇಶ್ ಶಣ್ಮುಗಂ ಮೆಮೋರಿಯಲ್ ಸ್ಪ್ರಿಂಟರ್ಸ್ ಟ್ರಯಲ್ ಸ್ಟೇಕ್ಸ್ ಮತ್ತು ಸ್ಟೇಯರ್ಸ್ ಟ್ರಯಲ್ ಸ್ಟೇಕ್ಸ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆ. ಈಸ್‌ನಾಟ್ ಶೀ ಬ್ಯೂಟಿಫುಲ್ ಮತ್ತು ಟಚ್ ಆಫ್ ಗ್ರೇ ಕ್ರಮವಾಗಿ ಈ ರೇಸ್‌ಗಳಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಟ್ರೆಷರ್ ಚೆಸ್ಟ್ 1, ಬಾಷ 2, ದಿ ಗೋಲ್ಡನ್ ಡ್ರೀಮ್ 3
2ನೇ ರೇಸ್: ಎಟರ್ನಲ್ ಗ್ಲೋರಿ 2, ನೆಮೊಸಿನ್ 4, ಜೆಫಿರಿನ್ 6
3ನೇ ರೇಸ್: ಈಸ್‌ನಾಟ್ ಶೀ ಬ್ಯೂಟಿಫುಲ್ 6, ಬೆರೆಟ್ಟಿನಿ 1, ಯುಕಾನ್ 4
4ನೇ ರೇಸ್: ಡಿವೈನ್ ಆರ್ಟ್ 1, ಮೆಟ್‌ಜಿಂಗರ್ 2, ಪವರ್ ಆಫ್ ಬ್ಯೂಟಿ 6
5ನೇ ರೇಸ್: ಟಚ್ ಆಫ್ ಗ್ರೇ 1, ಮಾನ್ಸ ಮೂಸ 3
6ನೇ ರೇಸ್: ಗೋಲ್ಡನ್ ಟೈಮ್ 5, ಅಹರ್ನೆ 6, ಗ್ರಿಜ್ಲಿ 1
7ನೇ ರೇಸ್: ಇನ್ವಿನ್ಸಿಬಲ್ 2, ಸ್ಮೈಲ್ ಆಫ್ ಬ್ಯೂಟಿ 4, ಮೆಗಾ ಸಕ್ಸಸ್ 7

ಉತ್ತಮ ಬೆಟ್: ಈಸ್‌ನಾಟ್ ಶೀ ಬ್ಯೂಟಿಫುಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಪ್ರಬಂಧ ಸ್ಪರ್ಧೆ: ವಾಸುದೇವ ನಾಡಿಗ್ ಪ್ರಥಮ

ಬೆಂಗಳೂರು: ಸದಾತನ ಸಂಸ್ಥೆ ಶಾಲಾ ಶಿಕ್ಷಕರಿಗಾಗಿ ನಡೆಸಿದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ ಫಲಿತಾಂಶ ಪ್ರಕಟಿಸಿದ್ದು, ಕನಕಪುರದ ವಾಸುದೇವ್ ನಾಡಿಗ್ ಪ್ರಥಮ ಬಹುಮಾನ ಪಡೆದಿದ್ದಾರೆ.

ಸ್ಪರ್ಧೆಯಲ್ಲಿ 964 ಶಿಕ್ಷಕರು ಭಾಗವಹಿಸಿದ್ದರು. ಬೆಳಗಾವಿಯ ಗಂಗಾದೇವಿ ಚಕ್ರಸಾಲಿ ದ್ವಿತೀಯ ಬಹುಮಾನ ಹಾಗೂ ಮಾಗಡಿಯ ಶ್ರುತಿ ವಿ.ಡಿ. ತೃತೀಯ ಬಹುಮಾನಕ್ಕೆ ಭಾಜನರಾಗಿದ್ದಾರೆ. ಈ ಬಹುಮಾನಗಳು ಕ್ರಮವಾಗಿ ₹21 ಸಾವಿರ, ₹18 ಸಾವಿರ ಹಾಗೂ ₹15 ಸಾವಿರ ನಗದು ಒಳಗೊಂಡಿವೆ.

ಕೊಪ್ಪದ ಕಾರ್ತಿಕ್ ವಾಗ್ಳೆ, ಬೈಂದೂರಿನ ರಾಮ ದೇವಾಡಿಗ, ತೀರ್ಥಹಳ್ಳಿಯ ಪ್ರಶಾಂತಿ ಪಾಟೀಲ, ಬೆಂಗಳೂರಿನ ಸುಪ್ರಿಯಾ ನಾರಾಯಣರಾವ್, ಸಿದ್ದಾಪುರದ ಸೀಮಾ ಮಡಿವಾಳ, ಹೊಸಪೇಟೆಯ ಕುರುಬರ ನಾರಾಯಣಮ್ಮ, ವಿಜಯಪುರದ ಸುಮಿತ್ರಾ ಗಾಜರೆ, ಬೆಂಗಳೂರಿನ ಉಮೇಶ್ ಕುಮಾರ್ ಎನ್., ಘಟಪ್ರಭಾದ ಅನ್ನಪೂರ್ಣ ಕಾಂಬಳೆ ಹಾಗೂ ಸಾಗರದ ಶಂಕರ್ ಜಿ.ಕೆ. ಅವರು ಮೆಚ್ಚುಗೆ ಬಹುಮಾನಕ್ಕೆ ಭಾಜನರಾಗಿದ್ದಾರೆ. ಈ ಬಹುಮಾನವು ತಲಾ ₹ 10 ಸಾವಿರ ನಗದು ಒಳಗೊಂಡಿದೆ.

ಇದೇ 9ರಂದು ಜಯನಗರದ ಜಯರಾಮಸೇವಾ ಮಂಡಳಿಯಲ್ಲಿ ನಡೆಯುವ ವಿಚಾರಸಂಕಿರಣದಲ್ಲಿ ಈ ಬಹುಮಾನ ವಿತರಣೆ ಮಾಡಲಾಗುತ್ತದೆ ಎಂದು ಸಂಸ್ಥೆಯ ಟ್ರಸ್ಟಿ ಕೆ.ಎಸ್. ಉಪಾಧ್ಯಾಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದ ನಯನ ಸಭಾಂಗಣದಲ್ಲಿ ಉದಯ ಪ್ರಕಾಶನ ಮತ್ತು ಸಪ್ನಾ ಬುಕ್ ಹೌಸ್ ಆಯೋಜಿಸಿದ್ದ 'ದೇವುಡು ಕಥಾಲೋಕ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಕಾನೂನು ತಜ್ಞ ಕೆ.ಜಿ. ಲಕ್ಷ್ಮೀನಾರಾಯಣಪ್ಪ ಅವರನ್ನು ಸನ್ಮಾನಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್. ಶ್ರೀಧರಮೂರ್ತಿ, ಗ್ರಂಥ ಸಂಪಾದಕ ಮಲ್ಲೇಪುರಂ ಜಿ. ವೆಂಕಟೇಶ, ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ವೈ. ಎಸ್. ಸಿದ್ದೇಗೌಡ ಮತ್ತು ಸಂಸ್ಕೃತಿ ಚಿಂತಕ ಕೆ.ಈ. ರಾಧಾಕೃಷ್ಣ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ನಿರುಪಮಾ' ಸಿಂಹ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಭೂತರಾಮನಹಟ್ಟಿಯ ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿದ್ದ 'ನಿರುಪಮಾ' 15 ವರ್ಷ ವಯಸ್ಸಿನಸಿಂಹ 'ನಿರುಪಮಾ' ಹೆಸರಿನ ಸಿಂಹ ಬಹುಅಂಗಾಂಗ ವೈಫಲ್ಯ ಮತ್ತು ವೃದ್ಧಾಪ್ಯದಿಂದ ಗುರುವಾರ ಮೃತಪಟ್ಟಿದೆ.

'ಬನ್ನೇರುಘಟ್ಟ ಮೃಗಾಲಯದಿಂದ 2021ರಲ್ಲಿ ಭೂತರಾಮನಹಟ್ಟಿಯ ಕಿರು ಮೃಗಾಲಯಕ್ಕೆ ಸ್ಥಳಾಂತರಿಸಲಾಗಿದ್ದ 'ನಿರುಪಮಾ' ಕಂಡು ಪ್ರವಾಸಿಗರು ಸಂಭ್ರಮಿಸುತ್ತಿದ್ದರು. ಶ್ವಾಸಕೋಶ, ಮತ್ತಿತರ ಅಂಗಗಳ ವೈಫಲ್ಯದಿಂದ ಬಳಲುತ್ತಿದ್ದ ಸಿಂಹಕ್ಕೆ 15 ದಿನಗಳಿಂದ ಉಪಚರಿಸಲಾಗುತಿತ್ತು. ಅದರ ಮರಣೋತ್ತರ ಪರೀಕ್ಷೆ ನಡೆಸಿ, ಅಂತ್ಯಕ್ರಿಯೆ ಮಾಡಲಾಯಿತು' ಎಂದು ವಲಯ ಅರಣ್ಯ ಅಧಿಕಾರಿ ಪವನ ಕುರನಿಂಗ 'ಪ್ರಜಾವಾಣಿ'ಗೆ ತಿಳಿಸಿದರು.

ಮೃಗಾಲಯದ ಕಾರ್ಯ ನಿರ್ವಾಹಕ ನಿರ್ದೇಶಕ ಮರಿಯ ಕ್ರಿಸ್ತು ರಾಜಾ, ಡಾ.ಹನುಮಂತ ಸಣ್ಣಕ್ಕಿ, ಡಾ.ಶ್ರೀಕಾಂತ ಕೋಹಳ್ಳಿ, ಡಾ.ನಾಗೇಶ ಹುಯಿಲಗೋಳ ಇದ್ದರು.

ಗ್ರಾ.ಪಂ.: ಆಸ್ತಿ ತೆರಿಗೆ ಪಾವತಿಗೆ ಮಾರ್ಚ್ 31ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಸ್ತಿಗಳ ತೆರಿಗೆ ಪಾವತಿಸಲು ಮಾರ್ಚ್ 31ರವರೆಗೆ ಗಡುವು ನೀಡಲಾಗಿದೆ. ಅದರ ನಂತರ ಶೇ 5ರಷ್ಟು ದಂಡ ವಿಧಿಸಲಾಗುತ್ತದೆ.

2024–25 ಹಾಗೂ ಹಿಂದಿನ ವರ್ಷಗಳ ಅವಧಿಯ ತೆರಿಗೆಯನ್ನು ಏಕಕಾಲದಲ್ಲಿ ಪಾವತಿಸಲು ಅವಕಾಶ ಮಾಡಿಕೊಡಲಾಗಿದೆ. ಪೂರ್ಣ ತೆರಿಗೆ ಪಾವತಿಸಿದರೆ ಶೇ 5ರಷ್ಟು ರಿಯಾಯಿತಿಯನ್ನೂ ನೀಡಲಾಗುತ್ತದೆ ಎಂದು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದ್ದಾರೆ.

ಆಸ್ತಿ ತೆರಿಗೆ ಪಾವತಿಸದಿದ್ದರೆ, ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಇಲಾಖೆ ನಿಯಮಗಳು– 2021ರಂತೆ ಪ್ರತಿ ಆರ್ಥಿಕ ವರ್ಷಕ್ಕೆ ಶೇ 5ರಷ್ಟು ದಂಡ ವಿಧಿಸಲಾಗುತ್ತದೆ. ಇದಕ್ಕೆ ನಾಗರಿಕರು ಅವಕಾಶ ಮಾಡಿಕೊಡಬಾರದು ಎಂದಿದ್ದಾರೆ.

ಗ್ರಾಮ ಪಂಚಾಯಿತಿಯ ಬಾಪೂಜಿ ಸೇವಾ ಕೇಂದ್ರದ ವೆಬ್‌ಸೈಟ್ bsk.karnataka.gov.in ಹಾಗೂ BSK ಮೊಬೈಲ್ ಆ್ಯಪ್‌ನಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಬಹುದು. ಗ್ರಾಮ ಪಂಚಾಯಿತಿಗಳಲ್ಲಿರುವ ಪಿಒಎಸ್ ಯಂತ್ರಗಳ ಮೂಲಕವೂ ತೆರಿಗೆ ಪಾವತಿಸಲು ಅವಕಾಶ ನೀಡಲಾಗಿದೆ ಎಂದು ಹೇಳಿದ್ದಾರೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಸ್ತಿಗಳ ಮಾಲೀಕರು, ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿ ನೀಡಿ ಪಿ.2 ತಂತ್ರಾಂಶದಲ್ಲಿ ತಮ್ಮ ಮೊಬೈಲ್ ಸಂಖ್ಯೆಯನ್ನು ಅಪ್‌ಡೇಟ್ ಮಾಡಿಕೊಳ್ಳಬೇಕು ಎಂದು ಸೂಚಿಸಿದ್ದಾರೆ.

ನಿಧನ ವಾರ್ತೆ

ಜಿ. ಲಕ್ಷ್ಮಣ್ ಸಿಂಗ್



ಬೆಂಗಳೂರು: ಕೋರಮಂಗಲದ ನಿವಾಸಿ, ನಿವೃತ್ತ ಲೆಫ್ಟಿನೆಂಟ್ ಕರ್ನಲ್ ಜಿ. ಲಕ್ಷ್ಮಣ್ ಸಿಂಗ್ (92) ಬುಧವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ನಾಲ್ಕು ತಿಂಗಳಲ್ಲಿ ಎರಡು ಕಟ್ಟಡಕ್ಕೆ ಹಾನಿ, ಎಫ್‌ಐಆರ್ ದಾಖಲು

ಗಾಂಧಿ ಅಧ್ಯಯನ ಕೇಂದ್ರಕ್ಕೆ ಪುಂಡರ ಕಾಟ

• ಖಲೀಲಅಹ್ಮದ ಶೇಖ

ಗಾಂಧಿ ಅಧ್ಯಯನ ಕೇಂದ್ರ ಹೊರಭಾಗ

ಗಾಂಧಿ ಅಧ್ಯಯನ ಕೇಂದ್ರದಲ್ಲಿದ್ದ ಯುಪಿಎಸ್‌ಗೆ ಹಾನಿ ಮಾಡಿರುವುದು

ಗಾಂಧಿ ಅಧ್ಯಯನ ಕೇಂದ್ರದಲ್ಲಿದ್ದ ಫ್ಯಾನ್‌ನ ರೆಕ್ಕೆಗಳನ್ನು ಕಿತ್ತಿರುವುದು

ಪ್ರಜಾವಾಣಿ ಚಿತ್ರ: ರಂಜು ಪಿ.

ಬೆಂಗಳೂರು: ಹಾನಿಗೊಳಗಾದ ಪುಸ್ತಕ ಇಡುವ ಕಪಾಟು, ರೆಕ್ಕೆ ಮುರಿದ ಫ್ಯಾನ್, ಕತ್ತರಿಸಿದ ಬಾಗಿಲುಗಳ ಹಿಡಿಕೆಗಳು, ಕಿತ್ತು ಹೋದ ಶುದ್ಧ ಕುಡಿಯುವ ನೀರಿನ ಘಟಕ...

ಇವು ಪುಂಡರ ಹಾವಳಿಯಿಂದ ನಲುಗುತ್ತಿರುವ ಜ್ಞಾನ ಭಾರತಿ ಆವರಣದಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯದ ಗಾಂಧಿ ಅಧ್ಯಯನ ಕೇಂದ್ರದಲ್ಲಿ ಕಂಡು ಬರುವ ದೃಶ್ಯಗಳು.

ಇಲ್ಲಿನ ಗಾಂಧಿ ಅಧ್ಯಯನ ಕೇಂದ್ರದ ಕಟ್ಟಡಕ್ಕೆ ಸರಿಯಾದ ಭದ್ರತೆ ಇಲ್ಲದ ಕಾರಣ ನಾಲ್ಕು ತಿಂಗಳಲ್ಲಿ ಎರಡು ಬಾರಿ ಈ ಕಟ್ಟಡದ ಚಾವಣಿಗೆ ಅಳವಡಿಸಿದ್ದ ಗಾಜು ಒಡೆದು ಒಳಗೆ ಹೋದ ಪುಂಡರು, ಇಲ್ಲಿನ ಪೀಠೋಪಕರಣಗಳನ್ನು ಧ್ವಂಸಗೊಳಿಸಿದ್ದಾರೆ.

'ನಾಗರಬಾವಿ ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ ಕಡೆಯಿಂದ ಜ್ಞಾನಭಾರತಿ ಆವರಣಕ್ಕೆ ಪ್ರವೇಶಿಸುವ ಮಾರ್ಗದಲ್ಲಿರುವ ಗಾಂಧಿ ಅಧ್ಯಯನ ಕೇಂದ್ರದ ಕಟ್ಟಡಕ್ಕೆ ಸರಿಯಾದ ಭದ್ರತೆ ಇಲ್ಲ. ಇದರ ಲಾಭ ಪಡೆದ ಪುಂಡರು ಇಲ್ಲಿನ ವಸ್ತುಗಳನ್ನು ಜಖಂಗೊಳಿಸಿದ್ದಾರೆ. ಇಲ್ಲಿದ್ದ ಕಂಪ್ಯೂಟರ್, ಶೌಚಾಲಯದ ಕೊಠಡಿಯಲ್ಲಿರುವ ನಲ್ಲಿ, ಸಿಂಕ್ ಸೇರಿದಂತೆ ಹಲವಾರು ವಸ್ತುಗಳನ್ನು ಧ್ವಂಸ ಮಾಡಿದ್ದಾರೆ. ಇಲ್ಲಿನ ಬಾಗಿಲುಗಳಲ್ಲಿದ್ದ ಹಿಡಿಕೆಗಳನ್ನು ಕಿತ್ತುಕೊಂಡು ಹೋಗಿದ್ದಾರೆ' ಎಂದು ಗಾಂಧಿ ಅಧ್ಯಯನ ಕೇಂದ್ರದ ಸಿಬ್ಬಂದಿಯೊಬ್ಬರು ವಿವರಿಸಿದರು.

ಗಾಂಧಿ ಅಧ್ಯಯನ ಕೇಂದ್ರದ ಆವರಣದಲ್ಲಿರುವ ಚರಕದ ಕೆಳಗಡೆ ಇಂಗ್ಲಿಷ್ ಭಾಷೆಯಲ್ಲಿ ಬರೆದಿದ್ದ ಹಿತನುಡಿಯಲ್ಲಿನ ಅಕ್ಷರಗಳನ್ನೂ ವಿರೂಪಗೊಳಿಸಿದ್ದಾರೆ. ವಿಶ್ವವಿದ್ಯಾಲಯದ ಲಾಂಛನವನ್ನು ಕಿತ್ತುಕೊಂಡು ಹೋಗಿದ್ದಾರೆ. ಶುದ್ಧ ಕುಡಿಯುವ ನೀರಿನ ಘಟಕವನ್ನು ಸಂಪೂರ್ಣವಾಗಿ ಹಾನಿಗೊಳಿಸಿದ್ದಾರೆ. ನೀರು ಎತ್ತುವ ಮೋಟಾರ್ ಕಳವು ಮಾಡಲಾಗಿದೆ. ಕೇಂದ್ರದ ಕಟ್ಟಡದ ಒಳಗೆ ಮತ್ತು ಹೊರಗೆ ಅಳವಡಿಸಿದ್ದ ವಿದ್ಯುತ್ ದೀಪಗಳನ್ನೂ ಹಾಳು ಮಾಡಿರುವುದು ಕಂಡುಬರುತ್ತದೆ.

'ಗಾಂಧೀಜಿ ಅವರಿಗೆ ಸಂಬಂಧಿಸಿದ ಪತ್ರಿಕಾ ವರದಿಗಳು, ಅಮೂಲ್ಯ ಕಾಗದಗಳನ್ನು ಜೋಡಿಸಿಟ್ಟಿದ್ದ ಪ್ರದರ್ಶಕ ಟೇಬಲ್‌ಗಳ ಹಿಡಿಕೆಗಳನ್ನು ಕೊರೆದು ಅವುಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಈಗ ಈ ಟೇಬಲ್‌ಗಳ ಬಾಗಿಲು ತೆರೆಯುವುದು ಕಷ್ಟವಾಗಿದೆ. ಇಲ್ಲಿನ ಗ್ರಂಥಾಲಯದಲ್ಲಿದ್ದ ಪುಸ್ತಕಗಳನ್ನು ಚೆಲ್ಲಾಪಿಲ್ಲಿಯಾಗಿ ಎಸೆದು, ಪುಸ್ತಕಗಳನ್ನು ಇಟ್ಟಿದ್ದ ಕಪಾಟುಗಳ ಬಾಗಿಲುಗಳನ್ನು ಒಡೆದು ಹಾಕಿದ್ದಾರೆ. ಉದ್ದೇಶಪೂರ್ವಕವಾಗಿ ಈ ಕೃತ್ಯವನ್ನು ಎಸಗಿದ್ದಾರೆ' ಎಂದು ದೂರುತ್ತಾರೆ ಅಲ್ಲಿನ ಸಿಬ್ಬಂದಿ.

'ನಿರ್ದೇಶಕರ ಕಚೇರಿಯೊಳಗಿದ್ದ ಪ್ರಶಸ್ತಿ ಫಲಕಗಳನ್ನು ಚೆಲ್ಲಾಪಿಲ್ಲಿಯಾಗಿ ಮಾಡಲಾಗಿದೆ. ಟೇಬಲ್‌ಗಳ ಡ್ರಾವರ್‌ಗಳನ್ನೂ ಮುರಿದು ಹಾಕಲಾಗಿದೆ. ತಾಮ್ರದ ತಂತಿಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ. ಕಾರ್ಯಕ್ರಮಗಳ ಬ್ಯಾನರ್ ಅಳವಡಿಸುವ ಸ್ಟ್ಯಾಂಡ್‌ಗಳನ್ನು ಹೊತ್ತೊಯ್ದು ಹಳ್ಳದ ಬಳಿ ಎಸೆಯಲಾಗಿದೆ. ಕಂಪ್ಯೂಟರ್‌ನ ಹಾರ್ಡ್‌ಡಿಸ್ಕ್, ಡ್ರೈವ್‌ಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ' ಎಂದು ಚಿತ್ರಣವನ್ನು ಬಿಡಿಸಿಟ್ಟರು.

ಈ ಬಗ್ಗೆ ಪ್ರತಿಕ್ರಿಯೆಗಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ. ಜಯಕರ ಅವರನ್ನುಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ದೂರವಾಣಿ ಕರೆ ಸ್ವೀಕರಿಸಲಿಲ್ಲ.

'ಕಟ್ಟಡದ ದುರಸ್ತಿಗೆ ಕ್ರಮ'

'ಗಾಂಧಿ ಅಧ್ಯಯನ ಕೇಂದ್ರದ ಕಟ್ಟಡಕ್ಕೆ ಹಾನಿಗೊಳಿಸಿದ್ದಾರೆ. ಯಾರೋ ಕುಚೇಷ್ಟೆ ಮಾಡುವ ಉದ್ದೇಶದಿಂದ ಈ ರೀತಿ ಮಾಡಿದ್ದಾರೆ. ಈ ಬಗ್ಗೆ ಈಗಾಗಲೇ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಈಗ ಇಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಕಟ್ಟಡದ ಸಂಪೂರ್ಣ ದುರಸ್ತಿಗೆ ಹಾಗೂ ಭದ್ರತೆಗಾಗಿ ಸಿಬ್ಬಂದಿ ನಿಯೋಜನೆಗೆ ಯೋಜನೆ ರೂಪಿಸಲಾಗುತ್ತಿದ್ದು, ಕೆಲವೇ ದಿನಗಳಲ್ಲಿ ಕಾಮಗಾರಿ ಪ್ರಾರಂಭವಾಗಲಿದೆ' ಎಂದು ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಶ್ರೀಕೀರ್ತಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸುಭಾಷಿತ

ಹಿಂದಣ ಹೆಜ್ಜೆಯನ್ನು ಅಥವಾ ನಮ್ಮ ಪರಂಪರೆಯನ್ನು ನಾವು ಅರಿಯದಿದ್ದರೆ, ನಿಂತ ಹೆಜ್ಜೆಯನ್ನು ಅಥವಾ ವರ್ತಮಾನವನ್ನು ನಾವು ಅರಿಯಲಾಗದು.

–ಜಿ.ಎಸ್.ಶಿವರುದ್ರಪ್ಪ

ಅಕ್ರಮ ವಲಸಿಗರ ಗಡೀಪಾರು ಅಪಾಯದ ಬಗ್ಗೆ ಅರಿವು ಬೇಕು

ಅಕ್ರಮವಾಗಿ ನೆಲಸಿರುವ ಭಾರತೀಯರನ್ನು ಅಮೆರಿಕದ ಅಧಿಕಾರಿಗಳು ಅಲ್ಲಿಂದ ಗಡೀಪಾರು ಮಾಡಿದ ದೃಶ್ಯಗಳು, ಆ ಭಾರತೀಯರು ಸ್ವದೇಶದ ವಿಮಾನ ನಿಲ್ದಾಣಕ್ಕೆ ಬಂದಿಳಿದ ದೃಶ್ಯಗಳು ವಲಸೆಗೆ ಸಂಬಂಧಿಸಿದ ಕಾನೂನುಗಳನ್ನು ಅಮೆರಿಕದ ಈಗಿನ ಆಡಳಿತವು ಎಷ್ಟು ಕಟ್ಟುನಿಟ್ಟಾಗಿ ಜಾರಿಗೆ ತರುತ್ತಿದೆ ಎಂಬುದನ್ನು ಸೂಚಿಸುತ್ತವೆ. ಬಹಳ ಅಪಾಯಕಾರಿಯಾದ ಹಾಗೂ ಅಕ್ರಮವಾದ ಮಾರ್ಗವನ್ನು ಬಳಸಿ ಇನ್ನೊಂದು ದೇಶಕ್ಕೆ ತೆರಳಿ, ಅಲ್ಲಿ ಇಲ್ಲಿಗಿಂತ ಹೆಚ್ಚು ಉತ್ತಮವಾದ ಜೀವನವನ್ನು ಕಂಡುಕೊಳ್ಳಬಹುದು ಎಂದು ಕೆಲವರು ಇಂದಿಗೂ ಭಾವಿಸುತ್ತಿದ್ದಾರೆ ಎಂಬುದನ್ನು ಈ ಪ್ರಸಂಗವು ಹೇಳುತ್ತಿದೆ. ಅಮೆರಿಕದ ಸೇನಾ ವಿಮಾನದಲ್ಲಿ ಅಮೃತಸರಕ್ಕೆ ಬಂದಿಳಿದ ಬಹುತೇಕರು ಅಕ್ರಮ ಹಾಗೂ ಸಕ್ರಮ ವಲಸೆಯ ದೊಡ್ಡ ಇತಿಹಾಸವನ್ನು ಹೊಂದಿರುವ ರಾಜ್ಯಗಳಿಗೆ ಸೇರಿದವರು. ಅವರು ಭಾರತ ತೊರೆಯುವ ಸಂದರ್ಭದಲ್ಲಿ ಇಲ್ಲಿ ಹಸಿವಿನಿಂದ ನರಳುತ್ತಿದ್ದರು ಎಂದು ಹೇಳುವುದಕ್ಕೆ ಆಧಾರಗಳಿಲ್ಲ. ಅವರಲ್ಲಿ ಕೆಲವರು ಭಾರತದಿಂದ ಅಮೆರಿಕಕ್ಕೆ ತೆರಳುವುದಕ್ಕೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿರುವ ಸಾಧ್ಯತೆಯೂ ಇದೆ. ಅಕ್ರಮ ವಲಸಿಗರನ್ನು ಹೊತ್ತ ಇನ್ನೂ ಕೆಲವು ವಿಮಾನಗಳು ಭಾರತಕ್ಕೆ ಬರುವ ಸಾಧ್ಯತೆ ಇದೆ. ಭಾರತೀಯ ಪ್ರಜೆಗಳ ಕೈಗೆ ಕೋಳ ತೊಡಿಸಿ, ಅವರನ್ನು ಸೇನಾ ವಿಮಾನದಲ್ಲಿ ಸಾಮೂಹಿಕವಾಗಿ ಗಡೀಪಾರು ಮಾಡುತ್ತಿರುವುದರಲ್ಲಿ ರಾಷ್ಟ್ರಕ್ಕೆ ಅವಮಾನವಾಗುವ ಆಯಾಮವೂ ಇದೆ.

ದೇಶದ ಹಲವು ರಾಜ್ಯಗಳಲ್ಲಿ ಅಸ್ತಿತ್ವದಲ್ಲಿ ಇರುವ ಅಕ್ರಮ ವಲಸೆ ಜಾಲವನ್ನು ಇನ್ನಿಲ್ಲದಂತೆ ಮಾಡುವ ಹೊಣೆ ಸರ್ಕಾರಗಳ ಮೇಲಿದೆ

ಅಕ್ರಮ ವಲಸಿಗರ ವಿರುದ್ಧ ಅಮೆರಿಕವು ತನ್ನ ಕಾರ್ಯಾಚರಣೆಯನ್ನು ಕೆಲವು ವರ್ಷಗಳಿಂದ ಚುರುಕುಗೊಳಿಸುತ್ತಿದೆ ಎಂಬುದು ಸ್ಪಷ್ಟವಾಗಿತ್ತು. ಕಳೆದ ವರ್ಷ ಕೂಡ ಅಮೆರಿಕದ ಅಧಿಕಾರಿಗಳು ಕೆಲವು ಅಕ್ರಮ ವಲಸಿಗರನ್ನು ಅವರ ದೇಶಗಳಿಗೆ ಕಳುಹಿಸಿದ್ದರು. ಅವರಲ್ಲಿ ಒಂದಿಷ್ಟು ಮಂದಿ ಭಾರತೀಯರೂ ಇದ್ದರು. ಆದರೆ ಈಗ ಅಲ್ಲಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಕ್ರಮ ವಲಸಿಗರನ್ನು ವಾಪಸ್ ಕಳುಹಿಸುವ ಕಾರ್ಯಾಚರಣೆಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಟ್ರಂಪ್ ಅವರು ಈ ಕಾರ್ಯಾಚರಣೆಯನ್ನು ದೊಡ್ಡ ಮಟ್ಟದಲ್ಲಿ ನಡೆಸುತ್ತಿದ್ದಾರೆ, ಅದು ಎಲ್ಲರಿಗೂ ಗೊತ್ತಾಗುವಂತೆ ಮಾಡುತ್ತಿದ್ದಾರೆ. ಏಕೆಂದರೆ ಅಕ್ರಮ ವಲಸಿಗರ ವಿರುದ್ಧದ ತಮ್ಮ ನಿಲುವನ್ನು ಸ್ಪಷ್ಟವಾಗಿ ತೋರಿಸುವ ಮೂಲಕ ಅವರು ರಾಜಕೀಯ ಸಂದೇಶವೊಂದನ್ನು ರವಾನಿಸಬೇಕಿದೆ. ವಲಸೆ ನೀತಿಗಳನ್ನು ಬಿಗಿಗೊಳಿಸುವುದು ಹಾಗೂ ಅಕ್ರಮ ವಲಸಿಗರನ್ನು ದೇಶದಿಂದ ಹೊರಹಾಕುವ ನೀತಿಯ ಭಾಗವಾಗಿ ಈಗಿನ ಗಡೀಪಾರು ಪ್ರಕ್ರಿಯೆಗಳು ನಡೆದಿವೆ ಎಂದು ನವದೆಹಲಿಯಲ್ಲಿನ ಅಮೆರಿಕದ ರಾಯಭಾರ ಕಚೇರಿಯು ಸ್ಪಷ್ಟಪಡಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡುವ ಮೊದಲು ಈ ಗಡೀಪಾರು ಪ್ರಕ್ರಿಯೆ ನಡೆದಿದೆ. ಮೋದಿ ಅವರ ಭೇಟಿಯ ಸಂದರ್ಭದಲ್ಲಿ ವಲಸೆ ಕುರಿತು ಚರ್ಚೆ ಆಗುವ ನಿರೀಕ್ಷೆ ಇದೆ. ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಈಚೆಗೆ ಅಮೆರಿಕಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿಯೂ ಈ ವಿಚಾರವು ಚರ್ಚೆಗೆ ಬಂದಿದೆ. ಅಕ್ರಮ ವಲಸಿಗರನ್ನು ಕಾನೂನಿಗೆ ಅನುಗುಣವಾಗಿ ವಾಪಸ್ ಕರೆಸಿಕೊಳ್ಳುವ ವಿಚಾರದಲ್ಲಿ ಭಾರತವು ಮುಕ್ತವಾಗಿದೆ ಎಂದು ಜೈಶಂಕರ್ ಅವರು ಅಮೆರಿಕದ ಅಧಿಕಾರಿಗಳಿಗೆ ಹೇಳಿದ್ದಾರೆ. ದಕ್ಷಿಣ ಅಮೆರಿಕದ ಕೆಲವು ದೇಶಗಳು ಅಕ್ರಮ ವಲಸಿಗರನ್ನು ವಾಪಸ್ ಕರೆಸಿಕೊಳ್ಳುವ ವಿಚಾರದಲ್ಲಿ ಆರಂಭದಲ್ಲಿ ತೋರಿದ್ದ ಸಂಘರ್ಷದ ಧೋರಣೆಯನ್ನು ಭಾರತ ತಳೆಯದೇ ಇರುವುದು ಒಳ್ಳೆಯ ನಡೆ.

ಅಮೆರಿಕದಲ್ಲಿ ಇರುವ ಅಕ್ರಮ ವಲಸಿಗರಲ್ಲಿ ಭಾರತೀಯರ ಪಾಲು ಹೆಚ್ಚಿದೆ. ಭಾರತದಿಂದ ಅಕ್ರಮವಾಗಿ ಅಮೆರಿಕಕ್ಕೆ ಹೋಗಿರುವವರ ಸಂಖ್ಯೆಯು 7.50 ಲಕ್ಷಕ್ಕಿಂತ ಹೆಚ್ಚು ಎಂದು ಅಂದಾಜಿಸಲಾಗಿದೆ. ಭಾರತದ ಇಷ್ಟೊಂದು ಜನ ಬೇರೊಂದು ದೇಶದಲ್ಲಿ ಅಲ್ಲಿನ ಕಾನೂನಿನ ಕೈಗಳಿಂದ ತಪ್ಪಿಸಿಕೊಂಡು ವಾಸ ಮಾಡುತ್ತಿರುವುದು ಭಾರತಕ್ಕೆ ಒಳ್ಳೆಯ ಹೆಸರು ತರುವುದಿಲ್ಲ. ಅವರ ಪೂರ್ವಾಪರ ಪರಿಶೀಲಿಸಿ ಅವರನ್ನು ಮರಳಿ ಕರೆಸಿಕೊಳ್ಳುವ ಹೊಣೆಯು ಭಾರತದ ಮೇಲೆ ಇದೆ. ಅಕ್ರಮ ವಲಸಿಗರನ್ನು ಈಗ ವಾಪಸ್ ಕಳುಹಿಸಿರುವುದು ಅದೇ ಬಗೆಯಲ್ಲಿ ಬೇರೆ ದೇಶಗಳಿಗೆ ಅಕ್ರಮವಾಗಿ ವಲಸೆ ಹೋಗುವ ಆಲೋಚನೆ ಹೊಂದಿರುವವರಿಗೆ ಒಂದು ಎಚ್ಚರಿಕೆಯ ಗಂಟೆಯಾಗಬಹುದು. ಅಕ್ರಮ ವಲಸೆಯನ್ನು ಕೊನೆಗೊಳಿಸಬೇಕಿದೆ. ದೇಶದ ಹಲವು ರಾಜ್ಯಗಳಲ್ಲಿ ಅಸ್ತಿತ್ವದಲ್ಲಿ ಇರುವ ಅಕ್ರಮ ವಲಸೆ ಜಾಲವನ್ನು ಇನ್ನಿಲ್ಲದಂತೆ ಮಾಡುವ ಹೊಣೆ ಸರ್ಕಾರಗಳ ಮೇಲಿದೆ. ಬೇರೆ ದೇಶಗಳಿಗೆ ಅಕ್ರಮವಾಗಿ ಪ್ರವೇಶಿಸುವುದರಲ್ಲಿ ಇರುವ ಅಪಾಯಗಳ ಬಗ್ಗೆ ಜನರಿಗೆ ಮಾಹಿತಿ ಒದಗಿಸಬೇಕಿದೆ.

ನಮ್ಮ ಕೆಲಸದ ಗೊತ್ತು–ಗುರಿ ಬಗ್ಗೆ ಇನ್ನಾದರೂ ನಾವು ಗಂಭೀರವಾಗಿ ಆಲೋಚಿಸಬೇಕಾಗಿದೆ

ಉದ್ಯೋಗಪರ್ವದ ಸುಳಿಯಲ್ಲಿ ಶಾಂತಿಪರ್ವ

ಅನುತ್ತರ

ಎಸ್. ಸೂರ್ಯಪ್ರಕಾಶ ಪಂಡಿತ್

‘ನಾವು ಎಷ್ಟು ಗಂಟೆ ಕೆಲಸ ಮಾಡಬೇಕು’ ಎಂಬ ವಿಷಯವಾಗಿ ಉದ್ಯಮಿಗಳೊಂದಿಬ್ಬರು ಇತ್ತೀಚೆಗೆ ನೀಡಿರುವ ಹೇಳಿಕೆಗಳು ಚರ್ಚೆಗೆ ಒಳಗಾಗಿವೆ. ಆದರೆ ಈ ಚರ್ಚೆಗಳು ಮಾರ್ಕ್ಸ್‌ವಾದವೋ ಬಂಡವಾಳಶಾಹಿಯೋ ಹೀಗೆ ಯಾವುದಾದರೊಂದು ಸಿದ್ಧಾಂತದ ಮುಖವಾಡದಲ್ಲೇ ನಡೆಯುತ್ತಿರುತ್ತವೆ.

ಕೆಲಸವನ್ನು ಎಷ್ಟು ಗಂಟೆಗಳು ಮಾಡಬೇಕು ಎನ್ನುವುದಕ್ಕಿಂತಲೂ ಕೆಲಸ ಎಂದರೇನು, ಮನುಷ್ಯನಿಗೆ ಕೆಲಸದ ಅನಿವಾರ್ಯ ಎಷ್ಟು ಎಂಬಂಥ ಮೂಲಭೂತ ಸಂಗತಿಗಳು ನಮ್ಮ ಚರ್ಚೆಗಳ ಕೇಂದ್ರವಸ್ತು ಆಗಬೇಕಿತ್ತಲ್ಲವೆ? ನಾವು ಮಾಡುತ್ತಿರುವ ಕೆಲಸಕ್ಕೂ ನಮ್ಮ ಜೀವನಕ್ಕೂ ಸಂತೋಷಕ್ಕೂ ನೆಮ್ಮದಿಗೂ ಸಮಾಜಕ್ಕೂ ಇರಬೇಕಾದ ನಂಟಿನ ಬಗ್ಗೆ ಇಂದು ನಾವು ಮನನ ಮಾಡುತ್ತಿದ್ದೇವೆಯೆ? ಈ ಸಂಬಂಧಸೂತ್ರದ ಬಗ್ಗೆ ಯೋಚಿಸಿದಾಗಲೆಲ್ಲ ಸಣ್ಣಕತೆಯೊಂದು ನೆನಪಾಗುತ್ತದೆ.

ಊರ ಹೊರಗೊಂದು ದೊಡ್ಡ ಮರ. ಆ ವಿಶಾಲವೃಕ್ಷದ ನೆರಳಲ್ಲಿ ವ್ಯಕ್ತಿಯೊಬ್ಬ ಮಲಗಿ, ನಿದ್ರೆ ಮಾಡುತ್ತಿದ್ದಾನೆ. ಅದೇ ದಾರಿಯಲ್ಲಿ ಇನ್ನೊಬ್ಬ ವ್ಯಕ್ತಿ ಪ್ರಯಾಣ ಮಾಡುತ್ತಿದ್ದಾನೆ. ನಡೆಯುತ್ತಿದ್ದ ಈ ವ್ಯಕ್ತಿ ಮಲಗಿದ್ದ ಆ ವ್ಯಕ್ತಿಯನ್ನು ನೋಡಿ, ಅವನತ್ತ ಧಾವಿಸಿದ. ನಿದ್ರಿಸುತ್ತಿದ್ದವನನ್ನು ಎಬ್ಬಿಸಿಯೇಬಿಟ್ಟ! ‘ಏಳೋ ಸೋಮಾರಿ’. ‘ಅಯ್ಯೋ ಮಾರಾಯ! ಎದ್ದು ಏನು ಮಾಡಲಿ?’ ‘ಎದ್ದು ಈ ಮರದ ಒಂದೆರಡು ರೆಂಬೆ–ಕೊಂಬೆಗಳನ್ನು ಕತ್ತರಿಸು’. ‘ಕತ್ತರಿಸಿ?!’ ’ಸೌದೆಯನ್ನು ಮಾರಾಟ ಮಾಡು, ದುಡ್ಡನ್ನು ಸಂಪಾದಿಸು!’ ‘ದುಡ್ಡು ಸಂಪಾದಿಸಿ ಏನು ಮಾಡುವುದು?’ ‘ಲೋ ದಡ್ಡ! ನಿನಗೆ ಏನು ಬೇಕೋ ಅದನ್ನು ಆ ದುಡ್ಡಿನಿಂದ ಕೊಂಡುಕೊ. ಅದರಿಂದ ಸಂತೋಷಪಡು’. ‘ಅಯ್ಯಾ! ಈಗ ನಾನು ಸಂತೋಷವಾಗಿ ಇರುವುದರಿಂದಲೇ ಮಲಗಿದ್ದುದು, ನೀನು ದಯಮಾಡಿಸಬಹುದು’ ಎಂದು ಹೇಳಿ ಅವನು ಮತ್ತೆ ಮಲಗಿ, ನಿದ್ರೆಗೆ ಜಾರಿದ.

ಮಾನವನ ಇತಿಹಾಸವನ್ನು ನಾವು ಅವಲೋಕಿಸಿದಾಗ, ಕೆಲಸಕ್ಕೂ ಅವನ ಇರುವಿಕೆಗೂ ನಂಟಿರುವುದು ಗೊತ್ತಾಗುತ್ತದೆ (ಇಲ್ಲಿ ‘ಕೆಲಸ’ ಎಂಬುದನ್ನು ದುಡಿಮೆ, ಉದ್ಯೋಗ, ವೃತ್ತಿಗಳ– ಇವು ವಾಸ್ತವವಾಗಿ ಒಂದರಿಂದ ಇನ್ನೊಂದು ಭಿನ್ನವಾಗಿದ್ದರೂ– ಸಮಾನಾರ್ಥದಲ್ಲಿ ಬಳಸಲಾಗಿದೆ). ಆದರೆ ನಾವಿಂದು ಜೀವನಕ್ಕಾಗಿ ಕೆಲಸ ಎಂಬ ಸಹಜ ಹಂತದಿಂದ, ಕೆಲಸಕ್ಕಾಗಿಯೇ ಜೀವನ ಎಂಬಂಥ ಕೃತಕ ಸ್ತರಕ್ಕೆ ಜಾರಿದ್ದೇವೆ. ಆರ್ಥಿಕ ತಜ್ಞ ಮೇನರ್ಡ್ ಕೇಯ್ನ್ಸ್ ಸುಮಾರು ನೂರು ವರ್ಷಗಳ ಹಿಂದೆ ಒಂದು ಭವಿಷ್ಯವನ್ನು ನುಡಿದಿದ್ದರು: ‘ಮುಂದಿನ ದಿನಗಳಲ್ಲಿ ನನ್ನ ಮೊಮ್ಮಕ್ಕಳು ದಿನಕ್ಕೆ ಮೂರು ಗಂಟೆಗಳಷ್ಟೇ ಕೆಲಸ ಮಾಡಿದರೆ ಸಾಕು’. ಆದರೆ ಕೇಯ್ನ್ಸ್ ಭವಿಷ್ಯ ಸುಳ್ಳಾಗಿದೆ. ಅವರ ಕಾಲಕ್ಕಿಂತಲೂ ನಮ್ಮ ಕಾಲ ಹೆಚ್ಚಿನ ‘ಅಭಿವೃದ್ಧಿ’ಯನ್ನು ಸಾಧಿಸಿದ್ದರೂ ನಾವು ಹೆಚ್ಚಿನ ಕೆಲಸ ಮಾಡಬೇಕಾದ ಒತ್ತಡವನ್ನೂ ಸೃಷ್ಟಿಸಿದೆ. ನಮ್ಮ ದಿನದ 24 ಗಂಟೆಗಳಲ್ಲಿ 12 ಗಂಟೆಗಳಷ್ಟು ದುಡಿದರೂ ನೆಮ್ಮದಿಯ ಜೀವನ ನಮ್ಮದಾಗುತ್ತಿಲ್ಲ ಎಂಬಂಥ ವಾತಾವರಣದಲ್ಲಿ ಇಂದು ನಾವು ಬದುಕುತ್ತಿದ್ದೇವೆ. ನಮ್ಮ ಈ ಭಾಗ್ಯಹೀನ ಬದುಕಿಗೆ ಕಾರಣಕರ್ತರು ಯಾರು?

ನಮ್ಮ ಜೀವನ ನಿರ್ವಹಣೆಗಾಗಿ ಅನಿವಾರ್ಯವಾಗಿರುವ ಶ್ರಮವನ್ನು ಯಂತ್ರಗಳು ತಗ್ಗಿಸುತ್ತವೆ. ಆಗ ಮಾನವರು ಹೆಚ್ಚು ದುಡಿಯಬೇಕಾಗಿರುವುದಿಲ್ಲ. ದಿನದ ಸ್ವಲ್ಪಕಾಲವಷ್ಟೇ ದುಡಿದು, ಉಳಿದ ಸಮಯದಲ್ಲಿ ಸಂತೋಷವಾಗಿ ಇರಬಹುದು ಎಂಬುದು ಕೇಯ್ನ್ಸ್ ಅವರ ಎಣಿಕೆಯಾಗಿತ್ತು. ಆದರೆ ನಾವು ಯಂತ್ರಗಳ ನೆರವಿನಿಂದ ಸಂತೋಷದ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವ ಕೌಶಲವನ್ನೇನೂ ದಕ್ಕಿಸಿಕೊಳ್ಳಲಿಲ್ಲ. ಅದಕ್ಕೆ ವಿರುದ್ಧವಾಗಿ ನಾವೇ ಯಂತ್ರಗಳಾಗಿ ರೂಪಾಂತರವಾಗಿ ಬಿಟ್ಟೆವು! ಯಂತ್ರಗಳಿಗೆ ಸಂತೋಷದ ಆವಶ್ಯಕತೆಯೂ ಇರದು, ಉದ್ದೇಶದ ಅನಿವಾರ್ಯವೂ ಇರದು, ಅಲ್ಲವೆ? ಹೀಗಾಗಿಯೇ ನಮ್ಮ ದುಡಿಮೆಗೂ ಜೀವನಕ್ಕೂ ಸಂತೋಷಕ್ಕೂ ಏನು ಸಂಬಂಧ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಲು ಅವಕಾಶವೇ ನಮಗೆ ಈಗ ಇಲ್ಲವಾಗಿದೆ.

ಮನುಷ್ಯನಿಗೆ ಒದಗಿದ ಈ ರೂಪಾಂತರಕ್ಕೆ ಕಾರಣ, ಅವನು ತನ್ನ ಜೀವನಯಾನದಲ್ಲಿ ಅಗತ್ಯಗಳ (Needs) ಹಾದಿಯನ್ನು ಆರಿಸಿಕೊಳ್ಳದೆ, ಬಯಕೆಗಳ (Wants) ಕುದುರೆಯನ್ನು ಏರಿದ್ದು. ನಮಗೆ ಅಗತ್ಯವಾದಂಥವು ಕೆಲವು, ಆದರೆ ಬಯಕೆಗಳು ಹಲವು, ಎಣಿಕೆಗೇ ಸಿಗದಂಥವು. ಅಗತ್ಯವಾದಂಥವು ಸಹಜ, ಸುಂದರ. ಅವು ಸಿಕ್ಕಾಗ ತೃಪ್ತಿ, ಸಂತೋಷ. ಬಯಕೆಗಳಾದರೋ ಕೃತಕ, ಕುರೂಪ. ಅವು ದಕ್ಕಿದಾಗಲೂ ದಕ್ಕಬೇಕಾದದ್ದು ದಕ್ಕಿತೋ ಇಲ್ಲವೋ ಎಂಬ ಅತೃಪ್ತಿ, ಗೊಂದಲ. ಮಾತ್ರವಲ್ಲ, ಮಾರುಕಟ್ಟೆಯಿಂದ ಪ್ರಚೋದಿತ ಇಂದಿನ ಆರ್ಥಿಕ ವ್ಯವಸ್ಥೆಗೆ ನಮ್ಮ ಸಹಜತೆಯಿಂದ ಏನೂ ಪ್ರಯೋಜನವಿಲ್ಲ. ಅದು ಸಂತೋಷವಾಗಿರುವ ನಮ್ಮನ್ನು ಆಮಿಷಗಳ ಬಲದಿಂದ ಎಬ್ಬಿಸಿ, ನಮ್ಮಲ್ಲಿ ಅತೃಪ್ತಿಯೆಂಬ ಸಂಕಟವನ್ನು ತುಂಬಿ, ಕೃತಕ ಸಂತಸದ ಮೇವನ್ನು ನಮ್ಮ ಕಣ್ಣಿನ ಮುಂದೆ ನೇತುಹಾಕಿ, ದಾಹವನ್ನು ತಣಿಸುವ ಜೀವರಸವಾಗಿ, ದುಡ್ಡು ಎಂಬ ಮರೀಚಿಕೆಯನ್ನು ಸೃಷ್ಟಿಸಿ, ಆ ಕಡೆಗೆ ನಮ್ಮನ್ನು ಉದ್ಯೋಗ ಎಂಬ ಚಾಟಿಯನ್ನು ಬೀಸಿ ಬೀಸಿ ಓಡಿಸುತ್ತಲೇ ಇರುತ್ತದೆ.

ಕೈಗಾರಿಕಾ ಕ್ರಾಂತಿ ಎಂಬ ಮಾಯಾದಂಡ ತನಗೆ ಬೇಕಾದಂಥ ಯಂತ್ರಮಾನವರನ್ನು ಸೃಷ್ಟಿಸಿಕೊಂಡಿದೆ. ಮನುಷ್ಯನ ಇಹಕ್ಕೂ ಪರಕ್ಕೂ ಇದೇ ರಾಜಮಾರ್ಗ ಎಂಬಂಥ ಆದರ್ಶವನ್ನೂ ಅದು ಸ್ಥಾಪಿಸಿದೆ. ಇದರ ವಿರುದ್ಧ ಮಾತನಾಡುವುದೇ ಪ್ರಗತಿವಿರುದ್ಧ ಎಂದು ಹೀಗಳೆಯುವಂಥ ಮನೋಧರ್ಮವನ್ನೂ ಸಮಾಜದಲ್ಲಿ ಯಶಸ್ವಿಯಾಗಿ ಬಿತ್ತಿದೆ. ‘ಇಂಡಸ್ಟ್ರಿ ವಿದೌಟ್ ಆರ್ಟ್ ಈಸ್ ಬ್ರೂಟ್ಯಾಲಿಟಿ’ (ಕಲೆಗೆ ನೆಲೆಯಾಗದ ಕೈಗಾರಿಕೆ ಎಂದರೆ ಅದು ಕ್ರೌರ್ಯ) ಎಂದ ಜಾನ್ ರಸ್ಕಿನ್ ಕಾಣ್ಕೆಯ ಅನುಭವ ಈಗ ನಮಗಾಗುತ್ತಿದೆ. ಇಂದಿನ ಅರ್ಥವ್ಯವಸ್ಥೆಯು ಜೀವನಕಲೆಯಿಂದ ನಮ್ಮನ್ನು ದೂರ ಮಾಡಿದೆ.

ಹಣವೇ ಜೀವನಸಂತೋಷದ ಮೂಲ ಎಂಬ ಭ್ರಾಂತಿ ಇಂದಿನ ಸಮಾಜದಲ್ಲಿದೆ. ಸಂತೋಷ ಎಂಬುದು ಪಾಪವಲ್ಲ. ಆದರೆ ಆ ಸಂತೋಷದ ನೆಲೆ-ಬೆಲೆ ಏನಾಗಿರತಕ್ಕದ್ದು ಎಂದೂ ನಿರ್ಧಾರವಾಗಬೇಕಾಗುತ್ತದೆ. ಜೀವನದ ಸಮಗ್ರತೆಯಲ್ಲಿಯೇ ಸಂತೋಷವಿರುವುದು. ಇದನ್ನೇ ನಮ್ಮ ಪ್ರಾಚೀನರು ಪುರುಷಾರ್ಥಗಳ ಕಲ್ಪನೆಯಲ್ಲಿ ಶೋಧಿಸಿದ್ದು. ಜೀವನದಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ– ಎಲ್ಲವೂ ಬೇಕು. ಆದರೆ ‘ಅರ್ಥ’ ಮಾತ್ರವೇ ಇಂದಿನ ಜೀವನಾರ್ಥವಾಗಿದೆ. ಜೀವನದ ಸಮಗ್ರತೆ ಎಂದರೆ ಏನು ಎಂಬುದನ್ನು ನಮ್ಮ ಕಾಲದ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾದ ಲೂಯಿಸ್ ಮಮ್‌ಫರ್ಡ್ ಸೊಗಸಾಗಿ ಹೇಳಿದ್ದಾರೆ:

‘ಧಾರ್ಮಿಕ ಕಲಾಪಗಳು, ಕಲೆ, ಪದ್ಯ, ನಾಟಕ, ಸಂಗೀತ, ನೃತ್ಯ, ತತ್ತ್ವಶಾಸ್ತ್ರ, ವಿಜ್ಞಾನ, ಪುರಾಣ, ಧರ್ಮಶ್ರದ್ಧೆ– ಇವೆಲ್ಲವೂ ಮನುಷ್ಯನಿಗೆ ಅವನ ನಿತ್ಯದ ಅನ್ನಗಳಾಗಿಯೇ ಬೇಕು. ಮನುಷ್ಯನ ದಿಟವಾದ ಜೀವನ ಎಂದರೆ, ಅವನಿಗೆ ಅನ್ನ ಕೊಡುವ ಉದ್ಯೋಗದಲ್ಲಿ ತೊಡಗುವುದಷ್ಟೇ ಅಲ್ಲ, ಅವನ ಉದ್ಯೋಗದ ದಾರಿ ಮತ್ತು ಅದು ಸೃಷ್ಟಿಸುವ ಉತ್ಪನ್ನಗಳ ಕೊನೆಯ ಹಂತ ಹಾಗೂ ಅವುಗಳ ಬಳಕೆಯ (ಎಂದರೆ ಮಾರ್ಗ ಮತ್ತು ಗುರಿಗಳ) ಮಹತ್ವವನ್ನು ಎತ್ತಿಹಿಡಿಯುವ ಸಾಂಕೇತಿಕ ಕಲಾಪಗಳಲ್ಲಿ ತೊಡಗಿಕೊಳ್ಳುವಿಕೆಯಲ್ಲಿಯೇ ಅವನ ಜೀವನದ ಸಾರ್ಥಕತೆಯಿದೆ. ಅಜ್ಞಾನದಿಂದಲೋ ಜಡತೆಯಿಂದಲೋ ಭಾಷೆಯ ಸಮಸ್ಯೆಯಿಂದಲೋ ವ್ಯಕ್ತಿಯೊಬ್ಬ ತನ್ನ ಸಂಸ್ಕೃತಿಯ ಸಂಕೇತಗಳಿಂದ ದೂರವಾಗುವುದಕ್ಕಿಂತಲೂ ದೊಡ್ಡ ಬಡತನ ಮತ್ತೊಂದಿಲ್ಲ.’

ಇಂಥ ಲೌಕಿಕ-ಅಲೌಕಿಕ ವಿವರಗಳ ಪೂರ್ಣ-ದೃಷ್ಟಿಯನ್ನೇ ಅಧ್ಯಾತ್ಮ ಎಂದು ಕರೆಯುವುದು. ‘ಕಾಯಕವೇ ಕೈಲಾಸ’ ಎಂಬ ಅಂತಃಸೂತ್ರದಿಂದ ಪುಷ್ಟಿಗೊಂಡಿದ್ದ ಶರಣ ಪರಂಪರೆಯ ಹಲವರು ಶಿವಶರಣರ ಹೆಸರುಗಳೊಂದಿಗೆ ಅವರ ವೃತ್ತಿಸೂಚಕವೂ ಸೇರಿರುವುದು ಆಧ್ಯಾತ್ಮಿಕತೆಯ ಇಹ–ಪರಗಳ ತಾದಾತ್ಮ್ಯಕ್ಕೆ ಸಮರ್ಥ ಉದಾಹರಣೆಯಾಗಿದೆ. ‘ಕ್ರಿಯಾಶೀಲತೆಯ ಆವಶ್ಯಕತೆ ಧ್ಯಾನದಲ್ಲಿದೆ. ಉದ್ಯೋಗವೇ ಪ್ರಾರ್ಥನೆ. ಕಾಯಕದ ಉದ್ದೇಶವೇ ಆತ್ಮಶುದ್ಧಿ. ಪಾವಿತ್ರ್ಯ ಎಂದರೆ ಪೂರ್ಣತೆಯೇ ಹೌದು’ ಎಂದ ಕಲಾವಿದ, ಚಿಂತಕ ಎರಿಕ್ ಗಿಲ್ ಕಾಣ್ಕೆ ಮನನೀಯ.

ಇನ್ನಾದರೂ ನಾವು ನಮ್ಮ ಕೆಲಸದ ಗೊತ್ತು-ಗುರಿಗಳ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಾಗಿದೆ. ಕೆಲಸದ ಪ್ರಮಾಣಕ್ಕಿಂತಲೂ ಅದರ ಪರಿಣಾಮವೇ ಮುಖ್ಯ ಎಂಬ ಚಿತ್ತವೃತ್ತಿಯೇ ನಮ್ಮ ಜೀವನದರ್ಶನದ ಭಾಗವಾಗಬೇಕಿದೆ.



ಚುರುಮುರಿ

ನಾಯಿಗಳು ಸಾರ್...!

• ಬಿ.ಎನ್.ಮಲ್ಲೇಶ್

ವಿಧಾನಸೌಧದ ಸುತ್ತಮುತ್ತ ಓಡಾಡಿಕೊಂಡಿದ್ದ ಬೀದಿನಾಯಿಗಳೆಲ್ಲ ತುರ್ತು ಸಭೆ ಸೇರಿದವು. ‘ವಿಷಯ ಗೊತ್ತಾತ? ನಮ್ಮನ್ನೆಲ್ಲ ಸ್ಪೀಕರ್ ಸಾಹೇಬ್ರು ವಿಧಾನಸೌಧದಲ್ಲಿ ಕೂಡಾಕಿ ಸಾಕ್ತಾರಂತೆ’ ದೊಡ್ಡ ನಾಯಿ ವಿಷಯ ಪ್ರಸ್ತಾಪಿಸಿತು.

‘ಹೌದಾ? ಯಾಕಂತೆ?’ ಕರಿ ನಾಯಿ ಕೇಳಿತು.

‘ನಮ್ಮ ಹಾವಳಿ ಹೆಚ್ಚಾಗೇತಂತೆ, ವಾಕಿಂಗ್ ಮಾಡೋರನ್ನ ಕಂಡು ಬೊಗಳ್ತೀವಂತೆ, ತೊಂದ್ರೆ ಕೊಡ್ತೀವಂತೆ...’

‘ನಮಗೆ ಮಾತಾಡೋಕೆ ಬರಲ್ಲ, ಅದ್ಕೆ ಬೊಗಳ್ತೀವಿ, ಏನ್ ತಪ್ಪು?’ ಬಿಳಿ ನಾಯಿ ವಾದಿಸಿತು.

‘ಅಲ್ಲ, ನಮ್ಮನ್ನ ಎಲ್ಲಿ ಕೂಡಾಕ್ತರಂತೆ? ಅಧಿವೇಶನ ನಡೀತತಲ್ಲ ಅಲ್ಲಾ ಅಥ್ವ ಶಾಸಕರ ಭವನದತ್ರನಾ?’ ಗಿಡ್ಡ ನಾಯಿಗೆ ಕುತೂಹಲ.

‘ಅದಿರ್ಲಿ, ನಮ್ ತರ ದನ, ಇಲಿ, ಹೆಗ್ಗಣ ಎಲ್ಲ ಓಡಾಡ್ತವೆ, ಅವುನ್ನೂ ಸಾಕ್ತಾರಾ?’

‘ಲೇಯ್, ಹೆಗ್ಗಣಗಳು ಮೊದಲಿನಿಂದ್ಲೂ ವಿಧಾನಸೌಧದಲ್ಲಿ ಅದಾವೆ, ಅವು ಯಾರ ಕೈಗೂ ಸಿಗಲ್ಲ’ ಕಂದು ನಾಯಿಗೆ ನಗು.

‘ಅಲ್ಲ, ಇವರ ಪ್ಲಾನೇನು ಇರಬೋದು? ನಮ್ಮನ್ನು ಸಾಕೋ ನೆಪದಲ್ಲಿ ಮುಂದೆ ನಾಯಿ ಅಭಿವೃದ್ಧಿ ನಿಗಮ ಅಂತ ಮಾಡಿ ಅದ್ರಲ್ಲಿ ಅವ್ಯವಹಾರ ಆದ್ರೆ?’ ಕರಿ ನಾಯಿಗೆ ಅನುಮಾನ.

‘ಹಂಗೇನಾದ್ರು ಆದ್ರೆ ಗೌರ್ನರ್‌ಗೆ ದೂರು ಕೊಟ್ರಾತು ಬಿಡು’.

‘ಲೇಯ್, ನಮ್ ಸ್ಪೀಕರ್ ಅಂಥೋರಲ್ಲ, ನಮ್ ಮೇಲೆ ದಯೆ ತೋರ್ಸಿದಾರೆ. ಇನ್ಮೇಲೆ ಅವರು ಕಂಡಾಗಲೆಲ್ಲ ನಾವು ಬಾಲ ಅಲ್ಲಾಡ್ಸಿ ಕೃತಜ್ಞತೆ ತೋರಿಸ್ಬೇಕು. ಜೊತೆಗೆ ನಾವೂ ಸ್ವಲ್ಪ ತಿದ್ಕೊಬೇಕು. ಕಚ್ಚಾಟಕ್ಕೆ ನಾವು ಹೆಸರುವಾಸಿ. ಆ ಕಳಂಕನ ದೂರ ಮಾಡ್ಕೊಬೇಕು’ ದೊಡ್ಡ ನಾಯಿ ಬುದ್ಧಿವಾದ ಹೇಳಿತು.

‘ಅಯ್ಯೋ ಸುಮ್ನಿರಪ್ಪ, ಈಗ ಕಚ್ಚಾಡ್ತಿರೋರನ್ನ ನೋಡಿದ್ರೆ ನಾವೇ ಎಷ್ಟೋ ವಾಸಿ’ ನಗುತ್ತಾ ಹೇಳಿತು ಕಂತ್ರಿ ನಾಯಿ.

‘ಸದ್ಯ ಟೀವಿಯೋರಿಗೆ ನಮ್ ಸುದ್ದಿ ಗೊತ್ತಾದಂಗೆ ಕಾಣಲ್ಲ. ಗೊತ್ತಾಗಿದ್ರೆ ‘ನಾಯಿಗಳು ಸಾರ್ ನಾಯಿಗಳು’ ಅಂತ ಟೈಟಲ್ ಕೊಟ್ಟು ಬಿಗ್ ಬ್ರೇಕಿಂಗ್ ನ್ಯೂಸ್ ಮಾಡಿರೋರು’. ಗಿಡ್ಡ ನಾಯಿ ಕೀಟಲೆಗೆ ಎಲ್ಲ ನಾಯಿಗಳೂ ಗೊಳ್ಳೆಂದು ನಕ್ಕವು.

ದಿನದ ಟ್ವೀಟ್

ಹೆರಿಗೆ ಆಸ್ಪತ್ರೆ: ಮೂಲಸೌಲಭ್ಯ ಕಲ್ಪಿಸಿ

ಬೆಂಗಳೂರಿನ ಕಾರ್ಪೊರೇಟ್ ಹೆರಿಗೆ ಆಸ್ಪತ್ರೆಗಳಲ್ಲಿ ತಜ್ಞರು ಮತ್ತು ಸೌಲಭ್ಯಗಳ ಕೊರತೆಯಿಂದ ಹೆರಿಗೆಯ ವೇಳೆ ಲೋಪಗಳಾಗಿರುವ ಅನೇಕ ಪ್ರಕರಣಗಳಿವೆ. ಜನರು ಎಚ್ಚರ ವಹಿಸಬೇಕು, ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

ಕಿಡಿನುಡಿ

ಚಿಕ್ಕ ವಯಸ್ಸಿನಿಂದಲೇ ಒಳ್ಳೆಯ ಅಭ್ಯಾಸ ರೂಢಿಸಬೇಕು. ರ್‍ಯಾಪರ್ ಅನ್ನು ಕಸದಬುಟ್ಟಿಗೆ ಹಾಕುವಂತೆ ನಮ್ಮ ಮಕ್ಕಳಿಗೆ ಹೇಳಬೇಕು. ಕಸದಬುಟ್ಟಿ ಕಾಣದಿದ್ದರೆ, ಅದನ್ನು ಮನೆಗೆ ತಂದು, ಒಣಕಸ ಹಾಕುವ ಡಬ್ಬಿಯಲ್ಲಿ ಹಾಕಬೇಕು. ನಾವು ಹಿರಿಯರು ಮೊದಲು ಈ ಕೆಲಸ ಮಾಡುವ ಮೂಲಕ ಮಾದರಿಯಾಗಬೇಕು! ‘ನಡೆಯುತ್ತದೆ’ ಎನ್ನುವ ಮನೋಭಾವ ಭ್ರಷ್ಟಾಚಾರದಂತೆಯೇ ನಮ್ಮ ಡಿಎನ್‌ಎದಲ್ಲಿ ಸೇರಿಹೋಗಿದೆ.

(ಕಾಫಿ ಕುಡಿದ ಪೇಪರ್ ಕಪ್ಪುಗಳನ್ನು ಕಸದಬುಟ್ಟಿಗೆ ಹಾಕದೆ ಎಲ್ಲೆಂದರಲ್ಲಿ ಎಸೆಯುವವರ ಧೋರಣೆಗೆ ಪ್ರತಿಕ್ರಿಯೆ)

ರೋಹಿಣಿ ಪ್ರಸಾದ್, ಪೌಷ್ಟಿಕಾಂಶ ತಜ್ಞೆ

25 ವರ್ಷಗಳ ಹಿಂದೆ

ಸೋಮವಾರ, 7-2-2000

• ‘ಎನ್‌ಡಿಎ ಸರ್ಕಾರದ ಉಳಿವಿಗೆ ಜಾತ್ಯತೀತ ನೀತಿ ಅನಿವಾರ್ಯ’

ಚೆನ್ನೈ, ಫೆ. 6 (ಯುಎನ್ಐ)– ಮಿತ್ರಪಕ್ಷಗಳ ಬೆಂಬಲ ಮುಂದುವರಿಯಬೇಕಾದರೆ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಕೇಂದ್ರ ಪ್ರಜಾಸತ್ತಾತ್ಮಕ ಒಕ್ಕೂಟದ ಸರ್ಕಾರ ಜಾತ್ಯತೀತವಾಗಿರದೇ ಬೇರೆ ಮಾರ್ಗವಿಲ್ಲ ಎಂದು ಎನ್‌ಡಿಎ ಒಕ್ಕೂಟದ ಪ್ರಮುಖ ಅಂಗಪಕ್ಷವಾದ ಡಿಎಂಕೆ ಇಂದು ಅಭಿಪ್ರಾಯಪಟ್ಟಿತು.

ನಗರದ ಪ್ರಮುಖ ಕ್ರೈಸ್ತ ಶಿಕ್ಷಣ ಸಂಸ್ಥೆಯಾದ ಲಾಯೊಲಾ ಕಾಲೇಜಿನ ಕಾರ್ಯಕ್ರಮದಲ್ಲಿ ಮಾತನಾಡಿದ ತಮಿಳುನಾಡು ಮುಖ್ಯಮಂತ್ರಿ ಹಾಗೂ ಡಿಎಂಕೆ ಮುಖಂಡ ಎಂ. ಕರುಣಾನಿಧಿ ಅವರು ‘ಕಳೆದ ವರ್ಷ ಅಧಿಕಾರ ಸ್ವೀಕರಿಸಿದಾಗಿನಿಂದ ಕೇಂದ್ರ ಸರ್ಕಾರ ಜಾತ್ಯತೀತ ನೀತಿಗೆ ಬದ್ಧವಾಗಿದೆ. ಎರಡನೇ ಪೋಪ್ ಜಾನ್‌ಪಾಲ್ ಅವರು ಭಾರತಕ್ಕೆ ಬಂದಾಗ ಪ್ರಧಾನಿ ಹಾಗೂ ಗೃಹ ಸಚಿವರು ಅವರಿಗೆ ಸ್ವಾಗತ ನೀಡಿದ್ದು ಇದಕ್ಕೆ ದ್ಯೋತಕ. ಸದ್ಯದ ಪರಿಸ್ಥಿತಿಯಲ್ಲಿ ಕೇಂದ್ರವು ಈ ನೀತಿಯನ್ನೇ ಮುಂದುವರಿಸಿಕೊಂಡು ಹೋಗಬೇಕಾದ ಅನಿವಾರ್ಯ ಸ್ಥಿತಿಗೆ ಸಿಲುಕಿದೆ’ ಎಂದರು.

• ಅಸಮತೋಲನ ಅಧ್ಯಯನಕ್ಕೆ ಸಮಿತಿ

ಧಾರವಾಡ, ಫೆ. 6– ರಾಜ್ಯದ ಪ್ರಾದೇಶಿಕ ಅಸಮತೋಲನ ಅಧ್ಯಯನಕ್ಕಾಗಿ ಸರ್ಕಾರ ರಚಿಸಲಿರುವ ಉನ್ನತ ಮಟ್ಟದ ಸಮಿತಿಗೆ ಕೇಂದ್ರದ ಮಾಜಿ ಸಚಿವ ಹಾಗೂ ಕೃಷಿ– ಅರ್ಥ-ಶಾಸ್ತ್ರಜ್ಞ ಡಾ. ವೈ.ಕೆ.ಅಲಘ್ ಅವರನ್ನು ಅಧ್ಯಕ್ಷ-ರನ್ನಾಗಿ ನೇಮಕ ಮಾಡುವ ಇಂಗಿತವನ್ನು ಮುಖ್ಯಮಂತ್ರಿ ಕೃಷ್ಣ ಅವರು ಪ್ರಕಟಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 7-2-1975

• ಅರಸುಗೆ ನಾಲ್ಕು ಮನೆ ನಿವೇಶನ ಪ್ರಧಾನಿಗೆ ವೀರೇಂದ್ರರ ಪತ್ರ

ಕಾರವಾರ, ಫೆ. 6– ಬೇರೆಯವರ ಹೆಸರಿನಲ್ಲಿ ಪ್ಯಾಲೆಸ್ ಆರ್ಚರ್ಡ್‌ನಲ್ಲಿ ನಾಲ್ಕು ಮನೆ ನಿವೇಶನಗಳನ್ನು ಮುಖ್ಯಮಂತ್ರಿ ಅರಸು ಅವರು ಹೊಂದಿರುವ ಬಗ್ಗೆ ಸಂಬಂಧಪಟ್ಟ ದಾಖಲೆ ಪತ್ರಗಳ ಪ್ರತಿಗಳೊಂದಿಗೆ ತಾವು ಪ್ರಧಾನಮಂತ್ರಿಗೆ ಪತ್ರ ಬರೆದಿರುವುದಾಗಿ ಪ್ರದೇಶ ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷ ವೀರೇಂದ್ರ ಪಾಟೀಲ್ ಅವರು ಬಹಿರಂಗಪಡಿಸಿದರು.

ನಿನ್ನೆ ರಾತ್ರಿ ಇಲ್ಲಿ ಬಹಿರಂಗ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಪಾಟೀಲರು ‘ಈ ವಿಷಯವು ಮುಂಬರುವ ವಿಧಾನಮಂಡಲ ಅಧಿವೇಶನದಲ್ಲೂ ಪ್ರಸ್ತಾಪಕ್ಕೆ ಬರಲಿದೆ’ ಎಂದರು.

• ನಗರಕ್ಕೆ ಮತ್ತೆ ‘ರಕ್ತರಾಕ್ಷಸ’ನ ದಾಳಿ

ಬೆಂಗಳೂರು, ಫೆ. 6– ‘ಅಕ್ಕಟಾ ಬಂದು ವಕ್ಕರಿಸಿಯೇ ಬಿಟ್ಟ ಸೊಳ್ಳೆ ಸಂಗೀತಗಾರ...’

ಈ ಕಾಟ ಬೆಂಗಳೂರನ್ನು ಎಂದೂ ಬಿಟ್ಟಿದ್ದಿಲ್ಲ, ಹಲವು ದಶಕಗಳ ‘ರಕ್ತಸಂಬಂಧ’ ಇದು. ಆದರೂ ಒಂದೆರಡು ವರ್ಷಗಳಿಂದ ನಗರದ ಕೆಲವು ಭಾಗಗಳಲ್ಲಿ ಬಹಳಷ್ಟು ಕಡಿಮೆಯಾಗಿತ್ತು ಈ ಕಾಟ. ಈ ಹಂಗಾಮಿ ಬಿಡುವು ಮುಗಿದಂತೆ ಕಾಣುತ್ತಿದೆ. ಮತ್ತೆ ಎರಡು ವಾರಗಳಿಂದ ನಗರವನ್ನೆಲ್ಲಾ ಆವರಿಸಿದೆ ಸೊಳ್ಳೆ ಕಾಟ. ಬೇಸಿಗೆಯೊಂದಿಗೇ ಬಂದಿದೆ ಉಲ್ಬಣಗೊಂಡ ಬವಣೆ.

ಸೊಳ್ಳೆಕಾಟ ತಪ್ಪಿಸಲು ಆಗಾಗ್ಗೆ ದೊರಕುತ್ತಿದ್ದ ಭರವಸೆಯೂ ಅಷ್ಟಾಗಿಲ್ಲ. ಈ ವರ್ಷ ‘ಸೊಳ್ಳೆ ಹೆಚ್ಚುವ ಸಾಧ್ಯತೆ’ಯ ಭಯವಿದೆ.

ಸಂಗತ

ಕನ್ನಡದ ನೆಂಟಸ್ತನ, ಲಿಪಿಗೆ ಬಡತನ!

ಮಾತೃಭಾಷೆ ಕನ್ನಡವಾಗಿರುವ ಮಕ್ಕಳು ಕನ್ನಡ ಲಿಪಿಯಿಂದ ದೂರವಾಗುತ್ತಿರುವುದು ಯೋಚಿಸಬೇಕಾದ ವಿಷಯ

• ಗೌರಿ ಚಂದ್ರಕೇಸರಿ

ಇಂದಿನ ಮಕ್ಕಳು ಹಾಗೂ ಯುವಕ–ಯುವತಿಯರನ್ನು ಗಮನಿಸಿದಾಗ, ಈ ತಲೆಮಾರು ನಿಧಾನವಾಗಿ ಕನ್ನಡದಿಂದ ದೂರ ಸರಿಯುತ್ತಿದೆಯೇನೋ ಎಂಬ ಭಾವನೆ ಮೂಡುತ್ತದೆ. ಇವರು ಮಾತುಕತೆ, ಸಂವಹನಕ್ಕೆ ಕನ್ನಡವನ್ನೇ ಬಳಸುತ್ತಾರೆ. ಆದರೆ ಕನ್ನಡ ಭಾಷೆಯಲ್ಲಿ ಬರೆಯುವಾಗ ಕನ್ನಡ ಲಿಪಿಯನ್ನು ಉಪಯೋಗಿಸದೆ ಇಂಗ್ಲಿಷ್ ಅಕ್ಷರಗಳಲ್ಲಿ ಬರೆದುಕೊಂಡು ಓದುತ್ತಾರೆ. ಉದಾಹರಣೆಗೆ, ಶಾಲಾ ಕಾಲೇಜುಗಳಲ್ಲಿ ಕನ್ನಡ ಭಾಷಣ, ಹಾಡುಗಳನ್ನು ಇಂಗ್ಲಿಷ್ ಅಕ್ಷರಗಳಲ್ಲಿ ಬರೆದುಕೊಳ್ಳುವ ಪರಿಪಾಟ ಮಕ್ಕಳಲ್ಲಿ ಬೆಳೆಯುತ್ತಿದೆ. ಇದು ಯೋಚನೆಗೆ ಈಡುಮಾಡುವ ಸಂಗತಿ.

ಇತ್ತೀಚೆಗೆ ನಮ್ಮ ನಾಟಕದ ತಾಲೀಮೊಂದರಲ್ಲಿ ನಾಲ್ಕೈದು ಮಂದಿ ಯುವಕ– ಯುವತಿಯರಿದ್ದರು. ಮಕ್ಕಳು ರಂಗಭೂಮಿಯೆಡೆಗೆ ಆಸಕ್ತಿ ತೋರುತ್ತಿರುವುದು ಸಂತಸದ ಸಂಗತಿ. ಆದರೆ ಈ ಮಕ್ಕಳು ನಾಟಕದ ಕನ್ನಡ ಸಂಭಾಷಣೆಗಳನ್ನು ಇಂಗ್ಲಿಷ್ ಅಕ್ಷರಗಳಲ್ಲಿ ಬರೆದುಕೊಂಡಿದ್ದರು. ಅಚ್ಚರಿಯ ಸಂಗತಿಯೆಂದರೆ, ಈ ಎಲ್ಲ ಮಕ್ಕಳ ಮಾತೃಭಾಷೆ ಕನ್ನಡ. ‘ಮನೆಯಲ್ಲೂ ಕಾಲೇಜಿನಲ್ಲೂ ನಿರರ್ಗಳವಾಗಿ ಕನ್ನಡ ಮಾತನಾಡುವ ನೀವು, ಕನ್ನಡವನ್ನು ಇಂಗ್ಲಿಷ್ ಅಕ್ಷರಗಳಲ್ಲಿ ಬರೆದುಕೊಂಡಿರುವುದೇಕೆ’ ಎಂಬ ಪ್ರಶ್ನೆಗೆ ಆ ಮಕ್ಕಳು ಕೊಟ್ಟ ಉತ್ತರ ಸೋಜಿಗವೆನಿಸುವಂತಿತ್ತು. ‘ಕನ್ನಡವನ್ನು ಇಂಗ್ಲಿಷಿನಷ್ಟು ಸರಾಗವಾಗಿ ನಮಗೆ ಓದಲು ಬರುವುದಿಲ್ಲ, ಇಂಗ್ಲಿಷಿನಷ್ಟು ಕನ್ನಡ ಫೆಮಿಲಿಯರ್ (ಸುಪರಿಚಿತ) ಎನ್ನಿಸುವುದಿಲ್ಲ’ ಎಂದರು. ಒಂದು ಕ್ಷಣ ವಿಚಿತ್ರವೆನ್ನಿಸಿದರೂ ಸತ್ಯವೆನ್ನಿಸಿತ್ತು.

ಮಗು ತೊಟ್ಟಿಲಲ್ಲಿ ಇರುವಾಗಲೇ ಕುಟುಂಬದ ಸದಸ್ಯರು ಕಮ್, ಸಿಟ್, ಸ್ಲೀಪ್, ಕ್ಯಾಟ್, ಡಾಗ್... ಎಂದೆಲ್ಲ ಇಂಗ್ಲಿಷ್ ಪದಗಳನ್ನು ಬಳಸುತ್ತಾರೆ. ಮೂರ್ನಾಲ್ಕು ವರ್ಷದ ಮಗುವಿದ್ದಾಗ ಹೆತ್ತವರು ಮನೆಯಲ್ಲಿಯೇ ಇಂಗ್ಲಿಷ್ ಪಾಠ ಮಾಡತೊಡಗುತ್ತಾರೆ. ಪ್ರಾಣಿ-ಪಕ್ಷಿ, ಹೂ-ಹಣ್ಣು, ಬಣ್ಣದಂತಹವುಗಳ ವಿವರ, ಹಾಡುಗಳನ್ನೆಲ್ಲ ಇಂಗ್ಲಿಷ್ ಭಾಷೆಯಲ್ಲಿಯೇ ಹೇಳಿಕೊಡುತ್ತಾರೆ. ಅಕ್ಷರಗಳನ್ನು ತಿದ್ದಿಸುವಾಗಲೂ ಅಆಇಈ ಬದಲು ಎಬಿಸಿಡಿಯನ್ನೇ ತಿದ್ದಿಸುತ್ತಾರೆ. ಹೀಗಾಗಿ, ಮಗುವಿನ ಭಾಷೆ ಕನ್ನಡವಾದರೂ ಇಂಗ್ಲಿಷ್ ಭಾಷೆ ಆ ಮಗುವಿಗೆ ಹತ್ತಿರ ಎನಿಸತೊಡಗುತ್ತದೆ ಹಾಗೂ ಸುಲಲಿತವಾಗುತ್ತದೆ.

ಮಗುವಿನ ಮನಸ್ಸು ಹಸಿ ಗೋಡೆ ಇದ್ದಂತೆ. ಆರಂಭದಿಂದಲೇ ಅದರ ಮಸ್ತಿಷ್ಕಕ್ಕೆ ಇಂಗ್ಲಿಷ್ ಅಕ್ಷರಗಳನ್ನು ಬಿತ್ತುತ್ತಾ ಹೋದಂತೆ ಅದು ಸರಾಗವಾಗಿ ಕಲಿಯುತ್ತಾ ಹೋಗುತ್ತದೆ. ಶಾಲೆಯಲ್ಲಿ ಒಂದು ವಿಷಯವಾಗಿ ಕನ್ನಡವನ್ನು ಕಲಿಯಲಾರಂಭಿಸಿದಾಗ, ಕನ್ನಡದಲ್ಲಿ ಬರುವ ಕೊಂಬು, ಒತ್ತಕ್ಷರವೆಲ್ಲ ಗೊಂದಲ ಎನಿಸತೊಡಗುತ್ತವೆ. ಇಂಗ್ಲಿಷ್ ವರ್ಣಮಾಲೆಯನ್ನು ಓದುವುದು, ಬರೆಯುವುದರಲ್ಲಿ ಇರುವ ಆಸಕ್ತಿಯು ಕನ್ನಡ ಬರೆಯುವಾಗ, ಓದುವಾಗ ಮಗುವಿಗೆ ಇರುವುದಿಲ್ಲ. ಅಲ್ಲದೆ ಅಕ್ಷರಗಳ ನಡುವಿನ ವ್ಯತ್ಯಾಸ ಗಳನ್ನು ಗುರುತಿಸುವಲ್ಲಿ ಮಕ್ಕಳು ಹಿಂದೆ ಬೀಳುತ್ತಾರೆ. ಆದರೆ ಇಂಗ್ಲಿಷ್ ಅಕ್ಷರಗಳನ್ನು ಓದುವುದು, ಬರೆಯುವುದು ನೀರು ಕುಡಿದಷ್ಟು ಸುಲಭ ಈ ಮಕ್ಕಳಿಗೆ. ಶಾಲೆಯಲ್ಲಿ ದಿನದಲ್ಲಿ ಒಂದೇ ಒಂದು ಗಂಟೆ ಮಕ್ಕಳ ಕಿವಿಯ ಮೇಲೆ ಕನ್ನಡ ಭಾಷೆ ಬೀಳುತ್ತದೆ. ಎಷ್ಟೋ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಮಾತನಾಡುವುದೂ ನಿಷಿದ್ಧ. ಹೀಗಿರುವಾಗ, ಕನ್ನಡ ಭಾಷೆ ಕಲಿಯಲು ಕ್ಲಿಷ್ಟ ಎನಿಸತೊಡಗುತ್ತದೆ.

ಮಕ್ಕಳು ಶಾಲೆಯಲ್ಲಿ ತಾವು ಕಲಿಯುವ ಎಲ್ಲ ವಿಷಯಗಳಲ್ಲಿ ಉತ್ತಮ ಅಂಕಗಳನ್ನು ತೆಗೆದರೂ ಕನ್ನಡದ ವಿಷಯದಲ್ಲಿ ಅನುತ್ತೀರ್ಣರಾಗುವುದು, ಅತಿ ಕಡಿಮೆ ಅಂಕಗಳನ್ನು ತೆಗೆಯುವುದು ಸಾಮಾನ್ಯ. ಇದು ಎಲ್ಲ ಪೋಷಕರು ಹಾಗೂ ಶಿಕ್ಷಕರ ಅಳಲು. ಕೆಲ ಪೋಷಕರು ಮಕ್ಕಳನ್ನು ಕನ್ನಡ ಮನೆಪಾಠಕ್ಕೆ ಕಳಿಸುತ್ತಾರೆ. ಮಕ್ಕಳ ಈ ಸ್ಥಿತಿಗೆ ಕಾರಣಕರ್ತರು ತಾವೇ ಎಂಬ ಅರಿವು ಕೂಡ ಪೋಷಕರಿಗೆ ಇರುವುದಿಲ್ಲ. ಕನ್ನಡ ವಿಷಯವನ್ನು ಮಗು ಹೇಗೋ ಕಲಿಯುತ್ತದೆ, ಮನೆಯಲ್ಲಿ ಮಾತನಾಡುವುದೇ ಕನ್ನಡ, ಅದು ಕಲಿಯಲು ಸಲೀಸು ಎಂಬ ತಪ್ಪುಕಲ್ಪನೆಯಲ್ಲಿ ಇರುತ್ತಾರೆ ಪೋಷಕರು.



ಶುರುವಿನಿಂದಲೇ ಕನ್ನಡ ಮಾಧ್ಯಮದಲ್ಲಿ ಓದಿದ ಮಕ್ಕಳು ಕನ್ನಡ ಹಾಗೂ ಇಂಗ್ಲಿಷ್ ಎರಡರಲ್ಲೂ ಅಷ್ಟೇ ಪರಿಣತರಾಗಿರುತ್ತಾರೆ. ಕನಿಷ್ಠ ಪ್ರಾಥಮಿಕ ಶಾಲೆಯನ್ನು ಕನ್ನಡ ಮಾಧ್ಯಮದಲ್ಲಿ ಓದಿ ನಂತರ ಇಂಗ್ಲಿಷ್ ಮಾಧ್ಯಮಕ್ಕೆ ಹೋದ ಮಕ್ಕಳು ಕೂಡ ಕನ್ನಡವನ್ನು ಓದುವಲ್ಲಿ, ಬರೆಯುವಲ್ಲಿ ಗೊಂದಲಗಳನ್ನು ಎದುರಿಸುವುದಿಲ್ಲ. ಎಲ್ಲ ಪಾಲಕರೂ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸುವುದರಿಂದ ಮಕ್ಕಳು ಕನ್ನಡದ ಜೊತೆಗಿನ ಒಡನಾಟದಿಂದ ದೂರ ಸರಿಯುತ್ತಾ ಹೋಗುತ್ತಾರೆ. ಶಾಲೆ, ಕಾಲೇಜು, ವೃತ್ತಿ ಹೀಗೆ ಎಲ್ಲೆಡೆಯೂ ಇಂಗ್ಲಿಷ್‌ನಲ್ಲಿಯೇ ವ್ಯವಹರಿಸುತ್ತ, ಕನ್ನಡವು ಮನೆಗೆ ಮಾತ್ರ ಸೀಮಿತವಾಗಿ ಬಿಡುತ್ತದೆ.

ಕನ್ನಡ ಓದಲು, ಬರೆಯಲು ಬಾರದ ಅನ್ಯಭಾಷಿಕರು ಕನ್ನಡವನ್ನು ಇಂಗ್ಲಿಷ್ ಅಕ್ಷರಗಳಲ್ಲಿ ಬರೆದುಕೊಂಡು ಓದುವುದು ಅನಿವಾರ್ಯ. ಆದರೆ ಮಾತೃಭಾಷೆ ಕನ್ನಡವಾಗಿರುವ, ಹುಟ್ಟಿನಿಂದಲೇ ಕನ್ನಡದೊಂದಿಗೆ ಒಡನಾಡಿದ ಮಕ್ಕಳು ಕನ್ನಡ ಲಿಪಿಯಿಂದ ದೂರವಾಗುತ್ತಿರುವುದು ಯೋಚಿಸಬೇಕಾದ ವಿಷಯ. ಹೀಗಾದರೆ ನಮ್ಮ ಮುಂದಿನ ತಲೆಮಾರು ಕನ್ನಡ ಲಿಪಿಯನ್ನು ಉಳಿಸಿಕೊಳ್ಳಲು ಹೋರಾಟಕ್ಕೆ ಇಳಿಯಬೇಕಾದ ಪರಿಸ್ಥಿತಿ ಬಂದೊದಗಲೂಬಹುದು.

ಬಾಲ್ಯದಿಂದಲೇ ಮಗುವಿಗೆ ಇಂಗ್ಲಿಷ್ ಭಾಷೆಯನ್ನು ಮಾತ್ರ ಧಾರೆ ಎರೆಯದೆ ಕನ್ನಡಕ್ಕೂ ಅಷ್ಟೇ ಪ್ರಾಧಾನ್ಯವನ್ನು ಹೆತ್ತವರು ಹಾಗೂ ಶಿಕ್ಷಕರು ಕೊಡಬೇಕು. ಅಂದಾಗ ಮಗು ಕನ್ನಡದ ಬಗ್ಗೆ ಕೀಳರಿಮೆ, ಗೊಂದಲಗಳನ್ನು ಹೊಂದದೆ ಪ್ರೀತಿಯಿಂದ ಕಲಿಯಲು ಸಾಧ್ಯ.

ವಾಚಕರ ವಾಣಿ

‘ನಿಧಿ ತಿರುವು’ ಯೋಜನೆ ಜಾರಿಯಾಗಲಿ

ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಕೆಂಪು ನಿಶಾನೆ ತೋರಿಸಿದೆ. ಕಾವೇರಿ ವನ್ಯಧಾಮದ ಆನೆ ಮತ್ತಿತರ ಅಸಂಖ್ಯ ಮೃಗಗಳು ತಮಿಳುನಾಡಿಗೆ ಸದ್ಯಕ್ಕಂತೂ ಧನ್ಯವಾದ ಹೇಳಬಹುದು. ಆ ಯೋಜನೆಗೆ ಸುರಿಯಲು ಹೊರಟ ₹14 ಸಾವಿರ ಕೋಟಿ ರೂಪಾಯಿಗಳನ್ನು ಕರ್ನಾಟಕ ಸರ್ಕಾರ ಈಗ ಇನ್ನೊಂದು ‘ನಿಧಿ ತಿರುವು’ ಯೋಜನೆಗೆ ಹೂಡಿದರೆ ಒಳ್ಳೆಯದು: ಅರ್ಧ ಮೊತ್ತವನ್ನು ಬೆಂಗಳೂರಿನ ಕೊಳಚೆ ನೀರಿನ (ಮೂರನೆಯ ಹಂತದ) ಸಂಸ್ಕರಣೆಗೆ ಹೂಡಿದರೆ ಅಷ್ಟೇ ನೀರು ಬಳಕೆಗೆ ಸಿಗುತ್ತದೆ.

ಇನ್ನರ್ಧ ಮೊತ್ತವನ್ನು ಆಸುಪಾಸಿನ ಕೆರೆಗಳ ಹೂಳೆತ್ತಿ, ಮಳೆನೀರು ಸಂಗ್ರಹ ಮಾಡಿದರೆ ಮತ್ತೆ 14 ಟಿಎಂಸಿ ಅಡಿ ನೀರು ಸಿಗುತ್ತದೆ. ಒಟ್ಟಾರೆಯಾಗಿ ಬೆಂಗಳೂರಿಗೆ ಡಬಲ್ ಲಾಭ ಆಗುತ್ತದೆ. ಆಗ ಇದು ಸಿಂಗಪುರವಾಗುವ ದಿಸೆಯಲ್ಲಿ ಅಥವಾ ಚೀನಾದ ವೂಹಾನ್ ಮಾದರಿಯ ‘ಸ್ಪಾಂಜ್ ಸಿಟಿ’ ಆಗುವ ದಿಸೆಯಲ್ಲಿ ತುಸು ನಿಧಾನಕ್ಕಾದರೂ ಹೆಜ್ಜೆಯಿಟ್ಟಂತಾಗುತ್ತದೆ.

ನಾಗೇಶ ಹೆಗಡೆ, ಕೆಂಗೇರಿ

ಅಧ್ಯಯನ ಕೇಂದ್ರದ ಸ್ಥಳಾಂತರ ಬೇಡ

ಮೈಸೂರಿನಲ್ಲಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸುವ ಆಲೋಚನೆಯನ್ನು ಕೇಂದ್ರ ಸರ್ಕಾರ ಕೈಬಿಡಬೇಕೆಂದು ಒತ್ತಾಯಿಸಿ ಕನ್ನಡ ಕ್ರಿಯಾ ಸಮಿತಿ ಮತ್ತು ಶಾಸ್ತ್ರೀಯ ಭಾಷಾ ಕನ್ನಡ ಹೋರಾಟ ಸಮಿತಿ ವತಿಯಿಂದ ನಿರ್ಣಯ ಕೈಗೊಂಡಿರುವುದು ಶ್ಲಾಘನೀಯ. ಈ ಕೇಂದ್ರವನ್ನು ಸ್ಥಳಾಂತರಿಸುವ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿರುವುದನ್ನು ನೋಡಿದರೆ, ದೆಹಲಿಯಿಂದ ದೇವಗಿರಿಗೆ ಹಾಗೂ ದೇವಗಿರಿಯಿಂದ ದೆಹಲಿಗೆ ಆಡಳಿತವನ್ನು ಬದಲಾಯಿಸಲು ಇದೇನು ಮೊಹಮದ್ ಬಿನ್ ತುಘಲಕ್ ಆಡಳಿತವೇ ಎನಿಸುತ್ತದೆ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡಿ 16 ವರ್ಷಗಳಾದರೂ ಸಂಸ್ಥೆಯು ತನ್ನ ಕಾರ್ಯವನ್ನು ಇನ್ನೂ ಪೂರ್ಣ ಪ್ರಮಾಣದಲ್ಲಿ ಆರಂಭಿಸದಿರುವುದು ತುಂಬಾ ಬೇಸರದ ಸಂಗತಿ. ಇನ್ನಾದರೂ ಈ ಸ್ಥಳಾಂತರಿಸುವ ವಿಷಯಕ್ಕೆ ಇತಿಶ್ರೀ ಹಾಡಿ ಕನ್ನಡ ಭಾಷೆಯನ್ನು ಬೆಳೆಸುವ ಕಡೆ ಗಮನಹರಿಸುವುದು ಒಳ್ಳೆಯದು.

ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು

ಅರ್ಧ ನಿಮಿಷದ ‘ಕಗ್ಗ’ ತರಬಹುದು ಬದಲಾವಣೆ

ಐಪಿಎಸ್ ಅಧಿಕಾರಿ ರೂಪಾ ಮೌದ್ಗಿಲ್ ಅವರ ವಿರುದ್ಧ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರು ಹೂಡಿರುವ ಮಾನನಷ್ಟ ಮೊಕದ್ದಮೆಯ ವಿಚಾರಣೆ ವೇಳೆ, ನ್ಯಾಯಾಧೀಶರಾದ ವಿಜಯ್ ಕುಮಾರ್ ಜಾಟ್ಲಾ ಅವರು ‘ಪರಸ್ಪರ ದ್ವೇಷ ಮರೆತು ರಾಜಿ ಮಾಡಿಕೊಳ್ಳಿ’ ಎಂದು ಹೇಳುತ್ತಾ, ‘ಒನ್ ಮಿನಿಟ್ ಅಪಾಲಜಿ’ ಎಂಬ ಪುಸ್ತಕವನ್ನು ಓದಲು ಸಲಹೆ ನೀಡಿದ್ದಾರೆ. ಒಂದುವೇಳೆ ಪುಸ್ತಕ ಓದಲು ಅವರಿಗೆ ತುಂಬಾ ಸಮಯ ಹಿಡಿಯುವುದಾದರೆ, ಅವರು ಬರೀ ಅರ್ಧ ನಿಮಿಷದಲ್ಲಿ ಡಿವಿಜಿ ಅವರ ‘ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ, ಬೆಲ್ಲ– ಸಕ್ಕರೆಯಾಗು ದೀನ ದುರ್ಬಲರಿಂಗೆ, ಎಲ್ಲರೊಳಗೊಂದಾಗು ಮಂಕುತಿಮ್ಮ’ ಎಂಬ ಕಗ್ಗವನ್ನು ಓದಿಕೊಂಡರೆ ಸಾಕು. ನ್ಯಾಯಾಧೀಶರ ಆಶಯ ಈಡೇರಿದಂತೆ ಆಗುತ್ತದೆ.

ಜೆ.ಬಿ.ಮಂಜುನಾಥ, ಪಾಂಡವಪುರ

ಅಕ್ರಮ ವಲಸೆಗೆ ತಡೆಯೊಡ್ಡಿ

‘ಅಮೆರಿಕ: ದುಬಾರಿ ಕನಸು’ ಎಂಬ ಲೇಖನ (ಆಳ- ಅಗಲ, ಫೆ. 6) ವಿವಿಧ ದೇಶಗಳ ನಾಗರಿಕರ ಕಣ್ತೆರೆಸುವಂತಿದೆ. ಓದು, ಉದ್ಯೋಗ, ಡಾಲರ್ ಸಂಪಾದನೆ, ಗ್ರೀನ್ ಕಾರ್ಡ್ ಪಡೆಯುವ ಹಂಬಲದಂತಹ ನಾನಾ ವಿಧದ ಕನಸುಗಳನ್ನು ಹೊತ್ತು ಅಮೆರಿಕಕ್ಕೆ ತೆರಳಿದ್ದ ವಲಸಿಗರು, ವೀಸಾ ಅವಧಿ ಮುಗಿದ ಕಾರಣಕ್ಕೋ ಅಥವಾ ವೀಸಾ ಇಲ್ಲದೇ ಆ ದೇಶಕ್ಕೆ ಹೋಗಿದ್ದ ಕಾರಣಕ್ಕೋ ಈಗ ಕಷ್ಟ ಅನುಭವಿಸುವಂತಾಗಿದೆ. ಅಂಥವರಿಗೆಲ್ಲ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹಾದಿಬದಿಯ ಮುಳ್ಳಾಗಿ ಪರಿಣಮಿಸಿದ್ದಾರೆ. ಇಂತಹ ಕನಸಿಗರಲ್ಲಿ ಭಾರತೀಯರೂ ಬಹಳಷ್ಟು ಮಂದಿ ಇದ್ದಾರೆ. ಅಂತಹವರಿಗೆ ಟ್ರಂಪ್ ಅವರ ನಡೆ ಅಸಹನೀಯ ಎನಿಸಿದರೂ ವಾಸ್ತವದಲ್ಲಿ ಅವರ ನಡೆ ಸ್ವಾಗತಾರ್ಹವಾಗಿದೆ. ಇದು ಭಾರತಕ್ಕೂ ಮಾದರಿಯಾಗಬೇಕು. ಭಾರತದ ನಾಗರಿಕರು ಅಮೆರಿಕ ಎಂಬ ಅಮಲಿಗೆ ಬಲಿಯಾಗುವುದನ್ನು ತಪ್ಪಿಸಬೇಕು. ಯಾವ್ಯಾವುದೋ ಕಾರಣಗಳಿಗೆ ಭಾರತಕ್ಕೆ ಬಂದು ಅನಧಿಕೃತವಾಗಿ ನೆಲಸಿರುವ ವಿದೇಶಿ ನಾಗರಿಕರನ್ನು ಯಾವುದೇ ರಾಜಕಾರಣಿಗಳ ಮುಲಾಜಿಗೆ ಶರಣಾಗದೆ ಒಕ್ಕಲೆಬ್ಬಿಸಬೇಕು.

ರಮೇಶ್, ಬೆಂಗಳೂರು

ಶೌಚಾಲಯ ಶುಲ್ಕದಲ್ಲೂ ತಾರತಮ್ಯವೇಕೆ?

ಲಿಂಗತಾರತಮ್ಯ ನಾನಾ ರೀತಿಯಲ್ಲಿ ನಡೆಯುತ್ತದೆ. ಕೆಲವು ಬಾರಿ ಅದು ವಿಚಿತ್ರ ಮತ್ತು ಅತಾರ್ಕಿಕವಾಗಿರುತ್ತದೆ. ಇದಕ್ಕೊಂದು ನಿದರ್ಶನ ನಮ್ಮ ಸಾರ್ವಜನಿಕ ಶೌಚಾಲಯಗಳು. ಗಬ್ಬುನಾರುವ, ನೀರೇ ಕಾಣದಿರುವ ಮತ್ತು ಕಾಯಿಲೆಗಳನ್ನು ಪಸರಿಸುವ ತಾಣಗಳಾಗಿರುವ ಇಲ್ಲಿ ಮಹಿಳೆಯರಿಂದ ಹೆಚ್ಚು ಹಣ ವಸೂಲು ಮಾಡಲಾಗುತ್ತಿದೆ. ಹೆಚ್ಚಿನವರು ಅಲ್ಲಿ ನಿಂದನೆಗೆ ಹೆದರಿಯೋ ಇದು ಸಣ್ಣ ವಿಚಾರವೆಂದೋ ಅದನ್ನು ಪ್ರಶ್ನಿಸುವುದೇ ಇಲ್ಲ. ಅಲ್ಲದೆ ಹಣ ವಸೂಲಿಗೆಂದು ಕೂರುವ ಹೆಚ್ಚಿನವರು ಹಿಂದಿ ಭಾಷಿಕರು.

ಹೊಸನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಇತ್ತೀಚೆಗೆ ಇದೇ ಅನುಭವ ಆಯಿತು. ಶೌಚಾಲಯ ಬಳಕೆ ಶುಲ್ಕ ಗಂಡಸರಿಗೆ ₹ 5 ಇದ್ದರೆ, ಮಹಿಳೆಯರಿಗೆ ₹ 10. ನಾವು ಕೆಲವು ಮಹಿಳೆಯರು ಪ್ರಶ್ನಿಸಲು ಹೋದರೆ, ಸ್ಥಳೀಯ ಕೆಲ ವ್ಯಕ್ತಿಗಳು ನಮ್ಮನ್ನೇ ದಬಾಯಿಸಿದರು. ಅನ್ಯಾಯವನ್ನು ತಡೆಯುವ ಬದಲು ಅಲ್ಲಿನ ಪೊಲೀಸರು ಮಹಿಳೆಯರಿಗೇ ಜೋರು ಮಾಡಿದರು. ಅತ್ಯಂತ ಕೊಳಕಾದ ಈ ಶೌಚಾಲಯದಲ್ಲಿ ಮಹಿಳೆಯರ ಬಳಿ ಮಾತ್ರ ₹10 ವಸೂಲು ಮಾಡಲು ಯಾವ ಕಾನೂನಿನ ಆಧಾರ ಇದೆ? ಈ ಅನ್ಯಾಯದ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು.

ಶ್ರೀಮತಿ ಸಿ.ಕೆ., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕರ್ನಾಟಕದಿಂದ ಸಂದಾಯವಾದ ಜಿಎಸ್‌ಟಿ • ಕೇಂದ್ರಕ್ಕೆ ಹೋಗಿದ್ದು ₹3.96 ಲಕ್ಷ ಕೋಟಿ

ವಾಪಸ್ ಬಂದಿದ್ದು ₹1.70 ಲಕ್ಷ ಕೋಟಿ

• ಮಂಜುನಾಥ ಹೆಬ್ಬಾರ್

ತೆರಿಗೆ ಸಂಗ್ರಹದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದರೂ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಯಾವುದೇ ಕೊಡುಗೆಗಳನ್ನು ನೀಡದೆ ಅನ್ಯಾಯ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ 2025–26ನೇ ಸಾಲಿನ ಕೇಂದ್ರ ಬಜೆಟ್‌ಗೆ ಪ್ರತಿಕ್ರಿಯಿಸಿದ್ದರು. ತೆರಿಗೆ ಆದಾಯ ಹಂಚಿಕೆಯಲ್ಲೂ ರಾಜ್ಯಕ್ಕೆ ನಿರಂತರವಾಗಿ ಅನ್ಯಾಯ ಆಗುತ್ತಿದೆ ಎಂದು ಕರ್ನಾಟಕ ಹೇಳುತ್ತಲೇ ಬಂದಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ದಕ್ಷಿಣದ ರಾಜ್ಯಗಳ ಬಗ್ಗೆ ಮಲತಾಯಿ ಧೋರಣೆ ಹೊಂದಿದೆ ಎಂದು ಕರ್ನಾಟಕ, ತಮಿಳುನಾಡು ಸೇರಿದಂತೆ ದಕ್ಷಿಣ ರಾಜ್ಯಗಳ ಬಿಜೆಪಿ ಹೊರತಾದ ಸಂಸದರು ಸಂಸತ್ತಿನಲ್ಲೂ ಆರೋಪಿಸಿದ್ದಾರೆ.

ರಾಜ್ಯಗಳಿಂದ ಸಂಗ್ರಹಿಸಲಾಗುವ ತೆರಿಗೆಯಲ್ಲಿ ಎಷ್ಟು ಪಾಲನ್ನು ರಾಜ್ಯಗಳಿಗೆ ವಾಪಸ್ ನೀಡಬೇಕೆಂಬುದನ್ನು ನಿರ್ಧರಿಸುವುದು ಕೇಂದ್ರ ಹಣಕಾಸು ಆಯೋಗ. ಈ ತೆರಿಗೆ ಹಂಚಿಕೆ ಮಾಡಲು ಆರು ಮಾನದಂಡಗಳನ್ನು ಆಯೋಗ ನಿಗದಿಪಡಿಸಿದೆ. ಈ ಮಾನದಂಡಗಳು ಅಭಿವೃದ್ಧಿ ಹೊಂದಿದ ರಾಜ್ಯಗಳ ಹಿತಕ್ಕೆ ಮಾರಕ ಎಂದು ಆರೋಪಿಸಿ ದಕ್ಷಿಣದ ರಾಜ್ಯಗಳು ಕೇಂದ್ರದ ಜತೆಗೆ 'ತೆರಿಗೆ ಸಂಘರ್ಷ'ಕ್ಕೆ ಇಳಿದಿವೆ.

ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯ ಕಾರಣದಿಂದ ರಾಜ್ಯಗಳಿಗೆ ಆಗುವ ವರಮಾನ ನಷ್ಟಕ್ಕೆ ಪರಿಹಾರ ನೀಡುವ ವ್ಯವಸ್ಥೆ ಮುಂದುವರಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಪುನರುಚ್ಚರಿಸಿದೆ.

ಉತ್ತರದ ರಾಜ್ಯಗಳಿಗೆ ಹೋಲಿಸಿದರೆ ತೆರಿಗೆ ಸಂಗ್ರಹದಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ, ತಮಿಳುನಾಡಿನಂತಹ ದಕ್ಷಿಣದ ರಾಜ್ಯಗಳಿಗೆ ಕೇಂದ್ರ ಸರ್ಕಾರದ ತೆರಿಗೆ ಪಾಲು, ಕೇಂದ್ರ ಪ್ರಾಯೋಜಿತ ಯೋಜನೆಗಳ ಅನುದಾನ ಸಿಗುತ್ತಿರುವುದು ಕಡಿಮೆ. ಇದನ್ನು ಹಣಕಾಸು ಸಚಿವಾಲಯ ನೀಡಿರುವ ಐದು ವರ್ಷಗಳ ಅಂಕಿಅಂಶಗಳೇ ಹೇಳುತ್ತಿವೆ. ಲೋಕಸಭೆಯಲ್ಲಿ ಕಾಂಗ್ರೆಸ್ ಸಂಸದ ಶಶಿ ತರೂರ್ ಕೇಳಿರುವ ಪ್ರಶ್ನೆಗೆ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ರಾಜ್ಯಗಳಿಂದ ಸಂಗ್ರಹಿಸಿರುವ ತೆರಿಗೆ, ರಾಜ್ಯಗಳಿಗೆ ನೀಡಿರುವ ಅನುದಾನದ ವಿವರಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ಕರ್ನಾಟಕದಲ್ಲಿ ತೆರಿಗೆ ಸಂಗ್ರಹ (ಜಿಎಸ್‌ಟಿ ಮತ್ತು ಸೆಸ್)



₹5,57,271 ಕೋಟಿಯಲ್ಲಿ ಸಿಜಿಎಸ್‌ಟಿ ₹1,29,617, ಎಸ್‌ಜಿಎಸ್‌ಟಿ ₹1,61,461, ಐಜಿಎಸ್‌ಟಿ; ₹2,05,663 ಮತ್ತು ಸೆಸ್ ₹60,526. ಇದರಲ್ಲಿ ಎಸ್‌ಜಿಎಸ್‌ಟಿಯ ಮೊತ್ತ ರಾಜ್ಯಕ್ಕೆ ಸೇರಿದ್ದು. ಇದರೊಂದಿಗೆ ಸಂಗ್ರಹವಾದ ಐಜಿಎಸ್‌ಟಿಯಲ್ಲಿ ಸಣ್ಣ ಪ್ರಮಾಣ ರಾಜ್ಯಕ್ಕೆ ಸಿಗುತ್ತದೆ. ಉಳಿದ ಎಲ್ಲ ಮೊತ್ತ ಕೇಂದ್ರಕ್ಕೆ ಹೋಗುತ್ತದೆ.

ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಸಿಕ್ಕ ಅನುದಾನ



ಕರ್ನಾಟಕದಲ್ಲಿ ಐದು ವರ್ಷಗಳಲ್ಲಿ ₹5.57 ಲಕ್ಷ ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವಾಗಿದೆ. 2020ಕ್ಕೆ ಹೋಲಿಸಿದರೆ 2024ರಲ್ಲಿ ಜಿಎಸ್‌ಟಿ ಸಂಗ್ರಹ ಪ್ರಮಾಣ ದುಪ್ಪಟ್ಟಾಗಿದೆ. ಅದೇ ಹೊತ್ತಿಗೆ, ಈ ಅವಧಿಯಲ್ಲಿ ಕೇಂದ್ರ ತೆರಿಗೆ ಹಾಗೂ ಸುಂಕದ ರೂಪದಲ್ಲಿ ರಾಜ್ಯಕ್ಕೆ ಬಂದಿರುವುದು ₹1.70 ಲಕ್ಷ ಕೋಟಿ. ಕೇಂದ್ರ ಪ್ರಾಯೋಜಿತ ಯೋಜನೆಗಳಿಂದ ಸಿಕ್ಕಿದ್ದು ₹96,262 ಕೋಟಿ.

ಜಿಎಸ್‌ಟಿ ಪರಿಹಾರ ಕೊರತೆಗೆ ಸಿಕ್ಕಿದ್ದು

(₹ಕೋಟಿಗಳಲ್ಲಿ)



ಕೇಂದ್ರ ತೆರಿಗೆ ಹಾಗೂ ಸುಂಕದಲ್ಲಿ ರಾಜ್ಯಕ್ಕೆ ಬಂದಿದ್ದು



ಬಂಡವಾಳ ವೆಚ್ಚಕ್ಕಾಗಿ ದೊರೆತ ವಿಶೇಷ ನೆರವು (₹ಕೋಟಿಗಳಲ್ಲಿ)



ಬಾಹ್ಯ ನೆರವಿನ ಯೋಜನೆಗಳಿಗೆ (ಇಎಪಿ) ಕೇಂದ್ರ ಸರ್ಕಾರವು ಸಾಲ ಮತ್ತು ಅನುದಾನದ ರೂಪದಲ್ಲಿ ಹೆಚ್ಚುವರಿ ನೆರವು ನೀಡುತ್ತದೆ. ಇದರ ಅಡಿಯಲ್ಲಿ ರಾಜ್ಯಕ್ಕೆ 2019–2020ನೇ ಸಾಲಿನಲ್ಲಿ ₹679 ಕೋಟಿ, 2020–21ರಲ್ಲಿ ₹1,510 ಕೋಟಿ, 2021–22ರಲ್ಲಿ ₹1,516 ಕೋಟಿ, 2022–23ರಲ್ಲಿ ₹1,880 ಕೋಟಿ ಮತ್ತು 2023–24ರಲ್ಲಿ ₹2,067 ಕೋಟಿ ಸಿಕ್ಕಿದೆ.

20 ಕೋಟಿ ಜನಸಂಖ್ಯೆಯನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿ ಐದು ವರ್ಷಗಳಲ್ಲಿ ಜಿಎಸ್‌ಟಿ ಸಂಗ್ರಹ ಆಗಿದ್ದು ₹4.07 ಲಕ್ಷ ಕೋಟಿ. ಆದರೆ, ತೆರಿಗೆ ಪಾಲಿನ ರೂಪದಲ್ಲಿ ಆ ರಾಜ್ಯಕ್ಕೆ ಸಿಕ್ಕಿದ್ದು ₹8.32 ಲಕ್ಷ ಕೋಟಿ. ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲಿ ಗರಿಷ್ಠ ಲಾಭ ಆಗಿರುವುದೂ ಆ ರಾಜ್ಯಕ್ಕೆ. ಈ ಮೊತ್ತ ₹2.68 ಲಕ್ಷ ಕೋಟಿ. ಹಿಂದುಳಿದ ರಾಜ್ಯಗಳೆಂದು ಈಗಲೂ ಹಣೆಪಟ್ಟಿ ಹೊತ್ತುಕೊಂಡಿರುವ ಬಿಹಾರ, ಮಧ್ಯ ಪ್ರದೇಶ, ರಾಜಸ್ಥಾನದಂತಹ ರಾಜ್ಯಗಳು ಕಡಿಮೆ ತೆರಿಗೆ ಸಂಗ್ರಹಿಸುತ್ತಿವೆ. ಆದರೆ, ತೆರಿಗೆ ಪಾಲು ಹಾಗೂ ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲಿ ಗರಿಷ್ಠ 'ಲಾಭ' ಪಡೆಯುತ್ತಿವೆ.

ತೆರಿಗೆ ಸಂಗ್ರಹ: ಅಗ್ರ ರಾಜ್ಯಗಳು

(2020ರಿಂದ 2024ರ ಅಂತ್ಯದವರೆಗೆ) (₹ಕೋಟಿಗಳಲ್ಲಿ)



ಕೇಂದ್ರ ಪ್ರಾಯೋಜಿತ ಯೋಜನೆ: ಉತ್ತರದ ರಾಜ್ಯಗಳಿಗೆ ಸಿಕ್ಕಿದ್ದೆಷ್ಟು?

(2019ರಿಂದ 2025ರ ಜನವರಿವರೆಗೆ) (₹ಕೋಟಿಗಳಲ್ಲಿ)



ತೆರಿಗೆ ಪಾಲು ಹಂಚಿಕೆ (2020ರಿಂದ 2025ರ ಜನವರಿವರೆಗೆ)



ತೆರಿಗೆ ಪಾಲು ಹಂಚಿಕೆಗೆ ಮಾನದಂಡ ಮತ್ತು ಪ್ರಮಾಣ



ಪ್ರ.ವಾ. ಗ್ರಾಫಿಕ್ಸ್: ಕಣಕಾಲಮಠ

ರಾಜ್ಯಕ್ಕೆ ಶೇ 3.64ರಷ್ಟು

ಕೇಂದ್ರ ಸರ್ಕಾರವು ರಾಜ್ಯಗಳಿಗೆ ತೆರಿಗೆ ಪಾಲನ್ನು ಹಂಚಿಕೆ ಮಾಡಬೇಕಾದ ಪ್ರಮಾಣವನ್ನು ಹಣಕಾಸು ಆಯೋಗ ನಿರ್ಧರಿಸುತ್ತದೆ. 15ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ ಶೇ 3.64ರಷ್ಟು ಹಂಚಿಕೆ ಮಾಡಬೇಕು ಎಂದು ಶಿಫಾರಸು ಮಾಡಿದೆ.

ಉತ್ತರ ಪ್ರದೇಶಕ್ಕೆ ಇದೇ ಪ್ರಮಾಣ ಶೇ 17.93, ಬಿಹಾರಕ್ಕೆ ಶೇ 10.05ರಷ್ಟಿದೆ. ಮಧ್ಯ ಪ್ರದೇಶಕ್ಕೆ ಶೇ 7.85, ಪಶ್ಚಿಮ ಬಂಗಾಳ ಶೇ 7.52ರಷ್ಟು ತೆರಿಗೆ ಆದಾಯದ ಪಾಲು ಪಡೆದರೆ, ಅತಿ ಹೆಚ್ಚು ತೆರಿಗೆ ಸಂಗ್ರಹಿಸುವ ಮಹಾರಾಷ್ಟ್ರಕ್ಕೆ ಶೇ 6.37 ಪಾಲು ಸಿಗುತ್ತಿದೆ. ರಾಜಸ್ಥಾನಕ್ಕೆ ಶೇ 6.02 ರಷ್ಟು ಹಂಚಿಕೆ ಮಾಡಬೇಕು ಎಂದು 15ನೇ ಹಣಕಾಸು ಆಯೋಗ ಹೇಳಿದೆ.

ಕಾರ್ತಿಕ್‌ಗೆ ಸುನಿ ಆ್ಯಕ್ಷನ್ ಕಟ್

'ಗತವೈಭವ' ಸಿನಿಮಾ ಚಿತ್ರೀಕರಣ ಪೂರ್ಣಗೊಂಡ ಬೆನ್ನಲ್ಲೇ ನಿರ್ದೇಶಕ ಸಿಂಪಲ್ ಸುನಿ ಹೊಸ ಪ್ರಾಜೆಕ್ಟ್ ಘೋಷಿಸಿದ್ದಾರೆ. 'ಬಿಗ್‌ಬಾಸ್' ಹತ್ತನೇ ಆವೃತ್ತಿಯ ವಿಜೇತ ನಟ ಕಾರ್ತಿಕ್ ಮಹೇಶ್ ಈ ಚಿತ್ರದ ನಾಯಕನಾಗಿ ನಟಿಸಲಿದ್ದಾರೆ.

ಉದ್ಯಮಿ ಅರವಿಂದ್ ವೆಂಕಟೇಶ್ ರೆಡ್ಡಿ ಎವಿಆರ್ ಎಂಟರ್‌ಟೈನ್‌ಮೆಂಟ್ಸ್ ಬ್ಯಾನರ್‌ನಡಿ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದು, ಏಕಕಾಲಕ್ಕೆ ಎರಡು ಸಿನಿಮಾಗಳನ್ನು ಘೋಷಣೆ ಮಾಡಲಾಗಿದೆ. ಈ ಸಂಸ್ಥೆಯ ನಿರ್ಮಾಣದ ಚೊಚ್ಚಲ ಚಿತ್ರಕ್ಕೆ ಸಿಂಪಲ್ ಸುನಿ ಸಾರಥಿಯಾಗಿದ್ದಾರೆ. 'ಡೊಳ್ಳು' ಸಿನಿಮಾ ಮೂಲಕ ತಮ್ಮ ನಟನೆಯ ಸಾಮರ್ಥ್ಯವನ್ನು ಪ್ರದರ್ಶಿಸಿದ್ದ ಕಾರ್ತಿಕ್, 'ಬಿಗ್‌ಬಾಸ್' ವಿಜೇತರಾದ ಬಳಿಕ ಸಾಲು ಸಾಲು ಸಿನಿಮಾ ಒಪ್ಪಿಕೊಳ್ಳುತ್ತಿದ್ದಾರೆ. 'ಜಟ್ಟ', 'ಮೈತ್ರಿ' ಚಿತ್ರದ ನಿರ್ದೇಶಕ ಬಿ.ಎಂ. ಗಿರಿರಾಜ್ ನಿರ್ದೇಶನದ, ಗುರು ದೇಶಪಾಂಡೆ ನಿರ್ಮಾಣ ಮಾಡುತ್ತಿರುವ 'ರಾಮರಸ' ಚಿತ್ರದಲ್ಲಿ ಸದ್ಯ ಕಾರ್ತಿಕ್ ತೊಡಗಿಸಿಕೊಂಡಿದ್ದಾರೆ.

ಕಾರ್ತಿಕ್

ಸುನಿ ಆ್ಯಕ್ಷನ್ ಕಟ್ ಹೇಳುತ್ತಿರುವ ಚಿತ್ರಕ್ಕೆ 'ರಿಚಿ ರಿಚ್' ಎಂಬ ಶೀರ್ಷಿಕೆ ಇಡಲಾಗಿದೆ. ರಿದ್ದೇಶ್ ಚಿನ್ನಯ್ಯ ಎಂಬ ಪಾತ್ರದಲ್ಲಿ ಕಾರ್ತಿಕ್ ನಟಿಸುತ್ತಿದ್ದಾರೆ. ಹಾಸ್ಯ, ಕೌಟುಂಬಿಕ ಭಾವನಾತ್ಮಕ ಅಂಶಗಳನ್ನು ಮಿಶ್ರಣ ಮಾಡಿ ಸುನಿ ಈ ಸಿನಿಮಾ ಕಟ್ಟಿದ್ದಾರೆ. 'ರಿಚಿ ರಿಚ್' ಸಿನಿಮಾಗೆ ವೀರ್ ಸಮರ್ಥ್ ಸಂಗೀತ ನಿರ್ದೇಶನ, ಅಭಿಲಾಷ್ ಕಳತ್ತಿ ಛಾಯಾಚಿತ್ರಗ್ರಹಣವಿದೆ.

ಎವಿಆರ್ ಎಂಟರ್‌ಟೈನ್‌ಮೆಂಟ್ಸ್‌ನ ಎರಡನೇ ಸಿನಿಮಾವನ್ನು ಸುಜಯ್ ಶಾಸ್ತ್ರಿ ನಿರ್ದೇಶನ ಮಾಡುತ್ತಿದ್ದು, ಕ್ರೀಡಾ ಕಥೆಯನ್ನು ತೆರೆಗೆ ತರುತ್ತಿದ್ದಾರೆ. 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ', 'ಎಲ್ರ ಕಾಲೆಳೆಯುತ್ತೆ ಕಾಲ' ಚಿತ್ರಗಳನ್ನು ನಿರ್ದೇಶಿಸಿರುವ ಸುಜಯ್ ನಿರ್ದೇಶನದ ಈ ಚಿತ್ರದ ನಾಯಕ ಯಾರು ಎನ್ನುವುದನ್ನು ಚಿತ್ರತಂಡ ಇನ್ನಷ್ಟೇ ಘೋಷಿಸಬೇಕಾಗಿದೆ.

ಖಳನಾಯಕನಾದ ವಿನಯ್ ಗೌಡ

ನಟ ವಿನೋದ್ ಪ್ರಭಾಕರ್ ನಟನೆಯ 'ಬಲರಾಮನ ದಿನಗಳು' ಚಿತ್ರದ ಖಳನಾಯಕನಾಗಿ 'ಬಿಗ್‌ಬಾಸ್' ಖ್ಯಾತಿಯ ವಿನಯ್ ಗೌಡ ಕಾಣಿಸಿಕೊಳ್ಳಲಿದ್ದಾರೆ.

ಚಿತ್ರದ ಚಿತ್ರೀಕರಣ ಸದ್ಯ ಮೈಸೂರಿನಲ್ಲಿ ನಡೆಯುತ್ತಿದೆ. ಕಿರುತೆರೆ ಮೂಲಕ ಬಣ್ಣದ ಲೋಕಕ್ಕೆ ಹೆಜ್ಜೆ ಇಟ್ಟ ವಿನಯ್, 'ಬಿಗ್‌ಬಾಸ್' ಹತ್ತನೇ ಆವೃತ್ತಿಯಲ್ಲಿ ಮಿಂಚಿದ್ದರು. ಇದು ಅವರ ವೃತ್ತಿ ಜೀವನಕ್ಕೆ ಹೊಸ ತಿರುವು ನೀಡಿತ್ತು. ಪದ್ಮಾವತಿ ಫಿಲಂಸ್ ಲಾಂಛನದಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಈ ಚಿತ್ರವನ್ನು 'ಆ ದಿನಗಳು' ಖ್ಯಾತಿಯ ಕೆ.ಎಂ.ಚೈತನ್ಯ ನಿರ್ದೇಶಿಸುತ್ತಿದ್ದಾರೆ. 'ಆ ದಿನಗಳು' ಸಿನಿಮಾ ಬಳಿಕ ಬೆಂಗಳೂರು ಭೂಗತಲೋಕದ ಮತ್ತೊಂದು ರಕ್ತಚರಿತ್ರೆಯ ಕಥೆಯನ್ನು ಚೈತನ್ಯ ಈ ಸಿನಿಮಾದಲ್ಲಿಯೂ ಮುಂದುವರಿಸಲಿದ್ದಾರೆ.



ವಿನಯ್ ಗೌಡ

''ಕತ್ತಿ' ಅನ್ನೋ ಪಾತ್ರವನ್ನು ನಾನಿಲ್ಲಿ ಮಾಡುತ್ತಿದ್ದೇನೆ. ಈಗಾಗಲೇ ಚಿತ್ರದ ಶೇ 50ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಚಿಕ್ಕ ವಯಸ್ಸಿನಲ್ಲಿ, ಸಿನಿಮಾಗಳಲ್ಲಿ ನಾಯಕನಿಗಿಂತ ವಿಲನ್ ಪಾತ್ರಗಳನ್ನೇ ನೋಡಿ ಹೆಚ್ಚು ಆಕರ್ಷಿತನಾಗಿದ್ದೆ. ನನಗೆ ವಜ್ರಮುನಿ ಅವರೆಂದರೆ ತುಂಬಾ ಇಷ್ಟ. ತಮಿಳಿನ ರಘುವರನ್ ಅವರೂ ಇಷ್ಟ. ನಾಯಕ ಎಂದರೆ ಅಲ್ಲಿ ಒಂದು ಚೌಕಟ್ಟು ಇರುತ್ತೆ. ಒಳ್ಳೆಯ ಮಗನಾಗಿ, ಒಳ್ಳೆಯ ಗಂಡನಾಗಿ, ಒಳ್ಳೆಯ ಬಾಯ್‌ಫ್ರೆಂಡ್ ಆಗಿ ಇರಬೇಕು. ಆದರೆ ವಿಲನ್‌ಗೆ ಇದ್ಯಾವ ಚೌಕಟ್ಟೂ ಇಲ್ಲ. ಹಾಗಾಗಿ ನಾನು ವಿಲನ್ ಆಗಿಯೇ ಗುರುತಿಸಿಕೊಳ್ಳಬೇಕು' ಎಂದಿದ್ದಾರೆ ವಿನಯ್ ಗೌಡ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಹಿಳೆಯೊಬ್ಬರು ತೀವ್ರವಾಗಿ ಗಾಯಗೊಂಡು, ನರಳುತ್ತಿರುವ ವಿಡಿಯೊ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ಹಂಚಿಕೊಳ್ಳುತ್ತಿದ್ದಾರೆ. ಇದು ಬಾಂಗ್ಲಾದೇಶದ ವಿಡಿಯೊ ಎಂದೂ ಗಾಯಗೊಂಡಿರುವ ಮಹಿಳೆ ಹಿಂದೂ ಧರ್ಮಕ್ಕೆ ಸೇರಿದವರಾಗಿದ್ದು, ಮೊಹಮ್ಮದ್ ಯೂನುಸ್ ಆಡಳಿತದಲ್ಲಿ ಹಿಂದೂಗಳ ಮೇಲೆ ಹಿಂಸೆ ಎಸಗಲಾಗುತ್ತಿದೆ ಎಂದೂ ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದಲ್ಲಿ ಮಹಿಳೆಯು ತಾನು ಮುರ್ಶಿದಾಬಾದ್‌ನವರು ಎಂದು ಹೇಳುತ್ತಿರುವುದು ಕೇಳಿಸುತ್ತದೆ. ಅದನ್ನು ಆಧರಿಸಿ, ಗೂಗಲ್‌ನಲ್ಲಿ ಕೀ ವರ್ಡ್ ಸರ್ಚ್ ಮಾಡಿದಾಗ ಹಲವು ಮಾಧ್ಯಮಗಳಲ್ಲಿ 2025ರ ಜನವರಿ 28ರಂದು ಪ್ರಕಟವಾಗಿದ್ದ ಸುದ್ದಿ ಕಾಣಿಸಿತು. ಮಹಿಳೆಯು ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಗೆ ಸೇರಿದ್ದು, ಆಕೆಯ ಹೆಸರು ಲತೀಫಾ ಖಾತೂನ್ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಲತೀಫಾ ಅವರ ಮೇಲೆ ಗಿಯಾಸುದ್ದೀನ್ ಗಾಜಿ ಎನ್ನುವ ಪರಿಚಿತ ವ್ಯಕ್ತಿ ದ್ವೇಷದ ಕಾರಣಕ್ಕೆ ಹಲ್ಲೆ ನಡೆಸಿದ್ದ. ತೀವ್ರವಾಗಿ ಗಾಯಗೊಂಡಿದ್ದ ಆಕೆ ನಂತರ ಮೃತಪಟ್ಟಿದ್ದರು. ಆರೋಪಿ ಮತ್ತು ಸಂತ್ರಸ್ತೆ ಇಬ್ಬರೂ ಮುಸ್ಲಿಂ ಸಮುದಾಯಕ್ಕೆ ಸೇರಿದವರು. ಆದರೆ, ಈ ವಿಡಿಯೊ ಅನ್ನು, ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸೆಯ ವಿಡಿಯೊ ಎಂಬ ಸುಳ್ಳು ಪ್ರತಿಪಾದನೆಯೊಂದಿಗೆ ಹಂಚಿಕೊಳ್ಳುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ಸದ್ಭಾವ ಮೂಡಿಸುವುದು ಶಿಕ್ಷಣ

ನುಡಿ ಬೆಳಗು

ಗವಿಸಿದ್ದೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

127

ಶಿಕ್ಷಣ ಅಂದ್ರ ಏನು? ನಾವು ಮಕ್ಕಳಿಗೆ ಏನು ಕಲಿಸಿದ್ದೀವಿ? ಬರೀ ಇಂಗ್ಲಿಷ್ ಕಲಿಸಿದ್ದೀವಿ. ಶಾಲೆಯಿಂದ ಬಂದ ಮಕ್ಕಳು ರೈಮ್ಸ್ ಹೇಳಬೇಕು ಅಂತ ಬಯಸುತ್ತೀವಿ. ಆದರೆ ಶಿಕ್ಷಣ ಅಂದ್ರ ಬರೀ ಇಂಗ್ಲಿಷ್ ಕಲಿಸೋದು ಅಲ್ಲ. ಮಕ್ಕಳ ಮನದಲ್ಲಿ ಸದ್ಭಾವವನ್ನು ಮೂಡಿಸುವುದು. ನಮ್ಮ ಶಿಕ್ಷಣದಿಂದ ತಲೆಯಲ್ಲಿ ಬುದ್ಧಿ ಬಂದೈತಿ. ನಮ್ಮ ಪಾಕೆಟ್ ತುಂಬಿದೆ. ಆದರೆ ಎದೆ ಖಾಲಿಯಾಗಿದೆ. ಇದು ಯಾವ ರೀತಿಯ ಶಿಕ್ಷಣ? ಎಷ್ಟು ಜನ ಶಿಕ್ಷಣ ಪಡೆದವರು ತಂದೆತಾಯಿ ಜ್ವಾಪಾನ ಮಾಡ್ತಾರೆ ಹೇಳಿ?

ಮುದುಕ- ಮುದುಕಿ ಜಗುಲಿಯಲ್ಲಿ ಕುಳಿತಿದ್ದರಂತೆ. ಅವರು ತಮ್ಮ ಮಗನನ್ನ ಬಹಳ ಓದಿಸಿದ್ದರಂತೆ. ಮಗ ತನ್ನ ಹೆಂಡತಿಗೆ ಇಂಗ್ಲಿಷ್‌ನಲ್ಲಿ 'ಈ ಇಬ್ಬರನ್ನು ನಾನು ವೃದ್ಧಾಶ್ರಮಕ್ಕೆ ಕಳಿಸ್ತೀನಿ' ಅಂತಿದ್ನಂತೆ. ಮಗ ಇಂಗ್ಲಿಷ್‌ನಲ್ಲಿ ಮಾತನಾಡೋದು ಕೇಳಿ ಆ ತಂದೆ ತಾಯಿ ಖುಷಿ ಪಡುತ್ತಿದ್ದರು. ಆದರೆ ಮಗ ಅವರನ್ನು ಮನೆಯಿಂದ ಹೊರಕ್ಕೆ ಹಾಕಲು ಯೋಚಿಸುತ್ತಿದ್ದ. ಈ ಎರಡೂ ಹೆಡ್ಡೇಕ್ ಆಗ್ಯಾವೆ ಅಂತಿದ್ದ ಮಗ. ಯಾರಿಗೆ? ತಂದೆ ತಾಯಿಗೆ.

ನೀನು ಭೂಮಿಗೆ ಬರಬೇಕಾದರೆ ನಿನಗೆ ಬ್ಲಡ್ ಕೊಟ್ಟಾರೆ, ನಿನ್ನ ಹೊಟ್ಟೆಗೆ ಬ್ರೆಡ್ ಕೊಟ್ಟಾರೆ, ನಿನಗೆ ಮಲಗಿಕೊಳ್ಳಲು ಬೆಡ್ ಕೊಟ್ಟಾರೆ, ಇರಾಕೆ ಶೆಡ್ ಕೊಟ್ಟಾರೆ, ವಿಚಾರ ಮಾಡಾಕೆ ಹೆಡ್ ಕೊಟ್ಟವರು ಹೆಡ್ಡೇಕ್ ಯಾವಾಗಾದ್ರು? ಅವರು ಇಷ್ಟೆಲ್ಲ ಕೊಡದಿದ್ದರೆ ನಿನಗೆ ಹೆಡ್ಡಾದರೂ ಎಲ್ಲಿ ಬರ್ತಿತ್ತು? ಇದನ್ನೆಲ್ಲ ವಿಚಾರ ಮಾಡಬೇಕಲ್ಲ ಮನುಷ್ಯ. ತಂದೆ ತಾಯಿ ತೀರಿಕೊಂಡ ಮೇಲೆ ವೈಭವದಿಂದ ಶ್ರಾದ್ಧ ಮಾಡ್ತಾರೆ. ಇದ್ದಾಗ ಸೇವೆ ಮಾಡೋದಿಲ್ಲ. ತಂದೆ ತಾಯಿಯ ದೊಡ್ಡ ಫೋಟೊ ಇಡತಾರ. ಹೂವು ಹಣ್ಣು ಎಲ್ಲಾ ತಂದಿಟ್ಟರ್ತಾರ. ತಂದೆ ತಾಯಿಗೆ ಏನೇನು ಪ್ರೀತಿ ಇತ್ತೋ ಆ ಆಹಾರವನ್ನೆಲ್ಲಾ ಮಾಡಿ ತಂದಿಟ್ಟಿರುತ್ತಾರೆ. ಸತ್ತು ಹೋದ ಮೇಲೆ ಶ್ರಾದ್ಧ ಮಾಡುವ ಮಕ್ಕಳಿಗಿಂತ ಇದ್ದಾಗ ಸೇವೆ ಮಾಡೋ ಮಕ್ಕಳು ಬಹಳ ಶ್ರೇಷ್ಠರಾಗುತ್ತಾರೆ.

ತಂದೆ ತಾಯಿ ನಮಗೆಲ್ಲಾ ಬದುಕು ಕೊಟ್ಟಾರೆ. ಅವರಿಗೆ ನಾವು ಬದುಕು ಕೊಡಲು ಸಾಧ್ಯವಿಲ್ಲ. ಆದರೆ ಅವರಿಗೆ ನಾವು ಏನು ಕೊಡಬಹುದು ಎಂದರೆ ತಂದೆ ತಾಯಿಗಳ ಮುಪ್ಪಿನ ಕಾಲಕ್ಕೆ ನಿಮ್ಮನ್ನು ನಾವು ಪ್ರೇಮದಿಂದ ಜೋಪಾನ ಮಾಡ್ತೇವಿ ಎಂದು ಭರವಸೆ ನೀಡಬಹುದು. ಹೀಗೆ ಮಾಡಿದರೆ ಅವರು ನಿಜವಾದ ಮಕ್ಕಳಾಗುತ್ತಾರೆ. ಕೂಡಿ ಬದುಕಬೇಕು. ನಾವು ದೇವರನ್ನು ಹುಡುಕಿಕೊಂಡು ಬದರಿ, ಕಾಶಿ, ಕೇದಾರ, ರಾಮೇಶ್ವರ ಎಲ್ಲ ಕಡೆ ಹೋಗ್ತೀವಿ. ಆದರೆ ಎಲ್ಲ ಪುಣ್ಯಕ್ಷೇತ್ರಗಳಿಗಿಂತ ನಮ್ಮ ತಂದೆತಾಯಿಗಳ ಪಾದ ಸನ್ನಿಧಿಯಲ್ಲಿಯೇ ದೇವರಿರುತ್ತಾನೆ ಎನ್ನುವುದನ್ನು ಮರೆಯಬಾರದು.

ಶಿಕ್ಷಣ ಎಂದರೆ ತಲೆ ತುಂಬೋದು, ಜೇಬು ತುಂಬೋದು ಅಷ್ಟೇ ಅಲ್ಲ. ಸದ್ಭಾವ ತುಂಬೋದು. ಒಳ್ಳೆಯ ಮಾತುಗಳನ್ನು ಆಡೋದು. ಒಳ್ಳೆಯ ಮಾತುಗಳನ್ನು ಆಡಲು ಆಗಲ್ಲ ಅಂದರೆ ಒಂದು ಸಣ್ಣ ನಗು ಅಷ್ಟೆ. ನಗಲು ಆಗಲ್ಲ ಅಂದ್ರೆ ಮನಸ್ಸಿನಲ್ಲಿಯೇ ಒಳ್ಳೆಯದು ಬಯಸಿ. ಅದೂ ಆಗಲ್ಲ ಅಂದ್ರೆ ಯಾರಿಗೂ ಕೆಟ್ಟದ್ದು ಬಯಸಬೇಡಿ. ಅದೇ ಸದ್ಭಾವನೆ. ಎದೆಯಲ್ಲಿ ಸತ್ಯ, ಸದ್ಭಾವ, ಸದ್ವಿಚಾರ, ಸದ್ವಚನ ಇದ್ದರೆ ಅದೇ ಸತ್ಯಯುಗ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಫೆಬ್ರುವರಿ 7, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ದಶಮಿ ಗಂ. 21-27 ನಕ್ಷತ್ರ: ರೋಹಿಣಿ ಗಂ. 18-40 ಯೋಗ: ಐಂದ್ರ ಗಂ. 16-17 ಕರಣ: ತೈತಿಲ ಗಂ. 10-08, ಮಕರ ಮಾಸದ 24ನೇ ದಿನ, ಮಳೆನಕ್ಷತ್ರ: ಧನಿಷ್ಠಾ 1.

ರಾಹುಕಾಲ: ಬೆಳಿಗ್ಗೆ 10-30 – 12-00

ಸೂರ್ಯೋದಯ: 06-59 **ಸೂರ್ಯಾಸ್ತ:** 06-30

ಮುಸ್ಲಿಂ ದಿನಾಂಕ: 08 ಶಬನ್

ಅದೃಷ್ಟ ಸಂಖ್ಯೆ: 8, 4

ಮೇಷ: ಈ ದಿನದ ಗ್ರಹಗಳ ಚಲನೆಯು ಸುಖಮಯವಾಗಿ ಜೀವನ ನಡೆಸಲು ಅನುಕೂಲಕರವಾಗಿದೆ. ವಿದ್ಯೆ ಮತ್ತು ಬುದ್ಧಿವಂತಿಕೆಯನ್ನು ಸರಿ ಮಾರ್ಗದಲ್ಲಿ ಬಳಸುವ ಬಗ್ಗೆ ತೀರ್ಮಾನಿಸಿ. ವಾಹನ ಚಾಲನೆಯಲ್ಲಿ ಜಾಗರೂಕರಾಗಿರಿ.

ವೃಷಭ: ಅತಿಯಾಗಿ ನಂಬಿಕೆ ಇಟ್ಟಿರುವ ವ್ಯಕ್ತಿಗಳಿಂದ ಅಥವಾ ನಿಮ್ಮವರಿಂದಲೇ ತೊಂದರೆಗಳು ಆಗಲಿವೆ. ಕುಟುಂಬದ ಜಟಿಲ ಸಮಸ್ಯೆಗಳು ಬಗೆಹರಿದು ಮನೆಯವರಿಗೆ ನೆಮ್ಮದಿ ಉಂಟಾಗುವುದು.

ಮಿಥುನ: ಆರ್ಥಿಕವಾಗಿ ಸಾಕಷ್ಟು ಸಂಪಾದನೆಯಾಗುವುದರಿಂದ ಅನಿವಾರ್ಯದ ಖರ್ಚಿಗೇನೂ ಯೋಚನೆ ಇರುವುದಿಲ್ಲ. ವಿದ್ಯಾರ್ಥಿಗಳಿಗೆ ಉತ್ತಮ ಮಿತ್ರವರ್ಗದವರ ಸಹವಾಸ ಅನುಕೂಲಕರವಾಗಿ ಕಂಡುಬರುವುದು.

ಕರ್ಕಾಟಕ: ಮನೆಯ ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ಥಿಕೆಯಲ್ಲಿಯೇ ಉತ್ತಮ ಸಂಬಂಧ ಕೂಡಿಬರುವುದು. ಮೀನುಗಾರರು ಉದ್ಯೋಗದಲ್ಲಿ ಹೆಚ್ಚಿನ ಜಾಗರೂಕತೆ ವಹಿಸಬೇಕಾಗುತ್ತದೆ.

ಸಿಂಹ: ಮನುಷ್ಯ ಪ್ರಯತ್ನದ ಜತೆಯಲ್ಲಿ ದೇವ ಬಲ ದೊರಕಿಸಿಕೊಂಡರೆ ಕನಸು ನನಸಾಗುವುದು. ಈ ದಿನ ಹಣ್ಣು-ತರಕಾರಿಗಳ ವ್ಯಾಪಾರಿಗಳಿಗೆ ಲಾಭಾಂಶ ವೃದ್ಧಿಯಾಗುತ್ತದೆ. ಮಕ್ಕಳ ವಿಚಾರದಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು ಉತ್ತಮ.

ಕನ್ಯಾ: ಮಿತ್ರರ ಭೇಟಿಯಿಂದ ಕೆಲವು ಅಚ್ಚರಿಯ ವಿಚಾರ ತಿಳಿಯುವುದು. ಕೌಟುಂಬಿಕವಾಗಿ ಮೂಡಿದ್ದ ಅನುಮಾನಗಳು ದೂರವಾಗಲಿವೆ. ಗೃಹ ಕೈಗಾರಿಕೆ ಕೆಲಸಗಳಲ್ಲಿ ಮನೆಯವರ ಪರಿಶ್ರಮ ಅನಿವಾರ್ಯವಾಗುತ್ತದೆ.

ತುಲಾ: ರಿಯಲ್ ಎಸ್ಟೇಟ್ ಕಸುಬುದಾರರು ಹೆಚ್ಚಿನ ಬಂಡವಾಳ ತೊಡಗಿಸುವುದು ಸಮಂಜಸವಲ್ಲ. ಸತ್ಕಾರ್ಯಗಳಿಂದಾಗಿ ಮನೆಯಲ್ಲಿ ಸಡಗರವಿರುವುದು. ಮಕ್ಕಳ ಮೊಮ್ಮಕ್ಕಳ ಭೇಟಿ ಮನಸ್ಸಿಗೆ ಸಂತಸ ತರುವುದು.

ವೃಶ್ಚಿಕ: ತಪ್ಪು ತಿಳಿವಳಿಕೆಯಿಂದಾಗಲೀ ಅಥವಾ ಅತಿಯಾದ ಆಸೆಯಿಂದಾಗಲೀ ಹಣವನ್ನು ಕಳೆದುಕೊಳ್ಳುವ ಸನ್ನಿವೇಶಗಳು ಎದುರಾಗಬಹುದು. ಹೊಸ ಮನೆ ಹುಡುಕಲು ಸರಿಯಾದ ಸಮಯ.

ಧನು: ಅತಿಯಾಗಿ ಪ್ರೀತಿಸುವ ಜನರೊಂದಿಗೆ ಕಾಲ ಕಳೆಯಲು ಈ ದಿನ ಸಕಾಲವಾಗಿದೆ. ಗಣ್ಯ ವ್ಯಕ್ತಿಗಳಿಗೆ ಸಮಾಜ ಮತ್ತು ರಾಜಕೀಯ ಕ್ಷೇತ್ರದಲ್ಲಿ ಉನ್ನತ ಸ್ಥಾನ-ಮಾನ ಹಾಗು ಗೌರವಗಳು ಲಭಿಸಲಿವೆ.

ಮಕರ: ಅತಿಯಾದ ಖರ್ಚು ಮಾಡುವ ಮನಸ್ಥಿತಿಯನ್ನು ಹೊಂದಿದವರಿಗೆ-ಹಣದ ಮೌಲ್ಯದ ಅರಿವಾಗುವುದು. ಯಂತ್ರೋಪಕರಣಗಳ ರಿಪೇರಿ ಮತ್ತು ಮಾರಾಟದಿಂದ ಮತ್ತು ಪಶು ಸಂಗೋಪನೆಯಿಂದ ಲಾಭ ಇರುವುದು.

ಕುಂಭ: ಬಹುಕಾಲದಿಂದ ಅನುಭವಿಸುತ್ತಿರುವ ರೋಗಬಾಧೆಯು ಹಂತ ಹಂತವಾಗಿ ಚೇತರಿಕೆಯ ಮೆಟ್ಟಿಲನ್ನು ನೋಡಲಿದೆ. ನೂತನ ಮನೋಭಿಲಾಷೆ, ಯೋಚನೆಗಳು ಖರ್ಚಿಗೆ ದಾರಿಯಾದರೂ ಉಪಕಾರಿಯಾಗಿರುತ್ತವೆ.

ಮೀನ: ಸಮಯ ಮತ್ತು ಅನುಕೂಲತೆಯ ಮೇಲೆ ಹೊಸ ಕೆಲಸಗಳನ್ನು ಒಪ್ಪಿಕೊಳ್ಳಬಹುದು. ಆರೋಗ್ಯದ ಬಗ್ಗೆ ನಿಗಾವಹಿಸುವುದು ಅಗತ್ಯ. ಸಿದ್ಧ ಉಡುಪುಗಳ ವ್ಯಾಪಾರದಿಂದ ಹೇರಳ ಲಾಭ ಹೊಂದುವಿರಿ.

ಪದಬಂಧ 5946

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪ್ರಾಚೀನ ಕಾಲದ ವಿದ್ಯಾಭ್ಯಾಸ ಕೇಂದ್ರ (4)
3.ಅಡುಗೆ ಮಾಡುವವನು (4)
5.ಪೊರಕೆ ಇಲ್ಲಿದೆ (3)
6.ಭ್ರಮೆಯನ್ನು ಹೀಗೂ ಹೇಳುವರು (4)
7.ಕನ್ನಡಿಗನು ನೀಡಿದ ಇನ್‌ಕಮ್ ಟ್ಯಾಕ್ಸ್! (7)
10.ವೇದಾದಿಗಳನ್ನು ಅಧ್ಯಯನ ಮಾಡಿದವನು (4)
11.ವಿಶೇಷವಾದ ಜ್ಞಾನ (3)
14.ಲಕ್ಷಿಸಲು ಯೋಗ್ಯವಾದುದು (4)
15.ಉಗುಳುವ ಪಾತ್ರೆ (4)

ಮೇಲಿಂದ ಕೆಳಕ್ಕೆ

1.ಪ್ಲೀಹ ಕೋಶ ಇಲ್ಲಿದೆ (2)
2.ವರ ಪಡೆದುಕೊಂಡಿರುವ ಮಗ (3)
4.ವಿಷ್ಣುವಿನ ವಾಹನ (3)
5.ದೇವರ ಹೆಸರಲ್ಲಿ ಬಿಟ್ಟ ಗೂಳಿ (3)
6.ಹಣ ನೀಡಿ ತಂದಿರುವ ಸೊಡರು (3)
8.ಮಾವನಿಗೆದುರು ಬಂದಿರುವ ಸ್ತ್ರೀ (3)
9.ಉಲ್ಟಾ ನಡೆಯುವಿಕೆ (3)
10.ಅಂಗ ಹೀನ ವ್ಯಕ್ತಿ (3)
12.ಪಕ ಪಕ ನಕ್ಕಾಗ ಬಂದ ನೆನಪು (3)
13.ಬಳಲಿಕೆ ಅಥವಾ ರೋಗ ಎಂದರೂ ಸರಿ (2)



5945ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಿಂಹಾಸನ 3.ಬಾಕಿದಾರ
5.ಮಸುಕು 7.ರಜಾಯಿ
9.ಹೂರಣ 11.ಅಮರ್ಷ
12.ಕಟುಕ 13.ಹೊಳಪು
15.ಕವನ 17.ಕಡುಜಾಣ
18. ತರಕಾರಿ

ಮೇಲಿಂದ ಕೆಳಕ್ಕೆ:
1.ಸಿಂಗಾರ 2.ನಮ
3.ಬಾಕು 4.ರಪಣ
6.ಸುವರ್ಣಮಹೋತ್ಸವ
8.ಜಾಲರಿಸೌಟು 10.ರಕ್ಷಣಾದಳ
12.ಕನಕ 14.ಪುಧಾರಿ
15.ಕಣ 16.ನತ

ಸುಡೊಕು 6331

			3		8		2	
8		6				5		
	5		4		6		7	
			1		2		4	
		9		3				
6			8		9	2		5
	8		6		1		9	
7		2		8		3		1
	6		2		3		5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6330 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,696
ಇಂದಿನ ಅಂತ್ಯ	23,603
▼	92
ದಿನದ ಕನಿಷ್ಠ	23,556

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹495
12 ಕ್ಕೆ	₹66
ಮೈಸೂರು	
100ಕ್ಕೆ	₹497

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹433-672

ದ್ವಿತಳಿ (ಬಿ.ವಿ) ₹258-977

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹188

ಆರ್‌ಎಸ್‌ಎಸ್-5 ₹183

ಗುಡ್ ಲಾಟ್ ₹178

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹27250
ಎಸಿ	₹14700
ಆರ್‌ಪಿ	₹23500
ಆರ್‌ಸಿ	₹12720

'ಹೊಸ ಮಸೂದೆ: ತೆರಿಗೆ ಹೊರೆ ಇಲ್ಲ'

ನವದೆಹಲಿ (ಪಿಟಿಐ): 'ಮುಂದಿನ ವಾರ ಸಂಸತ್ ಅಧಿವೇಶನದಲ್ಲಿ ಮಂಡನೆಯಾಗಲಿರುವ ಹೊಸ ಆದಾಯ ತೆರಿಗೆ ಮಸೂದೆಯಲ್ಲಿ ದೀರ್ಘ ವಾಕ್ಯಗಳು ಇರುವುದಿಲ್ಲ. ತೆರಿಗೆದಾರರಿಗೆ ಸುಲಭವಾಗಿ ಅರ್ಥವಾಗುವಂತೆ ಸರಳ ವಿವರಣೆ ಇರಲಿದೆ' ಎಂದು ಕೇಂದ್ರ ಹಣಕಾಸು ಕಾರ್ಯದರ್ಶಿ ತುಹಿನ್ ಕಾಂತಾ ಪಾಂಡೆ ಹೇಳಿದ್ದಾರೆ.

ಖಾಸಗಿ ಕಾರ್ಯಕ್ರಮದಲ್ಲಿ ಗುರುವಾರ ಮಾತನಾಡಿದ ಅವರು, ಮಸೂದೆಯಲ್ಲಿ ತೆರಿಗೆಯ ಷರತ್ತು, ವಿವರಣೆಯು ಸರಳ ಭಾಷೆಯಲ್ಲಿ ಇರಲಿದೆ. ಈ ಮಸೂದೆ ಮೂಲಕ ಜನಸಾಮಾನ್ಯರ ಮೇಲೆ ಹೊಸದಾಗಿ ತೆರಿಗೆ ವಿಧಿಸುವುದಿಲ್ಲ ಅಥವಾ ತೆರಿಗೆ ಹೊರೆ ಹೇರುವುದಿಲ್ಲ. ಅಭದ್ರ ಸ್ಥಿತಿ ಸೃಷ್ಟಿಸುವ ಉದ್ದೇಶವೂ ಸರ್ಕಾರಕ್ಕಿಲ್ಲ' ಎಂದು ಸ್ಪಷ್ಟಪಡಿಸಿದರು.

ಆರು ದಶಕದಷ್ಟು ಹಳೆಯದಾದ ಆದಾಯ ತೆರಿಗೆ ಕಾಯ್ದೆಯ ಬದಲಾವಣೆಗೆ ಸರ್ಕಾರ ಮುಂದಾಗಿದೆ. ಶುಕ್ರವಾರ ನಡೆಯಲಿರುವ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಹೊಸ ಮಸೂದೆಯು ಚರ್ಚೆಗೆ ಬರುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಸಿಪ್ಪೆಗೋಟು	8599-16910	ಶಿರಸಿ	
ಕೋಕ	20000-27500	ಶಿವಮೊಗ್ಗ		ಬೆಟ್ಟೆ	27899-42011
ಹೊಸತು	30000-36000	ಬೆಟ್ಟೆ	42109-57700	ಬಿಳಿಗೋಟು	15299-29808
ಹಳತು	45500-49500	ಗೊರಬಲು	18069-27699	ಚಾಲಿ	35108-39458
ಕುಮಟ		ರಾಶಿ	33399-51699	ಕೆಂಪುಗೋಟು	15099-23208
ಹೊಸಚಾಲಿ	23669-32399	ಸರಕು	52799-89896	ರಾಶಿ	42008-46408
ಚಾಲಿ	32519-37099	ಸಿದ್ದಾಪುರ		ಯಲ್ಲಾಪುರ	
ಚಿಪ್ಪು	15099-26299	ಬಿಳಿಗೋಟು	21899-24249	ಅಪಿ	67369-72619
ಕೋಕ	5100-21501	ಚಾಲಿ	32389-37699	ಬಿಳಿಗೋಟು	11899-27690
ಸಾಗರ		ಕೋಕ	13309-16319	ಚಾಲಿ	27919-38699
ಬಿಳಿಗೋಟು	7069-23832	ಹೊಸಚಾಲಿ	21609-29099	ಕೋಕ	3809-14299
ಚಾಲಿ	23699-34201	ಕೆಂಪುಗೋಟು	20619-29099	ಕೆಂಪುಗೋಟು	12699-26899
ಕೋಕ	6899-17599	ರಾಶಿ	41099-47899	ರಾಶಿ	40119-66099
ಕೆಂಪುಗೋಟು	12899-26300	ತಟ್ಟಿಬೆಟ್ಟೆ	27309-45699	ತಟ್ಟಿಬೆಟ್ಟೆ	27509-39689
ರಾಶಿ	22999-51799				

ಅಮೆರಿಕ: ಹೊಸ ಬಗೆಯ ಹಕ್ಕಿಜ್ವರ ಪತ್ತೆ

ಕಾರ್ಸನ್ ಸಿಟಿ (ಎಪಿ): ಅಮೆರಿಕದ ನೆವಾಡದ ಜಾನುವಾರುಗಳಲ್ಲಿ ಹೊಸ ಬಗೆಯ ಹಕ್ಕಿಜ್ವರ ಪತ್ತೆಯಾಗಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

'ಸೋಂಕಿಗೆ ಕಾರಣವಾಗಿರುವ ಟೈಪ್ ಎ ಎಚ್‌5ಎನ್‌1 ವೈರಸ್‌ನ ವಿಭಿನ್ನ ರೂಪಗಳು ಕಾಡುಪಕ್ಷಿ ಗಳಿಂದ ಜಾನುವಾರುಗಳಿಗೆ ತಗುಲಿದೆ ಎಂದು ಮಾಹಿತಿ ನೀಡಿದ್ದಾರೆ.

ಮುನ್ನೆಚ್ಚರಿಕೆ ಕ್ರಮವಾಗಿ ನೆವಾಡದ ಜಾನುವಾರುಗಳಿಂದ ಹಾಲಿನ ಮಾದರಿಯನ್ನು ಸಂಗ್ರಹಿಸಿ ಪರೀಕ್ಷಿಸಲಾಗಿತ್ತು. ಅದರಲ್ಲಿ ಡಿ1.1 ಮಾದರಿಯ ಹಕ್ಕಿಜ್ವರದ ಸೋಂಕು ಪತ್ತೆಯಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಅಮೆರಿಕದಲ್ಲಿ ಕನಿಷ್ಠ 67 ಜನರು ಹಕ್ಕಿಜ್ವರದ ಸೋಂಕಿಗೆ ಒಳಗಾಗಿದ್ದು, ಅವರಲ್ಲಿ ಹೆಚ್ಚಿನವರು ಜಾನುವಾರುಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವವರು' ಎಂದು ಅಮೆರಿಕದ ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರ ತಿಳಿಸಿದೆ.

ಶೀಘ್ರ ಕೇಂದ್ರ ಸಚಿವ ಸಂಪುಟದ ಒಪ್ಪಿಗೆ ನಿರೀಕ್ಷೆ: 1 ಕೋಟಿ ಮಂದಿಗೆ ಸೌಲಭ್ಯ

ಗಿಗ್ ಕಾರ್ಮಿಕರಿಗೆ ಪಿಂಚಣಿ

ನವದೆಹಲಿ (ಪಿಟಿಐ): ಆನ್‌ಲೈನ್ ವೇದಿಕೆಗಳಲ್ಲಿ ದುಡಿಯುತ್ತಿರುವ ಗಿಗ್ ಕೆಲಸಗಾರರ ಸಂಖ್ಯೆ ಒಂದು ಕೋಟಿಯಷ್ಟಿದೆ. ಇವರಿಗೆ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಸೌಲಭ್ಯ ಕಲ್ಪಿಸಲು ಕೇಂದ್ರ ಕಾರ್ಮಿಕ ಸಚಿವಾಲಯ ನಿರ್ಧರಿಸಿದೆ. ಶೀಘ್ರವೇ, ಇದಕ್ಕೆ ಕೇಂದ್ರ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡುವ ನಿರೀಕ್ಷೆಯಿದೆ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ಗಿಗ್ ಕೆಲಸಗಾರರನ್ನು ರಾಷ್ಟ್ರೀಯ ಪಿಂಚಣಿ ಯೋಜನೆಯಡಿ ಸೇರ್ಪಡೆಗೊಳಿಸುವಂತೆ ಎರಡು ವರ್ಷದ ಹಿಂದೆಯೇ ಸರ್ಕಾರಕ್ಕೆ ಶಿಫಾರಸು ಮಾಡಿತ್ತು.

2025–26ನೇ ಸಾಲಿನ ಬಜೆಟ್‌ನಲ್ಲಿಯೂ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಈ ಕೆಲಸಗಾರರಿಗೆ ಸಾಮಾಜಿಕ ಭದ್ರತೆ ಒದಗಿಸುವ ಕುರಿತು ಪ್ರಕಟಿಸಿದ್ದಾರೆ.

ಗುರುತಿನ ಚೀಟಿ, ಇ-ಶ್ರಮ್ ಪೋರ್ಟಲ್‌ನಡಿ ನೋಂದಣಿಗೆ ಅವಕಾಶ ಕಲ್ಪಿಸುವ ಜೊತೆಗೆ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯಡಿ ಆರೋಗ್ಯ ಸೇವೆ ಒದಗಿಸುವ ಬಗ್ಗೆಯೂ ಭರವಸೆ ನೀಡಿದ್ದಾರೆ.

ಈ ನಿರ್ಧಾರದಿಂದ ಸರ್ಕಾರದ ಅಂಗಸಂಸ್ಥೆಗಳ ಅಡಿ ಅನುಷ್ಠಾನಗೊಂಡಿರುವ ಸಾಮಾಜಿಕ ಕಲ್ಯಾಣ ಯೋಜನೆಯಲ್ಲಿ ಗಿಗ್ ಕೆಲಸಗಾರರಿಗೆ ಸೌಲಭ್ಯ ಪಡೆಯಲು ಅನುಕೂಲವಾಗಲಿದೆ ಎಂದು ಮೂಲಗಳು ಹೇಳಿವೆ.

ದೇಶದ ಹಲವು ಆನ್‌ಲೈನ್ ವೇದಿಕೆಗಳಲ್ಲಿ ಲಕ್ಷಾಂತರ ಕೆಲಸಗಾರರು ದುಡಿಯುತ್ತಿದ್ದಾರೆ. ಪ್ರಸ್ತುತ ಪ್ರತಿ ವಹಿವಾಟಿಗೂ ಜಿಎಸ್‌ಟಿ ಸಂಗ್ರಹಿಸಲಾಗುತ್ತಿದೆ. ಇದೇ ಮಾದರಿಯಲ್ಲಿಯೇ ಪಿಂಚಣಿ ನಿಧಿಗೆ ಕೆಲಸಗಾರರ ಪಾಲಿನ ಮೊತ್ತವನ್ನು ಕಡಿತಗೊಳಿಸುವ ಬಗ್ಗೆ ಕಾರ್ಮಿಕ ಸಚಿವಾಲಯವು ಕ್ರಮಕೈಗೊಳ್ಳುವ ಸಾಧ್ಯತೆಯಿದೆ ಎಂದು ತಿಳಿಸಿವೆ.

ದೇಶದ ಅಸಂಘಟಿತ ವಲಯದಲ್ಲಿ ದುಡಿಯುವ ಕಾರ್ಮಿಕರಿಗೆ ಅನುಕೂಲ ಕಲ್ಪಿಸಲು ಸರ್ಕಾರವು 2021ರ ಆಗಸ್ಟ್‌ನಲ್ಲಿ ಇ-ಶ್ರಮ್ ಪೋರ್ಟಲ್ ರೂಪಿಸಿದೆ. ಇದರಡಿ ನೋಂದಣಿಯಾಗಿರುವ ಕಾರ್ಮಿಕರಿಗೆ ಸಾರ್ವತ್ರಿಕ ಖಾತೆ ಸಂಖ್ಯೆ (ಯುಎಎನ್) ನೀಡಿದೆ.

ಎರಡು ಆಯ್ಕೆಗೆ ಅವಕಾಶ

ಕೆಲಸಗಾರರಿಗೆ ಪಿಂಚಣಿ ಯೋಜನೆಯಡಿ ಎರಡು ಆಯ್ಕೆಗಳನ್ನು ನೀಡುವ ಸಾಧ್ಯತೆಯಿದೆ. ಕೆಲಸಗಾರನ ನಿವೃತ್ತಿ ವಯಸ್ಸಿಗೆ ನಿರ್ದಿಷ್ಟ ಮೊತ್ತದ ಪಿಂಚಣಿ ನೀಡುವುದು ಇದರಲ್ಲಿ ಒಂದಾಗಿದೆ.

ಗಿಗ್ ಕೆಲಸಗಾರನಿಗೆ ತನ್ನ ಠೇವಣಿ ಮೊತ್ತದ ಮೇಲಿನ ಬಡ್ಡಿಯನ್ನು ಪಿಂಚಣಿ ರೂಪದಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗುತ್ತದೆ ಅಥವಾ ಸಂಗ್ರಹವಾದ ಹಣವನ್ನು ನಿಗದಿತ ಅವಧಿವರೆಗೆ ಸಮಾನ ಕಂತುಗಳಾಗಿ ವಿಂಗಡಿಸಿ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಸಾಮಾಜಿಕ ಭದ್ರತಾ ಯೋಜನೆಗೆ ಗಿಗ್ ಕೆಲಸಗಾರ ತನ್ನ ಪಾಲಿನ ಕೊಡುಗೆ ನೀಡಲು ಎಷ್ಟು ಆದಾಯ ಹೊಂದಿರಬೇಕು ಎಂಬುದನ್ನು ಇನ್ನೂ ನಿರ್ಧರಿಸಿಲ್ಲ ಎಂದು ಹೇಳಿವೆ. ಕೆಲಸಗಾರರು ಏಕಕಾಲಕ್ಕೆ ಎರಡು ಆನ್‌ಲೈನ್ ವೇದಿಕೆಗಳಲ್ಲಿ ಕೆಲಸ ಮಾಡಬಹುದಾಗಿದೆ ಎಂದು ತಿಳಿಸಿವೆ.

ಯಾರಿಗೆ ಸವಲತ್ತು ಲಭ್ಯ?

2020ರ ಸಾಮಾಜಿಕ ಭದ್ರತಾ ಸಂಹಿತೆ ಪ್ರಕಾರ ಕಂಪನಿಗಳಿಗೆ ಗುತ್ತಿಗೆ ಆಧಾರದಲ್ಲಿ ಬೇಡಿಕೆ ಆಧರಿಸಿ ದುಡಿಯುವವರನ್ನು ಗಿಗ್ ಕೆಲಸಗಾರರು ಎಂದು ಕರೆಯಲಾಗುತ್ತದೆ.

ಮನೆಗಳಿಗೆ ಆಹಾರ ಪದಾರ್ಥಗಳನ್ನು ತಲುಪಿಸುವ ಹಾಗೂ ಕ್ಯಾಬ್ ಸೇವೆ ಒದಗಿಸುವ ಕಂಪನಿಗಳ ಜೊತೆಗೆ ಕೆಲಸ ಮಾಡುವವರು ಈ ವರ್ಗಕ್ಕೆ ಸೇರುತ್ತಾರೆ. ಉಬರ್, ಓಲಾ, ಸ್ವಿಗ್ಗಿ, ಜೊಮಾಟೊ ಸೇರಿ ವಿವಿಧ ಆನ್‌ಲೈನ್ ವೇದಿಕೆಗಳಲ್ಲಿ ದುಡಿಯುವವರು ಗಿಗ್ ಕೆಲಸಗಾರರಾಗಿದ್ದಾರೆ.

ಸುದ್ದಿ 2 ನಿಮಿಷ

ಎಸ್‌ಬಿಐಗೆ ₹16,891 ಕೋಟಿ ಲಾಭ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ), 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹16,891 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹9,164 ಕೋಟಿ ಲಾಭ ಗಳಿಸಲಾಗಿತ್ತು. ಈ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 84ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್, ಗುರುವಾರ ಷೇರುಪೇಟೆಗೆ ತಿಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹1.18 ಲಕ್ಷ ಕೋಟಿ ವರಮಾನ ಗಳಿಸಿತ್ತು. ಈ ಬಾರಿ ₹1.28 ಲಕ್ಷ ಕೋಟಿ ಗಳಿಸಿದೆ. ಬಡ್ಡಿ ವರಮಾನದಿಂದ ₹1.17 ಲಕ್ಷ ಕೋಟಿ ಸಂಗ್ರಹವಾಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 2.42ರಿಂದ ಶೇ 2.07ಕ್ಕೆ ತಗ್ಗಿದೆ. ನಿವ್ವಳ ಎನ್‌ಪಿಎ ಶೇ 0.64ರಿಂದ ಶೇ 0.53ಕ್ಕೆ ಇಳಿಕೆಯಾಗಿದೆ.

ಎಸ್‌ಬಿಐ ಸಮೂಹದ ನಿವ್ವಳ ಲಾಭದಲ್ಲಿ ಶೇ 70ರಷ್ಟು ಏರಿಕೆಯಾಗಿದೆ. ಒಟ್ಟು ₹18,853 ಕೋಟಿ ಗಳಿಸಿದೆ.

2ನೇ ದಿನವೂ ಷೇರುಪೇಟೆ ಕುಸಿತ

ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಹೊರಹರಿವಿನ ಹೆಚ್ಚಳದಿಂದಾಗಿ ದೇಶದ ಷೇರುಪೇಟೆಯಲ್ಲಿ ಸತತ ಎರಡನೇ ದಿನವಾದ ಗುರುವಾರ ಕೂಡ ಸೂಚ್ಯಂಕಗಳು ಇಳಿಕೆಯಾಗಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 213 ಅಂಶ ಇಳಿಕೆಯಾಗಿ, 78,058 ಅಂಶಗಳಲ್ಲಿ ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 92 ಅಂಶ ಇಳಿಕೆ ಕಂಡು 23,603 ಅಂಶಗಳಲ್ಲಿ ಸ್ಥಿರಗೊಂಡಿತು.

ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರ ಕಡಿತಕ್ಕೆ ಸಂಬಂಧಿಸಿದಂತೆ ಯಾವ ನಿರ್ಧಾರ ತಳೆಯಲಿದೆ ಎಂಬುದನ್ನು ಹೂಡಿಕೆದಾರರು ಜಾಗರೂಕವಾಗಿ ಅವಲೋಕಿಸುತ್ತಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಭಾರ್ತಿ ಏರ್‌ಟೆಲ್, ಟೈಟನ್, ಎನ್‌ಟಿಪಿಸಿ, ಎಸ್‌ಬಿಐ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಬುಧವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹1,682 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇಪಿಎಫ್‌ಒ ಕ್ಲೇಮು ಅರ್ಜಿ ವಿಲೇವಾರಿ ದಾಖಲೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ಇಲ್ಲಿಯವರೆಗೆ ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ತನ್ನ ಚಂದಾದಾರರ 5 ಕೋಟಿ ಕ್ಲೇಮು ಅರ್ಜಿಗಳನ್ನು ವಿಲೇವಾರಿ ಮಾಡಿರುವುದು ದಾಖಲಾಗಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಗುರುವಾರ ತಿಳಿಸಿದ್ದಾರೆ.

ಚಂದಾದಾರರಿಗೆ ಒಟ್ಟು ₹2.05 ಲಕ್ಷ ಕೋಟಿ ಪಾವತಿಸಲಾಗಿದೆ ಎಂದು ಹೇಳಿದ್ದಾರೆ.

2023–24ರಲ್ಲಿ ಒಟ್ಟು 4.45 ಕೋಟಿ ಕ್ಲೇಮು ಅರ್ಜಿಗಳನ್ನು ವಿಲೇವಾರಿ ಮಾಡುವ ಮೂಲಕ ಚಂದಾದಾರರ ಬ್ಯಾಂಕ್ ಖಾತೆಗಳಿಗೆ ₹1.82 ಲಕ್ಷ ಕೋಟಿ ಮೊತ್ತವನ್ನು ಪಾವತಿಸಲಾಗಿತ್ತು ಎಂದು ತಿಳಿಸಿದ್ದಾರೆ.

ಚಂದಾದಾರರ ಕುಂದುಕೊರತೆ ಪರಿಹರಿಸಲು ಒತ್ತು ನೀಡಲಾಗಿದೆ. ಆನ್‌ಲೈನ್ ಮೂಲಕ ತ್ವರಿತವಾಗಿ ಕ್ಲೇಮು ಅರ್ಜಿಗಳ ಇತ್ಯರ್ಥಕ್ಕೆ ಕ್ರಮವಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಇಂಡಿಗೊಗೆ ದಂಡ

ಮುಂಬೈ (ಪಿಟಿಐ): ಇಂಡಿಗೊ ವಿಮಾನಯಾನ ಕಂಪನಿಗೆ ಸರಕು ಮತ್ತು ಸೇವಾ ತೆರಿಗೆ ಇಲಾಖೆಯು, ₹115.86 ಕೋಟಿ ದಂಡ ವಿಧಿಸಿದೆ.

ಸಾಗರೋತ್ತರ ಸೇವೆಗೆ ಜಿಎಸ್‌ಟಿ ಪಾವತಿಯಲ್ಲಿನ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ₹113.02 ಕೋಟಿ ದಂಡ ವಿಧಿಸಲಾಗಿದೆ. 2017–18ರಿಂದ 2019–20ನೇ ಆರ್ಥಿಕ ಸಾಲಿನವರೆಗೆ ₹2.84 ಕೋಟಿ ಹೂಡುವಳಿ ತೆರಿಗೆ ಜಮೆಯನ್ನು (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ನಿರಾಕರಿಸಲಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ತಿಳಿಸಿದೆ.

ದಂಡದ ಬಗ್ಗೆ ಜಿಎಸ್‌ಟಿ ಮೇಲ್ಮನವಿ ಕಾನೂನು ನ್ಯಾಯ ಮಂಡಳಿಯಲ್ಲಿ ಪ್ರಶ್ನಿಸಲಾಗುವುದು. ಕಂಪನಿಯ ಕಾರ್ಯಾಚರಣೆ ಮೇಲೆ ಈ ನೋಟಿಸ್ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಕಂಪನಿ ಹೇಳಿದೆ.

ಚಿನ್ನದ ದರ ನಾಗಾಲೋಟ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲೂ ಚಿನ್ನದ ದರ ಏರಿಕೆಯಾಗಿದೆ.

ದೇಶೀಯ ಆಭರಣ ತಯಾರಕರಿಂದ ಹೆಚ್ಚಿದ ಬೇಡಿಕೆಯಿಂದಾಗಿ ಧಾರಣೆ ಏರಿಕೆಯ ಹಾದಿ ಹಿಡಿದಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹270 ಹೆಚ್ಚಳವಾಗಿ, ₹86,070ಕ್ಕೆ ಮಾರಾಟವಾಗಿದೆ. ಇದು ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹85,670ಕ್ಕೆ ಆಗಿದೆ. ಪ್ರಸಕ್ತ ವರ್ಷದ ಆರಂಭದಿಂದ ಇಲ್ಲಿಯವರೆಗೆ ಚಿನ್ನದ ದರ ₹6,680 ಏರಿಕೆಯಾಗಿದೆ.

ಬೆಳ್ಳಿ ಧಾರಣೆ ಸ್ಥಿರವಾಗಿದ್ದು, ಕೆ.ಜಿಗೆ ₹96,500 ಇದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ರೂಪಾಯಿ ಮೌಲ್ಯ 16 ಪೈಸೆ ಇಳಿಕೆ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಗುರುವಾರ ಕೂಡ ರೂಪಾಯಿ ಮೌಲ್ಯ 16 ಪೈಸೆ ಇಳಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹87.59 ಆಗಿದೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರದಲ್ಲಿ ಕಡಿತಗೊಳಿಸುವ ಸಾಧ್ಯತೆಯಿದೆ. ದೇಶೀಯ ಷೇರುಪೇಟೆಯು ಇಳಿಕೆಯಾಗಿದೆ. ಆಮದುದಾರರು ಡಾಲರ್ ಖರೀದಿಗೆ ಹೆಚ್ಚು ಆಸಕ್ತಿ ತೋರಿದ್ದಾರೆ. ಈ ಬೆಳವಣಿಗೆಗಳಿಂದ ರೂಪಾಯಿ ಒತ್ತಡಕ್ಕೆ ಸಿಲುಕಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಅಮೆರಿಕದ ಸುಂಕ ನೀತಿಯ ಅನಿಶ್ಚಿತತೆಯು ಜಾಗತಿಕ ಮಾರುಕಟ್ಟೆ ಮೇಲೆ ಪರಿಣಾಮ ಬೀರಲಿದ್ದು, ರೂಪಾಯಿ ಮೌಲ್ಯ ಮತ್ತಷ್ಟು ಏರಿಳಿತ ಕಾಣುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14000-14000
ತಿಪಟೂರು	₹14000-14720

ವಿನಿಮಯ ದರ

$ ಡಾಲರ್	87.59
£ ಪೌಂಡ್	109.46
€ ಯುರೊ	91.00
¥ ಯೆನ್ (100ಕ್ಕೆ)	58

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1270 (1275)
ಸೂರ್ಯಕಾಂತಿ (ರಿಫೈನ್ಡ್)	₹1360 (1365)
ಪಾಮೋಲಿನ್	₹1310 (1320)

ಪದಚ್ಯುತ ಪ್ರಧಾನಿ ಶೇಖ್ ಹಸೀನಾ ತಂದೆಯ ಮನೆ ಧ್ವಂಸ

ಬಾಂಗ್ಲಾ: ಮತ್ತೆ ಹಿಂಸಾಚಾರ

ಢಾಕಾ(ಎಎಫ್‌ಪಿ): ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ತಂದೆ ಶೇಖ್ ಮುಜಿಬುರ್ ರೆಹಮಾನ್ ಅವರ ನಿವಾಸವನ್ನು ಪ್ರತಿಭಟನಕಾರರು ಗುರುವಾರ ಧ್ವಂಸಗೊಳಿಸಿದ್ದಾರೆ.

ಈ ಕಟ್ಟಡವನ್ನು ವಸ್ತು ಸಂಗ್ರಹಾಲಯವನ್ನಾಗಿ ಮಾಡಲಾಗಿತ್ತು.

ಶೇಖ್ ಹಸೀನಾ ಅವರು ಫೇಸ್‌ಬುಕ್ ಮೂಲಕ ಬುಧವಾರ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಇದನ್ನು ಪ್ರತಿಭಟಿಸಿ, ತಾರತಮ್ಯ ವಿರೋಧಿ ವಿದ್ಯಾರ್ಥಿಗಳ ಚಳವಳಿ (ಎಡಿಎಸ್‌ಎಂ) ಸಂಚಾಲಕ ಹಸ್ನತ್ ಅಬ್ದುಲ್ಲಾ ಅವರು ಪ್ರತಿಭಟನೆಗೆ ಕರೆ ನೀಡಿದ್ದರು.

ತಕ್ಷಣವೇ, ಸುತ್ತಿಗೆಗಳೊಂದಿಗೆ 'ಧನ್‌ಮಂಡಿ' ಪ್ರದೇಶದಲ್ಲಿರುವ ಮುಜಿಬುರ್ ರೆಹಮಾನ್ ಅವರ ನಿವಾಸದತ್ತ ಸಾವಿರಾರು ಸಂಖ್ಯೆಯಲ್ಲಿ ನುಗ್ಗಿದ ಪ್ರತಿಭಟನಕಾರರು, ಧ್ವಂಸಗೊಳಿಸಲು ಮುಂದಾದರು. ಮನೆಯೊಳಗೆ ನುಗ್ಗಿ ರೆಹಮಾನ್ ಕಲಾಕೃತಿಗಳನ್ನು ನಾಶಗೊಳಿಸಿದರು.

ಬಳಿಕ ಬುಲ್ಡೋಜರ್‌ನಿಂದ ಮನೆಯನ್ನು ಕೆಡವಿಹಾಕುವ ಕೆಲಸ ಆರಂಭಿಸಿದರು. ಭಾರಿ ಯಂತ್ರಗಳನ್ನು ಬಳಸಿಕೊಂಡು, ಗುರುವಾರವೂ ಮನೆಯನ್ನು ನಾಶಮಾಡುವ ಕಾರ್ಯ ನಡೆಯಿತು.

ಮನೆ ಧ್ವಂಸಗೊಳಿಸಿದ ಬಳಿಕ, 'ದೆಹಲಿ ಅಥವಾ ಢಾಕಾ'... ಢಾಕಾ, ಢಾಕಾ, ಢಾಕಾ.. ಮುಜಿಬಿಸಂ ಕೊನೆಯಾಗಿದೆ' ಎಂದು ಪ್ರತಿಭಟನಕಾರರು ಘೋಷಣೆ ಕೂಗಿದರು.

ಹಸೀನಾ ಆಕ್ರೋಶ:

ತಂದೆಯ ಮನೆಯನ್ನು ಧ್ವಂಸಗೊಳಿಸಿದ ಬೆನ್ನಲ್ಲೇ, ಪಕ್ಷದ ವಿದ್ಯಾರ್ಥಿ ಘಟಕ 'ಛಾತ್ರಾ ಲೀಗ್' ಉದ್ದೇಶಿಸಿ ಶಾಂತವಾಗಿ ಮಾತನಾಡಿದ ಶೇಖ್ ಹಸೀನಾ, 'ಈಗಿನ ಸರ್ಕಾರದ ವಿರುದ್ಧ ಪ್ರತಿರೋಧ ವ್ಯಕ್ತಪಡಿಸಬೇಕು' ಎಂದು ಕರೆ ನೀಡಿದರು.

ಧ್ವಂಸಗೊಂಡ ಮನೆ —ಎಎಫ್‌ಪಿ ಚಿತ್ರ

ಯಾರು ಯಾರ ಮನೆಗಳು ಧ್ವಂಸ:

- ಶೇಖ್ ಹಸೀನಾ ಅವರ ನಿವಾಸ 'ಸುಧಾ ಸದನ್'
- ಹಸೀನಾ ಅವರ ಸಂಬಂಧಿಗಳಾದ ಶೇಕ್ ಹೆಲಾಲ್ ಉದ್ದೀನ್ ಹಾಗೂ ಶೇಕ್ ಸಲಾವುದ್ದೀನ್ ಜುವೆಲ್ ನಿವಾಸಗಳು
- ಢಾಕಾದ ಮಾಜಿ ಮೇಯರ್ ಸೆರ್ನಿಯಾಬತ್ ಸಾದಿಕ್ ಅಬ್ದುಲ್ಲಾ ನಿವಾಸ
- ಅವಾಮಿ ಲೀಗ್‌ನ ಜಂಟಿ ಕಾರ್ಯದರ್ಶಿಗಳಾದ ಮಹ್‌ಬುದುಲ್ ಆಲಂ ಹನೀಫ್, ಕುಸ್ತಿಯಾ ಅವಾಮಿ ಲೀಗ್‌ನ ಅಧ್ಯಕ್ಷ ಸಾದರ್ ಖಾನ್ ನಿವಾಸಗಳು

ಭಾವಚಿತ್ರಗಳಿಗೂ ಹಾನಿ: *ಢಾಕಾ ವಿ.ವಿಯ 'ಬಂಗಬಂಧು ಶೇಖ್ ಮುಜಿಬುರ್ ರೆಹಮಾನ್' ಸಭಾಂಗಣದ ನಾಮಫಲಕವನ್ನು ಕಿತ್ತೆಸೆದಿದ್ದಾರೆ

- ಚಿತ್ತಗಾಂಗ್‌ನ ವೈದ್ಯಕೀಯ ಕಾಲೇಜು ಹಾಗೂ ರಂಗ್‌ಪುರ್‌ನ ಬೇಗಂ ರೊಕೆಯಾ ವಿಶ್ವವಿದ್ಯಾಲಯಲ್ಲಿಟ್ಟಿದ್ದ ಶೇಖ್ ಮುಜಿಬುರ್ ಭಾವಚಿತ್ರಕ್ಕೆ ಹಾನಿ
- ಮೈಮನ್‌ಸಿಂಹ ಜಿಲ್ಲೆಯ ಸರ್ಕೀಟ್ ಹೌಸ್‌ನ ಮುಜಿಬುರ್ ರೆಹಮಾನ್ ಕಲಾಕೃತಿ ಧ್ವಂಸ
- ತ್ರಿಶಾಲ್‌ನ ಕವಿ ಖಾಜಿ ನಜ್ರುಲ್ ಇಸ್ಲಾಂ ವಿಶ್ವವಿದ್ಯಾಲಯ 'ಮುಜಿಬುರ್' ಕಲಾಕೃತಿ ನಾಶ
- ಚುಆಡಾಂಗಾ ಉಪ ಆಯುಕ್ತರ ಕಚೇರಿಯಲ್ಲಿದ್ದ ಮುಜಿಬುರ್ ಹಾಗೂ ಅವರ ಪತ್ನಿ ಫಾಜಿಲ್ ಅವರ ಕಲಾಕೃತಿಗೂ ಹಾನಿ

ಭಾರತದ ವಿರುದ್ಧ ಅಸಮಾಧಾನ

ಢಾಕಾ (ಪಿಟಿಐ): ಪದಚ್ಯುತಗೊಂಡು ಭಾರತದಲ್ಲಿ ನೆಲಸಿರುವ ಬಾಂಗ್ಲಾ ದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು 'ಸುಳ್ಳು ಹಾಗೂ ಕಪೋಲಕಲ್ಪಿತ' ಹೇಳಿಕೆ ನೀಡುತ್ತಿದ್ದಾರೆ ಎಂದು ಬಾಂಗ್ಲಾದೇಶವು ಪ್ರತಿಭಟನೆ ದಾಖಲಿಸಿದೆ.

ಸಾಮಾಜಿಕ ಮಾಧ್ಯಮದ ಮೂಲಕ ಬುಧವಾರ ರಾತ್ರಿ ಶೇಖ್ ಹಸೀನಾ ಭಾಷಣ ಮಾಡಿ, ಮಧ್ಯಂತರ ಸರ್ಕಾರದ ವಿರುದ್ಧ ಪ್ರತಿರೋಧ ದಾಖಲಿಸಬೇಕು ಎಂದು ದೇಶದ ಜನತೆಗೆ ಕರೆ ನೀಡಿದ್ದರು.

'ಬಾಂಗ್ಲಾದೇಶದಲ್ಲಿ ಅಸ್ಥಿರತೆಗಾಗಿ ಶೇಖ್ ಹಸೀನಾ ಅವರು ನಿರಂತರ ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದು, ಈ ಕುರಿತು ಭಾರತಕ್ಕೆ ತನ್ನ ಪ್ರಬಲ ಪ್ರತಿಭಟನೆಯನ್ನು ದಾಖಲಿಸಲಾಗಿದೆ' ಎಂದು ಇಲ್ಲಿನ ವಿದೇಶಾಂಗ ಇಲಾಖೆಯು ಹೇಳಿಕೆ ನೀಡಿದೆ.

ಫೈನಾನ್ಸ್: ಬಡ್ಡಿಯ ಹೊನ್ನ ಶೂಲ

20,425	6,590	6,772	7,063
ನೋಂದಾಯಿತ ಲೇವಾದೇವಿದಾರ ಸಂಸ್ಥೆಗಳು	ಲೇವಾದೇವಿದಾರರು	ಗಿರವಿದಾರರು	ಫೈನಾನ್ಸ್ ಕಾರ್ಪೊರೇಷನ್‌ಗಳು

* ಮಾಹಿತಿ: ಆರ್ಥಿಕ ಇಲಾಖೆ

ಒಂದನೇ ಪುಟದಿಂದ...

ತಮ್ಮ ಅಗತ್ಯ, ಅನಿವಾರ್ಯಕ್ಕಾಗಿ ಖಾಸಗಿ ಸಾಲದಾತರ ಬಳಿ ತೆರಳಿ ಕೈಚಾಚಿರುವ ನೂರಾರು ಮಂದಿ, ಪಡೆದ ಸಾಲ ತೀರಿಸಲಾಗದಂತಹ ಸ್ಥಿತಿ ತಲುಪಿದ್ದಾರೆ. ಒಂದು ಸಾಲದ ಬಡ್ಡಿ ಪಾವತಿಸಲು ಮತ್ತೊಂದು ಸಾಲ, ಎರಡು ಸಾಲ ತೀರಿಸಲು ಮತ್ತೊಂದು ಸಾಲದ ಸುಳಿಗೆ ಸಿಲುಕಿರುವ ಬಡವರು ಮತ್ತು ಮಧ್ಯಮವರ್ಗದವರು, ಅದರಿಂದ ಹೊರಬರಲಾಗದೇ ನಲುಗುತ್ತಿದ್ದಾರೆ. ಸುತ್ತಿಕೊಳ್ಳುತ್ತಿರುವ ಸಾಲದ ಸರಮಾಲೆ ಮತ್ತು ಸಾಲದಾತ ಕಂಪನಿಗಳ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆಗೆ ಶರಣಾಗುವವರ ಸಂಖ್ಯೆಯೂ ಹೆಚ್ಚುತ್ತಲೇ ಇದೆ ಎನ್ನುತ್ತವೆ ರಾಜ್ಯದಲ್ಲಿ ವರದಿಯಾಗುತ್ತಿರುವ ಪ್ರಕರಣಗಳು.

ದುಬಾರಿ ಬಡ್ಡಿ ಹಾಗೂ ಬಲವಂತದ ವಸೂಲಿಯನ್ನು ನಿಗ್ರಹಿಸಲು ಸುಗ್ರೀವಾಜ್ಞೆ ತರುವುದಾಗಿ ಸರ್ಕಾರ ಹೇಳುತ್ತಾ ಬಂದಿದ್ದು, ರಾಜ್ಯಪಾಲರ ಅಂಕಿತ ಹಾಕದೇ ಇರುವುದರಿಂದ ಜನರ ಪಾಲಿಗೆ 'ಸುಗ್ರೀವ'ನ ರಕ್ಷಣೆಯೂ ಸಿಕ್ಕಿಲ್ಲ.

'ಕರ್ನಾಟಕದಲ್ಲಿ ಬಡ ವರ್ಗದ ಶೇ 89ರಷ್ಟು ಜನರು ಮೈಕ್ರೊ ಫೈನಾನ್ಸ್ ಕಂಪನಿಗಳಿಂದ ಸಾಲ ಪಡೆಯಲು ಬಯಸುತ್ತಾರೆ' ಎಂದು ಅಸೋಸಿಯೇಷನ್ ಆಫ್ ಕರ್ನಾಟಕ ಮೈಕ್ರೊಫೈನಾನ್ಸ್ ಇನ್‌ಸ್ಟಿಟ್ಯೂಷನ್ಸ್ (ಎಕೆಎಂಐ- ಅಕ್ಮಿ) 2023ರಲ್ಲಿ ಬಿಡುಗಡೆ ಮಾಡಿದ್ದ ವರದಿ ಹೇಳಿದೆ.

ರಾಷ್ಟ್ರೀಕೃತ ಬ್ಯಾಂಕುಗಳು, ಸಹಕಾರ ಬ್ಯಾಂಕುಗಳಿಂದ ಸಾಲ ಪಡೆಯಲು ಆಗದೇ ಇರುವವರಿಗೆ ಸಣ್ಣಪುಟ್ಟ ಉದ್ಯಮ, ಸ್ವ-ಉದ್ಯೋಗ, ತುರ್ತು ವೈದ್ಯಕೀಯ ಚಿಕಿತ್ಸೆ, ಮಕ್ಕಳ ವಿದ್ಯಾಭ್ಯಾಸ, ಮನೆ ನಿರ್ಮಾಣ, ಮದುವೆಯಂತಹ ಅಗತ್ಯಗಳಿಗೆ ಸಾಲಪಡೆಯಬೇಕಾದ ಜನರ ಅನಿವಾರ್ಯವನ್ನೇ ಬಂಡವಾಳ ಮಾಡಿಕೊಂಡಿರುವ ಮೈಕ್ರೊ ಫೈನಾನ್ಸ್ ಕಂಪನಿಗಳು ಹಾಗೂ ಲೇವಾದೇವಿದಾರರು ಜನರ ಸುಲಿಗೆ ಮಾಡುತ್ತಿರುವುದು ವರದಿಯಾಗುತ್ತಿವೆ.

ಸಾಲ ಕೊಡಲು ರಾಷ್ಟ್ರೀಕೃತ ಬ್ಯಾಂಕುಗಳು ತಿಂಗಳುಗಟ್ಟಲೇ ಅಲೆದಾಡಿಸುತ್ತವೆ. ಅಷ್ಟೇ ಅಲ್ಲ, ಅಲ್ಲಿಂದ ಸಾಲ ಪಡೆಯಲು ಹಲವು ನಿಯಮಗಳನ್ನು ಪಾಲಿಸಲೇಬೇಕು. ಅರ್ಹತೆಯೇ ದೊಡ್ಡ ತೊಡಕು. ಈ ಕಾರಣಕ್ಕೆ ಬಡವರು, ಸಣ್ಣ ವ್ಯಾಪಾರಿಗಳು, ಕೂಲಿಯವರು, ಆರ್ಥಿಕ ಶಕ್ತಿ ಇಲ್ಲದವರು ಅಲ್ಲಿ ಸಾಲ ಪಡೆಯುವುದು ಕಷ್ಟ. ಅಂಥವರಿಗೆ ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿದಾರರೇ ಆಧಾರ.

ಬಹುತೇಕ ಮೈಕ್ರೊ ಫೈನಾನ್ಸ್ ಕಂಪನಿಗಳ ನಾಮಫಲಕಗಳು ಎಲ್ಲಿಯೂ ಕಾಣಸಿಗುವುದಿಲ್ಲ. ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ (ಆರ್‌ಬಿಐ) ಅನುಮತಿ ಪಡೆದು ಈ ಸಂಸ್ಥೆಗಳು ವಹಿವಾಟು ನಡೆಸುತ್ತವೆ. ರಾಜ್ಯ ಸರ್ಕಾರಗಳಿಗೂ ಅವುಗಳ ಮೇಲೆ ನಿಯಂತ್ರಣ ಇರುವುದಿಲ್ಲ. ಆರ್‌ಬಿಐ ಅನುಮತಿ ನೀಡುವ ಕಾರಣ ಮೈಕ್ರೊ ಫೈನಾನ್ಸ್ ಕಂಪನಿಗಳ ವಿರುದ್ಧ ಆರ್‌ಬಿಐನಲ್ಲೇ ದೂರು ನೀಡಬೇಕು. ಆರ್‌ಬಿಐನವರೇ ಈ ಕಂಪನಿಗಳ ಮೇಲ್ವಿಚಾರಣೆ ಮಾಡಬೇಕು. ಕಂಪನಿಗಳ ವಿರುದ್ಧ ಆನ್‌ಲೈನ್, ಇ-ಮೇಲ್ ಮತ್ತು ಖುದ್ದಾಗಿ ಕಚೇರಿಗೆ ತೆರಳಿ ದೂರು ನೀಡಲು ಅವಕಾಶವಿದೆ. ಆದರೆ, ಬಡ ಸಾಲಗಾರನಿಗೆ ಅದರ ಅರಿವು ಇಲ್ಲ. ಸಾಲ ಮರುಪಾವತಿ ಮಾಡದ ಕಾರಣ ದೂರು ನೀಡುವುದಕ್ಕೂ ಹಿಂಜರಿಯುತ್ತಾರೆ. ಹೀಗಾಗಿ, ದೂರು ನೀಡುವ ವ್ಯವಸ್ಥೆ ಇದ್ದೂ ಇಲ್ಲದಂತಾಗಿದೆ.

ಗಾಜಾ ಪಟ್ಟಿ ಕುರಿತ ಟ್ರಂಪ್ ಹೇಳಿಕೆಗೆ ಅಮೆರಿಕದ ಸ್ಪಷ್ಟನೆ

ಪ್ಯಾಲೆಸ್ಟೀನಿಯರು ತಾತ್ಕಾಲಿಕವಾಗಿ ಹೊರಕ್ಕೆ

ಗ್ವಾಟೆಮಾಲ ನಗರ (ಎಪಿ): ಗಾಜಾ ಪಟ್ಟಿಯಲ್ಲಿ ಇರುವ ಪ್ಯಾಲೆಸ್ಟೀನ್ ನಾಗರಿಕರನ್ನು ಶಾಶ್ವತವಾಗಿ ಬೇರೆಡೆ ಸ್ಥಳಾಂತರಿಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಯಸುತ್ತಿಲ್ಲ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಮತ್ತು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕ್ಯಾರೊಲಿನ್ ಲೀವಿಟ್ ಬುಧವಾರ ಹೇಳಿದ್ದಾರೆ.

ಯುದ್ಧಪೀಡಿತ ಗಾಜಾ ಪಟ್ಟಿಯಿಂದ ಪ್ಯಾಲೆಸ್ಟೀನ್ ನಾಗರಿಕರನ್ನು 'ಶಾಶ್ವತವಾಗಿ' ಬೇರೆಡೆ ಸ್ಥಳಾಂತರಿಸಬೇಕು ಎಂದು ಟ್ರಂಪ್ ಅವರು ಮಂಗಳವಾರ ಹೇಳಿದ್ದರು. ಆ ಪ್ರದೇಶದಲ್ಲಿ ಅಮೆರಿಕದ ಯೋಧರನ್ನು ನಿಯೋಜಿಸುವ ಆಲೋಚನೆಯನ್ನು ಅವರು ಮುಕ್ತವಾಗಿ ಇರಿಸಿಕೊಂಡಿದ್ದರು. ಆದರೆ ಈ ಆಲೋಚನೆಗೆ ಅಮೆರಿಕದ ಮಿತ್ರರಾಷ್ಟ್ರಗಳು ಹಾಗೂ ಆಡಳಿತಾರೂಢ ರಿಪಬ್ಲಿಕನ್ ಪಕ್ಷದ ಸಂಸದರು ವಿರೋಧ ವ್ಯಕ್ತಪಡಿಸಿದ್ದಾರೆ.

ಗಾಜಾ ಪಟ್ಟಿಯಲ್ಲಿರುವ ಅಂದಾಜು 18 ಲಕ್ಷ ಪ್ಯಾಲೆಸ್ಟೀನ್ ನಾಗರಿಕರನ್ನು ತಾತ್ಕಾಲಿಕವಾಗಿ ಬೇರೆಡೆ ಸ್ಥಳಾಂತರಿಸಿ, ಆ ಪ್ರದೇಶದ ಪುನರ್‌ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಉದ್ದೇಶವನ್ನು ಮಾತ್ರ ಟ್ರಂಪ್ ಹೊಂದಿದ್ದಾರೆ ಎಂದು ರುಬಿಯೊ ಮತ್ತು ಲೀವಿಟ್ ಹೇಳಿದ್ದಾರೆ.

ಟ್ರಂಪ್ ಅವರ ಪ್ರಸ್ತಾವವನ್ನು ಪ್ಯಾಲೆಸ್ಟೀನ್ ಜನರು ವಿರೋಧಿಸಿದ್ದಾರೆ. ಒಮ್ಮೆ ಹೊರನಡೆದರೆ ಮತ್ತೆ ಯಾವತ್ತಿಗೂ ವಾಪಸ್ ಬರುವ ಅವಕಾಶ ಸಿಗಲಿಕ್ಕಿಲ್ಲ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

'ಹೊರಕ್ಕೆ ಕಳುಹಿಸುವ ಯೋಜನೆ ಸಿದ್ಧಪಡಿಸಿ'

ಜೆರುಸಲೇಂ (ಎಪಿ): ಪ್ಯಾಲೆಸ್ಟೀನ್ ನಾಗರಿಕರನ್ನು ಗಾಜಾ ಪಟ್ಟಿಯಿಂದ ಭಾರಿ ಸಂಖ್ಯೆಯಲ್ಲಿ ಹೊರಗೆ ಕಳುಹಿಸಲು ಯೋಜನೆಯನ್ನು ಸಿದ್ಧಪಡಿಸುವಂತೆ ಸೇನೆಗೆ ಸೂಚನೆ ನೀಡಲಾಗಿದೆ ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಇಸ್ರೇಲ್ ಕಟ್ಜ್ ಹೇಳಿದ್ದಾರೆ.

ರಸ್ತೆ ಮಾರ್ಗ, ವಾಯು ಹಾಗೂ ಜಲ ಮಾರ್ಗಗಳ ಮೂಲಕ ಹೊರಗೆ ತೆರಳುವ ಆಯ್ಕೆಗಳು ಈ ಯೋಜನೆಯ ಭಾಗವಾಗಿರಲಿವೆ ಎಂದು ಕಟ್ಜ್ ಅವರು ಗುರುವಾರ ತಿಳಿಸಿದ್ದಾರೆ. ಟ್ರಂಪ್ ಅವರು ಪ್ರಸ್ತಾವಿಸಿರುವ ದಿಟ್ಟ ಆಲೋಚನೆಯನ್ನು ತಾವು ಬೆಂಬಲಿಸುವುದಾಗಿ ಕಟ್ಜ್ ಹೇಳಿದ್ದಾರೆ.

ಇಸ್ರೇಲ್ ಸತತ 15 ತಿಂಗಳುಗಳ ಕಾಲ ನಡೆಸಿದ ದಾಳಿಯ ಪರಿಣಾಮವಾಗಿ ಗಾಜಾ ಪಟ್ಟಿಯು ಮನುಷ್ಯರ ವಾಸಕ್ಕೆ ಬಹುತೇಕ ಅಯೋಗ್ಯವಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Teachers/ Professors

ORCHIDS The International School
TEACHERS WANTED
Freshers and Experienced Female candidates can only apply
English, Mathematics, Chess, Dance, Music, Theatre, Drawing, Physical Education & Other Subject Teachers
For Walk In, visit the nearest Orchids School during weekends
Kindly drop your CV to: careers@orchids.edu.in

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 14,000-18,000. 8951315839, 7022770052

ಭವಿಷ್ಯ

Astrology

★ಓಂ ದುರ್ಗಾಆಂಜನಂ★ ಇಚ್ಛಾಸಿದ್ಧಿ ಶಕ್ತಿಪೀಠ ಭಾರತದ ಪ್ರಖ್ಯಾತ ವಂಶಪಾರಂಪರ್ಯ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀದೇವಾನಂದನರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ, ವಶೀಕರಣಗಳಿಗೆ, ಚಮತ್ಕಾರಿ ಪವಾಡ ಪರಿಹಾರಕ್ಕೆ ಸಂಪರ್ಕಿಸಿ:ರಹೇಜಪಾರ್ಕ್ ಎದುರು,ಮಾಗಡಿರಸ್ತೆ, ಬೆಂಗಳೂರು.9845005009

ಪ್ರವಾಸ

Travel

ಮಹಕುಂಭಮೇಳ 144 ವರ್ಷಕ್ಕೊಮ್ಮೆ ರಿಯಾಯಿತಿ ದರದಲ್ಲಿ 23/02/2025 6ದಿನ ವಿಮಾನದಲ್ಲಿ ಪ್ರಯೋಗರಾಜ್ ಕಾಶಿ ಗಯಾ ಅಯೋಧ್ಯಾ.(ಕೆಲವೇ ಸೀಟುಗಳಿವೆ) ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಕ್ರಿಕೆಟ್: ಹರ್ಷಿತ್, ಜಡೇಜಗೆ ತಲಾ 3 ವಿಕೆಟ್; ಶ್ರೇಯಸ್, ಅಕ್ಷರ್ ಅರ್ಧಶತಕ; ಇಂಗ್ಲೆಂಡ್‌ಗೆ ನಿರಾಶೆ

ಶುಭಮನ್ ಆಟ: ಭಾರತ ಶುಭಾರಂಭ

ಭಾರತ ತಂಡದ ಬ್ಯಾಟಿಂಗ್ ಜೋಡಿ ಅಕ್ಷರ್ ಪಟೇಲ್ ಮತ್ತು ಶುಭಮನ್ ಗಿಲ್ —ಪಿಟಿಐ ಚಿತ್ರ

ನಾಗಪುರ (ಪಿಟಿಐ): ಬಲಗೈ ಬ್ಯಾಟರ್ ಶುಭಮನ್ ಗಿಲ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಇಂಗ್ಲೆಂಡ್ ಎದುರಿನ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಜಯಗಳಿಸಿತು.

ವಿದರ್ಭ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಭಾರತ 4 ವಿಕೆಟ್‌ಗಳಿಂದ ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

249 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಭಾರತ ತಂಡವು 38.4 ಓವರ್‌ಗಳಲ್ಲಿ ಜಯಗಳಿಸಿತು. ಇದರಲ್ಲಿ ಗಿಲ್ (87; 96ಎ, 4X14) ಪ್ರಮುಖ ಪಾತ್ರ ವಹಿಸಿದರು. ಅವರಿಗೆ ಶ್ರೇಯಸ್ ಅಯ್ಯರ್ (59; 36ಎ, 4X9, 6X2) ಮತ್ತು ಅಕ್ಷರ್ ಪಟೇಲ್ (52 ರನ್) ಉತ್ತಮ ಬೆಂಬಲ ನೀಡಿದರು.

ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ವೇಗಿ ಹರ್ಷಿತ್ ರಾಣಾ (7 ಓವರ್‌ಗಳಲ್ಲಿ 53ಕ್ಕೆ3) ಮತ್ತು ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ (9 ಓವರ್‌ಗಳಲ್ಲಿ 26ಕ್ಕೆ3) ಅವರ ದಾಳಿಯ ಮುಂದೆ ಇಂಗ್ಲೆಂಡ್ ತಂಡವು 47.4 ಓವರ್‌ಗಳಲ್ಲಿ 248 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ನಾಯಕ ಜೋಸ್ ಬಟ್ಲರ್ (52; 67ಎ) ಮತ್ತು ಜೇಕಬ್ ಬೆಥೆಲ್ (51; 64ಎ) ಅವರು ಅರ್ಧಶತಕ ಗಳಿಸಿದರು.

ಈ ಗುರಿ ಬೆನ್ನಟ್ಟಿದ ಭಾರತ ತಂಡವು ಇನಿಂಗ್ಸ್‌ನ ಆರಂಭದಲ್ಲಿಯೇ ಆಘಾತ ಅನುಭವಿಸಬೇಕಾಯಿತು. ಆರಂಭಿಕ ಬ್ಯಾಟರ್ ರೋಹಿತ್ ಶರ್ಮಾ (2 ರನ್) ಮತ್ತು ಯಶಸ್ವಿ ಜೈಸ್ವಾಲ್ (15 ರನ್) ಅವರಿಬ್ಬರೂ ಪೆವಿಲಿಯನ್ ಸೇರಿದಾಗ ತಂಡದ ಮೊತ್ತವು 19 ರನ್‌ಗಳಾಗಿದ್ದವು.

ಈ ಹಂತದಲ್ಲಿ ಗಿಲ್ ಮತ್ತು ಶ್ರೇಯಸ್ ಅಯ್ಯರ್ ಜೊತೆಗೂಡಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 93 ರನ್ ಸೇರಿಸಿದರು. ಇದೇ ಮೊದಲ ಬಾರಿ ಭಾರತದಲ್ಲಿ ಆಡುತ್ತಿರುವ ಜೇಕಬ್ ಬೆಥೆಲ್ ಅವರು ಶ್ರೇಯಸ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಜೊತೆಯಾಟ ಮುರಿಯಿತು. ಆದರೆ, ಇದರ ನಂತರವೇ ಇಂಗ್ಲೆಂಡ್ ಕೈಯಿಂದ ಪಂದ್ಯ ಜಾರಿಹೋಯಿತು. ಏಕೆಂದರೆ ಗಿಲ್ ಜೊತೆಗೂಡಿದ ಅಕ್ಷರ್ ಪಟೇಲ್ ತಂಡದ ಗೆಲುವನ್ನು ಖಚಿತಪಡಿಸಿದರು. ಒಂದು ಕಡೆ ಗಿಲ್ ಅವರ ಆಕರ್ಷಕ ಡ್ರೈವ್ ಮತ್ತು ಫ್ಲಿಕ್‌ಗಳ ಆಟ ನಡೆದಿತ್ತು. ಇನ್ನೊಂದಡೆ ಎಡಗೈ ಆಲ್‌ರೌಂಡರ್ ಅಕ್ಷರ್ ಸ್ವೀಪ್, ಬ್ಯಾಕ್‌ಫುಟ್ ಆಟದ ಸೊಬಗು ಉಣಬಡಿಸಿದರು. 4ನೇ ವಿಕೆಟ್ ಜೊತೆಯಾಟದಲ್ಲಿ 108 ರನ್ ಸೇರಿಸಿದರು. ಸ್ಪಿನ್ನರ್ ಆದಿಲ್ ರಶೀದ್ ಎಸೆತದಲ್ಲಿ ಅಕ್ಷರ್ ಕ್ಲೀನ್‌ಬೌಲ್ಡ್ ಆಗುವ ಮುನ್ನ ತಂಡವು ಗೆಲುವಿನ ಸನಿಹ ಬಂದಿತ್ತು. ಗಿಲ್ ಶತಕದತ್ತ ಹೆಜ್ಜೆಯಿಟ್ಟಿದ್ದರು.

ಆದರೆ 6ನೇ ಕ್ರಮಾಂಕದಲ್ಲಿ ಬಂದ ಕೆ.ಎಲ್. ರಾಹುಲ್ (2) ಕೂಡ ಆದಿಲ್ ಬೌಲಿಂಗ್‌ನಲ್ಲಿ ಅವರಿಗೇ ಕ್ಯಾಚಿತ್ತು ನಿರ್ಗಮಿಸಿದರು. ನಂತರದ ಓವರ್‌ನಲ್ಲಿ ಸಕಿಬ್ ಮೊಹಮ್ಮದ್ ಎಸೆತವನ್ನು ಆಡುವ ಭರದಲ್ಲಿ ಗಿಲ್ ಅವರು ಬಟ್ಲರ್‌ಗೆ ಕ್ಯಾಚ್ ಕೊಟ್ಟರು. ಈ ಹಂತದಲ್ಲಿ ತುಸು ಆತಂಕ ಮೂಡಿತ್ತು.

ಆದರೆ ಆಲ್‌ರೌಂಡರ್ ಜೋಡಿ ಹಾರ್ದಿಕ್ ಪಾಂಡ್ಯ (ಔಟಾಗದೇ 9) ಮತ್ತು ಜಡೇಜ (ಔಟಾಗದೇ 12) ತಂಡವನ್ನು ಗೆಲುವಿನ ದಡ ಸೇರಿಸಿದರು.

ವಿರಾಟ್ ವಿಶ್ರಾಂತಿ

'ಸೂಪರ್ ಸ್ಟಾರ್' ಬ್ಯಾಟರ್ ವಿರಾಟ್ ಕೊಹ್ಲಿ ಅವರು ಮೊಣಕಾಲು ನೋವಿನಿಂದಾಗಿ ಇಂಗ್ಲೆಂಡ್ ಎದುರಿನ ಮೊದಲ ಪಂದ್ಯದಲ್ಲಿ ಕಣಕ್ಕಿಳಿಯಲಿಲ್ಲ.

'ಕೊಹ್ಲಿ ಅವರ ಬಲ ಮೊಣಕಾಲಿನಲ್ಲಿ ಸಣ್ಣಪ್ರಮಾಣದ ನೋವಿದೆ. ಅಷ್ಟೇನೂ ಗಂಭೀರ ಗಾಯವಲ್ಲ. ನಿನ್ನೆ (ಬುಧವಾರ) ರಾತ್ರಿಯಷ್ಟೇ ಈ ಬಗ್ಗೆ ತಿಳಿಯಿತು' ಎಂದು ನಾಯಕ ರೋಹಿತ್ ಶರ್ಮಾ ಅವರು ಟಾಸ್ ಸಂದರ್ಭದಲ್ಲಿ ಹೇಳಿದರು.

ಬಿಸಿಸಿಐ ಕೂಡ ಈ ಕುರಿತು ಪ್ರಕಟಣೆ ನೀಡಿತು.

ಬುಧವಾರ ದ ನೆಟ್ಸ್‌ನಲ್ಲಿ ಕೊಹ್ಲಿ ಹೆಚ್ಚು ಹೊತ್ತು ಬ್ಯಾಟಿಂಗ್ ಮಾಡಿರಲಿಲ್ಲ. ನೋವಿನಿಂದಾಗಿ ಅವರು ಬೇಗನೆ ಅಭ್ಯಾಸ ಮುಗಿಸಿದ್ದರು. ಬಲಮೊಣಕಾಲಿಗೆ ದಪ್ಪ ಟೇಪ್ ಸುತ್ತಿಕೊಂಡಿದ್ದರು. ತಂಡದ ಫಿಸಿಯೊ ಕಮಲೇಶ್ ಜೈನ್ ಅವರು ಕೊಹ್ಲಿ ಆರೈಕೆ ಮಾಡುತ್ತಿದ್ದಾರೆ.

ಕಟಕ್‌ನಲ್ಲಿ ನಡೆಯಲಿರುವ ಮುಂದಿನ ಪಂದ್ಯಕ್ಕೆ ಅವರ ಲಭ್ಯತೆ ಬಗ್ಗೆ ಸ್ಪಷ್ಟವಾಗಿಲ್ಲ. ಅವರು ಗಾಯದ ಸ್ಕ್ಯಾನ್‌ಗಾಗಿ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಗೆ ತೆರಳಲಿದ್ದಾರೆ ಎಂಬ ಬಗ್ಗೆ ಕುತೂಹಲವೂ ಈಗ ಇದೆ.

ಜಡೇಜ ದಾಖಲೆ

ಈ ಪಂದ್ಯದಲ್ಲಿ 3 ವಿಕೆಟ್‌ಗಳನ್ನು ಪಡೆದ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಅವರು ದಾಖಲೆ ಬರೆದರು. ಅವರು ಇಂಗ್ಲೆಂಡ್ ಎದುರು ಒಟ್ಟು 42 ಪಡೆದರು. ಇದರೊಂದಿಗೆ ಇಂಗ್ಲೆಂಡ್ ಎದುರು 40ಕ್ಕಿಂತ ಹೆಚ್ಚು ವಿಕೆಟ್ ಗಳಿಸಿದ ಭಾರತದ ಮೊದಲ ಸ್ಪಿನ್ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಇಂಗ್ಲೆಂಡ್ ಎದುರು ಈ ಸಾಧನೆ ಮಾಡಿದ ಏಕೈಕ ಭಾರತೀಯ ಕೂಡ ಅವರಾಗಿದ್ದಾರೆ ಎಂದು ಕ್ರಿಕೆಟ್ ಅಂಕಿ ಸಂಖ್ಯೆ ಪರಿಣತ ಎಚ್.ಆರ್. ಗೋಪಾಲಕೃಷ್ಣ ತಿಳಿಸಿದ್ದಾರೆ.

ರೋಹಿತ್ ವೈಫಲ್ಯ

ನಾಯಕ ರೋಹಿತ್ ಅವರ ಬ್ಯಾಟಿಂಗ್ ವೈಫಲ್ಯ ಈ ಸರಣಿಯಲ್ಲಿಯೂ ಮುಂದುವರಿಯಿತು. ಅವರು ಎಲ್ಲ ಮಾದರಿಗಳಲ್ಲಿಯೂ ಸೇರಿ 16 ಇನಿಂಗ್ಸ್‌ಗಳಲ್ಲಿ ಒಟ್ಟು 166 ಮಾತ್ರ ಗಳಿಸಿದ್ದಾರೆ. ಟಿ20 ವಿಶ್ವಕಪ್ ವಿಜಯದ ನಂತರ ಅವರು ಬ್ಯಾಟಿಂಗ್ ಲಯ ಕಂಡುಕೊಳ್ಳುವಲ್ಲಿ ಸತತ ವೈಫಲ್ಯ ಅನುಭವಿಸಿದ್ದಾರೆ.

ಸ್ಕೋರ್ ಕಾರ್ಡ್

ಇಂಗ್ಲೆಂಡ್: 47.4 ಓವರ್‌ಗಳಲ್ಲಿ 248

ಸಾಲ್ಟ್ ರನೌಟ್ (ಅಯ್ಯರ್/ರಾಹುಲ್) 43 (26ಎ, 4x5, 6x3)
ಡಕೆಟ್ ಸಿ ಜೈಸ್ವಾಲ್ ಬಿ ಹರ್ಷಿತ್ 32 (29ಎ, 4x6)
ರೂಟ್ ಎಲ್‌ಬಿಡಬ್ಲ್ಯು ಬಿ ಜಡೇಜ 19 (31ಎ, 4x1)
ಬ್ರೂಕ್ ಸಿ ರಾಹುಲ್ ಬಿ ಹರ್ಷಿತ್ 0 (3ಎ)
ಬಟ್ಲರ್ ಸಿ ಪಾಂಡ್ಯ ಬಿ ಪಟೇಲ್ 52 (67ಎ, 4x4)
ಬೆಥೆಲ್ ಎಲ್‌ಬಿಡಬ್ಲ್ಯು ಬಿ ಜಡೇಜ 51 (64ಎ, 4x3, 6x1)
ಲಿವಿಂಗ್‌ಸ್ಟೋನ್ ಸಿ ರಾಹುಲ್ ಬಿ ಹರ್ಷಿತ್ 5 (10ಎ)
ಕಾರ್ಸ್ ಬಿ ಶಮಿ 10 (18ಎ, 4x1)
ರಶೀದ್ ಬಿ ಜಡೇಜ 8 (16ಎ)
ಆರ್ಚರ್ ಔಟಾಗದೆ 21 (18ಎ, 4x3, 6x1)
ಸಖಿಬ್ ಸ್ಟಂ ರಾಹುಲ್ ಬಿ ಕುಲದೀಪ್ 2 (4ಎ)
ಇತರೆ: 5 (ಬೈ 1, ಲೆಗ್‌ಬೈ 2, ವೈಡ್ 2)
ವಿಕೆಟ್ ಪತನ: 1–75 (ಫಿಲ್ ಸಾಲ್ಟ್, 8.5), 2–77 (ಬೆನ್ ಡಕೆಟ್, 9.3), 3–77 (ಹ್ಯಾರಿ ಬ್ರೂಕ್, 9.6), 4–111 (ಜೋ ರೂಟ್, 18.3), 5–170 (ಜೋಸ್ ಬಟ್ಲರ್, 32.6), 6–183 (ಲಿಯಾಮ್ ಲಿವಿಂಗ್‌ಸ್ಟೋನ್, 35.4), 7–206 (ಬ್ರೈಡನ್ ಕಾರ್ಸ್, 39.5), 8–220 (ಜೇಕಬ್ ಬೆಥೆಲ್, 42.4), 9–241 (ಆದಿಲ್ ರಶೀದ್, 46.4), 10–248 (ಸಖಿಬ್ ಮಹಮೂದ್, 47.4).
ಬೌಲಿಂಗ್: ಮೊಹಮ್ಮದ್ ಶಮಿ 8–1–38–1; ಹರ್ಷಿತ್ ರಾಣಾ 7–1–53–3; ಅಕ್ಷರ್ ಪಟೇಲ್ 7–0–38–1; ಹಾರ್ದಿಕ್ ಪಾಂಡ್ಯ 7–1–37–0; ಕುಲದೀಪ್ ಯಾದವ್ 9.4–0–53–1; ರವೀಂದ್ರ ಜಡೇಜ 9–1–26–3

ಭಾರತ: 6 ವಿಕೆಟ್‌ಗೆ 251 (38.4 ಓವರ್‌ಗಳಲ್ಲಿ)

ಜೈಸ್ವಾಲ್ ಸಿ ಸಾಲ್ಟ್ ಬಿ ಆರ್ಚರ್ 15 (22, 4x3)
ರೋಹಿತ್ ಸಿ ಲಿವಿಂಗ್‌ಸ್ಟೋನ್ ಬಿ ಸಖಿಬ್ 2 (7)
ಗಿಲ್ ಸಿ ಬಟ್ಲರ್ ಬಿ ಮಹಮೂದ್ 87 (96ಎ, 4x14)
ಶ್ರೇಯಸ್ ಎಲ್‌ಬಿಡಬ್ಲ್ಯು ಬಿ ಬೆಥೆಲ್ 59 (36ಎ, 4x9, 6x2)
ಅಕ್ಷರ್ ಬಿ ರಶೀದ್ 52 (47ಎ, 4x6, 6x1)
ರಾಹುಲ್ ಸಿ ಮತ್ತು ಬಿ ರಶೀದ್ 2 (9ಎ)
ಹಾರ್ದಿಕ್ ಔಟಾಗದೆ 9 (6ಎ, 6x1)
ಜಡೇಜ ಔಟಾಗದೆ 12 (10ಎ, 4x2)
ಇತರೆ: 13 (ಲೆಗ್‌ಬೈ 8, ನೋಬಾಲ್ 1, ವೈಡ್ 4)
ವಿಕೆಟ್ ಪತನ: 1–19 (ಯಶಸ್ವಿ ಜೈಸ್ವಾಲ್, 4.3), 2–19 (ರೋಹಿತ್ ಶರ್ಮಾ, 5.2), 3–113 (ಶ್ರೇಯಸ್ ಅಯ್ಯರ್, 15.6),
ಬೌಲಿಂಗ್: ಜೋಫ್ರಾ ಆರ್ಚರ್ 7–1–39–1; ಸಖಿಬ್ ಮಹಮೂದ್ 6.4–0–47–2; ಬ್ರೈಡನ್ ಕಾರ್ಸ್ 5–0–52–0; ಆದಿಲ್ ರಶೀದ್ 10–1–49–2; ಜೇಕಬ್ ಬೆಥೆಲ್ 3–0–18–1; ಲಿಯಾಮ್ ಲಿವಿಂಗ್‌ಸ್ಟೋನ್ 5–0–28–0; ಜೋ ರೂಟ್ 2–0–10–0.
ಪಂದ್ಯದ ಆಟಗಾರ: ಶುಭಮನ್‌ಗಿಲ್

ಫಲಿತಾಂಶ: ಭಾರತಕ್ಕೆ 4 ವಿಕೆಟ್ ಜಯ

ಚಾಂಪಿಯನ್ಸ್ ಟ್ರೋಫಿ: ಕಾಂಗರೂ ತಂಡಕ್ಕೆ ಚಿಂತೆ

ಆಸ್ಟ್ರೇಲಿಯಾಕ್ಕೆ ಮಾರ್ಕಸ್ ನಿವೃತ್ತಿ ಆಘಾತ

ಆಸ್ಟ್ರೇಲಿಯಾದ ಆಲ್‌ರೌಂಡರ್ ಮಾರ್ಕಸ್ ಸ್ಟೋಯಿನಿಸ್ —ಪಿಟಿಐ ಚಿತ್ರ

ಮೆಲ್ಬರ್ನ್ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಗೆ ಇನ್ನೇನು 12 ದಿನಗಳಷ್ಟೇ ಬಾಕಿ ಉಳಿದಿವೆ. ಈ ಬಾರಿ ಪ್ರಶಸ್ತಿ ಜಯಿಸುವ ನೆಚ್ಚಿನ ತಂಡಗಳಲ್ಲಿ ಮುಂಚೂಣಿಯಲ್ಲಿರುವ ಆಸ್ಟ್ರೇಲಿಯಾಕ್ಕೆ ಆಲ್‌ರೌಂಡರ್ ಮಾರ್ಕಸ್ ಸ್ಟೋಯಿನಿಸ್ ದಿಢೀರ್ ನಿವೃತ್ತಿ ಆಘಾತ ಮೂಡಿಸಿದೆ.

ಅಲ್ಲದೇ ನಾಯಕ ಪ್ಯಾಟ್ ಕಮಿನ್ಸ್ ಮತ್ತು ವೇಗಿ ಜೋಷ್ ಹ್ಯಾಜಲ್‌ವುಡ್ ಅವರು ಗಾಯದ ಸಮಸ್ಯೆಯಿಂದಾಗಿ ಟೂರ್ನಿಗೆ ಅಲಭ್ಯವಾಗುತ್ತಿರುವುದು ಕೂಡ ತಂಡವನ್ನು ಚಿಂತೆಗೀಡು ಮಾಡಿದೆ. ಅಲ್ಲದೇ ಈ ಮೂವರು ಪ್ರಮುಖರ ಸ್ಥಾನ ತುಂಬುವ ಆಟಗಾರರನ್ನು ಆಯ್ಕೆ ಮಾಡುವುದು ಕ್ರಿಕೆಟ್ ಆಸ್ಟ್ರೇಲಿಯಾ (ಸಿ.ಎ)ಕ್ಕೆ ತಲೆನೋವಾಗಿದೆ.

35 ವರ್ಷ ವಯಸ್ಸಿನ ಮಾರ್ಕಸ್ ಅವರು ಏಕದಿನ ಕ್ರಿಕೆಟ್ ಮಾದರಿಗೆ ನಿವೃತ್ತಿ ಘೋಷಿಸಿದ್ದಾರೆ. ಆದರೆ ಟಿ20 ಕ್ರಿಕೆಟ್ ಆಡಲು ಲಭ್ಯರಿದ್ದಾರೆ. ಇದೇ 19ರಿಂದ ಆರಂಭವಾಗುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ತಂಡದ ಆಟಗಾರರ ಪರಿಷ್ಕೃತ ಪಟ್ಟಿ ಸಲ್ಲಿಸಲು ಇದೇ 12 ಕೊನೆಯ ದಿನವಾಗಿದೆ.

ಈಚೆಗೆ ಆಸ್ಟ್ರೇಲಿಯಾ ಪ್ರಕಟಿಸಿದ್ದ ತಂಡದಲ್ಲಿ ಮಾರ್ಕಸ್ ಇದ್ದರು. ಅವರು ನಿವೃತ್ತಿ ನಿರ್ಧಾರವನ್ನು ಹಠಾತ್ ಆಗಿ ಕೈಗೊಳ್ಳಲು ಗಾಯ ಕಾರಣವಿರಬಹುದು ಎನ್ನಲಾಗಿದೆ. ಪ್ರಸ್ತುತ ಅವರು ಎಸ್‌ಎ ಟಿ20 ಟೂರ್ನಿಯಲ್ಲಿ ಡರ್ಬನ್ ಸೂಪರ್ ಜೈಂಟ್ಸ್ ತಂಡದಲ್ಲಿ ಆಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರಿಗೆ ಸ್ನಾಯುಸೆಳೆತದ ಗಂಭೀರ ಸಮಸ್ಯೆಯಾಗಿದೆ.

'ಏಕದಿನ ಮಾದರಿಯಲ್ಲಿ ಆಸ್ಟ್ರೇಲಿಯಾ ತಂಡವನ್ನು ಪ್ರತಿನಿಧಿಸಿದ್ದು ನನ್ನ ಜೀವನದ ಅವಿಸ್ಮರಣೀಯ ಪಯಣ. ಗ್ರೀನ್ (ಹಸಿರು) ಮತ್ತು ಗೋಲ್ಡ್ (ಹಳದಿ) ಬಣ್ಣದ ಪೋಷಾಕುಗಳಲ್ಲಿ ನಾನು ಆಡಿದ ಪ್ರತಿಕ್ಷಣವೂ ಅಮೂಲ್ಯವಾದದ್ದು. ದೇಶವನ್ನು ಅತ್ಯುನ್ನತ ಹಂತದಲ್ಲಿ ಪ್ರತಿನಿಧಿಸುವುದು ಹೆಮ್ಮೆಯ ಸಂಗತಿ' ಎಂದು ಕ್ರಿಕೆಟ್ ಆಸ್ಟ್ರೇಲಿಯಾ (ಸಿ.ಎ) ಬಿಡುಗಡೆ ಮಾಡಿರುವ ಮಾಧ್ಯಮ ಪ್ರಕಟಣೆಯಲ್ಲಿ ಸ್ಟೋಯಿನಿಸ್ ಹೇಳಿದ್ದಾರೆ.

'ನಿವೃತ್ತಿ ನಿರ್ಧಾರವು ಸುಲಭವಾಗಿರಲಿಲ್ಲ. ಏಕದಿನ ಕ್ರಿಕೆಟ್ ಮಾದರಿಗೆ ವಿದಾಯ ಹೇಳಲು ಇದು ಸೂಕ್ತ ಸಮಯವೆಂದು ಅನಿಸಿತು. ಮುಂದಿನ ಅಧ್ಯಾಯದ ಮೇಲೆ ಸಂಪೂರ್ಣ ಏಕಾಗ್ರತೆ ವಹಿಸುವುದು ನನ್ನ ಗುರಿ ಯಾಗಿದೆ' ಎಂದೂ ಅವರು ಉಲ್ಲೇಖಿಸಿದ್ದಾರೆ. ತಂಡದ ಮುಖ್ಯ ಕೋಚ್ ಹಾಗೂ ಸಹ ಆಟಗಾರರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

2018–19ರಲ್ಲಿ ಮಾರ್ಕಸ್ ಅವರು ಆಸ್ಟ್ರೇಲಿಯಾದ ಏಕದಿನ ಕ್ರಿಕೆಟ್ ಮಾದರಿಯ ಶ್ರೇಷ್ಠ ಆಟಗಾರ ಪ್ರಶಸ್ತಿ ಗಳಿಸಿದ್ದರು. ಅವರು ಒಟ್ಟು 71 ಏಕದಿನ ಪಂದ್ಯಗಳನ್ನು ಆಡಿ, 1495 ರನ್ ಗಳಿಸಿದ್ದಾರೆ. ಅದರಲ್ಲಿ ಒಂದು ಶತಕ ಮತ್ತು 6 ಅರ್ಧಶತಕಗಳು ಇವೆ.

2015ರಲ್ಲಿ ಓಲ್ಡ್ ಟ್ರಾಫರ್ಡ್‌ನಲ್ಲಿ ಇಂಗ್ಲೆಂಡ್ ವಿರುದ್ಧದ ಏಕದಿನ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು. 2021ರಲ್ಲಿ ಟಿ20 ಮತ್ತು 2023ರಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಗೆದ್ದ ಆಸ್ಟ್ರೇಲಿಯಾ ತಂಡದಲ್ಲಿ ಅವರು ಆಡಿದ್ದರು.

ಚಾಂಪಿಯನ್ಸ್ ಟ್ರೋಫಿ: ಪ್ಯಾಟ್, ಜೋಷ್ ಅಲಭ್ಯ



ಕಮಿನ್ಸ್



ಹ್ಯಾಜಲ್‌ವುಡ್

ಗಾಲ್, ಶ್ರೀಲಂಕಾ (ಪಿಟಿಐ): ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಮತ್ತು ವೇಗಿ ಜೋಷ್ ಹ್ಯಾಜಲ್‌ವುಡ್ ಅವರು ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಲಭ್ಯರಿಲ್ಲ.

ಈಚೆಗೆ ನಡೆದಿದ್ದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮುಕ್ತಾಯದ ಸಂದರ್ಭದಲ್ಲಿ ಕಮಿನ್ಸ್ ಅವರು ಪಾದದ ನೋವಿನಿಂದ ಬಳಲಿದ್ದರು. ಹ್ಯಾಜಲ್‌ವುಡ್ ಅವರಿಗೆ ಮೀನಖಂಡದ ಸೆಳೆತದ ಸಮಸ್ಯೆ ಅಗಿತ್ತು.

ಹ್ಯಾಜಲ್‌ವುಡ್ ಅವರು ಬ್ರಿಸ್ಬೇನ್ ಟೆಸ್ಟ್ ನಲ್ಲಿ ಆಡಿದ ನಂತರ ಕಣಕ್ಕಿಳಿದಿಲ್ಲ.

'ಪ್ಯಾಟ್, ಜೋಷ್ ಮತ್ತು ಮಿಚ್ (ಮಾರ್ಷ್) ಅವರು ತಮ್ಮ ಗಾಯಗಳಿಗೆ ಆರೈಕೆ ಪಡೆಯುತ್ತಿದ್ದಾರೆ. ಆದರೆ ಚಾಂಪಿಯನ್ಸ್ ಟ್ರೋಫಿಗಾಗಿ ಅವರು ಫಿಟ್ ಆಗುವುದು ಕಷ್ಟ' ಎಂದು ರಾಷ್ಟ್ರೀಯ ಆಯ್ಕೆ ಸಮಿತಿ ಚೇರ್ಮನ್ ಜಾರ್ಜ್ ಬೇಲಿ ಗುರುವಾರ ತಿಳಿಸಿದ್ದಾರೆ.

ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಸ್ಟ್ರೇಲಿಯಾ ತಂಡವು ಇದೇ 22ರಂದು ಲಾಹೋರ್‌ನಲ್ಲಿ ಇಂಗ್ಲೆಂಡ್ ವಿರುದ್ಧ; ರಾವಲ್ಪಿಂಡಿಯಲ್ಲಿ ಫೆ. 25ರಂದು ದಕ್ಷಿಣ ಆಫ್ರಿಕಾ ಮತ್ತು ಫೆ. 28ರಂದು ಅಫ್ಗಾನಿಸ್ತಾನ ವಿರುದ್ಧ ಆಡಲಿದೆ.

ಮಹಿಳಾ ಕ್ರೀಡೆ: ಲಿಂಗತ್ವ ಅಲ್ಪಸಂಖ್ಯಾತರಿಗ ನಿಷೇಧ ಹೇರಿಕೆ

ವಾಷಿಂಗ್ಟನ್ (ಎ.ಪಿ): ಬಾಲಕಿಯರು, ಮಹಿಳೆಯರ ಕ್ರೀಡೆಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾ ತರು ಭಾಗವಹಿಸುವುದನ್ನು ನಿಷೇಧಿಸಿ ಅಮೆರಿಕ ಸರ್ಕಾರ ಆದೇಶ ಹೊರಡಿಸಿದೆ.

'ಮಹಿಳಾ ಕ್ರೀಡೆಗಳಲ್ಲಿ ಪುರುಷರಿಗೆ ಅವಕಾಶವಿಲ್ಲ' ಶೀರ್ಷಿಕೆಯ ಈ ಆದೇಶಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬುಧವಾರ ಸಹಿ ಹಾಕಿದರು. 'ಈ ಆದೇಶದಿಂದ ಮಹಿಳಾ ಕ್ರೀಡೆಗೆ ಸಂಬಂಧಿಸಿದ ಹೋರಾಟ ಅಂತ್ಯವಾಗಿದೆ' ಎಂದು ಹೇಳಿದರು.

ಅನೇಕ ಜನಪ್ರತಿನಿಧಿಗಳು, ಮಹಿಳಾ ಕ್ರೀಡಾಪಟುಗಳು, ಮಹಿಳಾ ಕ್ರೀಡೆಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಭಾಗವಹಿಸುವುದನ್ನು ವಿರೋಧಿಸಿದ್ದರು.

'ಶಾಲೆಗಳು, ವಿವಿಧ ಅಥ್ಲೆಟಿಕ್ಸ್ ಸಂಸ್ಥೆಗಳು ತಕ್ಷಣದಿಂದ ಈ ಆದೇಶ ಜಾರಿಗೊಳಿಸಬೇಕು' ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕ್ಯಾರೊಲಿನ್ ಲೀವಿಟ್ ಹೇಳಿದರು. ಬಾಲಕಿಯರು, ಮಹಿಳೆಯರ ರಾಷ್ಟ್ರೀಯ ಕ್ರೀಡಾ ದಿನದ ಸಂದರ್ಭದಲ್ಲೇ ಆದೇಶ ಹೊರಬಿದ್ದಿದೆ.

'ವಿಮರ್ಶಾ ಸರಣಿ'ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಆಹ್ವಾನದ ಮೇರೆಗೆ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿನ್ ತೆಂಡೂಲ್ಕರ್, ಅವರ ಪತ್ನಿ ಅಂಜಲಿ ಮತ್ತು ಮಗಳು ಸಾರಾ ಹಾಜರಿದ್ದರು —ಪಿಟಿಐ ಚಿತ್ರ

ರೆಬೆಲ್ಸ್ ಎಫ್‌ಸಿ ತಂಡಕ್ಕೆ ಭರ್ಜರಿ ಜಯ

ಬೆಂಗಳೂರು: ರೆಬೆಲ್ಸ್ ಎಫ್‌ಸಿ ತಂಡ 4–0 ಗೋಲುಗಳಿಂದ ಸೂಪರ್ ಡಿವಿಷನ್ ಲೀಗ್ ಪಂದ್ಯದಲ್ಲಿ ಗುರುವಾರ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡವನ್ನು ಸೋಲಿಸಿತು.

ಅಶೋಕ ನಗರದ ಬೆಂಗ ಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರೆಬೆಲ್ಸ್ ಎಫ್‌ಸಿ ತಂಡದ ಜಾಕ್ ಲಿಯಾನ್‌ಕಾಮವಿ ನೀಹಸಿಯಾಲ್ (45 + 2ನೇ ನಿ.), ಆರ್.ಎಸ್. ಜೆಲ್ಸಿಸ್ (13ನೇ ನಿ.), ಕಾಪ್‌ಖಾನ್‌ಖುಹಾಲ್ ಟಿ. (22ನೇ ನಿ.) ಮತ್ತು ಅರಿಕ್ ಥಾಪಾ (65ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ ತಂಡ 5–1 ಗೋಲುಗಳಿಂದ ಎಂಇಜಿ ಮತ್ತು ಸೆಂಟರ್ ಎಫ್‌ಸಿ ತಂಡವನ್ನು ಮಣಿಸಿತು.

ಸಿ ಡಿವಿಷನ್ ಲೀಗ್ ಚಾಂಪಿಯನಷಿಪ್‌ನಲ್ಲಿ ಬೆಂಗಳೂರು ಗೋರ್ಕಾ ಬಾಯ್ಸ್ ತಂಡ 5–0 ಗೋಲುಗಳಿಂದ ಐಟಿಸಿಎಫ್‌ಸಿ ತಂಡವನ್ನು ಸೋಲಿಸಿತು.ಗೋರ್ಕಾ ಬಾಯ್ಸ್‌ತಂಡದ ಥಾಂಗ್ ಖೊಹಾಹೊ (9ನೇ ಮತ್ತು 11ನೇ ನಿ.)ಮತ್ತು ಲೆಂಗೊಯುಸೆಮ್ (22ನೇ ನಿ.) ಮತ್ತು ಮಂಗೌಲಾಲ್ (35ನೇ ನಿ., 46ನೇ ನಿ.) ಗೋಲುಗಳನ್ನು ಬಾರಿಸಿದರು.

ಕ್ರಿಕೆಟ್: ನಿತೀಶ್ ಆರ್ಯ ದ್ವಿಶತಕ

ಪುದುಚೇರಿ: ಕೃಷ್ಣಕುಮಾರ್ (23ಕ್ಕೆ3) ಅವರ ಉತ್ತಮ ಬೌಲಿಂಗ್ ಮತ್ತು ನಿತೀಶ್ ಆರ್ಯ (203; 126ಎಸೆತ, 4X19, 6X9) ಅವರ ದ್ವಿಶತಕದ ಬಲದಿಂದ ಕರ್ನಾಟಕದ ಬಾಲಕರ ತಂಡವು 14 ವರ್ಷದೊಳಗಿನವರ ದಕ್ಷಿಣ ವಲಯ ಟೂರ್ನಿಯಲ್ಲಿ ಗೋವಾ ವಿರುದ್ಧ ಜಯಿಸಿತು.

ಸೀಚಾಮ್ ಕ್ಯಾಪ್ ಮೈದಾನದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಕರ್ನಾಟಕ ಬಾಲಕರ ತಂಡವು ಇನಿಂಗ್ಸ್ ಮತ್ತು 90 ರನ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್ ಗೋವಾ: 77 ಓವರ್‌ಗಳಲ್ಲಿ 169 (ಕಿಯಾನ್ ತೋಟಾ 39, ವಾಣೀಶ್ ಕುರ್ತಾಕರ್ 28, ಪ್ರಥಮ್ ಪ್ರಭುಗಾಂವ್ಕರ್ 21, ಕೃಷ್ಣಕುಮಾರ್ 23ಕ್ಕೆ3, ಪೂರಬ್ ಸೋನಿ 18ಕ್ಕೆ2). ಕರ್ನಾಟಕ: 44 ಓವರ್‌ಗಳಲ್ಲಿ 5ಕ್ಕೆ314 ಡಿಕ್ಲೇರ್ಡ್ (ಆರ್. ರೋಹಿತ್ ರೆಡ್ಡಿ 51, ನಿತೀಶ್ ಆರ್ಯ 203, ಅವನೀಶ್ ಎಸ್.ಎನ್. ಔಟಾಗದೆ 35, ಶೌರ್ಯಾ ಚೋಡಾನಕರ್ 72ಕ್ಕೆ2).

ಎರಡನೇ ಇನಿಂಗ್ಸ್: ಗೋವಾ: 54.2 ಓವರ್‌ಗಳಲ್ಲಿ 90 (ಶೌರ್ಯ ಚೋಡಾನಕರ್ 30, ಇಶಾಂತ್ ಟೈವರೆಕರ್ 31, ಕೃಷ್ಣಕುಮಾರ್ 16ಕ್ಕೆ7, ಆರ್ಯನ್‌ಸಿನ್ಹಾ ಚಾವ್ಡಾ 10ಕ್ಕೆ2) ಫಲಿತಾಂಶ: ಕರ್ನಾಟಕ ತಂಡಕ್ಕೆ ಇನಿಂಗ್ಸ್ ಮತ್ತು 90 ರನ್ ಜಯ.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಛೇರಿ,
ನಂ.6 ಹೇಮಾವತಿ ಎಡದಂಡೆ ನಾಲಾ ವಿಭಾಗ,
ಕಾವೇರಿ ನೀರಾವರಿ ನಿಗಮ ನಿಯಮಿತ, ಪಾಂಡವಪುರ. ಮಂಡ್ಯ ಜಿಲ್ಲೆ.

ಇ ಟೆಂಡರ್ ತಿದ್ದುಪಡಿ ಪ್ರಕಟಣೆ ಸಂಖ್ಯೆ: 01/2024–25 ದಿ:05.02.2025
ಟೆಂಡರ್ ಪ್ರಕಟಣೆ ಸಂಖ್ಯೆ:06/2024–25 ದಿ: 04.01.2025

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ : 06/2024–25 ದಿ:04.01.2025 ಗೆ ಈ ಕೆಳಕಂಡಂತೆ ತಿದ್ದುಪಡಿ ಹೊರಡಿಸಲಾಗಿದೆ, ತಾಂತ್ರಿಕ ಬಿಡ್ ಸಲಿಸಲು ಕೊನೆಯ ದಿನಾಂಕ: 15.02.2025 ರ ಸಂಜೆ 16.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17.02.2025 ರ ಬೆಳ್ಳಿಗೆ 11.00 ಗಂಟೆಗೆ. ಉಳಿದಂತೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ

ಸಹಿ/–ಕಾರ್ಯಪಾಲಕ ಇಂಜಿನಿಯರ್,
ನಂ.6, ಹೇ.ಎ.ದ.ನಾಲಾ ವಿಭಾಗ, ಕಾ.ನೀ.ನಿ.ನಿ.
ಪಾಂಡವಪುರ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/535 'ಎ' ತಿದ್ದುಪಡಿ/2024–25

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ
Union Bank of India
A Government of India Undertaking

ಪ್ರಾದೇಶಿಕ ಕಛೇರಿ, ಸ್ವರ್ಣ ಸಿಟಿ ಕಾಂಪ್ಲೆಕ್ಸ್,
ಹುಬ್ಬಳ್ಳಿ ರೈಲು ನಿಲ್ದಾಣದ ಹತ್ತಿರ, ಹುಬ್ಬಳ್ಳಿ–580020
ಇಮೇಲ್: rh.hubballi@unionbankofindia.bank
ಸಂಪರ್ಕಿಸಿ : 7057270846

ಹುಬ್ಬಳ್ಳಿಯ ಕ್ಷೇತ್ರೀಯ ಕಾರ್ಯಾಲಯ ಅಡಿಯಲ್ಲಿ ಸಿಪಿಸಿ & ಎಆರ್‌ಬಿ ಆಂತರಿಕ ಸಜ್ಜುಗೊಳಿಸುವಿಕೆ ಎಲೆಕ್ಟ್ರಿಕಲ್ ಮತ್ತು ಎಸಿ ಕೆಲಸಕ್ಕಾಗಿ ಸೀಮಿತ ಟೆಂಡರ್ ಸೂಚನೆ

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಹುಬ್ಬಳ್ಳಿ ಬ್ಯಾಂಕಿನ ಅಡಿಯಲ್ಲಿ ಸಿಪಿಸಿ ಮತ್ತು ಎಆರ್‌ಬಿ ಆಂತರಿಕ ಸಜ್ಜುಗೊಳಿಸುವಿಕೆ, ಎಲೆಕ್ಟ್ರಿಕಲ್ ಮತ್ತು ಎಸಿ ಕೆಲಸಗಳನ್ನು ಕೈಗೊಳ್ಳಲು ಕರ್ನಾಟಕದಲ್ಲಿ ನಮ್ಮ ಬೆಂಗಳೂರಿನ ವಲಯ ಕಛೇರಿ ವ್ಯಾಪ್ತಿಯೊಳಗೆ ನೋಂದಣಿ ಹೊಂದಿರುವ ಬ್ಯಾಂಕ್‌ನ ಎಂಪನೆಲ್ಡ್ ಗುತ್ತಿಗೆದಾರರಿಂದ ಸೀಮಿತ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ. ಟೆಂಡರ್‌ಗಳು ವೆಬ್‌ಸೈಟ್ www.unionbankofindia.co.in ನಲ್ಲಿ ಲಭ್ಯವಿದೆ. ಕಾಮಗಾರಿಯ ಅಂದಾಜು ವೆಚ್ಚ ರೂ 64.99 ಲಕ್ಷಗಳು + ಜಿಎಸ್‌ಟಿ ಮತ್ತು ಕೆಲಸವನ್ನು ಪೂರ್ಣಗೊಳಿಸಲು 1 ತಿಂಗಳು ಅವಧಿ. ಟೆಂಡರ್ ಫಾರ್ಮ್‌ಗಳನ್ನು 07–02–2025 ರಿಂದ 27–02–2025 ಮಧ್ಯಾಹ್ನ 3 ಗಂಟೆ ವರೆಗೆ ಕೆಲಸದ ಸಮಯದಲ್ಲಿ ಬ್ಯಾಂಕ್ ಪರವಾಗಿ ಇಎಂಡಿ(ಡಿಡಿ/ಪೇ ಆರ್ಡರ್) ಜೊತೆಗೆ ಸಂಗ್ರಹಿಸಬಹುದು.
ಸೂಚನೆ : ಯಾವುದೇ ಕಾರಣಗಳನ್ನು ನೀಡದೆಯೇ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಸ್ಥಳ: ಹುಬ್ಬಳ್ಳಿ
ದಿನಾಂಕ : 07–02–2025
ಸಹಿ/– ಪ್ರಾದೇಶಿಕ ಮುಖ್ಯಸ್ಥರು
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

ಕರ್ನಾಟಕ ಸರ್ಕಾರ
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಹಂಪಿನಗರ, ಬೆಂಗಳೂರು–560104. ದೂರವಾಣಿ: 080–23209691
ಇ–ಮೇಲ್ westzone_hampinagar@rediffmail.com

ಸಂಖ್ಯೆ:– ನಕೇಗ್ರಂ/ಪವ/ಲೆಪವಿ/94/ಪೀ.ದುರಸ್ಥಿ/ಇ–ಟೆಂ/886/2024–25 ದಿನಾಂಕ: 06–02–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಬೆಂಗಳೂರು ಈ ಕಛೇರಿ ವ್ಯಾಪ್ತಿಯಲ್ಲಿರುವ ಶಾಖಾ/ವಾಚನಾಲಯ/ಗ್ರಾಮ ಪಂಚಾಯಿತಿಯ ಗ್ರಂಥಾಲಯಗಳಿಗೆ 2024–25ನೇ ಸಾಲಿಗೆ ಒಂದು ವರ್ಷಗಳ ರೇಟ್ ಕಾಂಟ್ರಾಕ್ಟ್ ಆಧಾರದ ಮೇಲೆ ಗ್ರಂಥಾಲಯಗಳ ಪೀಠೋಪಕರಣಗಳಿಗೆ "ಪೀಠೋಪಕರಣ ದುರಸ್ಥಿ" ಕೆಲಸಗಳನ್ನು ಮಾಡಲು ದ್ವಿಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಐದು ವರ್ಷಗಳ ಅನುಭವವುಳ್ಳ ನೋಂದಾಯಿತ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಟೆಂಡರ್‌ಗೆ ನಿಗದಿಪಡಿಸಿರುವ ಇ.ಎಂ.ಡಿ. ಮೊತ್ತ: ರೂ.50,000/– (ರೂಪಾಯಿ ಐವತ್ತು ಸಾವಿರ ಮಾತ್ರ). ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು https://kppp.karnataka.gov.in ವೆಬ್‌ಸೈಟ್‌ನಿಂದ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: 13–02–2025, ಸಮಯ ಸಾಯಂಕಾಲ 4.00 ಗಂಟೆ. ತಾಂತ್ರಿಕ ಬಿಡ್ಡುಗಳನ್ನು ದಿನಾಂಕ: 14–02–2025, ಸಮಯ ಸಾಯಂಕಾಲ 4.00 ಗಂಟೆಗೆ ತೆರೆಯಲಾಗುವುದು.
ಟೆಂಡರ್‌ದಾರರು ಹೆಚ್ಚಿನ ವಿವರಗಳನ್ನು ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಕಛೇರಿ ದೂರವಾಣಿ ಸಂಖ್ಯೆ: 080–23209691.

ಸಹಿ/– ಉಪ ನಿರ್ದೇಶಕರು,
ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ,
ಹಂಪಿನಗರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/4869/ಆಕಾರ್/2024–25

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು 560079
ದೂರವಾಣಿ ಸಂಖ್ಯೆ: +91–80–29619801 ಇ–ಮೇಲ್: md.ksmscl@gmail.com

No: KSMSCL/EQPT/HFW/NVBDCP/PBM/TND/20/2024-25 Date: 06.02.2025

ಟೆಂಡರ್ ಪ್ರಕಟಣೆ

ಉಲ್ಲೇಖ : 1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ : KSMSCL/EQPT/HFW/NVBDCP/PBM/TND/20/2024-25 (IND-0206)
2. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ : KSMSCL/IT/OTHR/2/2024 (IND-0205)
ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.
1. 2024–25ನೇ ಸಾಲಿನ ಎನ್‌ವಿಬಿಡಿಸಿಪಿ ಕಾರ್ಯಕ್ರಮದಡಿಯಲ್ಲಿ Pathological Binocular Microscope ಗಳನ್ನು ಖರೀದಿಸಿ ಪೂರೈಸುವ ಬಗ್ಗೆ (IND-0206).
2. KSMSCL ಸಂಸ್ಥೆಗೆ Computer ಹಾಗೂ Printer ಗಳನ್ನು ಪೂರೈಸುವ ಬಗ್ಗೆ (IND-0205)
ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://kppp.karnataka.gov.in ನಲ್ಲಿ ದಿನಾಂಕ 06.02.2025 ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು

ವಾಸಾಸಂಇ/ವಾ.ಪ್ರ/4891/ಎಸ್‌ಎಸ್‌ಸಿ/2024–25

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2024–25/5227 ದಿನಾಂಕ:05/02/2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024–25 ನೇ ಸಾಲಿನ ಲೆಕ್ಕ ಶಿರ್ಷಿಕೆ 4059–ಲೋಕೋಪಯೋಗಿ ಇಲಾಖಾ ಕಟ್ಟಡಗಳು ಅಡಿ 1 ಕಾಮಗಾರಿ ಹಾಗೂ 8443–ಠೇವಣಿ ವಂತಿಕೆ ಅಡಿ 1 ಕಾಮಗಾರಿ, ಹೀಗೆ ಒಟ್ಟು 2 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಮೊತ್ತ ಕ್ರಮವಾಗಿ ರೂ. 80.00 ಲಕ್ಷ ಹಾಗೂ ಮೊತ್ತ ರೂ. 160.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆವ್ಹಾನಿಸಲಾಗಿದೆ.
ಕ್ರ.ಸಂ. 1 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:19–02–2025 (ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:21–02–2025 (ಸಾಯಂಕಾಲ 5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):24–02–2025 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 5)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂ ಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕ್ರ.ಸಂ. 2 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:19–02–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:21–02–2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:24–02–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):27–02–2025 (ಸಾಯಂ ಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1607/KSMCA/2024-25

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕೇಂದ್ರ ಕಚೇರಿ, ಲೆಕ್ಕಪತ್ರ ಇಲಾಖೆ, ಶಾಂತಿನಗರ, ಬೆಂಗಳೂರು - 560 027.
ದೂ. 080-22537440, 416, 436

ಸಂಖ್ಯೆ : ಬೆಂಮಸಾಸಂಸ್ಥೆ:ಕೇಕ:ಲೆಪ:ಆಯವ್ಯಯ:264:2024–25 ದಿನಾಂಕ: 06.02.2025

ಆಸಕ್ತಿ ವ್ಯಕ್ತಪಡಿಸುವಿಕೆ

ವಿಷಯ: ಹಿಂಬಾಕಿ ಮೊಬಲಗನ್ನು ಪಾವತಿ ಮಾಡಲು ರೂ.589.20 ಕೋಟಿಗಳ ಸರ್ಕಾರಿ ಖಾತರಿ/ಗ್ಯಾರಂಟಿ ಸಾಲವನ್ನು ಪಡೆಯುವ ಬಗ್ಗೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಎಲ್ಲಾ ಅರ್ಹ ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕ್‌ಗಳಿಂದ ರೂ.589.20 ಕೋಟಿ (ಐದುನೂರ ಎಂಬತ್ತೊಂಬತ್ತು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ) ಅವಧಿ ಸಾಲವನ್ನು ಮಂಜೂರು ಮಾಡಲು, 'ಆಸಕ್ತಿ ವ್ಯಕ್ತಪಡಿಸುವಿಕೆ' ಯನ್ನು (Expression of Interest) ಆಹ್ವಾನಿಸುತ್ತಿದೆ. ಸದರಿ ಅವಧಿ ಸಾಲವನ್ನು ಹಿಂಬಾಕಿ ಮೊಬಲಗಿನ ಪಾವತಿಗಾಗಿ ಪಡೆಯಲು ಉದ್ದೇಶಿಸಿದ್ದು, ಈ ಕೆಳಕಂಡ ನಿಬಂಧನೆ ಹಾಗೂ ಷರತ್ತುಗಳಿಗೊಳಪಟ್ಟಿರುತ್ತದೆ.

1. ಸಾಲದ ಮೊತ್ತ ರೂ. 589.20 ಕೋಟಿಯನ್ನು ಅವಶ್ಯಕತೆಯಂತೆ ಪಡೆಯಲಾಗುವುದು.
2. ಸಾಲದ ಮರುಪಾವತಿಯ ಅವಧಿ 7 ವರ್ಷಗಳಿಗೆ ನಿಗಧಿಪಡಿಸಲಾಗುವುದು.
3. ಪ್ರಾಥಮಿಕ ಹಾಗೂ ಮೇಲಾಧಾರ ಭದ್ರತೆಯನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗುವುದು.
4. ಬ್ಯಾಂಕಿನ ಒಂದು ತಿಂಗಳ/ ಮೂರು ತಿಂಗಳ/ ಅರ್ಧ ವಾರ್ಷಿಕ/ ವಾರ್ಷಿಕ ಬ್ಯಾಂಕ್‌ನ MCLR/ RLLRನ ದರಗಳ ಅನ್ವಯ ಆಕರಿಸುವ ಬಡ್ಡಿ ದರದಲ್ಲಿ ಸಾಲ ಮಂಜೂರು ಮಾಡಲು ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಅನುಕೂಲಕರವಾದ ಬಡ್ಡಿ ದರದಲ್ಲಿ ಸಾಲ ಪಡೆಯುವ ಹಕ್ಕನ್ನು ಹೊಂದಿರುತ್ತದೆ.
5. ಸಂಸ್ಕರಣಾ ಶುಲ್ಕಗಳು, ಪೂರ್ವ ಪಾವತಿ ಶುಲ್ಕಗಳು, ತಪಾಸಣಾ ಶುಲ್ಕಗಳು ಹಾಗೂ ಇತರೆ ಸಂಬಂಧಿತ ಶುಲ್ಕಗಳನ್ನು ಮನ್ನಾ ಮಾಡತಕ್ಕದ್ದು.
6. ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಯಾವುದೇ ಕಾರಣವಿಲ್ಲದೇ/ತಿಳಿಸದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದ್ದು, ಆಸಕ್ತದಾರರು ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಸ್ತಾವನೆಯ ತಯಾರಿ/ಸಲ್ಲಿಕೆಗಾಗಿ ಭರಿಸಿದ ವೆಚ್ಚದ ಮರುಪಾವತಿಗೆ ಅರ್ಹರಾಗಿರುವುದಿಲ್ಲ.
7. ಆಸಕ್ತ ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕ್‌ಗಳು ಮೇಲೆ ಸೂಚಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಪ್ಪಿಗೆ ನೀಡಿರುವ, ಉಲ್ಲೇಖಿಸಲಾದ ಬಡ್ಡಿ ದರ, ಬಡ್ಡಿ ಲೆಕ್ಕಾಚಾರದ ವಿಧಾನ, ಸಾಲವನ್ನು ವಿತರಿಸುವ ಮತ್ತು ಸಾಲ ಮರುಪಾವತಿಯ ವಿಧಾನ ಹಾಗೂ ಇತರೆ ಸಂಬಂಧಿತ ವಿವರಗಳನ್ನು ಒಳಗೊಂಡಿರುವ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
8. ಎಲ್ಲಾ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ ಹಾಗೂ ತಮ್ಮ ಪ್ರಸ್ತಾವನೆಗಳನ್ನು ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–560027 ರವರ ವಿಳಾಸಕ್ಕೆ ರೂ.589.20 ಕೋಟಿ ಅವಧಿ ಸಾಲದ ಮಂಜೂರಾತಿಗೆ ಪ್ರಸ್ತಾವನೆ ಎಂದು ಬರೆದಿರುವ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವುದು.
9. ಆಸಕ್ತಿ ವ್ಯಕ್ತಪಡಿಸುವಿಕೆಯ ಮುಚ್ಚಿದ ಲಕೋಟೆಯನ್ನು ಖುದ್ದಾಗಿ ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ ರವರ ಕಚೇರಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೇಂದ್ರ ಕಛೇರಿಯಲ್ಲಿರಿಸಿರುವ ಬಾಕ್ಸ್‌ನಲ್ಲಿ ದಿನಾಂಕ: 19.02.2025ರ ಅಪರಾಹ್ನ 03.00 ಗಂಟೆಯೊಳಗಾಗಿ ಹಾಕತಕ್ಕದ್ದು.
10. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ:7760991241 ಮತ್ತು 7760991246 ರಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ. ಸ.

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ. ರಾಮನಗರ ವಿಭಾಗ, ರಾಮನಗರ.

ಟೆಂಡರ್ ಪ್ರಕಟಣೆ ಸಂಖ್ಯೆ : 09/2024–25 ದಿನಾಂಕ : 05–02–2025

ಟೆಂಡರ್ ಪ್ರಕಟಣೆ

2024–25 ನೇ ಸಾಲಿನಲ್ಲಿ ರಾಮನಗರ ವಿಭಾಗ, ವ್ಯಾಪ್ತಿಯ 05 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ. (ಅಂದಾಜು ಮೊತ್ತ ರೂ. 99.00 ಲಕ್ಷಗಳು).

1) ಕರ್ನಾಟಕ ಸರ್ಕಾರದ https://kppp.karnataka.gov.in ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ : 06–02–2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ, 2) ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 20–02–2025 ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು, 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 21–02–2025 ವೇಳೆ 16.30 ಗಂಟೆ (ಸಾಧ್ಯವಾದಲ್ಲಿ).

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

Note : Here after any changes with reference to this Notification will be Notified in https://kppp.karnataka.gov.in Portal only.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ರಾಮನಗರ ವಿಭಾಗ,
ರಾಮನಗರ.

ಡಿಐಪಿಆರ್/ರಾಮನಗರ/568/ಮಣಿಪಾಲ್/2024–25

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560065

ಸಂಖ್ಯೆ : ಇ.ಒ/ಎಸ್.ಪಿ.ಒ/ಇ–ಪ್ರೊಕ್ಯೂರ್‌ಮೆಂಟ್/18/2024–25 ದಿನಾಂಕ: 31.01.2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳು / ಬಟ್ಟೆ ಚೀಲಗಳನ್ನು ಸರಬರಾಜು ಮಾಡಲು ಕೆ.ಜಿ–1 ಮತ್ತು ಕೆ.ಜಿ–2, ಟೆಂಡರ್ ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.
ವಿವರ : ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 15.02.2025 ಸಂಜೆ 4.00 ಘಂಟೆಯವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 17.02.2025 ಸಮಯ ಬೆಳಗ್ಗೆ 10.30 ಕ್ಕೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ : 21.02.2025 ಸಮಯ ಬೆಳಗ್ಗೆ 10.30 ಕ್ಕೆ. ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಸೂಚನೆ : ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್ : kppp.karnataka.gov.in ರಲ್ಲಿ ದೊರೆಯುತ್ತದೆ ಹಾಗೂ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ. 91–8046010000, +91–8068948777 support@eprochelpdesk.com ಅಥವಾ www.uasbangalore.edu.in ದೂರವಾಣಿ ಸಂಖ್ಯೆ : 23630128 ಅನ್ನು ಸಂಪರ್ಕಿಸಬಹುದು.

ಸಹಿ/–
ಆಸ್ತಿ ಅಧಿಕಾರಿಗಳು

DIPR/CP/4890/Zen/2024-25

ಶೂಟಿಂಗ್: ಗಮನ ಸೆಳೆದ ನೀರಜ್ ಸಾಧನೆ

ರಾಷ್ಟ್ರೀಯ ಕ್ರೀಡೆ: ಆರ್ಚರಿಯಲ್ಲೂ ಅಚ್ಚರಿಯ ಫಲಿತಾಂಶ • ಜುಯೆಲ್ ಸರ್ಕಾರ್‌ಗೆ ಚಿನ್ನ

ಡೆಹ್ರಾಡೂನ್ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಸ್ವಪ್ನಿಲ್ ಕುಸಾಳೆ ಮತ್ತು ಅನುಭವಿ ಐಶ್ವರಿ ಪ್ರತಾಪ್ ಸಿಂಗ್ ತೋಮಾರ್ ಅವರಿಗೆ ಆಘಾತ ನೀಡಿದ ಭಾರತೀಯ ನೌಕಾಪಡೆಯ ನೀರಜ್ ಕುಮಾರ್ ಅವರು ರಾಷ್ಟ್ರೀಯ ಕ್ರೀಡೆಗಳ ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಗುರುವಾರ ಚಿನ್ನ ಗೆದ್ದುಕೊಂಡು ಗಮನ ಸೆಳೆದರು.

25 ವರ್ಷ ವಯಸ್ಸಿನ ನೀರಜ್ ತ್ರಿಶೂಲ್ ಶೂಟಿಂಗ್ ರೇಂಜ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಹೆಸರಾಂತ ಎದುರಾಳಿಗಳಿಗೆ ಅಚ್ಚರಿ ಮೂಡಿಸುವಂತೆ 464.1 ಸ್ಕೋರ್ ಗಳಿಸಿ ಚಿನ್ನ ಗೆದ್ದರು. ಮಧ್ಯಪ್ರದೇಶದ ಐಶ್ವರಿ ಪ್ರತಾಪ್ 462.4ರ ಸ್ಕೋರ್‌ನೊಡನೆ ಬೆಳ್ಳಿ ಹಾಗೂ ಮಹಾರಾಷ್ಟ್ರದ ಸ್ವಪ್ನಿಲ್ (446.7) ಮೂನೇ ಸ್ಥಾನ ಪಡೆದರು.

ಬೆಂಗಳೂರಿನ ಯಲಹಂಕದ ಪಡುಕೋಣೆ–ದ್ರಾವಿಡ್ ಸೆಂಟರ್ ಆಫ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ತರಬೇತಿ ಪಡೆಯುತ್ತಿರುವ ನೀರಜ್ ಈ ಕ್ರೀಡೆಗಳಲ್ಲಿ ಸರ್ವಿಸಸ್ ಕ್ರೀಡಾ ನಿಯಂತ್ರಣ ಮಂಡಳಿ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ.

ಬುಧವಾರ ಮಹಿಳೆಯರ 10 ಮೀ. ಏರ್‌ಪಿಸ್ತೂಲ್ ಚಿನ್ನ ಗೆದ್ದಿದ್ದ ಹರಿಯಾಣದ ಸುರುಚಿ ಗುರುವಾರ ಪ್ರಮೋದ್ ಜೊತೆಗೂಡಿ ಮಿಶ್ರ ಡಬಲ್ಸ್‌ನಲ್ಲೂ ಅಗ್ರಸ್ಥಾನ ಪಡೆದರು. ರಾಜಸ್ಥಾನ (ಅಂಜಲಿ ಶೇಖಾವತ್– ಉಮೇಶ ಚೌಧರಿ) ಎರಡನೇ ಮತ್ತು ಮಹಾರಾಷ್ಟ್ರ (ರಾಹಿ ಸರ್ಬೋಬತ್– ಪ್ರಣವ್ ಅರವಿಂದ ಪಾಟೀಲ) ಮೂರನೇ ಸ್ಥಾನ ಪಡೆದವು.

ಪ್ಯಾರಿಸ್ ಒಲಿಂಪಿಕ್ಸ್ ಆಯ್ಕೆ -ಟ್ರಯಲ್ಸ್‌ನಲ್ಲೂ ನೀರಜ್, ಅವರು ಸ್ವಪ್ನಿಲ್, ಐಶ್ವರಿ ಅಂಥ ಅನುಭವಿಗಳನ್ನು ಹಿಂದೆಹಾಕಿದ್ದರು.

ಆರ್ಚರಿಯಲ್ಲೂ ಅಚ್ಚರಿ: 18 ವರ್ಷ ವಯಸ್ಸಿನ ಜುಯೆಲ್ ಸರ್ಕಾರ್, ರಾಷ್ಟ್ರೀಯ ಕ್ರೀಡೆಗಳ ಪುರುಷರ ಆರ್ಚರಿ ಸ್ಪರ್ಧೆಯ ರಿಕರ್ವ್ ವಿಭಾಗದಲ್ಲಿ ನಾಲ್ಕು ಬಾರಿಯ ಒಲಿಂಪಿಯನ್ ತರುಣದೀಪ್ ರಾಯ್ ಅವರನ್ನು ಹಿಂದೆ ಹಾಕಿ ಸ್ವರ್ಣ ಗೆದ್ದರು. ಮಹಿಳೆಯರ ವಿಭಾಗದ ಇದೇ ಸ್ಪರ್ಧೆಯಲ್ಲಿ ಅನುಭವಿ ದೀಪಿಕಾ ಕುಮಾರಿ ವಿಜೇತರಾದರು.

ಪಶ್ಚಿಮ ಬಂಗಳಾದ ಮಾಲ್ಡಾದವರಾದ ಜುಯೆಲ್ ಸೆಮಿಫೈನಲ್‌ನಲ್ಲಿ 6–2 ರಿಂದ 40 ವರ್ಷ ವಯಸ್ಸಿನ ತರುಣ್ ದೀಪ್ (ಸಿಕ್ಕಿಂ) ಅವರನ್ನು ಸೋಲಿಸಿದರು. ಫೈನಲ್‌ನಲ್ಲಿ 6–2 ರಿಂದ ಇಂದ್ರ ಚಂದ ಇಂದ್ರ (ಸರ್ವಿಸಸ್) ಅವರನ್ನು ಮಣಿಸಿ ಚಿನ್ನ ಗೆದ್ದರು. ತರುಣ್ ದೀಪ್ ಪ್ಲೇ ಆಫ್‌ನಲ್ಲಿ ಸರ್ವಿಸಸ್‌ನ ರಾಹುಲ್ ಅವರನ್ನು ಸೋಲಿಸಿ ಕಂಚಿನ ಪದಕ ಗಳಿಸಿದರು.

ಕರ್ನಾಟಕಕ್ಕೆ ಜಯ: ಕರ್ನಾಟಕ ಪುರುಷರ ತಂಡ ಗುರುವಾರ ನಡೆದ ಹಾಕಿ ಪಂದ್ಯದಲ್ಲಿ ಒಡಿಶಾ ತಂಡವನ್ನು 2–1 ಗೋಲುಗಳಿಂದ ಸೋಲಿಸಿತು.

ಪದಕ ಪಟ್ಟಿ

ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಕರ್ನಾಟಕ	30	11	15	56
ಸರ್ವಿಸಸ್	28	12	12	52
ಮಹಾರಾಷ್ಟ್ರ	19	36	33	88
ಮಧ್ಯಪ್ರದೇಶ	18	8	10	36
ಹರಿಯಾಣ	13	20	22	55

ಸೈಕ್ಲಿಂಗ್: ಮೂರನೇ ಚಿನ್ನ ಗೆದ್ದ ಕರ್ನಾಟಕದ ಕೀರ್ತಿ

ಬೆಂಗಳೂರು: ನಗರದ ಪದವಿ ಕಾಲೇಜು ವಿದ್ಯಾರ್ಥಿನಿ ಕೀರ್ತಿ ರಂಗಸ್ವಾಮಿ, ಉತ್ತರಾಖಂಡದ ರುದ್ರಪುರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡೆಗಳ ಸೈಕ್ಲಿಂಗ್‌ನಲ್ಲಿ ಗುರುವಾರ ಮೂರನೇ ಚಿನ್ನ ಗೆದ್ದು ಗಮನ ಸೆಳೆದರು.

ನಾಲ್ಕು ದಿನಗಳ ಹಿಂದೆ 10 ಕಿ.ಮೀ. ಸ್ಕ್ರಾಚ್ ರೇಸ್‌ನಲ್ಲಿ ಚಿನ್ನ ಗೆದ್ದಿದ ಕೀರ್ತಿ ಬುಧವಾರ ಸಂಜೆ 7.5 ಕಿ.ಮೀ. ಕೀರೈನ್ ರೇಸ್‌ನಲ್ಲಿ ಮತ್ತೊಂದು ಚಿನ್ನ ಗೆದ್ದರು. ಗುರುವಾರ ಒಮ್ನಿಯಂ ರೇಸ್‌ನಲ್ಲಿ ಕೂಡ ಅಗ್ರಸ್ಥಾನ ಪಡೆದು ಚಿನ್ನಗಳ ಹ್ಯಾಟ್ರಿಕ್ ಪೂರೈಸಿದರು.

ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ಅಂತಿಮ ವರ್ಷದ ಬಿ.ಕಾಂ ವಿದ್ಯಾರ್ಥಿನಿ ಆಗಿರುವ ಕೀರ್ತಿ ಈ ಹಿಂದಿನ ರಾಷ್ಟ್ರೀಯ ಕ್ರೀಡೆಗಳಲ್ಲಿ 1 ಚಿನ್ನ, 2 ಬೆಳ್ಳಿ, 1 ಕಂಚಿನ ಪದಕ ಗೆದ್ದುಕೊಂಡಿದ್ದರು. ಗೋವಾದಲ್ಲಿ ನಡೆದಿದ್ದ ರಾಷ್ಟ್ರೀಯ ಕ್ರೀಡೆಗಳ ಸೈಕ್ಲಿಂಗ್ ಸ್ಪರ್ಧೆ ಮಾತ್ರ ದೆಹಲಿಯಲ್ಲಿ ನಡೆದಿತ್ತು. ಕೀರ್ತಿ ಈ ಬಾರಿಯ ಕ್ರೀಡೆಗಳಲ್ಲಿ ತಮ್ಮ ಪದಕ ಸಾಧನೆಗೆ ಇನ್ನಷ್ಟು ಹೊಳಪು ಮೂಡಿಸಿದ್ದಾರೆ.

ಟೆನಿಸ್: ಫೈನಲ್‌ಗೆ ಕರ್ನಾಟಕ ಪುರುಷರ ತಂಡ

ಬೆಂಗಳೂರು: ರಾಜ್ಯದ ಅಗ್ರ ಆಟಗಾರ ಎಸ್.ಡಿ.ಪ್ರಜ್ವಲ್ ದೇವ್ ಅವರು ಸಿಂಗಲ್ಸ್, ಡಬಲ್ಸ್ ಎರಡೂ ಪಂದ್ಯಗಳನ್ನು ಗೆಲ್ಲುವ ಮೂಲಕ ಕರ್ನಾಟಕ, ರಾಷ್ಟ್ರೀಯ ಕ್ರೀಡೆಗಳ ಪುರುಷರ ಟೆನಿಸ್ ತಂಡ ವಿಭಾಗದ ಸೆಮಿಫೈನಲ್‌ನಲ್ಲಿ ಸರ್ವಿಸಸ್ ತಂಡವನ್ನು 2–1 ರಿಂದ ಸೋಲಿಸಲು ನೆರವಾದರು.

ಹಾಲಿ ಚಾಂಪಿಯನ್ ಆಗಿರುವ ಕರ್ನಾಟಕ ಚಿನ್ನಕ್ಕಾಗಿ ನಡೆಯುವ ಹಣಾಹಣಿಯಲ್ಲಿ ತಮಿಳುನಾಡು ತಂಡವನ್ನು ಎದುರಿಸಲಿದೆ. ತಮಿಳುನಾಡು ಇನ್ನೊಂದು ಸೆಮಿಫೈನಲ್‌ನಲ್ಲಿ ಪ್ರಬಲ ಮಹಾರಾಷ್ಟ್ರ ತಂಡವನ್ನು 2–1 ರಿಂದ ಮಣಿಸಿತು.ಕರ್ನಾಟಕದ ನಿಕಿ ಪೂಣಚ್ಚ ಮೊದಲ ಸಿಂಗಲ್ಸ್‌ನಲ್ಲಿ4–6, 6–1, 1–6ರಲ್ಲಿ ಸರ್ವಿಸಸ್‌ನ ರಿಷಭ್ ಅಗರವಾಲ್ ಎದುರು ಸೋಲನುಭವಿಸಿದರು. ಆದರೆ 28 ವರ್ಷ ವಯಸ್ಸಿನ ಪ್ರಜ್ವಲ್ ದೇವ್ 6–2, 3–6, 6–3 ರಿಂದ ಸರ್ವಿಸಸ್‌ನ ಇಶಾಖ್ ಇಕ್ಬಾಲ್ ಅವರನ್ನು ಸೋಲಿಸಿ ಸ್ಕೋರ್ 1–1ರಲ್ಲಿ ಸಮಮಾಡಿದರು. ನಿರ್ಣಾಯಕ ಡಬಲ್ಸ್‌ನಲ್ಲಿ ಪ್ರಜ್ವಲ್– ನಿಕಿ ಪೂಣಚ್ಚ ಜೋಡಿ 6–3, 6–4 ರಿಂದ ಫೈಸಲ್ ಕಮರ್– ರಿಷಭ್ ಜೋಡಿಯನ್ನ ಸೋಲಿಸಿತು.

ಐಸಿಸಿ ಮಾಸಿಕ ಪ್ರಶಸ್ತಿ: ಚಕ್ರವರ್ತಿ, ತ್ರಿಷಾ ನಾಮನಿರ್ದೇಶನ

ದುಬೈ (ಪಿಟಿಐ): ಭಾರತ ತಂಡದ ಸ್ಪಿನ್ನರ್ ವರುಣ ಚಕ್ರವರ್ತಿ ಹಾಗೂ ವಿಶ್ವಕಪ್ ವಿಜೇತ 19 ವರ್ಷದೊಳಗಿನವರ ಮಹಿಳಾ ಟಿ20 ಕ್ರಿಕೆಟ್ ತಂಡದ ಬ್ಯಾಟರ್ ಗೊಂಗಡಿ ತ್ರಿಷಾ ಅವರನ್ನು ಐಸಿಸಿಯ ಮಾಸಿಕ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ.

ಈಚೆಗೆ ಇಂಗ್ಲೆಂಡ್ ವಿರುದ್ಧ ನಡೆದ ಟಿ20 ಸರಣಿಯಲ್ಲಿ ಚಕ್ರವರ್ತಿ ಅವರು 14 ವಿಕೆಟ್ ಗಳಿಸಿದರು. 9.85ರ ಸರಾಸರಿಯಲ್ಲಿ ಅವರು ವಿಕೆಟ್ ಪಡೆದಿದ್ದಾರೆ. ವೆಸ್ಟ್ ಇಂಡೀಸ್ ಸ್ಪಿನ್ನರ್ ಜೊಮೆಲ್ ವಾರಿಕನ್ ಅವರೂ ಈ ರೇಸ್‌ನಲ್ಲಿದ್ದಾರೆ. ಎಡಗೈ ಸ್ಪಿನ್ನರ್ ಜೊಮೆಲ್ ಪಾಕಿಸ್ತಾನ ಎದುರಿನ ಟೆಸ್ಟ್ ಸರಣಿಯಲ್ಲಿ 19 ವಿಕೆಟ್ ಪಡೆದಿದ್ದರು.

ಈಚೆಗೆ ಮಲೇಷ್ಯಾದಲ್ಲಿ ನಡೆದಿದ್ದ 19 ವರ್ಷದೊಳಗಿನವರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ 309 ರನ್ ಗಳಿಸಿದ ಆರಂಭಿಕ ಬ್ಯಾಟರ್ ತ್ರಿಷಾ ಮಹಿಳೆಯರ ವಿಭಾಗದಲ್ಲಿ ಮುಂಚೂಣಿಯಲ್ಲಿದ್ದಾರೆ. ಟೂರ್ನಿಯಲ್ಲಿ ಮೊದಲ ಶತಕ ಹೊಡೆದ ಆಟಗಾರ್ತಿ ಎಂಬ ಹೆಗ್ಗಳಿಕೆಯೂ ಅವರದ್ದಾಗಿದೆ.

‘ಚುನಾಯಿತ ಸಮಿತಿಗೆ ಅಧಿಕಾರ ವಹಿಸಿ’

ಕಬಡ್ಡಿ ಫೆಡರೇಷನ್ ಆಡಳಿತಾಧಿಕಾರಿಗೆ ‘ಸುಪ್ರೀಂ’ ಸೂಚನೆ

ನವದೆಹಲಿ (ಪಿಟಿಐ): ಭಾರತ ಅಮೆಚೂರ್ ಕಬಡ್ಡಿ ಫೆಡರೇಷನ್‌ನ (ಎಕೆಎಫ್‌ಐ) ಚುನಾಯಿತ ಸಮಿತಿಗೆ ಇದೇ ತಿಂಗಳ 11ರೊಳಗೆ ಅಧಿಕಾರ ವಹಿಸಿಕೊಡುವಂತೆ ಸುಪ್ರೀಂ ಕೋರ್ಟ್ ಗುರುವಾರ ಫೆಡರೇಷನ್‌ನ ಆಡಳಿತಾಧಿಕಾರಿ ನ್ಯಾ.ಎಸ್.ಪಿ.ಗಾರ್ಗ್ ಅವರಿಗೆ ಸೂಚಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ಇನ್ನೂ ಕೂಲಂಕಷ ಪರಿಶೀಲನೆ ಅಗತ್ಯವಿದೆ. ಆದರೆ ಇದೇ ತಿಂಗಳ 20 ರಿಂದ 25ರವರೆಗೆ ಇರಾನ್‌ನಲ್ಲಿ ನಡೆಯಲಿರುವ ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡದ ಆಟಗಾರ್ತಿಯರಿಗೆ ಪಾಲ್ಗೊಳ್ಳಲು ಅನುವು ಮಾಡಿಕೊಡಬೇಕಾಗಿದೆ ಎಂದು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟಿಶ್ವರ ಸಿಂಗ್ ಅವರನ್ನೊಳಗೊಂಡ ದ್ವಿಸದಸ್ಯ ಪೀಠ ಹೇಳಿದೆ.

ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೂ ಆಗಿರುವ ಗರ್ಗ್ ಅವರ ಸೇವೆಯನ್ನು ಶ್ಲಾಘಿಸಿದ ಪೀಠವು, ಅಧಿಕಾರ ವಹಿಸಿಕೊಳ್ಳುವುದರ ಅರ್ಥ ನ್ಯಾಯಾಲವಯು ಡಿಸೆಂಬರ್ 2023ರಲ್ಲಿ ಆಯ್ಕೆಯಾದ ನೂತನ ಸಮಿತಿಯನ್ನು ಮಾನ್ಯ ಮಾಡಿದಂತೆ ಅಲ್ಲ ಎಂದೂ ಹೇಳಿತು.

ಅಂತರರಾಷ್ಟ್ರೀಯ ಕಬಡ್ಡಿ ಫೆಡರೇಷನ್ (ಐಕೆಎಫ್) ಜೊತೆ ಮಾತುಕತೆ ನಡೆಸಲಾಗಿದ್ದು, ನೂತನ ಆಡಳಿತ ಮಂಡಳಿಗೆ ಅಧಿಕಾರ ವಹಿಸಿಕೊಡುವ ಕಾರಣ ಭಾರತ ಅಮೆಚೂರ್ ಕಬಡ್ಡಿ ಫೆಡರೇಷನ್ ಮೇಲಿನ ಅಮಾನತು ಹಿಂಪಡೆಯಲಾಗುವುದು ಎಂದು ಐಕೆಎಫ್ ಭರವಸೆ ನೀಡಿರುವುದಾಗಿ ಕೇಂದ್ರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ನ್ಯಾಯಾಲಯಕ್ಕೆ ತಿಳಿಸಿದರು.

ಭಾರತದ ಕ್ರೀಡಾ ಫೆಡರೇಷನ್‌ಗಳನ್ನು ಶುದ್ಧೀಕರ ಣಗೊಳಿಸಲು ಮತ್ತು ಅವು ನಿಷ್ಪಕ್ಷಪಾತವಾಗಿ, ಮುಕ್ತ ಮತ್ತು ಸ್ವಾಯತ್ತವಾಗಿ ಕಾರ್ಯನಿರ್ವಹಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ ಎಂದು ಖಾರವಾಗಿ ಹೇಳಿದ್ದ ಸುಪ್ರೀಂ ಕೋರ್ಟ್, ‘ಸ್ವಹಿತಾಸಕ್ತಿಗಾಗಿ ಇಂಥ ಫೆಡರೇಷನ್‌ಗಳನ್ನು ಹಿಡಿತದಲ್ಲಿಟ್ಟುಕೊಂಡು ಅಧಿಕಾರ ಚಲಾಯಿಸುತ್ತಿರುವ ವ್ಯಕ್ತಿಗಳನ್ನು ಹೊರದೂಡಬೇಕು’ ಎಂದೂ ಅಭಿಪ್ರಾಯಪಟ್ಟಿತ್ತು. ಇರಾನ್‌ನಲ್ಲಿ ಇದೇ ತಿಂಗಳ 20ರಿಂದ ನಡೆಯುವ ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ತಮ್ಮನ್ನು ಕಳುಹಿಸುವಂತೆ ಅಖಿಲ ಭಾರತ ಕಬಡ್ಡಿ ಫೆಡರೇಷನ್‌ಗೆ ನಿರ್ದೇಶನ ನೀಡುವಂತೆ ಕೋರಿ ಕಬಡ್ಡಿ ಆಟಗಾರ್ತಿಯರಾದ ಪ್ರಿಯಾಂಕಾ ಮತ್ತು ಪೂಜಾ ಅವರು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.